॥ ಶ್ರೀಃ ಹರಿಃ ಓಂ ॥

॥ಶ್ರೀಗರುಡವಾಹನ ಲಕ್ಷ್ಮೀನಾರಸಿಂಹಾಭಿನ್ನ
ಶ್ರೀಜಗನ್ನಾಥವಿಠ್ಠಲ ಪ್ರಸೀದ ॥

# ಸಂಪುಟ ೮

# ಮಾತೃಕಾಸಂಧಿ

**ಸಂಧಿಯ ಸಾರ :**

ಅಪರೋಕ್ಷೀಕೃತಶ್ರೀಶರಾದ ಜ್ಞಾನಿವರೇಣ್ಯ ಶ್ರೀಜಗನ್ನಾಥದಾಸವರ್ಯರು ತಮ್ಮ ಅಮರಗ್ರಂಥರತ್ನ **ಶ್ರೀಹರಿಕಥಾಮೃತಸಾರವನ್ನು** ಆರಂಭಿಸುತ್ತಾ **ಮಂಗಳಾಚರಣಸಂಧಿಯಲ್ಲಿ** ತಮ್ಮ ಉಪಾಸ್ಯಮೂರ್ತಿ ಹಾಗೂ ಕುಲದೈವವಾದ ಕೈವಲ್ಯದಾಯಕ ಗರುಡವಾಹನ ಶ್ರೀಲಕ್ಷ್ಮೀ ನರಸಿಂಹದೇವರನ್ನು ದೇವತಾತಾರತಮ್ಯತ್ವೇನ ಸ್ತುತಿಸಿದ್ದಾರೆ. ಅನಿಷ್ಟ ನಿವೃತ್ತಿದ್ವಾರಾ ಇಷ್ಟಪ್ರಾಪ್ತಿಗೋಸುಗ ಸಾಂಪ್ರದಾಯಕವಾಗಿ ಮಂಗಳಾ ಚರಣೆ ಮಾಡಿದ್ದಾರೆ.

ಮೋಕ್ಷಾಪೇಕ್ಷಿಗಳಾದ ಸಚ್ಚೇತನರು ಆ ದಯಾಸಾಗರನ ಕಾರುಣ್ಯವನ್ನು ಪಡೆಯಬೇಕೆಂದು ಸೂಚಿಸುತ್ತಾ, **ಕರುಣಾಸಂಧಿಯನ್ನು** ಉಪಕ್ರಮಿಸಿ, ಶ್ರುತಿ-ಸ್ಮೃತಿಗಳಿಂದ ಅನೇಕ ದೃಷ್ಟಾಂತಗಳನ್ನು ಕೊಡುತ್ತಾ, ಆ ಅಗಾಧಮಹಿಮಾ ಸಂಪನ್ನನ ಕಾರುಣ್ಯಗುಣವಿಶೇಷವನ್ನು ಕೊಂಡಾಡಿದ್ದಾರೆ.

ಅಂತಹ ಪರಮಕರುಣಾಮೂರ್ತಿ ಈ ಬ್ರಹ್ಮಾಂಡದಲ್ಲಿ ಪಟದಲ್ಲಿರುವ ತಂತುಗಳಂತೆ, ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ತುಂಬಿ

ಕೊಂಡು ಸರ್ವತ್ರ ವ್ಯಾಪಕನಾಗಿದ್ದಾನೆ ಎಂದು ಪ್ರಮೇಯಪ್ರಮಿತವಾಗಿ ಸ್ಥಾಪಿಸುತ್ತಾರೆ, ಮುಂದಿನ **ವ್ಯಾಪ್ತಿಸಂಧಿಯಲ್ಲಿ.**

ಸರ್ವತ್ರವ್ಯಾಪ್ತನಾದ ಆ ಮಹಿಮಾಸಂಪನ್ನನು ಪಿಂಡಾಂಡರೂಪವಾದ ಈ ಸಾಧನಶರೀರವೆಂಬ ಸ್ಥೂಲದೇಹದಲ್ಲಿ ವಿದ್ಯಮಾನನಾಗಿದ್ದು, ನಾರಾಯಣಾದಿ ಪಂಚರೂಪಗಳಿಂದ ಭೋಜ್ಯವಸ್ತುಗಳಲ್ಲಿದ್ದು, ಭೋಕ್ತೃವಾದ ಜೀವನಿಗೆ ರಸವಿಭಾಗ ಮಾಡಿ, ದೇಹಕ್ಕೆ ಉಪಚಯ ಕೊಡುತ್ತಾ, ರಸಪದ ವಾಚ್ಯನಾದ ಆ ಸ್ವರಮಣನು ಭೋಜನಕ್ರಿಯಾದ್ವಾರಾ ಜೀವರಿಗೆ ತೃಪ್ತಿಯ ಅನುಭವವನ್ನು ಕೊಡುತ್ತಾನೆಂದು ಭೋಜ್ಯರಸವಿಭಾಗಗಳ ಚಮತ್ಕಾರವನ್ನು ವಿವರಿಸುತ್ತಾರೆ, **ಭೋಜನರಸವಿಭಾಗಸಂಧಿ** ಎಂಬ ನಾಲ್ಕನೆಯ ಸಂಧಿಯಲ್ಲಿ.

ಭೋಜ್ಯ-ಭೋಕ್ತೃಗಳಲ್ಲಿ ವಿದ್ಯಮಾನನಾಗಿದ್ದು, ತನ್ನಾಮಕನಾಗಿರುವ ಆ ಬಿಂಬರೂಪಿ ಶ್ರೀಹರಿಯು ಆಪ್ತಕಾಮನು. ಜಡಗಳಲ್ಲಿ ಹಾಗೂ ಚೇತನ ವರ್ಗದಲ್ಲಿ ಕೆಲವು ಅತಿಶಯವಾಗಿ ಗೋಚರಿಸುವ ವಸ್ತುಗಳಲ್ಲಿ ತನ್ನ ವಿಶೇಷ ಸನ್ನಿಧಾನವನ್ನಿಟ್ಟು, ವಿಭೂತಿರೂಪಗಳಿಂದ ವಿರಾಜಮಾನನಾಗಿದ್ದಾನೆಂದು ತಿಳಿಸುತ್ತಾರೆ, ಮುಂದಿನ **ವಿಭೂತಿಸಂಧಿಯಿಂದ.**

ಪ್ರಕೃತಿಯಲ್ಲಿ ಪಂಚಾಗ್ನಿಗಳ ವಿವರ, ಜೀವನ ಸೃಷ್ಟಿಕ್ರಮ, ಅಗ್ನಿಗತ ಭಗವದ್ರೂಪಗಳ ಉಪಾಸನೆ, ವರ್ಣವಾಚ್ಯತ್ವ, ವರ್ಣಾಂತರ್ಗತ ಅಜಾದಿ ೫೧ ಭಗವದ್ರೂಪಗಳ ವಿವರಣೆ ಇತ್ಯಾದಿ ವಿವರಗಳ ಸಮಗ್ರ ನಿರೂಪಣೆ ಇದೆ, ಮುಂದಿನ **ಪಂಚಮಹಾಯಜ್ಞ ಸಂಧಿಯಲ್ಲಿ.**

**ಪಂಚತನ್ಮಾತ್ರಸಂಧಿಯು** ಏಳನೆಯ ಪ್ರಕರಣ. ಇದರಲ್ಲಿ ಭೂತ ಪಂಚಕಗಳು, ಶಬ್ದಾದಿ ಪಂಚತನ್ಮಾತ್ರಗಳು, ಪಂಚಭೇಧ, ತಾರತಮ್ಯಜ್ಞಾನ, ಈಶಕೋಟಿಪ್ರವಿಷ್ಠರಾದ ಶ್ರೀಲಕ್ಷ್ಮೀದೇವಿಯರ ಸ್ಥಾನ ಮತ್ತು ಮಹಾತ್ಮ್ಯೆ, ಕ್ಷರಾಕ್ಷರಪುರುಷಪೂಜಿತನಾದ ಆ ಪರಾತ್ಪರನ ಸರ್ವೋಚ್ಚತ್ವ ಇತ್ಯಾದಿ ಪ್ರಮೇಯಗಳು ಈ ಸಂಧಿಯಲ್ಲಿ ಘಟಕವಾಗಿವೆ.

ಪ್ರಸಕ್ತ **ಮಾತೃಕಾಸಂಧಿ** (ಅಷ್ಟಮಸಂಧಿ)ಯನ್ನು ಉಪಕ್ರಮಿಸು ತ್ತಾರೆ, ಮಂಗಳಾಂಗನ ಮೂರ್ತಿಯನ್ನು ಅಂತರಂಗದಲ್ಲಿ ಭಜಿಸುವ ರಂಗ ನೊಲಿದ ದಾಸವರ್ಯರು.

ಪಾದಾಭಿಮಾನಿ ಜಯಂತನಲ್ಲಿ ಸುಮೇಧನಾಮಕನಾಗಿದ್ದಾನೆ. ಬಲ ಪಾದದ ಉಂಗುಷ್ಠದಲ್ಲಿ ವಾಯ್ವಂತರ್ಗತನಾಗಿ ಭಾರಭೃನ್ನಾಮಕನಾದ ಭಗವ ದ್ರೂಪವು. ಕಲಿ ಆರಂಭಿಸಿ ಪಾದಪರ್ಯಂತ ಟಂಕೀ ಇತ್ಯಾದಿ ದಶರೂಪ ಗಳಿಂದ ಪಾದದ್ವಯಗಳ ಸಂದುಗಳಲ್ಲಿ ವಿದ್ಯಮಾನನಾಗಿದ್ದಾನೆ.

ಹಸ್ತಗತ ಮಾತೃಕಾಮಂತ್ರಪ್ರತಿಪಾದ್ಯ ಭಗವದ್ರೂಪಗಳನ್ನು ತಿಳಿಸು ತ್ತಾರೆ. ಕಪಿಲಾದಿ ಜ್ಞಸಾರ ಪರ್ಯಂತ ಐದುರೂಪಗಳಿಂದ ಬಲಗೈಯ್ಯಿನ ಕೀಲುಸಂಧಿಗಳಲ್ಲಿಯೂ,ಚಾರ್ವಾಂಗಾದಿ ಇಮ ಪರ್ಯಂತ ಐದುರೂಪಗಳಿಂದ ಎಡಗೈಯನ ಸಂಧಿಗಳಲ್ಲಿಯೂ ವಿರಾಜಮಾನನಾಗಿದ್ದಾನೆ. ದೇಹದ ಉಭಯ ಪಾರ್ಶ್ವಗಳಲ್ಲಿ ಪರ ಮತ್ತು ಫಲೀ ನಾಮಕನಾಗಿಯೂ, ಗುದ ಮತ್ತು ಉಪಸ್ಥ ಗಳಲ್ಲಿ ಬಲಿ ಮತ್ತು ಭಗನಾಮಕನಾಗಿಯೂ, ತುಂದಿ ಎಂಬ ಗೆಡ್ಡೆಯಲ್ಲಿ (ಮೂಲಾಧಾರ) ಮನು ಎಂಬ ರೂಪದಿಂದಲೂ ಇದ್ದು, ಶಾರೀರಿಕ ಸಮಸ್ತ ವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಿರುವನು.

ನಾಭಿಮೂಲದಲ್ಲಿ ಷಡ್ದಳಗಳುಳ್ಳ ಐದು ಕಮಲಗಳಿವೆ. ಈ ಪದ್ಮಗಳಲ್ಲಿ ಅನಿರುದ್ಧಾದಿ ನಾರಾಯಣಾಂತ ಪಂಚರೂಪಗಳಿಂದ ಇದ್ದು, ಜೀವರ ಅನಾದಿ ಕರ್ಮಾನುಸಾರ ತ್ರಿಗುಣಗಳ ವ್ಯಾಪಾರಗಳನ್ನೂ ಹಾಗೂ ಗರ್ಭಪ್ರಾಪ್ತಿ ಕಾರ್ಯವನ್ನೂ ಮಾಡಿಸುತ್ತಾನೆ.

ನಾಭಿಪ್ರದೇಶದಲ್ಲಿ ಷಟ್ಕೋಣಮಂಡಲದ ಕಮಲವಿದೆ. ಅದು ಭಾವೀ ಬ್ರಹ್ಮರಾದ ಶ್ರೀವಾಯುದೇವರ ಸ್ಥಾನವು. ಈ ಕಮಲದಲ್ಲಿ ಮುತ್ತಿನಂತೆ ಪ್ರಕಾಶವುಳ್ಳ ಪ್ರದ್ಯುಮ್ನನು ವಾಯ್ವಂತರ್ಗತನಾಗಿ, ಮಹಾಭಯಂಕರನಾದ ಪಾಪಪುರುಷನನ್ನು ನಿತ್ಯದಲ್ಲಿಯೂ ಶೋಷಿಸುತ್ತಾನೆ, ನಾಭೀಸ್ಥಿತ ಪಾಪ ಪುರುಷಶೋಷಕ ರೂಪ.

ಉದರಮಧ್ಯದಲ್ಲಿ ದ್ವಾದಶದಳ ಕಮಲವಿದೆ. ಇದು ದ್ವಾದಶಾದಿತ್ಯರ ಸ್ಥಾನ. ಆ ದ್ವಾದಶಾದಿತ್ಯರಲ್ಲಿ ವಿದ್ಯಮಾನನಾಗಿ ಅನಿರುದ್ಧಾದಿ ಪಂಚರೂಪ ಗಳಿಂದ ಶ್ರೀಹರಿಯು ಸಂವತ್ಸರಕ್ಕೆ ೩೬೦ ದಿವಾ-ರಾತ್ರಿ ಅಭಿಮಾನಿದೇವತೆ ಗಳನ್ನು ಸಂತೋಷಪಡಿಸುತ್ತಾ, ನಿಷಾಧರೆಂಬ ದೈತ್ಯರನ್ನು ನಿತ್ಯದಲ್ಲಿ ಸಂಹರಿ ಸುವನು.

ದೇಹದ ಹೃದಯಸ್ಥಾನದಲ್ಲಿ ಅಷ್ಟದಳಕಮಲವಿದೆ. ಇದರಲ್ಲಿ **ಪ್ರಾದೇಶ**ನಾಮಕನಾಗಿ ಹತ್ತು ಬೆರಳುದ್ದ ಪ್ರಮಾಣರೂಪದಲ್ಲಿ ಸರ್ವಾಭರಣ ಭೂಷಿತನಾಗಿ ಅಷ್ಟಾಯುಧ ಸಹಿತನಾಗಿ, ಸರ್ವಸುಲಕ್ಷಣಸಂಪನ್ನನಾದ ಬಿಂಬ ರೂಪಿ ಹರಿಯು ಧ್ಯಾನಿಸುವರಿಗೆ ಗೋಚರಿಸುವನು.

ಕಂಠಪ್ರದೇಶದಲ್ಲಿ ದ್ವಿದಳಾತ್ಮಕಪದ್ಮವಿದೆ. ಉದಾನನಾಮಕ ಶ್ರೀಮುಖ್ಯಪ್ರಾಣದೇವರು ಶ್ರೀಭಾರತೀಸಹಿತರಾಗಿದ್ದು, ಶ್ವಾಸರೂಪ ಹರಿ ಯೋಪಾಸನೆ ಮಾಡುತ್ತಿರುವರು. ಆ ಉದಾನನಾಮಕ ವಾಯುದೇವರಲ್ಲಿ **ಉದಾನ** ಶಬ್ಧವಾಚ್ಯನಾಗಿ ದ್ವಿದಳಪದ್ಮದಲ್ಲಿ ತಾನಿದ್ದು, ಆಹಾರ ನುಂಗುವು ದಕ್ಕೆ ಅವಕಾಶಪ್ರದನಾಗಿ ಶಬ್ದಗಳನ್ನು ನುಡಿದು ನುಡಿಸುವನು.

ನಾಸಿಕೇಂದ್ರಿಯದ ಎರಡು ಹೊಳ್ಳೆಗಳಲ್ಲಿ ನಾಸತ್ಯ ಮತ್ತು ದಸ್ರ ಎಂಬ ಹೆಸರಿನ ಅಶ್ವಿನೀದೇವತೆಗಳಿದ್ದಾರೆ. ಇವರಲ್ಲಿ ಶ್ವಾಸಾಭಿಮಾನಿ ಶ್ರೀಪ್ರಾಣ ದೇವರು ಭಾರತೀಸಹಿತ ಇರುವರು. ಇವರಲ್ಲಿ ಅಂತರ್ಯಾಮಿರೂಪ ಹಂಸ ಮತ್ತು ಧನ್ವಂತ್ರಿ. ಎರಡು ನೇತ್ರಗಳಲ್ಲಿ ಭೇಶ ಮತ್ತು ಭಾಸ್ಕರರೆಂಬ ಹೆಸ ರಿನ ಚಂದ್ರ ಮತ್ತು ಸೂರ್ಯರು ನೇತ್ರಾಭಿಮಾನಿದೇವತೆಗಳು. ಇವರಲ್ಲಿ ಲಕ್ಷ್ಮೀಪತಿ ಮತ್ತು ದಧಿವಾಮನ ಎಂಬ ಹೆಸರಿನಿಂದ ಅಂತರ್ಯಾಮಿರೂಪ ದಿಂದ ಶ್ರೀಪರಮಾತ್ಮನು ಇಂದ್ರಿಯವ್ಯಾಪಾರಗಳಿಗೆ ನಿಯಮಕನಾಗಿದ್ದಾನೆ. ಸರ್ವಜೀವರ ಬಲಗಣ್ಣಿನಲ್ಲಿ ವಿಶ್ವನಾಮಕನಾದ ಶ್ರೀಪ್ರದ್ಯುಮ್ನದೇವರು ಸ್ತಂಭರೂಪದಿಂದ ಇದ್ದಾರೆ. ಅಂಭ್ರಣೀನಾಮಕಳಾದ ಶ್ರೀಲಕ್ಷ್ಮೀದೇವಿ ಹಗ್ಗದ ರೂಪದಲ್ಲಿರುವರು. ಹಿರಣ್ಯಗರ್ಭನಾಮಕ ಭಾವೀಬ್ರಹ್ಮರಾದ

ಶ್ರೀವಾಯುದೇವರು ಗೋವತ್ಸ (ಕರು) ರೂಪದಲ್ಲಿದ್ದಾರೆ. ರುದ್ರಾದಿ ಸಕಲ ದೇವತಾವರ್ಗದಿಂದ ಸಂಸೇವ್ಯಮಾನನಾಗಿ, ಸರ್ವಪದಾರ್ಥಗಳನ್ನು ನೇತ್ರದ್ವಾರಾ ವಿಶ್ವಂಭರಾಭಿನ್ನ ಪ್ರದ್ಯುಮ್ನನು ತೋರಿಸುತ್ತಿರುವನು.

ಎರಡು ಕಣ್ಣುಗಳಲ್ಲಿ ವಸಿಷ್ಠ, ವಿಶ್ವಾಮಿತ್ರ, ಭರದ್ವಾಜ, ಗೌತಮ, ಅತ್ರಿ, ಜಮದಗ್ನಿ ಎಂಬ ಋಷಿಗಳ ನಾಮಕನಾಗಿ, ಪತ್ರತಾಪಕನೆಂಬ ರುದ್ರ, ಇಂದ್ರ, ಸೂರ್ಯ, ಭೂದೇವಿ, ಪರ್ಜನ್ಯನೆಂಬ ಮೇಘಾಭಿಮಾನಿ ಸೂರ್ಯ, ತ್ರಿಭುವನಸ್ವಾಮಿಯಾದ ಆ ಪ್ರದ್ಯುಮ್ನನನ್ನು ಉತ್ತಮಭಕ್ತಿಯಿಂದ ಕೊಂಡಾಡುತ್ತಿರುವರು.

ನೇತ್ರದ ಪ್ರಕಾಶವೆಂಬ ತೇಜಸ್ಸಿನಲ್ಲಿ ಕಪಿಲನಾಮಕ ಪರಮಾತ್ಮನು ಇಂದ್ರಾದಿ ದಿಕ್ಪಾಲಕರಿಂದ ಸಮೇತನಾಗಿ ಸರ್ವಜೀವರ ಬಲಗಣ್ಣಿನ ತುದಿಯಲ್ಲಿ ವಿಶ್ವಂಭರಮೂರ್ತಿ ಎಂದೆನಿಸಿ, ಶ್ವೇತವರ್ಣಯುಕ್ತನಾಗಿ ಚತುರ್ಭುಜಗಳಿಂದ ಮಧ್ಯಗಜಮುಖನಾಗಿ, ಜಾಗ್ರತಾವಸ್ಥಾ ಪ್ರೇರಕನಾಗಿ ಸ್ಥೂಲಭುಕ್ ಎಂದೆನಿಸಿ ಚೇತನರಿಗೆ ಜಾಗ್ರತಾವಸ್ಥೆಯಲ್ಲಿ ಸ್ಥೂಲವಿಷಯಗಳನ್ನು ಭೋಗ ಮಾಡಿಸು ವನು.

ಎರಡು ಕಿವಿಗಳಲ್ಲಿ ದಿಗ್ದೇವತೆಗಳೆನಿಸುವ ಇಂದ್ರ, ಯಮ, ವರುಣ, ಚಂದ್ರ, ಕುಬೇರರು ಇರುವರು. ಬಲಗಿವಿಯಲ್ಲಿ ಸರ್ವತೀರ್ಥಾಭಿಮಾನಿ ಗಳಾದ ಗಂಗಾದಿ ದೇವತೆಗಳಿರುವರು. ಗಂಗಾಜನಕನಾದ ತ್ರಿವಿಕ್ರಮ ದೇವರು ಅಲ್ಲಿದ್ದು, ತನ್ನನ್ನು ಧ್ಯಾನಿಸುವ ಸಜ್ಜನರ ಪಾಪವನ್ನು ಪರಿಹರಿಸಿ, ಪರಿಶುದ್ಧರನ್ನಾಗಿ ಮಾಡುವನು.

ಮನಸ್ಸೆಂಬ ತತ್ತ್ವದಲ್ಲಿ ಕಾಮ ಮತ್ತು ಇಂದ್ರರು ಅಭಿಮಾನಿಗಳು. ಅಹಂಕಾರ ತತ್ತ್ವದಲ್ಲಿ ರುದ್ರದೇವರು ಅಭಿಮಾನಿಗಳು. ಚಿತ್ತಾಭಿಮಾನಿ ಗರುಡ ಮತ್ತು ಚೇತನಾಭಿಮಾನಿ ಜೀವನಾಮಕ ಶೇಷದೇವರು. ಇವರೆಲ್ಲ ರಲ್ಲಿಯೂ ನಿಯಾಮಕನಾಗಿ, ಹತ್ತೊಂಭತ್ತು ಮುಖವುಳ್ಳ ತೈಜಸನಾಮಕ

ಪರಮಾತ್ಮನು ಜೀವರ ಕಂಠಪ್ರದೇಶದಲ್ಲಿದ್ದು, ಸ್ವಪ್ನಾವಸ್ಥೆಗೆ ಪ್ರೇರಕನಾಗಿ ಪ್ರವಿವಿಕ್ತರಸಭುಕ್ ಎಂದೆನಿಸಿ, ಸ್ವಪ್ನದ್ವಾರಾ ಸುಖದುಃಖಗಳನ್ನು ಉಣಿಸುವನು.

ಅಪ್ರಾಕೃತ ಜ್ಞಾನಾನಂದಾತ್ಮಕನಾದ ತೈಜಸನೇ ಜೀವರ ಹೃದಯ ಸ್ಥಾನಕ್ಕೆ ಬಂದಾಗ, ಪ್ರಾಜ್ಞನೆಂದೆನಿಸಿ, ಮುಕ್ತಿಯೋಗ್ಯಜೀವರಿಗೆ ಸ್ವರೂಪ ಸುಖದ ಕಿಂಚಿತ್ ಅನುಭವವನ್ನು ಕೊಡುತ್ತಾ, ಸುಷುಪ್ತಿ ಎಂಬ ಗಾಢನಿದ್ರೆ ಯನ್ನಿತ್ತು, ಪುನಃ ಅದೇ ಕ್ರಮದಲ್ಲಿ ತೈಜಸ ಮತ್ತು ವಿಶ್ವರೂಪಗಳಿಂದ ಸ್ವಪ್ನ ಮತ್ತು ಜಾಗ್ರತಾವಸ್ಥೆಗಳನ್ನು ಕೊಡುವನು.

ನಾಲಿಗೆಯಲ್ಲಿ ವರುಣನು ಅಭಿಮಾನಿ. ತದಂತರ್ಗತ ಭಗವದ್ರೂಪ ಮತ್ಸ್ಯನಾಮಕ ಶ್ರೀಹರಿ. ಕಿರುನಾಲಿಗೆಯಲ್ಲಿ ಇಂದ್ರಾಂತರ್ಗತ ಉಪೇಂದ್ರ ರೂಪ. ತಾಲು ಎಂಬ ಗಂಟಲಿನ ಮೇಲುಭಾಗ (ಅಂಗುಳು) ಪರ್ಜನ್ಯನೆಂಬ ಸೂರ್ಯ. ಅಲ್ಲಿ ಅರ್ಧಗರ್ಭನೆಂಬ ಭಗವದ್ರೂಪ. ಆಲಿ ಎಂಬ ಕಣ್ಣಿನಲ್ಲಿ ಸೂರ್ಯಾಂತರ್ಗತ ವಾಮನ ಮತ್ತು ಸುಭಾಮನ ಎಂಬ ರೂಪದ್ವಯಗಳು. ಫಾಲ ಎಂಬ ಹಣೆಯಲ್ಲಿ ಶ್ರೀರುದ್ರದೇವರು. ತದಂತರ್ಗತ ಕೇಶವರೂಪ. ಕಪೋಲದಲ್ಲಿ ರತಿಪತಿ ಮನ್ಮಥ. ಅಲ್ಲಿ ಪ್ರದ್ಯುಮ್ನರೂಪ. ಈ ರೀತಿ ಚಿಂತನಾಕ್ರಮ.

ಶರೀರಾದ್ಯಂತ ಇರುವ ಕೂದಲಿನಲ್ಲಿ ವಸಂತನೆಂಬ ಅಭಿಮಾನಿದೇವತೆ. ಅಲ್ಲಿ ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠಗಳೆಂಬ ತ್ರಿಧಾಮವಾಸಿ ತ್ರಿಕಕುದ್ಧಾಮನಾಮಕನೆಂಬ ಶ್ರೀಪರಮಾತ್ಮ. ಮುಖದಲ್ಲಿ ಅಗ್ನ್ಯಂತರ್ಗತ ಶ್ರೀಪರಶುರಾಮದೇವರು. ಶಿರಸ್ಸಿನಲ್ಲಿ ಬ್ರಹ್ಮದೇವರು. ಅಲ್ಲಿ ವಾಸು ದೇವರೂಪ. ಮನಸ್ಸಿನಲ್ಲಿ ಶ್ರೀವಿಷ್ಣು. ಶಿಖಾ ಎಂಬ ಚಂಡಿಕೆಯಲ್ಲಿ ಉಮಾಮನೋಹರ ರುದ್ರ. ಅಲ್ಲಿ ಅಂತರ್ಯಾಮಿರೂಪ ಲಕ್ಷ್ಮೀನರಸಿಂಹ. ಇಂತು ಶರೀರಗತ ಆಯಾಯಾ ಸ್ಥಾನಗತ ಭಗವದ್ರೂಪಗಳ ಉಪಾಸನಾಕ್ರಮ ದಿಂದ ಸಕಲ ದುರಿತಪರಿಹಾರ ಹಾಗೂ ಅಪಮೃತ್ಯು ನಿವಾರಣೆ.

ಶಿರಸ್ಸು ಸಹಿತ ಮುಖದಲ್ಲಿ ಅಜಾದಿ ಅರ್ಧಗರ್ಭ ಪರ್ಯಂತ ಸ್ವರ ವರ್ಣವಾಚ್ಯನಾಗಿ ೧೬ರೂಪಗಳಿಂದ ವಾಸುದೇವನಿರುವನು. ವದನಸ್ಥ ನೇತ್ರ, ಶ್ರವಣಾದಿ ೧೬ ಸ್ಥಾನಗಳಲ್ಲಿ ವಿದ್ಯಮಾನನಾಗಿದ್ದು, ತನಗೆ ತಾನೇ ಸೇವ್ಯಸೇವಕ ನೆನಿಸಿ, ವಿಹಾರಮಾಡುತ್ತಾ, ಆನಂದಮಯನು ನೋಡಿ ನೋಡಿಸಿ, ನುಡಿದು ನುಡಿಸಿ, ಬಿಂಬಕ್ರಿಯಾದ್ವಾರಾ ವ್ಯಾಪಾರಗಳನ್ನು ಮಾಡುತ್ತಿರುವನು.

ಮುಂದಿನ ೧೮ನೆಯ ಪದ್ಯದಲ್ಲಿ ಸ್ಥೂಲದೇಹಗತ ೭೨,೦೦೦ ನಾಡಿಗಳ ವಿಚಾರ ತಿಳಿಸುತ್ತಾರೆ. ಈ ನಾಡಿಗಳ ಪೈಕಿ ೧೦೧ ಪ್ರಧಾನನಾಡಿಗಳ ಸಮೂಹವು. ಅಲ್ಲಿ ಅಜಾದಿ ೫೧, ಕೇಶವಾದಿ ೨೮, ವಾಸುದೇವಾದಿ ೪, ಆತ್ಮಾದಿ ೪, ವಿಶ್ವಾದಿ ೪, ಮತ್ಸ್ಯಾದಿ ೧೦, ವೇದವ್ಯಾಸ, ದತ್ತಾತ್ರೇಯ ಶಿಂಶುಮಾರ ಎಂಬ ೩ರೂಪಗಳು, ಮೂಲನಾರಾಯಣ ೧ ಒಟ್ಟು ೧೦೧ ಭಗವ ದ್ರೂಪಗಳ ಚಿಂತನೆ. ಈ ರೂಪಗಳನ್ನು ಕಲಶಪೂಜೆಯಲ್ಲಿ ಚಿಂತನೆ ಮಾಡ ಬೇಕು. ಜ್ಞಾನಿಗಳಾದ ವಿಪ್ರೋತ್ತಮರು ಇಂತು ನಾಡೀಗತ ೧೦೧ ರೂಪ ಗಳನ್ನು ದೇಹವೆಂಬ ಕಳಸದಲ್ಲಿ ಆವಾಹನೆ ಮಾಡಿ ಚಿಂತಿಸುವರು.

ಪೂರ್ವೋಕ್ತ ೧೦೧ನಾಡಿಗಳಿಗೆ ಕಾರಣನಾಡಿಗಳು ೧೨ ಇವೆ. ಇವು ಗಳನ್ನು ಆಶ್ರಯಿಸಿ ಕಿವಿಯಲ್ಲಿ ನಾಡ್ಯಂತರ್ಗತ ಗಂಗಾದಿನದಿಗಳು, ಸಕಲ ತೀರ್ಥಾಭಿಮಾನಿ ದೇವತೆಗಳಿದ್ದಾರೆ. ಅಲ್ಲಿ ಪದ್ಮನಾಭರೂಪನಾಗಿ ಕೇಶ ವಾದಿ ದಾಮೋದರಾಂತ ೧೨ ರೂಪಗಳಿಂದ ೧೨ ನಾಡಿಗಳಲ್ಲಿ ವಿದ್ಯಾಮಾನನಾ ಗಿದ್ದಾನೆ. ಎಲ್ಲ ನಾಡಿಗಳಿಗೂ ಮೂಲನಾಡಿಯಾದ ಅತ್ಯಂತ ಸೂಕ್ಷ್ಮವಾದ ಸುಷುಮ್ನಾನಾಡಿಯಲ್ಲಿ ಏಕಾತ್ಮನೆಂಬ ಭಗವದ್ರೂಪದ ಚಿಂತನೆ, ದ್ವಾದಶ ಮುಖ್ಯ ನಾಡಿಗಳಲ್ಲಿ ಗಂಗಾದಿ ೧೨ ನದಿಗಳು ಭಂಗಿಯಲ್ಲಿವೆ ಎಂದು ಚಿಂತಿಸ ಬೇಕು.

ವೇದಪ್ರತಿಪಾದ್ಯನಾದ ಶ್ರೀಪ್ರದ್ಯುಮ್ನರೂಪಿ ಪರಮಾತ್ಮನು ಸುಷುಮ್ನಾನಾಡಿಯಲ್ಲಿ ವಿದ್ಯಮಾನನಾಗಿದ್ದಾನೆ. ಅದರ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿರುವ ಇಡಾ, ಪಿಂಗಳ, ವಜ್ರಿಕಾ ಮತ್ತು ಆರ್ಯಕಾ ಎಂಬ ನಾಲ್ಕು ನಾಡಿಗಳಲ್ಲಿ ಬ್ರಹ್ಮ, ವಾಯು, ಸರಸ್ವತೀ ಮತ್ತು ಭಾರತೀದೇವಿಯರಿರುವರು.

ಇವರ ಅಂತರ್ಯಾಮಿಯಾಗಿ ವಿಶ್ವ, ತೈಜಸ, ಪ್ರಾಜ್ಞ ಮತ್ತು ತುರ್ಯ ನಾಮಕನಾಗಿ ಶ್ರೀ ಹರಿಯು ವ್ಯಾಪಿಸಿದ್ದು, ಅಖಿಳಜೀವರ ಕರ್ಮಾನುಸಾರ ಕಾರ್ಯಪ್ರವರ್ತಕನಾಗಿರುವನು.

ಕಾಲನಿಯಾಮಕ ರೂಪೋಪಾಸನೆ ೨೧ನೆಯ ಪದ್ಯದಲ್ಲಿ ತಿಳಿಸುತ್ತಾರೆ. ಸಂವತ್ಸರ ೧, ಅಯನಗಳು ೨, ಋತುಗಳು ೬, ಮಾಸಗಳು ೧೨, ಸಂವತ್ಸರಾಂತರ್ಗತ ಪಕ್ಷಗಳು ೨೪. ಹೀಗೆ ಒಟ್ಟು ೪೫ ರೂಪಗಳಿಂದ ನೀಲ ಮೇಘಶ್ಯಾಮನಾದ ಅನಿರುದ್ಧ ದೇವರು ನಾರಾಯಣಾದಿ ಪಂಚರೂಪಗಳಿಂದ ಸೂರ್ಯಾದಿ ನವಗ್ರಹಗಳಲ್ಲಿ ವಿದ್ಯಮಾನನಾಗಿದ್ದು (೫×೯=೪೫ ರೂಪ ಗಳು), ಕಾಲಾಂತರ್ಗತನಾಗಿ ಸರ್ವತ್ರ ವ್ಯಾಪಿಸಿರುವನೆಂದು ಅರಿತವರಿಗೆ ಪ್ರಾಪ್ತನಾಗಿ ಅನುಗ್ರಹಿಸುವನು.

ಶ್ರೀಪರಮಾತ್ಮನ ಕಾಲರೂಪೋಪಾಸನೆ ಇನ್ನೊಂದು ರೀತಿಯಲ್ಲಿ ತಿಳಿಸುತ್ತಾರೆ. ಒಂದು ಸಂವತ್ಸರದ ಅಂಗಭಾಗಗಳು: ಸಂವತ್ಸರ, ಅಯನ, ಋತು ಮಾಸ ಮತ್ತು ಪಕ್ಷ ಎಂದು ೫ ಪ್ರಕಾರ. ಇವುಗಳಲ್ಲಿ ಅನಿರುದ್ಧಾದಿ ಪಂಚರೂಪಗಳು. ಅಲ್ಲಿಗೆ ೫×೫=೨೫ ರೂಪಗಳು. ಇವುಗಳಲ್ಲಿ ಮೂಲರೂಪ ನಾರಾಯಣನನ್ನು ಉಳಿದು ರೂಪಗಳು ೨೪. ಪಾಡ್ಯದಿಂದ ಪೂರ್ಣಿಮಾವರೆಗೆ ೧೫ ದಿನಗಳು. ಇದರಿಂದ ಹೆಚ್ಚಿಸಲು ಅಂದರೆ ೨೪×೧೫=೩೬೦ ಆಗುವುದು. ಇಂತಹ ೩೬೦ ದಿನಗಳಲ್ಲಿ ಅಷ್ಟೇ ರೂಪಗಳಿಂದ ಆ ಕಾಲನಿಯಾಮಕನ ಸ್ಮರಣೆಯನ್ನು ಸದಾ ಮಾಡುವವರ ತಾಪತ್ರಯಗಳನ್ನು ಹರಿಸಿ, ಕಾಲಕಾಲಕ್ಕೆ ಬಂದು ಒದಗುತ್ತಿರುವ ದುಃಖಗಳನ್ನು ನಿವಾರಿಸುವನು.

ಪ್ರವಾಹತೋನಿತ್ಯವಾದ ಕಾಲದಲ್ಲಿ ವಿದ್ಯಮಾನನಾಗಿದ್ದು, ಕಾಲಚಕ್ರವನ್ನು ನಿಯಂತ್ರಿಸುತ್ತಿರುವ ಶ್ರೀಪರಮಾತ್ಮನ ಮಹಿಮಾವಿಶೇಷಗಳನ್ನು ತಿಳಿಸುತ್ತಾರೆ. ಒಂದು ದಿವಸದ ಅಂಗಭಾಗಗಳು:–ದಿವಸಕ್ಕೆ ೬೦ಘಳಿಗೆಗಳು, ಯಾಮಕ್ಕೆ ಏಳೂವರೆ ಘಳಿಗೆ, ಮುಹೂರ್ತಕ್ಕೆ ೨ ಎರಡೂವರೆ ಘಳಿಗೆ,

ಘಳಿಗೆಗೆ ೬೪ ವಿಘಳಿಗೆಗಳು ಎಂಬ ಈ ಅವಯುವಕಾಲಗಳಲ್ಲಿ ಖಂಡರೂಪ ದಿಂದಿದ್ದು, ಅನಂತವಾದ ಕಾಲದಲ್ಲಿ ಅಖಂಡರೂಪದಿಂದ ಇರುವ ಶ್ರೀಪರ ಮಾತ್ಮನ ಅನಂತಾನಂತರೂಪ, ಕ್ರಿಯಾ, ಗುಣ ಸಮುದ್ರದಲ್ಲಿ ಭಾರ್ಗವೀ ನಾಮಕಳಾದ ಶ್ರೀಲಕ್ಷ್ಮೀದೇವಿ ಮುಳುಗಿ, ಅದರಲ್ಲಿಯೇ ಸದಾ ರತಳಾಗಿ, ನಿರಂತರ ಆತನ ಕಾಲರೂಪ ಗುಣೋಪಾಸನೆ ಮಾಡುತ್ತಿರುವಳು.

ಶ್ರೀರಮಾದೇವಿಯರ ಭಾಗ್ಯವನ್ನು ನಿರೂಪಿಸುತ್ತಾರೆ, ಮುಂದಿನ ೨೪ನೆಯ ಪದ್ಯದಿಂದ. ಶ್ರೀರಮಾದೇವಿ ಅನಂತಾನಂತವೇದಗಳ ಅಭಿ ಮಾನಿ. ಅಂತಹ ನಿಗಮತತಿಗಳ ಅಭಿಮಾನಿಯಾದ ಇಂದಿರೆಯು ಶ್ರೀಧರನ ಅನಾದ್ಯನಂತ ಕೋಟಿ ಗುಣ, ರೂಪ, ನಾಮ, ಕ್ರಿಯಾಸಮೂಹಗಳನ್ನು ಚಿಂತಿಸುತ್ತಾ, ಅವುಗಳ ಪ್ರಾರಂಭ ಕೊನೆಗಳನ್ನು ಸಾಕಲ್ಯೇನ ಅರಿಯಲು ಅಶಕ್ತಳಾಗಿ, 'ಇಂತಹ ಅಗಾಧಚರಿತನಾದ ಸ್ವಾಮಿಗೆ ನಾನು ಅನಾದ್ಯಂತ ಕಾಲದಲ್ಲೂ ನೀತಪತ್ನಿಯಾಗಿದ್ದೇನೆ. ನಾನು ಎಂತಹ ಭಾಗ್ಯಶಾಲಿಯೋ! ಸ್ವರಮಣನೂ, ಆಪ್ತಕಾಮನೂ ಪರಾಪೇಕ್ಷರಹಿತನೂ ಆದ ಸರ್ವತಂತ್ರ ಸ್ವತಂತ್ರನಾದ ಆದಿಮೂಲ ಸ್ವರೂಪಿಯು,ಅವನೀಪತಿಯಾದ ಚಕ್ರವರ್ತಿಯು ಭಿಕ್ಷುಕನ ಮನೆಗೆ ಬಂದು ಔತಣವನ್ನು ಸ್ವೀಕರಿಸುವಂತೆ, ನನ್ನನ್ನು ಉದ್ಧರಿಸ ಲೋಸುಗ ನನ್ನನ್ನು ತನ್ನ ಪತ್ನಿಯನ್ನಾಗಿ ಸ್ವೀಕರಿಸಿದ್ದಾನೆ'–ಎಂದು ಕ್ಷಣ ಕ್ಷಣಕ್ಕೂ ಆತನ ಅಧೀನಳಾಗಿ ಕೊಂಡಾಡುತ್ತಿದ್ದಾಳೆ. ರಮಾದೇವಿಯ ಭಕ್ತಿ ಅತ್ಯುನ್ನತ ಮಟ್ಟದ್ದು. ಆ ಕಾರಣದಿಂದ ಆಕೆಗೆ ಆನಂದೋದ್ರೇಕವನ್ನುಂಟು ಮಾಡುವುದಕ್ಕೋಸ್ಕರ ಲಕ್ಷ್ಮಿಯಿಂದ ಆನಂದಲಾಭವೇನೂ ಇಲ್ಲದ, ಆಪ್ತ ಕಾಮನಾದ ಶ್ರೀಹರಿಯು ತನ್ನ ಪತ್ನಿಯನ್ನಾಗಿ ಸ್ವೀಕರಿಸಿರುವನೆಂದು ತಿಳಿಸು ತ್ತಾರೆ.

ಶ್ರೀಧರನ ನಿತ್ಯಾವಿಯೋಗಿನಿಯಾಗಿರುವ ಶ್ರೀಲಕ್ಷ್ಮಿಯು ಚತುರ್ಮುಖ ಬ್ರಹ್ಮದೇವರ ತಾಯಿ. ಅಂತಹ ಲೋಕಜನನಿಯು ತನ್ನ ಬಿಂಬರೂಪಿಯಾದ ಶ್ರೀಪರಮಾತ್ಮನ ಸ್ತ್ರೀರೂಪಗತ ಅನಂತಾನಂತ ಗುಣರೂಪಕ್ರಿಯಾವಿಶೇಷ ಗಳನ್ನು ಯುಕ್ತಿಯಿಂದ, ವಿಧ್ಯುಕ್ತವಾಗಿ ಆಲೋಚಿಸುತ್ತಾ, ಅವನ ಅಪಾರ

ಮಹಿಮಾವಿಶೇಷಗಳನ್ನು ತಿಳಿಯಲು ಅಶಕ್ಯಳಾಗಿದ್ದಾಳೆಂದಮೇಲೆ ಅಲ್ಪರಾದ ನರರ ಪಾಡೇನು ಎಂದು ಕೈಮುತ್ಯನ್ಯಾಯದಿಂದ ಉದ್ಗಾರ ತೆಗೆದಿದ್ದಾರೆ ದಾಸರಾಯರು.

ಮುಂದಿನ ಪದ್ಯದಲ್ಲಿ ಕ್ಷೀರಾದ್ಯಭಿಮಾನಿ ಭಗವದ್ರೂಪಗಳ ವಿವರಣೆ ಕೊಡುತ್ತಾರೆ. ಹಾಲು, ಮೊಸರು, ಬೆಣ್ಣೆ ಮತ್ತು ತುಪ್ಪವೆಂಬ ಕ್ಷೀರಗತ ನಾಲ್ಕುವಿಧವಾದ ವಸ್ತುಗಳಲ್ಲಿ ಭಾರತಿ, ಸರಸ್ವತಿ, ವಾಯುದೇವರು ಮತ್ತು ಬ್ರಹ್ಮದೇವರು ವಿದ್ಯಮಾನರಾಗಿದ್ದಾರೆ. ಅವುಗಳಲ್ಲಿ ಸೌರಭ ಎಂಬ ಸುವಾಸನೆ ಮತ್ತು ರಸ ಎಂಬ ರುಚಿನಾಮಕನಾಗಿ ಶಾಂತೀಪತಿ ಶ್ರೀಅನಿರುದ್ಧನು ಜ್ಞಾನ, ಇಚ್ಛಾ ಕ್ರಿಯಾ ಮತ್ತು ಶಕ್ತಿ ಎಂಬ ಚತುರ್ವಿಧ ರೂಪಗಳಿಂದ ವಿರಾಜಮಾನನಾಗಿದ್ದಾನೆ.

ಅಷ್ಟವಸುಗಳು ೮, ಪ್ರಜೇಶರು ೯, ಮುಖ್ಯಪ್ರಾಣಸಹಿತ ಮರುದ್ಗಣ ೫೦, ಆದಿತ್ಯಗಣ ೧೧ (ವಿಷ್ಣುನಾಮಕ ಸೂರ್ಯನನ್ನು ಬಿಟ್ಟು), ರುದ್ರಗಣ ೧೧, ಅಶ್ವಿನೀದೇವತೆಗಳು ೧. ಇಂತು ಎಲ್ಲಾ ಒಟ್ಟು ೯೦ ದೇವತೆಗಳಲ್ಲಿ (ದಶವಿಹೀನ ಶತಾಖ್ಯ), ಬ್ರಹ್ಮದೇವರು, ಶ್ರೀವಾಯುದೇವರು ಗರುಡ ಮತ್ತು ಶೇಷ ಈ ನಾಲ್ಕು ಪ್ರಮುಖ ದೇವತಾಗಣದಲ್ಲಿ ಅನಿರುದ್ಧಾದಿ ನಾಲ್ಕು ರೂಪಗಳಿಂದ ಇದ್ದು ಜಗತ್ಪ್ರವರ್ತಕನಾಗಿ ನಿಯಾಮಕನಾಗಿದ್ದಾನೆಂದು ತಿಳಿಸುತ್ತಾರೆ.

೨೮ನೆಯ ಪದ್ಯದಲ್ಲಿ ಶಂಖ ಚಕ್ರಾದಿ ಆಯುಧಗತರೂಪಗಳು ಮತ್ತು ಪಂಚಮುದ್ರಾದಿಗಳಲ್ಲಿರುವ ಪಂಚಭಗವದ್ರೂಪಗಳ ವಿವರ ತಿಳಿಸುತ್ತಾರೆ.

೧. ಚಕ್ರವೆಂಬ ಸುದರ್ಶನಾಯುಧದಲ್ಲಿ ಹಿಂಂಕಾರನಾಮಕ ಶ್ರೀಪ್ರದ್ಯುಮ್ನ.

೨. ಪಾಂಚಜನ್ಯವೆಂಬ ಶಂಖದಲ್ಲಿ ಪ್ರತೀಹಾರನಾಮಕ ಅನಿರುದ್ಧನು.

೩. ಗದೆಯಲ್ಲಿ **ನಿಧನನಾಮಕ** ಸಂಹಾರಕರ್ತ **ಸಂಕರ್ಷಣರೂಪವು.**

೪. ಪದ್ಮದಲ್ಲಿ **ಪ್ರಸ್ಥಾವನಾಮಕ ವಾಸುದೇವರೂಪನು.**

೫. ಓಂಕಾರಪ್ರತಿಪಾದ್ಯನಾದ ಶ್ರೀಮನ್ನಾರಾಯಣನು **ಉದ್ಗೀಥ ನಾಮಕನಾಗಿ ನಾರಾಯಣ ಮುದ್ರೆಯಲ್ಲಿರುವನು.**

ಇಂತು ಪೂರ್ವೋಕ್ತ ಪಂಚಭಗವದ್ರೂಪಗಳನ್ನು ಮುದ್ರಾಧಾರಣ ಕಾಲದಲ್ಲಿ ಆಯಾಯಾ ಸ್ಥಾನಗಳಲ್ಲಿ ಸ್ಮರಿಸಿಕೊಂಡು ಧರಿಸಬೇಕು.

ಸಾಧನಶರೀರವೆಂಬ ಈ ದೇಹವೇ ಒಂದು ರಥ. ಈ ದೇಹಾಖ್ಯ ರಥಕ್ಕೆ ವಾಗಭಿಮಾನಿಯಾದ ಪಾರ್ವತಿಯು ಹಗ್ಗವೆಂದೂ, ಕಿವಿಗಳಲ್ಲಿರುವ ರೋಹಿಣೀ ಮತ್ತು ಚಂದ್ರ ಎಂಬ ದಿಗ್ದೇವತೆಗಳು ಕಡಿವಾಣರೂಪರಾಗಿಯೂ, ಸಂಜ್ಞಾದೇವಿ ಮತ್ತು ಸೂರ್ಯ ಎಂಬ ನೇತ್ರಾಭಿಮಾನಿ ದೇವತೆಗಳು ಕುದುರೆಗಳಾಗಿಯೂ, ಅಗ್ನಿನೇತ್ರರಾದ ಶ್ರೀರುದ್ರದೇವರು ಅಹಂಕಾರತತ್ವಾಭಿಮಾನಿಗಳಾಗಿದ್ದು, ಸಾರಥಿಯಾಗಿಯೂ, ಮುಖ್ಯಪ್ರಾಣಾಂತರ್ಗತ ಓಂಕಾರ ಪ್ರತಿಪಾದ್ಯ ಪ್ರಾಣನಾಮಕ ಶ್ರೀಪರಮಾತ್ಮನೇ ರಥಾಧಿಪತಿ ಎಂದೆನಿಸುವನು. ಇದು ದೇಹಾಖ್ಯ ರಥದ ಜ್ಞಾನಾನುಸಂಧಾನ.

ಅಗಾಧಮಹಿಮಾಗುಣಸಂಪನ್ನನಾದ ಪರಮಾತ್ಮನ ಅಪಾರಗುಣ ಸ್ತೋಮಗಳನ್ನು ೫೧ ವರ್ಣಾತ್ಮಕ ಶೃತಿಸ್ಮೃತಿಗಳು ಕೊನೆಗಾಣಲಾರವು. ಪರಮಾತ್ಮನ ಗುಣಗಳನ್ನು ನಮಗೆ ಪರಿಚಯ ಮಾಡಿಕೊಡುವ ವಾಙ್ಮಯವೆಂದರೆ ಶಬ್ದಪ್ರಪಂಚವೆಂಬ ಅಪೌರುಷೇಯ ಹಾಗೂ ನಿತ್ಯವಾದ ವೇದರಾಶಿಗಳು, ತದನುಸಾರಿ ಸ್ಮೃತಿ, ಇತಿಹಾಸ, ಪುರಾಣಗಳು. ಆದರೂ ಶ್ರೀಪರಮಾತ್ಮನು ವೇದಾತೀತನು ಶೃತಿಸ್ಮೃತಿಗಳಿಗೆ ಸಿಲುಕದ ಅಪಾರಮಹಿಮನು. ವೇದಾಭಿಮಾನಿಗಳಾದ ಬ್ರಹ್ಮ, ರುದ್ರ, ಇಂದ್ರಾದಿಗಳೇ ಅರಿಯರೆಂದ ಬಳಿಕ ಇತರರಿಗೆ ಅಳವಡುವುದೇ ? ಸರ್ವಜ್ಞನಾದ ಆ ಶ್ರೀಶನೊಬ್ಬನೇ ಬಲ್ಲ ತನ್ನ ಅಪಾರಗುಣ ಸಮುದ್ರದ ಆದ್ಯಂತ ಮಧ್ಯಗಳನ್ನ.

ಸಂಪಾದಿಸಿದ ಧನ, ಸಾಧನಶರೀರವಾದ ಈ ದೇಹ, ಕಟ್ಟಿಸಿದ ಮನೆ, ಕೈಹಿಡಿದ **ಹೆಂಡತಿ,** ತನ್ನಿಂದ ಉತ್ಪನ್ನರಾದ ಮಕ್ಕಳು, ಸಹಚರರಾದ ಮಿತ್ರ ವರ್ಗ, ತನುಸಂಬಂಧಿಗಳಾದ ಬಂಧುವೃಂದ ಇತ್ಯಾದಿಗಳಲ್ಲಿ ಜೀವರಿಂದ ಅತ್ಯಂತ ಭಿನ್ನವಾದ **ಪ್ರತ್ಯಗಾತ್ಮ**ನಾಮಕನಾದ ಬಿಂಬರೂಪಿ ಶ್ರೀಹರಿಯು ಅಂತರ್ಯಾಮಿತ್ವೇನ ವಿದ್ಯಮಾನನಾಗಿದ್ದಾನೆಂದು ತಿಳಿದು, ನಿರಂತರದಲ್ಲಿ ಉತ್ತಮ, ಮಧ್ಯಮ ಮತ್ತು ಅಧಮರೆಂಬ ಅಧಿಷ್ಠಾನತ್ರಯರನ್ನು ಆನಂದ ಪಡಿಸುತ್ತಾ (ಉತ್ತಮರಲ್ಲಿ ಭಕ್ತಿಭಾವ. ಸಮಾನರಲ್ಲಿ ಮಿತ್ರಭಾವ, ಅವರರಲ್ಲಿ ವಾತ್ಸಲ್ಯಭಾವ), ದುರಭಿಮಾನ, ಅಹಂಕಾರಗಳಿಗೆ ಒಳಗಾಗದೆ, ಆ ಸರ್ವೇಶ್ವರನ ದಾಸನು ನಾನೆಂದು ಜನ್ಮಸಾರ್ಥಕಪಡಿಸಿಕೋ ಎಂದು ಉಪದೇಶಾಮೃತ ನೀಡುತ್ತಾರೆ, ದಾಸರಾಯರು.

ಪ್ರಸಕ್ತ **ಮಾತೃಕಾಸಂಧಿ**ಯನ್ನು ೩೨ನೆಯ ಈ ಕೊನೆಯ ಪದ್ಯದಿಂದ ಉಪಸಂಹಾರ ಮಾಡುತ್ತಾ, ದೇವೋತ್ತಮನಾದ ಶ್ರೀಹರಿಯ ಪರಮಮಂಗಳ ಕರವಾದ ಮೂರ್ತಿಗಳನ್ನು ದೇವಸದನವೆಂದಿನಿಪ ಈ ದೇಹದಲ್ಲಿ ನಿರಂತರ ನೆಲೆಗೊಳಿಸಿ, ಧ್ಯಾನೋಪಾಸನದ್ವಾರಾ ಪೂಜಿಸುತ್ತಾ, ಅವನ ದರ್ಶನಭಾಗ್ಯವನ್ನು ಪಡೆಯುತ್ತಾ ಆನಂದದಿಂದ ಭಾಗ್ಯಪುರುಷನೆಂದೆನಿಸು. ಶ್ರೀಪತಿ ಶ್ರೀಜಗನ್ನಾಥವಿಠ್ಠಲನು, ಅಂತಹ ವ್ಯಾಪ್ತ್ಯೋಪಾಸಕರಿಗೆ ತಾನು ಅನುಗ್ರಹಿಸಿ, ತನ್ನ ಕರುಣಾಕಟಾಕ್ಷವೀಕ್ಷಣದಿಂದ ಸಂಸಾರಜನ್ಯವಾದ ಕಷ್ಟ ನೋವುಗಳನ್ನು ಪರಿಹರಿಸಿ, ಶರಣಾಗತರಕ್ಷಾಮಣಿಯು ಸಂರಕ್ಷಿಸುವನು ಎಂದು ಭಗವಂತನ ಕಾರುಣ್ಯವಿಶೇಷವನ್ನು ಕೊಂಡಾಡುತ್ತಾ ಉಪಸಂಹಾರ ಮಾಡುತ್ತಾರೆ.

**|| ಇಂತು ಮಾತೃಕಾಸಂಧಿಯು 'ಸಂಧಿಸಾರ' ಮುಗಿಯಿತು ||**

|| ಶ್ರೀಲಕ್ಷ್ಮೀನರಸಿಂಹಾರ್ಪಣಮಸ್ತು ||

॥ ಶ್ರೀಃ ಹರಿಃ ಓಂ ॥

॥ ಶ್ರೀಗರುಡವಾಹನ ಲಕ್ಷ್ಮೀನರಸಿಂಹ ಪ್ರಸೀದ ॥

॥ ಶ್ರೀಜಗನ್ನಾಥವಿಠ್ಠಲಾಯನಮಃ ॥

# ಸಂಧಿ ೮

# ಮಾತೃಕಾಸಂಧಿ

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

## ಪದ್ಯ (೧)

ಮೂಲ :–

ಪಾದಮಾನಿ ಜಯಂತನೊಳು ಸು ।
ಮೇಧ ನಾಮಕನಿಪ್ಪ ದಕ್ಷಿಣ ।
ಪಾದದುಂಗಟದಲ್ಲಿ ಪವನನು ಭಾರಭೃದ್ರೂಪ ॥
ಕಾದುಕೊಂಡಿಹ ಟಂಕಿ ತರ ನೊದ ।
ಲಾದ ನಾಮದಿ ಸಂಧಿಗಳಲೀ ।
ರೈದು ರೂಪದಲಿದ್ದು ಸಂತತ ನಡೆದು ನಡೆಸುತಲಿ ॥ ॥೧॥

**ಅವತರಣಿಕೆ :–**

ಪಾದೇಂದ್ರಿಯಾಭಿಮಾನಿ,ತದಂತರ್ಗತ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ. **'ಪಾದಮಾನಿ'** ಎಂಬ ಪ್ರಸಕ್ತ ಸಂಧಿಗತ ಈ ಪ್ರಥಮ ಪದ್ಯದಿಂದ.

ಕರ್ಮೇಂದ್ರಿಯಗಳೆನಿಪ ಪಾದದ್ವಯಗಳಲ್ಲಿ ತತ್ವಾಭಿಮಾನಿದೇವತೆ ಇಂದ್ರಪುತ್ರನಾದ **ಜಯಂತನು.** ಈ ಜಯಂತನಲ್ಲಿ **ಸುಮೇಧನಾಮಕ** ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಬಲಪಾದದ ಹೆಬ್ಬೆರಳಿನಲ್ಲಿ ಮುಖ್ಯ ಪ್ರಾಣದೇವರು. ಅವರ ಅಂತರ್ಯಾಮಿಯಾಗಿ **ಭಾರಭೃತ್** ಎಂಬ ಹೆಸರಿನಿಂದ ಸಮಸ್ತ ಬ್ರಹಾಂಡಕ್ಕೆ ಆಧಾರಭೂತನಾದ ಹಾಗೂ ಪಿಂಡಾಂಡರೂಪವಾದ ಈ ಶರೀರಕ್ಕೆ ಆಶ್ರಯನಾಗಿ ಶ್ರೀಪರಮಾತ್ಮನಿರುವನು. ಟವರ್ಗ ಪಂಚಕ ವ್ಯಂಜನಾಕ್ಷರ ಶ್ರೇಣಿಯಲ್ಲಿ ಟವರ್ಗ ಆರಂಭಿಸಿ ಣ ವರ್ಣ ಪರ್ಯಂತ ಟಂಕೀ ಇತ್ಯಾದಿ ಣಾತ್ಮ ಎಂಬ ಪಂಚ ವರ್ಣವಾಚ್ಯ ಭಗವದ್ರೂಪಗಳಿಂದ ಬಲಗಾಲಿನ ಐದು ಕೀಲು ಸಂಧಿಗಳಲ್ಲಿಯೂ, ತ–ವರ್ಗ ಪಂಚಕ ವ್ಯಂಜನಾಕ್ಷರ ಶ್ರೇಣಿಯಲ್ಲಿ ತ ವರ್ಣ ಆರಂಭಿಸಿ, ನ ವರ್ಣ ಪರ್ಯಂತ ತಾರಾದಿ ನಮ್ಯ ಪರ್ಯಂತ ಪಂಚವರ್ಣವಾಚ್ಯ ಭಗವದ್ರೂಪಗಳಿಂದ ಎಡಗಾಲಿನ ಕೀಲುಸಂಧಿಗಳಲ್ಲಿ ವ್ಯಾಪ್ತನಾಗಿದ್ದು, ಪಾದೇಂದ್ರಿಯ ವ್ಯಾಪಾರವಾದ ಗಮನಾಗಮನ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನು ॥೧॥

**ಪ್ರತಿಪದಾರ್ಥ :–**

**ಪಾದಮಾನಿ**=ಉಭಯ ಪಾದಗಳಿಗೂ ಅಭಿಮಾನಿಯಾದ **ಜಯಂತನೊಳಗೆ**=ಇಂದ್ರಪುತ್ರನಾದ ಜಯಂತನೆಂಬ ದೇವತೆಯಲ್ಲಿ **ಸುಮೇಧನಾಮಕ**=ಸುಮೇಧ ಎಂಬ ಹೆಸರಿನ ಯಜ್ಞನಾಮಕ ಪರಮಾತ್ಮನು, **ಇಪ್ಪ**=ಮುಖ್ಯಾಭಿಮಾನಿಯಾಗಿದ್ದಾನೆ (ಇದರಿಂದ ವಾಮ ಪಾದವೂ ಗ್ರಾಹ್ಯ) **ದಕ್ಷಿಣಪಾದದಂಗುಟದಲ್ಲಿ**=ಬಲಗಾಲಿನ ಹೆಬ್ಬೆರಳಿನಲ್ಲಿ, **ಪವನನು**=ಭಾರತೀರಮಣರಾದ ಶ್ರೀ ಮುಖ್ಯಪ್ರಾಣದೇವರು,

**ಭಾರಭೃದ್ರೂಪ**= ವಾಯ್ವಾಂತರ್ಗತನಾಗಿ ಭಾರಭೃತ್ ಎಂಬ ರೂಪದಿಂದ ಇಡೀ ಶರೀರದ ಭಾರವನ್ನು ಹೊತ್ತು ಆಶ್ರಯಭೂತನಾಗಿ **ಕಾದು ಕೊಂಡಿಹ**= ಈ ದೇಹದ ರಕ್ಷಣೆಯನ್ನು ಮಾಡುತ್ತಾ, ತದ್ಗತನಾದ ಜೀವನಿಗೆ ಸಂರಕ್ಷಕನಾಗಿದ್ದಾನೆ **ಟಂಕಿತರ ಮೊದಲಾದ**=೧. ಟ–ಟಂಕಿ, ೨. ಠ–ಠಳಕ, ೩. ಡ–ಡರಕ ೪. ಢ–ಢರೀ ಮತ್ತು ೫. ಣ–ಣಾತ್ಮ ಎಂಬ ಟ-ವರ್ಗ ಪಂಚವರ್ಣ ಪ್ರತಿಪಾದ್ಯ ರೂಪಗಳಿಂದ ಬಲಗಾಲಿನ ಕೀಲು ಸಂಧಿಗಳಲ್ಲಿಯೂ **ತರ**=೧. ತ–ತಾರ ೨. ಥ–ಥಪ ೩ ದ–ದಂಡೀ ೪. ಧ–ಧನ್ವೀ ಮತ್ತು ೫. ನ–ನಮ್ಯ ಎಂಬ ತ ವರ್ಗ ಪಂಚ ವರ್ಣಾತ್ಮಕನಾಗಿ ಎಡಗಾಲಿನ ಐದು ಕೀಲು ಸಂಧಿಗಳಲ್ಲಿಯೂ, **ಮೊದಲಾದ ನಾಮದಿ**= ಪೂರ್ವೋಕ್ತ ವರ್ಣವಾಚ್ಯನಾಮಗಳಿಂದ, **ಸಂಧಿಗಳಲಿ**= ಬಲಗಾಲು ಮತ್ತು ಎಡಗಾಲಿನ ಐದು ಕೀಲು ಸಂಧಿಗಳಲ್ಲಿ, **ಈರೈದು ರೂಪದಲಿದ್ದು** =೧೦ ರೂಪಗಳಿಂದ ವಿದ್ಯಮಾನನಾಗಿ ಇದ್ದವನಾಗಿ (ಎರಡು ಐದು= ಈರೈದು=೫ × ೨=೧೦) **ಸಂತತ**= ನಿತ್ಯದಲ್ಲೂ, **ನಡೆದು**= ಪಾದಾಭಿಮಾನಿ ಜಯಂತಾರ್ಗತನಾಗಿ ತಾನು ಬಿಂಬನಾಗಿ ನಡೆಯುತ್ತಾ, **ನಡೆಸುತಲೀ**= ಬಿಂಬಕ್ರಿಯಾದ್ವಾರಾ ಪ್ರತಿಬಿಂಬರಾದ ಜೀವನನ್ನು ಪಾದದಿಂದ ನಡೆಯಿಸುತ್ತಾ, ಗಮನಾಗಮನ ವ್ಯಾಪಾರಗಳನ್ನು ಮಾಡಿ ಮಾಡಿಸುವನು. ॥೧॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :

ಹಿಂದೇ ಸಂಧಿಯಲ್ಲಿ ಸ್ಥೂಲದೇಹದ ವಿಚಾರ ಕೇಳುವ ಮಟ್ಟಿಗೆ ಹೇಳಿದವರಾಗಿ, ಈಗ ದೇಹಗತ ತತ್ತ್ವಾಭಿಮಾನಿದೇವತೆಗಳ ಭಗವದ್ರೂಪ ವಿಚಾರ ಹೇಳತಾರೆ.

**ಪಾದಾಭಿಮಾನಿ–ಉಭಯಪಾದಗಳಿಗೆ ಅಭಿಮಾನಿಯಾದ ಜಯಂತ**

ನೊಳಗೆ–ಜಯಂತನಾಮಕ ದೇವತಾ (ಈ ಜಯಂತನೊಳು), ಪವನನು–ಭಾರತೀರಮಣಮುಖ್ಯಪ್ರಾಣಾಂತರ್ಗತನಾಗಿ, ದಕ್ಷಿಣ ಪಾದದುಂಗುಟದಲ್ಲಿ ಬಲಪಾದದ ಹೆಬ್ಬೆಟ್ಟಿನಲ್ಲಿ, ಭಾರಭೃದ್ರೂಪ–ಭಾರಭೃತ್ ಎನತಕ್ಕ ಭಗವದ್ರೂಪ, ಸುಮೇಧನಾಮಕ–ದಕ್ಷಿಣಪಾದ ಎಂಬೋ ದಿಕ್ಪ್ರದರ್ಶನ ರೀತ್ಯಾ ವಾಮಪಾದವೂ ಗ್ರಾಹ್ಯ. ಈ ಎರಡು ಪಾದದ ಅಂಗುಷ್ಟದಲ್ಲಿ ಯಜ್ಞನಾಮಕ ಪರಮಾತ್ಮ, ಇಪ್ಪ–ಶ್ರೀಪರಮಾತ್ಮ ಒಂದೊಂದು ರೂಪದ ಮ್ಯಾರಿಗೆ ಉಕ್ತಪ್ರಕಾರದಿಂದ ಇದ್ದಾನೆ. ಎರಡೂ ಪಾದದ ಮ್ಯಾಲೆ ದೇಹ ಭಾರ ಸಮನಾಗಿ ಇರೋಣದರಿಂದ ಪಾದಾಭಿಮಾನಿ ಜಯಂತಾಂತರ್ಗತ, ಮುಖ್ಯಪ್ರಾಣಾಂತರ್ಗತ ಶ್ರೀಭಾರಭೃದ್ರೂಪವದೆ. ಟಂಕಿ ತರ ಮೊದಲಾದ ನಾಮದಿ–ಟಂಕಿ ಎಂದರೆ ೧. ಟ–ಟಂಕೀ ೨. ಠ–ಠಳಕ ೩. ಡ–ಡರಕ ೪. ಢ–ಢರೀ (ಢರಣಿ) ೫. ಣ–ಣಾತ್ಮ. ಏತಾದೃಶನಾಮಸಂಕೇತಗಳಾದ ಐದು ನಾಮಗಳಿಂದಲೂ, ತರ–ಎಂದರೆ ೧. ತ–ತಾರ ೨. ಥ–ಥಪ ೩. ದ–ದಂಡೀ ೪. ಧ–ಧನ್ವೀ ೫. ನ–ನಮ್ಯ, ಏತಾದೃಶ ನಾಮಸಂಕೇತಗಳಾದ ಐದು ರೂಪಗಳಿಂದಲೂ, ಈ ಪ್ರಕಾರ ದಶನಾಮಗಳಿಂದ ಶ್ರೀಪರಮಾತ್ಮ ಸಂಧಿಗಳಲೀರ್ಪದು–ಉಭಯಪಾದಗಳಿಗೆ ಕೀಲು ಸಂಧಿಗಳು ಎರಡು ಐದುಗಳು, ಹತ್ತು ಸಂಧಿಗಳು. ಅವು ದಾವವೆಂದರೆ ಐದು ಬಲಪಾದ ಸಂಧಿಗಳು ೧. ತೊಡೆಕೀಲು ೨. ಎರಡು ಮೊಳಕಾಲು ಕೀಲು ೩. ಗುಲ್ಫದ ಕೀಲು ೪. ಬೆರಳುಗಳಲ್ಲಿರತಕ್ಕ ಮೇಲುಭಾಗದ ಕೀಲು ೫. ಅಡಿ ಭಾಗದ ಕೀಲು ಅಂತು ಐದು, ಇದೇ ಪ್ರಕಾರ ಎಡ ಪಾದಗತ ಕೀಲುಗಳು ಐದು. ಅಂತು ಹತ್ತು ಸಂಧಿಗಳಲ್ಲಿ ಪೂರ್ವೋಕ್ತವಾದ, ರೂಪದಲಿ–ಟ, ತ ರೂಪಗಳಿಂದ ಕಾದುಕೊಂಡಿಹ–ಸರ್ವದಾ ಆ ಸ್ಥಳದಲ್ಲಿ ಕಾದುಕೊಂಡಿದ್ದಾನೆ, ಇದ್ದು ಈ ಪ್ರಕಾರ ತದ್ರೂಪ, ತನ್ನಾಮದಿಂದ ಅಲ್ಲಲ್ಲಿ ಇದ್ದವನಾಗಿ, ಸಂತತ–ನಿರಂತರದಲ್ಲೂ, ನಡೆದು ನಡೆಸುತಲೀ–ಛಾಯಾಪುರುಷನ ದೃಷ್ಟಾಂತ ರೀತ್ಯಾ, ಬಿಂಬಕ್ರಿಯಾದ್ವಾರಾ ಪ್ರತಿಬಿಂಬಕ್ರಿಯಾದಿಂದ ತಾನು ನಡೆದು, ದೇವತೆಗಳದ್ವಾರಾ, ಜೀವನದ್ವಾರಾ ಕಾಲುಗಳಿಂದ ಗಮನಾಗಮನಗಳು ಮಾಡಸತಾನೆ ಎಂತ ತಾತ್ಪರ್ಯ. ॥೧॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಪೂರ್ವಸಂಧಿಗಳಲ್ಲಿ ಪಂಚಮಹಾಭೂತ ತನ್ಮಾತ್ರಗುಣಗಳಿಂದ ಯುಕ್ತವಾದ ಶರೀರಾದಿಗಳಲ್ಲಿ ಭಗವದ್ರೂಪೋಪಾಸನ ಕ್ರಮವನ್ನು ಹೇಳಿ, ಪೂರ್ವಸಂಧಿ ೧೧ನೆಯ ಪದ್ಯದಲ್ಲಿ **ಏಕಪಂಚಾಶದ್ವರ್ಣಗತಮಾಕಳತ್ರನು** ಎಂಬ ೫೧ ಅಕ್ಷರಗತ ಪರಮಾತ್ಮನು ಶರೀರದಲ್ಲಿರುವನೆಂದು ಸಂಕೋಚದಿಂದ ಹೇಳಿದ್ದರು. ಈ ಸಂಧಿಯಲ್ಲಿ ೫೧ ಅಕ್ಷರಗತ ಭಗವದ್ರೂಪಗಳನ್ನು **ತಂತ್ರಸಾರೋಕ್ತ ಮಾತೃಕಾನ್ಯಾಸಕ್ರಮದಿಂದ** ಯಾವಯಾವ ಸ್ಥಳಗಳಲ್ಲಿ ಚಿಂತಿಸಬೇಕೆಂದು ವಿಷಯವನ್ನು ನಿರೂಪಿಸುತ್ತಾರೆ.

ಪಾದಾಭಿಮಾನಿ ಜಯಂತನಲ್ಲಿ ಸುಮೇಧನಾಮಕನಾದ ಪರಮಾತ್ಮನು ಇರುವನು. ದಕ್ಷಿಣಪಾದದ (ಬಲದ ಕಾಲಿನ) ಹೆಬ್ಬೆರಳಿನಲ್ಲಿ ವಾಯುದೇವರು ಇರುವರು, ಅವರೊಳಗೆ **ಭಾರಭೃತ್** ಎಂಬ ಹೆಸರಿನಿಂದ ಪರಮಾತ್ಮನಿರುವನು. ಈ ರೂಪಗಳು ೫೧ ಅಕ್ಷರಗಳಿಗೆ ಸಂಬಂಧಪಡದ ಬೇರೆ ರೂಪಗಳು. ಬಲದ ತೊಡೆಯುಸಂಧಿ, ಮೊಣಕಾಲುಸಂಧಿ, ಪಾದಗತಸಂಧಿ, ಬೆರಳುಗಳಸಂಧಿ, ಬೆರಳುಗಳ ಕೊನೆಯಭಾಗ ಈ ಐದು ಸ್ಥಳಗಳಲ್ಲಿ **ಟಂಕಿ** ಮೊದಲಾದ ಅಂದರೆ, ಮಾತೃಕಾನ್ಯಾಸಕ್ರಮದಲ್ಲಿ ಹೇಳಿದಂತೆ–ಟಂಕಿ, ಠಕಲ, ಡರಕ, ಢರೀ, ಣಾತ್ಮ ಎಂಬ ಐದು ರೂಪಗಳಿಂದಲೂ, ಇದರಂತೆ ಎಡಭಾಗದ ತೊಡೆಯು ಮೊದಲು ೫ ಸಂಧಿಗಳಲ್ಲಿ ತಾರ, ಥಫ, ದಂಡೀ, ಧನ್ವೀ, ನಮ್ಯ ಎಂಬ ಐದುರೂಪಗಳಿಂದಲೂ ಇದ್ದು, ತಾನು ಆ ದೇಹಗತನಾಗಿ ನಡೆಯುತ್ತಾ ಮತ್ತು ಆ ದೇಹಗಳಿಂದಲೂ ನಡೆಯಿಸುತ್ತಾ ಇರುವನು.

## ೩. ಭಾವದರ್ಪಣಟೀಕಾ ವ್ಯಾಖ್ಯಾನ

**ಜಯಂತಃ ಪಾದಯೋಸ್ತಸ್ಮಿನ್ ಯಜ್ಞೋ ನಾರಾಯಣ ಸ್ಥಿತಃ ।**
**ದಕ್ಷಿಣಾಂಗುಷ್ಠ ದೇಶೇತು ವಾಯ್ವಾಧಿಷ್ಠಾನ ಸಂಸ್ಥಿತಃ ॥**
**ನಾರಾಯಣಸ್ತೀರ್ಥಪದೋ ದೇಹಾಧಾರತಯಾಸ್ಥಿತಃ॥**
**— ಇತಿ ಮಾನಸಸ್ಮೃತ್ಯುಕ್ತೇಃ॥**

ಪಾದಸಂಧಿಗಳಲ್ಲಿ ಟಂಕೀಮುಖ ದಶ ಭಗವದ್ರೂಪಗಳು ಅವೆ ಎಂದು ಎಂದು ಹೇಳುತ್ತಾರೆ.

**ತದುಕ್ತಂ ಪ್ರಕಾಶಸಂಹಿತಾಯಾ–**

**ಟಂಕೀ ಶಳಕೋ ಡರಕೋ ಢರೀ ।**

**ಣಾತ್ಮಾರಸ್ಥ ಭೋ ದಂಡೀ ಧನ್ವೀ ನಮ್ಯ॥ ಇತಿ**

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಅಥ ಮಾತೃಕಾಸಂಧಿಃ (ನ್ಯಾಸಃ) ಅಥ ಮಾತೃಕ ವಿನ್ಯಾಸಂ ಕೃತ್ವಾ ಮಂತ್ರಾನ್ ಜಪೇತ್ ಸುಧೀಃ ಇತ್ಯುಕ್ತೇಃ ತಂ ಸುಬೋಧಮಾಹ–ಪಾದ ಮಾನಿ ಇತಿ। 'ಸುಮೇಧಾಃ'– 'ಓಂ ವೃಷಾತ್ವಂ ಶತಕ್ರತೋ ವೃಷಾ ಹವಃ ವೃಷಾ ಗ್ರಾವಾ ವೃಷಾಮಯೋ ವೃಷಾಸೋಮೋ ಅಯಂ ಸುತಃ॥ ವೃಷಾ ಯಜ್ಞೋಯ ಮಿನಸ್ವಿ ವೃಷಾ' ಓಂ॥ ಸುಸಮೀಚೀನಾಃ ಮೇಧಾಃ ಸುರಾದಯಃ ರಥ ಹವಗ್ರಾವ ಸೋಮ ಯಜ್ಞಾದ್ಯಾಃ ಶ್ರೇಷ್ಠಾಃ ಸಂತಿ ಇತಿ (ಸ) ತಥೋಕ್ತಃ ॥ಭಾರಭೃತ್॥ ಇತಿ ನಿರುಕ್ತಂ ಚ ಏತತ್॥ ತರ-ತಾರ, ಈರೈದು—ದಶ ॥ ॥೧॥

**ಕನ್ನಡಾರ್ಥ**

ಮಾತೃಕಾ ಅಂದರೆ ವರ್ಣಸಮೂಹಗಳು. ವರ್ಣವಾಚ್ಯಭಗವದ್ರೂಪ ಗಳನ್ನು ದೇಹಗತ ತತ್ತದವಯಗಳಲ್ಲಿ ಚಿಂತಿಸುವ ಕ್ರಮವೇ ಮಾತೃಕಾನ್ಯಾಸ ಪದ್ಧತಿಯು. ವರ್ಣವಾಚ್ಯಭಗವದ್ರೂಪಗಳನ್ನು ಚಿಂತನೆ ಮಾಡುತ್ತಾ, ಮಂತ್ರಗಳನ್ನು ಜಪಿಸಬೇಕು. ಇದು ಶ್ರೀಮದಾಚಾರ್ಯರ ವಚನವು. ಇಂತಹ ಮಾತೃಕಾರೂಪಗಳನ್ನು ವಿವರಿಸಲು 'ಪಾದಮಾನಿ'–ಎಂದು ಸಂಧಿ ಯನ್ನು ಆರಂಭಿಸುತ್ತಾರೆ.

ಸುಮೇಧಾ–ಈ ಶಬ್ದಾರ್ಥವು ಬೃಹತೀಮಂತ್ರದಲ್ಲಿ ವರ್ಣಿತವಾಗಿದೆ, ಸು–ಉತ್ತಮವಾದ, ಮೇಧಾ–ಯಜ್ಞಾದಿ ಪೂಜೆಗಳುಳ್ಳವನು, ಅಂದರೆ

ಶುಭಪೂರ್ಣಜ್ಞಾನಮಯನು. ಉತ್ತಮ ಸಂಸಿದ್ಧಿಯುಳ್ಳವನು ಎಂದರ್ಥ. 'ಭಾರಭೃತ್' ಎಂಬ ಶಬ್ದವೂ ಸಹ ಋಜ್ವಾತ್ರಾರ್ಥಘಟಕವಾಗಿದೆ. 'ತರ' ಎಂದರೆ 'ತಾರ' ಎಂದರ್ಥ. ಈರೈದು-ಹತ್ತು

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಮಾತೃಕಾಮಂತ್ರ ಮೊದಲಾದ ಗ್ರಂಥೋಕ್ತ, ಪಾದಾದಿ ಸ್ಥಾನಗತ, ಮೂಲಾಧಾರಾದಿ ಕಮಲಸ್ಥ ರೂಪಗಳು, ದಕ್ಷಿಣಾಕ್ಷಿಸ್ಥಿತ ವಿಶ್ವಾದಿರೂಪ ಮುಂತಾದ ಅನೇಕ ರೂಪೋಪಾಸಕರ ಉಪಾಸನೆ ದೇವಪೂಜಾ, ಕಳಶಾಂತರ್ಗತರೂಪ ಚಿಂತನೆ ಇವುಗಳನ್ನು ಈ ಎಂಟನೇ ಸಂಧಿಯಲ್ಲಿ ನಿರೂಪಿಸುತ್ತಾರೆ. ಉಪಾಸನಾಭೇದವುಳ್ಳ ಅಧಿಕಾರಿಗಳ ಭಜನೆ ಪ್ರಕಾರ, ಹೇಳುವ ಹರಿಕಥೆಯೆಂಬ ಅಮೃತದ ರಸವನ್ನು, ಅತ್ಯಂತ ದೈವಭಕ್ತರು ಕೇಳತಕ್ಕದ್ದು. ಗುರುಕೃಪೆಯಿಂದ ತಿಳಿದಷ್ಟು ಹೇಳುವೆ. ॥ಸಂಧಿಸೂಚನೆ॥

ಪಾದಾಭಿಮಾನಿ ದೇವತೆಯನ್ನು, ಪಾದಸ್ಥ ತನ್ನಿಯಾಮಕ ಶ್ರೀಹರಿ ರೂಪ ತಿಳಿಸುತ್ತಾರೆ-ಪಾದ ಎಂದು. ಪಾದಾಭಿಮಾನಿ ಜಯಂತನೆಂಬ ಇಂದ್ರ ಪುತ್ರನಲ್ಲಿ, ಸುಮೇಧನಾಮಕ ದೇವರ ರೂಪವು, ಬಲ ಪಾದದಂಗುಷ್ಟದಲ್ಲಿ ವಾಯುದೇವರು, ಅಲ್ಲಿ ಭಾರಭೃತ್ ಎಂಬ ದೇವರ ರೂಪವು, ಕಟಿಸಂಧಿ ಆರಂಭಿಸಿ ಪಾದಪರ್ಯಂತ ಟಂಕಿರೂಪ ಮೊದಲು ನಮ್ಯ ಎಂಬ ರೂಪತನಕ, ಈರೈದೆಂದರೆ ಹತ್ತು ರೂಪದಿಂದ. ಪಾದದ ಅಂತರ್ಯಾಮಿ ತಾನು ನಡೆದು, ಕ್ರಿಯಾ ವ್ಯಕ್ತಿ ಮಾಡಿ ಜನರನ್ನು ನಡೆಸುತ್ತಾ ಕಾದುಕೊಂಡಿಹ ಎಂದರೆ ಸದಾ ರಕ್ಷಿಸುವನೆಂದರ್ಥ.

# ಸರ್ವವ್ಯಾಖ್ಯಾನಸಾರಸಂಗ್ರಹ

ಪದಗಳು ಮತ್ತು ವಾಕ್ಯಗಳ ರಚನೆಗೆ ಅಕ್ಷರಗಳೇ ಮೂಲ. ಸಂಸ್ಕೃತ ವರ್ಣಮಾಲೆಯಲ್ಲಿ ಅಕಾರದಿಂದ ಕ್ಷಕಾರ ಪರ್ಯಂತ ೫೧ ವರ್ಣಗಳಿವೆ. ಅಕ್ಷರಗತ ಜೋಡಣೆಯಿಂದ ಪದಗಳ ಉತ್ಪತ್ತಿ. ಪದಗಳಿಂದ ವಾಕ್ಯಗಳ ರಚನೆ.

ವಾಕ್ಯಪ್ರಯೋಗಗಳಿಂದ ಅರ್ಥಾನುಪತ್ತಿ. ಇಂತು ವಾಗ್ರೂಪವಾದ ಕ್ರಿಯೆಯಲ್ಲಿ ಬಳಸುವ ಶಬ್ದಗಳಿಗೆ ವರ್ಣಗಳೇ ಬೀಜರೂಪವಾಗಿದ್ದು, ಅಂತಹ ವರ್ಣಗಳ ಸಮುದಾಯಕ್ಕೆ ಮಾತೃಕಾ ಎಂದು ಹೆಸರು. ಅಕಾರದಿಂದ ಪ್ರಾರಂಭಿಸಿ ಕ್ಷಕಾರ ಪರ್ಯಂತ ಇರುವ ೫೧ ವರ್ಣಗಳಲ್ಲಿ, ಅಜಾದಿ ಶ್ರೀಲಕ್ಷ್ಮೀನರಸಿಂಹ ಪರ್ಯಂತ ತತ್ತದ್ವರ್ಣವಾಚ್ಯನಾಗಿದ್ದು, ಜಡವಾಗಿರುವ ವರ್ಣಗಳಿಗೆ ಅಭಿವ್ಯಂಜಕಶಕ್ತಿಯನ್ನಿತ್ತು, ಶಬ್ದೋಚ್ಚಾರಣೆಯಿಂದ ಅರ್ಥವಾಗುವಂತೆ ಮಾಡುವುದೇ ವರ್ಣವಾಚ್ಯನಾದ ಶ್ರೀಪರಮಾತ್ಮನ ವ್ಯಾಪಾರ ವಿಶೇಷ. ದೇವರ ಪೂಜಾ ಕಾಲದಲ್ಲಿ ಮಂತ್ರಗಳನ್ನು ಉಚ್ಚರಿಸುತ್ತೇವೆ. ಮಂತ್ರಗಳು ವರ್ಣಗಳ ಜೋಡಣೆಯಿಂದ ರಚಿತವಾಗಿವೆ. ಇದರಿಂದ ಪ್ರತಿಮಾ ಪೂಜಾದಿಗಳನ್ನು ಮಾಡುವಾಗ **ಮಾತೃಕಾನ್ಯಾಸ** ಪದ್ಧತಿ ಇದೆ. ಇದರಿಂದ ಮಂತ್ರಗತ ಅರ್ಥಾನುಪತ್ತಿಯುಂಟಾಗಿ, ಜ್ಞಾನಾನುಸಂಧಾನದಿಂದ ಪೂಜಾ ಕ್ರಿಯೆ ನಡೆಯಲು ಸಹಾಯಕವಾಗುವುದು.

೧. ಅಕಾರವಾಚ್ಯ ಅಜರೂಪದಿಂದ ಪ್ರಾರಂಭಿಸಿ, ಕ್ಷಕಾರವಾಚ್ಯ ಶ್ರೀಲಕ್ಷ್ಮೀನರಸಿಂಹರೂಪ ಪರ್ಯಂತ. ಸಾಧನಶರೀರವೆನಿಪ ಈ ದೇಹದಲ್ಲಿ ಆಯಾಯಾ ಅಂಗಗಳಲ್ಲಿ ತದ್ಗತವರ್ಣವಾಚ್ಯಭಗವದ್ರೂಪಗಳ ಚಿಂತನೆಯೇ ಮಾತೃಕಾನ್ಯಾಸ ಕ್ರಮವು. ಇಡೀ ದೇಹಾದ್ಯಂತ ವ್ಯಾಪ್ತವಾಗಿರುವ ಅಜಾದಿ ವರ್ಣವಾಚ್ಯರೂಪಗಳನ್ನು ಶರೀರಕ್ಕೆ ಆಧಾರವೆನಿಸಿರುವ ಎರಡು ಪಾದಗಳಿಂದ ಆರಂಭಿಸುತ್ತಾರೆ. (ಆಪಾದಮೌಳಿಪರ್ಯಂತವಾಗಿ)– **ಪಾದಾಭಿಮಾನಿ** ಎಂಬ ಪ್ರಸಕ್ತ ೧ನೆಯ ಪದ್ಯದಿಂದ.

೨. ಇಂದ್ರಪುತ್ರನಾದ **ಜಯಂತನು** ಉಭಯಪಾದಗಳಿಗೂ ಅಭಿಮಾನಿದೇವತೆ ಎನಿಸಿದ್ದಾನೆ. ಪಾದಗಳು ಕರ್ಮೇಂದ್ರಿಯಗಳು. ಗಮನಾಗಮನವೇ ಅವುಗಳ ಕ್ರಿಯೆ. ಇಂತಹ ಪಾದಾಭಿಮಾನಿಯಾದ ಜಯಂತನಲ್ಲಿ **ಸುಮೇಧ**ನಾಮಕ ಪರಮಾತ್ಮನಿರುವನು. ಈ ಶಬ್ದವು ಬೃಹತೀಋಙ್ಮಂತ್ರದಲ್ಲಿ ವರ್ಣಿತವಾಗಿದೆ. ಸು ಎಂದರೆ ಶ್ರೇಷ್ಠವಾದ (ಉತ್ತಮವಾದ) ಮೇಧಾ ಎಂದರೆ ಯಜ್ಞವೆಂದರ್ಥ. ಅಂದರೆ ಸಮಸ್ತ ಸುಯಜ್ಞಗಳೂ ಭಗವತ್ಪ್ರೀತ್ಯರ್ಥವಾಗಿ ಮಾಡುವ ಪೂಜಾಕ್ರಿಯೆಗಳು. ಇಂತಹ ಪೂಜಾ

ರೂಪವಾದ ಯಜ್ಞಗಳಿಗೆ ಮುಖ್ಯನಿಯಾಮಕನಾದುದರಿಂದ **ಯಜ್ಞ** **ನಾಮಕನಾದ** ಶ್ರೀಹರಿಗೆ **ಸುಮೇಧಾ** ಎಂದು ಹೆಸರು. ಪಾದಾಭಿಮಾನಿ ಜಯಂತನಲ್ಲಿ ಯಜ್ಞನಾಮಕ ಸುಮೇಧಾ ಎಂಬ ರೂಪವನ್ನು ಉಪಾಸನೆ ಮಾಡಬೇಕು.

೩. ಇನ್ನು ನಮ್ಮ ಬಲಗಾಲಿನ ಹೆಬ್ಬೆರಳಿನ ತುದಿಯಲ್ಲಿ ಶ್ರೀಮುಖ್ಯ ಪ್ರಾಣದೇವರಿದ್ದಾರೆ. ಅವರ ಅಂತರ್ಯಾಮಿಯಾಗಿ **ಭಾರಭೃತ್** ಎಂಬ ಹೆಸರಿನ ಶ್ರೀಪರಮಾತ್ಮನಿರುವನು. ಭಾರಭೃನ್ನಾಮಕನ ಶಬ್ದವಿವರಣೆಯು **ಬೃಹತೀಋಙ್ಮಂತ್ರ**ಗಳಲ್ಲಿ ಪ್ರತಿಪಾದಿತವಾಗಿದೆ. ಇಡೀ ಬ್ರಹ್ಮಾಂಡದ ಭಾರ ವನ್ನು ಕೂರ್ಮರೂಪದಲ್ಲಿ ಶ್ರೀಪರಮಾತ್ಮನು ಧರಿಸಿದ್ದಾನೆ. ಬ್ರಹ್ಮಾಂಡಕ್ಕೇ ಆಧಾರ ಹಾಗೂ ಆಶ್ರಯಭೂತನಾದ ಶ್ರೀಹರಿಗೆ **ಭಾರಭೃತ್** (ಭಾರ— ಭಾರವನ್ನು, ಭೃತ್–ಧರಿಸಿರುವವನು. ಹೊತ್ತಿರುವವನು) ಎಂದು ಹೆಸರು. ಅಂತೆಯೇ ಪಿಂಡಾಂಡರೂಪವಾಗಿರುವ ಈ ಸ್ಥೂಲಶರೀರದ ಸಮಸ್ತ ಭಾರವೂ ಎರಡು ಪಾದಗಳ ಮೇಲೆ ಆಧರಿತವಾಗಿದೆ. ಇದನ್ನು ಹೊತ್ತಿರುವವನು ದಕ್ಷಿಣಪಾದಾಂಗುಟದಲ್ಲಿರುವ ಪವನನಂತರ್ಯಾಮಿ ಭಾರಭೃನ್ನಾಮಕ ಶ್ರೀಪರಮಾತ್ಮನೆಂದು ಚಿಂತಿಸಬೇಕು.

೪. ಬಲಗಾಲಿನ ತೊಡೆಸಂಧಿ, ಮೊಣಕಾಲುಸಂಧಿ, ಗುಲ್ಫದಸಂಧಿ, ಕಾಲುಬೆರಳುಗಳಲ್ಲಿರುವ ಕೀಲುಗಳು, ಬೆರಳಿನ ತುದಿಯಲ್ಲಿರುವ ಸಂಧಿಗಳು ಈ ಐದು ಸ್ಥಾನಗಳಲ್ಲಿ ಟಂಕೀ ನಾಮದಿಂದ ಪ್ರಾರಂಭಿಸಿ, ಣಾತ್ಮನಾಮ ಪರ್ಯಂತ ವರ್ಣವಾಚ್ಯನಾಗಿದ್ದು, ಕಾಲಿನ ಚಲನೆಯನ್ನು ಮಾಡಿ ಮಾಡಿಸುತ್ತಾನೆ. ಅಂತೆಯೇ ಎಡಗಾಲಿನ ಐದು ಕೀಲುಗಳ ಸ್ಥಾನಗಳಲ್ಲಿ ತಾರಾದಿ ಧನ್ವೀ ಪರ್ಯಂತ ವರ್ಣವಾಚ್ಯರೂಪಗಳಿಂದ ಇದ್ದಾನೆ. ಈ ಭಗವದ್ರೂಪಗಳ ಸಂಪೂರ್ಣ ವಿವರಣೆಯನ್ನು ಮಾತೃಕಾನ್ಯಾಸದ ಪ್ರಕಾರ ಈ ಕೆಳಗಿನ ಪಟ್ಟಿ ಯಲ್ಲಿ ಕೊಟ್ಟಿದೆ :

| ಕ್ರಮ ಸಂಖ್ಯೆ | ಪಾದಗತಸ್ಥಾನ | ವರ್ಣವಾಚ್ಯ ಭಗವದ್ರೂಪ | ಶಬ್ದಾರ್ಥವಿವರಣೆ |
|---|---|---|---|
| ೧ | ಬಲಗಾಲಿನ ತೊಡೆಸಂಧಿ | ಟಂಕೀ | ಟಂಕವೆಂಬ ಆಯುಧವನ್ನು ಧರಿಸಿರುವವನು. |
| ೨ | ಮೊಣಕಾಲುಸಂಧಿ | ಠಲಕ | ರುದ್ರ ಮತ್ತು ಇಂದ್ರರಿಗೆ ಸುಖಪ್ರದನು. |
| ೩ | ಮಣಿಗಂಟು (ಗುಲ್ಫ) | ಡರಕ | ಚಂದ್ರ, ಅಗ್ನಿ ಇವರಿಗೆ ವಿಶೇಷ ಕಾಂತಿಪ್ರದನು. |
| ೪ | ಬೆರಳುಗಳ ಕೀಲುಗಳು | ಢರೀ | ಮುಕ್ತ ಆನಂದಪ್ರದನು. ಬ್ರಹ್ಮನನ್ನು ಪುತ್ರನನ್ನಾಗಿ ಉಳ್ಳವನು. |
| ೫ | ಬೆರಳುಗಳ ತುದಿ ಸಂಧಿಗಳು | ಣಾತ್ಮ | ಸುಖಸ್ವರೂಪನು. |

| | | | |
|---|---|---|---|
| ೬ | ಎಡಗಾಲಿನ ತೊಡೆಸಂಧಿ | ಶಾರ | ಸಂಸಾರದಿಂದ ತಾರಣ ಮಾಡಿಸುವವನು. |
| ೭ | ಮೊಣಕಾಲು ಸಂಧಿ | ಥಬ | ಗೋವರ್ಧನಪರ್ವತಧಾರೀ |
| ೮ | ಮಣಿಗಂಟು | ದಂಡೀ | ಗೋವುಗಳನ್ನು ಆಡಿಸಲಿಕ್ಕೆ ಕೋಲು ಹಿಡಿದಿರುವವನು. |
| ೯ | ಬೆರಳುಗಳ ಕೀಲುಗಳು | ಧನ್ವೀ | ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿರುವವನು. |
| ೧೦ | ಬೆರಳುಗಳ ತುದಿಸಂಧಿಗಳು | ನಮ್ಯ | ಸರ್ವರಿಂದಲೂ ವಂದನೀಯನು. |

ಇಂತು ಉಭಯಪಾದಗತ ೧೦ ಕೀಲುಗಳ ಸ್ಥಾನಗಳಲ್ಲಿ (ಸಂಧಿ) ಟಂಕೀನಾಮದಿಂದ ಆರಂಭಿಸಿ, ನಮ್ಯನಾಮ ಪರ್ಯಂತ ಹತ್ತು ವರ್ಣವಾಚ್ಯರೂಪಗಳಿಂದ ವಿದ್ಯಮಾನನಾಗಿದ್ದು, ಈರೈದು ರೂಪದಲಿ. ಎರಡು ಐದು ಈರೈದು. (ಅಂದರೆ, ೫ × ೨ = ೧೦). ನಿರಂತರದಲ್ಲಿ ಪಾದಗಳ ಕ್ರಿಯೆಯಾದ ಗಮನಾಗಮನ ವ್ಯಾಪಾರವನ್ನು ಬಿಂಬಕ್ರಿಯಾದ್ವಾರಾ ತಾನು ನಡೆಯುತ್ತಾ, ತತ್ತ್ವಾಭಿಮಾನಿ ಜಯಂತನ ದ್ವಾರಾ ನಡೆಯಿಸುತ್ತಾ ದೇಹಧಾರಿಯಾದ ಜೀವನಿಗೆ ಪಾದೇಂದ್ರಿಯ ವ್ಯಾಪಾರದ ಅನುಭವವನ್ನು ತಂದೀಯುವನು. ॥೧॥

## ಪದ್ಯ ೨

### ಮೂಲ

**ಕಪಿಲ ಚಾರ್ವಾಂಗಾದಿ ರೂಪದಿ।**
**ವಪುಗಳೊಳು ಹಸ್ತಗಳ ಸಂಧಿಯೊ ।**
**ಳಪರಿಮಿತ ಕರ್ಮಗಳ ಮಾಡುತಲಿಪ್ಪ ದಿನದಿನದಿ॥**
**ಕೃಪಣವತ್ಸಲ ಪಾರ್ಶ್ವದೊಳು ಪರ ।**
**ಸುಫಲಿಯೆನಿಸುವ ಗುದ ಉಪಸ್ಥದಿ ।**
**ವಿಪುಲ ಬಲಿ ಭಗ ಮನವೆನಿಸಿ ತುಂದಿಯೊಳಗಿರುತಿಹನು ॥೨॥**

### ಅವತರಣಿಕೆ

ಉಭಯ ಹಸ್ತಸಂಧಿಗಳಲ್ಲಿ ಹಾಗೂ ದೇಹಗತ ಪಾರ್ಶ್ವಗಳಲ್ಲಿ ಗುದ ಉಪಸ್ಥಗತ ಸ್ಥಾನಗಳಲ್ಲಿ ವಿದ್ಯಮಾನನಾಗಿರುವ ಶ್ರೀಪರಮಾತ್ಮನ ವರ್ಣವಾಚ್ಯಭಗವದ್ರೂಪಗಳನ್ನು ತಿಳಿಸುತ್ತಾರೆ. **ಕಪಿಲಚಾರ್ವಾಂಗಾದಿ** ಎಂಬ ಪ್ರಸಕ್ತ ಸಂಧಿಗತ ೨ನೆಯ ಈ ಪದ್ಯದಿಂದ.

ಕಪಿಲನಾಮದಿಂದ ಆರಂಭಿಸಿ ಜಸಾರನಾಮ ಪರ್ಯಂತ ಐದು ವರ್ಣವಾಚ್ಯರೂಪಗಳಿಂದ ಬಲಕೈಯ್ಯನ ಐದು ಸಂಧಿಸ್ಥಾನಗಳಲ್ಲಿದ್ದಾನೆ. ಅಂತೆಯೇ ಎಡಗೈಯ್ಯನ ಐದು ಕೀಲುಗಳಲ್ಲಿ ಚಾರ್ವಾಂಗರೂಪಾದಿ ಇರೂಪ ಪರ್ಯಂತ

ವರ್ಣವಾಚ್ಯರೂಪಗಳಿಂದ ಇದ್ದಾನೆ. ದೇಹಗತ ಬಲ ಮತ್ತು ಎಡ ಪಾರ್ಶ್ವಗಳಲ್ಲಿ ಕ್ರಮವಾಗಿ ಪರನಾಮಕ ಮತ್ತು ಫಲಿನಾಮಕನಾಗಿದ್ದಾನೆ. ಗುದಸ್ಥಾನದಲ್ಲಿ ಬಲಿ ಎಂತಲೂ, ಉಪಸ್ಥದಲ್ಲಿ ಭಗ ಎಂತಲೂ ಕರೆಯಿಸುವನು. ತುಂದಿಯಲ್ಲಿ ವರ್ಣವಾಚ್ಯರೂಪವು ಮನ ಎಂದು. ಇಂತು ದೇಹಾದ್ಯಂತ ವ್ಯಾಪಿಸಿಕೊಂಡು, ಶರೀರಗತ ವ್ಯಾಪಾರಗಳನ್ನು ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ಇಂದ್ರಿಯಾಭಿಮಾನಿಗಳ ಮೂಲಕ ಮಾಡಿಸುತ್ತಿರುವ ಶ್ರೀಪರಮಾತ್ಮನು ಅತ್ಯಂತ ದಯಾಮಯನು ಎಂದು ತಾತ್ಪರ್ಯ.

## ಪ್ರತಿಪದಾರ್ಥ

**ಕಪಿಲ**= ಕಪಿಲ ಎಂಬ ವರ್ಣವಾಚ್ಯರೂಪದಿಂದ ಪ್ರಾರಂಭಿಸಿ (ಕವರ್ಣವಾಚ್ಯ) **ಚಾರ್ವಾಂಗಾದಿ**= ಚವರ್ಣವಾಚ್ಯನಾದ ಚಾರ್ವಾಂಗ ಎಂಬ ರೂಪಗಳೇ ಮೊದಲಾದ, **ರೂಪದಿ**= ವರ್ಣಸಾಂಕೇತ ರೂಪಗಳಿಂದ (ಕ ವರ್ಗಪಂಚಕ ೫ ಮತ್ತು ಚ ವರ್ಗ ಪಂಚಕ ೫. ಒಟ್ಟು ದಶರೂಪಗಳು). **ಹಸ್ತಗಳ**= ಎರಡು ಕೈಗಳ, **ಸಂಧಿಯೊಳು**= ಕೀಲುಗಳಲ್ಲಿ (ಬಲಗೈಯನ ೫ ಮತ್ತು ಎಡಗೈಯನ ೫ಇಂತು ಒಟ್ಟು ಉಭಯಹಸ್ತಗತ ೧೦ ಸಂಧಿಗಳಲ್ಲಿ), **ದಿನದಿನದಿ**= ಪ್ರತಿದಿವಸದಲ್ಲಿಯೂ, **ಅಪರಿಮಿತ**= ಅಸಂಖ್ಯಾತವಾದ **ಕರ್ಮಗಳ**= ಶರೀರಗತ ಕ್ರಿಯಾದಿಗಳನ್ನು, **ಮಾಡುತಲಿಪ್ಪ**= ಬಿಂಬ ಕ್ರಿಯಾದ್ವಾರಾ ತಾನೇ ಮಾಡುತ್ತಾ, ತದ್ಗತ ದೇವತೆಗಳ ದ್ವಾರಾ, ಜೀವನ ದ್ವಾರಾ ಮಾಡಿ, ಮಾಡಿಸುತ್ತಿದ್ದಾನೆ. **ವಪುಗಳೊಳು**= ಕಂಠ ಆದಿ ಕಟಿ ಪರ್ಯಂತ ದೇಹದ ಬಲ ಮತ್ತು ಎಡ ಭಾಗಗಳಲ್ಲಿ **ಪರ**= ಬಲ ಪಾರ್ಶ್ವದ ದೇಹದಲ್ಲಿ ಪವರ್ಣವಾಚ್ಯನಾಗಿ ಪರ ಎಂಬ ರೂಪದಿಂದಲೂ, **ಸುಫಲಿಯೆನಿಸುವ**= ಎಡಪಾರ್ಶ್ವದ ಶರೀರದಲ್ಲಿ ಫವರ್ಣ ಸಾಂಕೇತ ಸಮೀಚೀನನಾಗಿ ಫಲಿ ಎಂಬ ರೂಪದಿಂದಲೂ ಕರೆಯಿಸುವವನಾಗಿ, **ಗುದ**= ಮಲವಿಸರ್ಜನಾಂಗವಾದ ಗುದ ಎಂಬ ಕರ್ಮೇಂದ್ರಿಯದಲ್ಲಿ **ಬಲಿ**= ಬ ವರ್ಣವಾಚ್ಯನಾಗಿ ಬಲಿ ಎಂಬ ರೂಪದಿಂದಲೂ **ಉಪಸ್ಥ**= ಮೂತ್ರ ಹಾಗೂ ರೇತೋವಿಸರ್ಜನಾಂಗ. ಉಪಸ್ಥವೆಂಬ ಕರ್ಮೇಂದ್ರಿಯದಲ್ಲಿ,

**ಭಗ**=ಭವರ್ಣವಾಚ್ಯನಾಗಿ ಭಗ ಎಂಬ ರೂಪದಿಂದಲೂ, **ತುಂದಿಯೊಳು**= ಶರೀರಾದ್ಯಂತ ವ್ಯಾಪಿಸಿರುವ ನಾಡೀವ್ಯೂಹಕ್ಕೆ ಮೂಲಾಧಾರವೆಂದೆನಿಸುವ ತುಂದಿಯಲ್ಲಿ, **ಮನನೆನಿಸಿ**=ಮಕಾರ ಶಬ್ದವಾಚ್ಯನಾಗಿ, ಮನ ಎಂಬ ರೂಪದಿಂದ, **ಕೃಪಣವತ್ಸಲ**=ಭಕ್ತರಲ್ಲಿ ಅಂತಃಕರಣವುಳ್ಳ, ಶ್ರೀಪರಮಾತ್ಮನು, **ಇರುತಿಹನು**=ವರ್ಣವಾಚ್ಯರೂಪಗಳಿಂದ ವಿದ್ಯಮಾನನಾಗಿದ್ದಾನೆ.

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಇನ್ನೂ ಪೂರ್ವೋಕ್ತರೂಪವೇ ಹೇಳತಾರೆ, ಕಪಿಲ–ಕಆರಂಭ ಮಾಡಿ ಙ ವರೆಗೂ ಐದು ವರ್ಣಗಳು.

1. ೧. ಕ–ಕಪಿಲ, ಬಲದ ಕೈ ಭುಜದ ಕೀಲು
   ೨. ಖ–ಖಪತಿ, ಬಲದ ಕೈ ಮೊಳಕೈ ಕೀಲು.
   ೩. ಗ–ಗರುಡ. ಬಲಗೈ ಮಣಿಕಟ್ಟು ಕೀಲು.
   ೪. ಘ–ಘರ್ಮ, ಬಲಗೈ ಅಂಗೈ ಕೀಲು.
   ೫. ಙ–ಙಸಾರ, ಬಲಗೈ ಬೊಟ್ಟುಗಳ ಕೀಲು.

2. ಚಾರ್ವಾಂಗಾದಿ ರೂಪದಿ-ಚ ಆರಂಭಮಾಡಿ ಞ ವರೆಗೂ.
   ೧. ಚ–ಚಾರ್ವಾಂಗ, ಎಡದ ಕೈ ಭುಜದ ಕೀಲು.
   ೨. ಛ-ಛಂದೋಗಮ್ಯ, ಎಡದ ಕೆಳಮೊಣಕೈ ಕೀಲು.
   ೩. ಜ–ಜನಾರ್ದನ, ಎಡದಕೈ ಮಣಿಕಟ್ಟು ಕೀಲು.
   ೪. ಝ–ಝಟಿತಾರಿ, ಎಡದಕೈ ಅಂಗೈ ಕೀಲು.
   ೫. ಞ–ಞಮ,ಎಡದಕೈ ಬೊಟ್ಟುಗಳ ಕೀಲು.

ಈ ಪ್ರಕಾರ ಕಪಿಲಾದಿ ರೂಪ ಆರಂಭಮಾಡಿ. ಙಸಾರವರೆಗೂ ಐದು ರೂಪಗಳು ಚಾರ್ವಾಂಗರೂಪ ಆರಂಭಮಾಡಿ ಞಮರೂಪದವರೆಗೆ ಐದು

ರೂಪಗಳು, ಅಂತು ಹತ್ತು ರೂಪಗಳಿಂದ, ಹಸ್ತಗಳ ಸಂಧಿಯೊಳು–ಎರಡೂ ಬಾಹುಗಳಲ್ಲಿ ವಿದ್ಯಮಾನವಾದ ಪೂರ್ವೋಕ್ತ ಸಂಧಿಸಾಕೇಂತವಾದ ಹತ್ತು ಕೀಲುಗಳಲ್ಲಿ ಹತ್ತು ರೂಪಗಳು, ಪಾರ್ಶ್ವದೊಳು–ಕಂಠ ಆರಂಭವಾಡಿ ಕಟ್ಯಂತ ಮಧ್ಯಪ್ರದೇಶ ಎರಡು ಪಾರ್ಶ್ವದಲಿ, ಪರ ಸುಫಲಿ ಎನಿಸುವ– ೧. ಬಲ ಪಾರ್ಶ್ವದಲ್ಲಿ ಪರನಾಮಕ, ೨. ಎಡಪಾರ್ಶ್ವದಲ್ಲಿ ಸಮೀಚೀನವಾದ ಫಲಿ ನಾಮಕ, ಗುದ ಉಪಸ್ಥದಿ–ಗುದ ಉಪಸ್ಥ ಎನಿಸತಕ್ಕ ಈ ಎರಡರಲಿ, ವಿಪುಲ ಬಲಿಭಗ–ವಿಪುಲ–ಘನವಾದ ಬಲಿ ಮತ್ತು ಭಗ ಎಂಬ ನಾಮಗಳಿಂದ ೧. ಗುದದಲ್ಲಿ ಬಲಿ, ೨. ಉಪಸ್ಥದಲ್ಲಿ ಭಗ, ತುಂದಿಯೊಳು–ಕಂಠ ಆದಿ, ಕಟಿ ಅಂತ್ಯ ಈ ಮಧ್ಯಗತ ದೇಹದೊಳು, ಇದಕ್ಕೆ ತುಂದಿ ಎಂತ ಸಾಂಕೇತ, ಇದರಲ್ಲಿ ಮನವು–ಮನಸಾಂಕೇತನಾದ ಪರಮಾತ್ಮ, ಎನಿಸಿ–ಇತ್ಯಾದಿ ನಾಮರೂಪ ಉಳ್ಳವ ಎಂತ ಎನಿಸಿ, ಇರುತಿಹನು. ಇರೋವನಾಗಿದ್ದಾನೆ. ವಪುಗಳೊಳು ಈ ಪ್ರಕಾರ ಸರ್ವಜೀವರ ದೇಹಗತ ಸಂಧಿಗಳೊಳು, ಅಪರಿಮಿತ–ಮಿತದಿಂದ ರಹಿತವಾದ, ಕರ್ಮಗಳ-ವ್ಯಾಪಾರಗಳನ್ನು, ದಿನದಿನದಿ–ಪ್ರತಿದಿನದಲ್ಲೂ,ಮಾಡಿ ಸುತಲಿ–ತನ್ನ ಕ್ರಿಯಾದ್ವಾರ ದೇವತಾ-ಜೀವನದ್ವಾರಾ ಮಾಡಿಸುತಾ, ಕೃಪಣ ವತ್ಸಲ–ಭಕ್ತವತ್ಸಲನಾದ ಶ್ರೀಪರಮಾತ್ಮ, ಇಪ್ಪ–ದೇಹದಲ್ಲಿ ಇರೋವನಾಗಿ ದ್ದಾನೆ ಎಂತ ತಾತ್ಪರ್ಯ.

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಮೇಲಿನ ಪದ್ಯದಲ್ಲಿ ಟ ಠ ಡ ಢ ಣ, ತ ಥ ದ ಧ ನ ಎಂಬ ಹತ್ತು ಅಕ್ಷರಗಳ ಭಗವದ್ರೂಪಗಳ ಚಿಂತನಾಕ್ರಮವನ್ನು ಹೇಳಿದರು. ಈ ಪದ್ಯ ದಿಂದ ಕ–ವರ್ಗ, ಚ–ವರ್ಗಾದಿಗಳ ಚಿಂತನಾಕ್ರಮವನ್ನು ಹೇಳುತ್ತಾರೆ.

ಕ–ಕಮಲ, ಖ–ಖಪತಿ, ಗ–ಗರುಡ, ಘ–ಘರ್ಮ, ಙ–ಙಸಾರ–ಎಂಬ ೫ರೂಪಗಳನ್ನು ಬಲದ ಕೈ, ತೋಳುಸಂಧಿ, ಮೊಣಕೈಸಂಧಿ, ಬೆರಳುಗಳ ಮೂಲಸಂಧಿ, ಬೆರಳು ಮಧ್ಯಗತಸಂಧಿ ಹೀಗೆ ೫ ಸಂಧಿಗಳಲ್ಲಿ ಚಿಂತಿಸಬೇಕು. ಇದರಂತೆ, ಚ–ಚಾರ್ವಾಂಗ, ಛಂದೋಗಮ್ಯ, ಜ–ಜನಾರ್ದನ, ಝ–ಝಟಿ

ತಾರಿ, ಞ–ಞಮ ಎಂಬ ೫ ರೂಪಗಳನ್ನು ಎಡಗೈ ೫ ಸಂಧಿಗಳಲ್ಲಿ ಚಿಂತಿಸ ಬೇಕು.

ಮುಂದೆ ಪವರ್ಗ ಸ್ಥಾನಗಳನ್ನು ಹೇಳುತ್ತಾರೆ.

ಕೃಪಣವತ್ಸಲನಾದ ಶ್ರೀಹರಿಯು, ಪ–ಪರ ಎಂಬ ರೂಪದಿಂದಲೂ ಫ–ಫಲಿ ಎಂಬ ರೂಪದಿಂದಲೂ ಎರಡು ಪಾರ್ಶ್ವಗಳಲ್ಲಿ ಇರುವನು. ಬ–ಬಲಿ ಭ–ಭಗ ಎಂಬ ಈ ಎರಡು ರೂಪಗಳಿಂದ ಗುದ ಮತ್ತು ಉಪಸ್ಥ ಎಂಬ ಎರಡು ಸ್ಥಾನಗಳಲ್ಲಿ ಇರುವನು. ಮ–ಮನ ಎಂಬ ರೂಪದಿಂದ ತುಂದಿ ಯಲ್ಲಿ (ಹೊಕ್ಕಳಿಗೆ ಕೆಳಭಾಗದ ಹೊಟ್ಟೆಗೆ ಹೆಸರು. **ತುಂದಂ ನಾಭೀರಸಃ ಪ್ರದೇಶಃ– ಎಂಬ ತಂತ್ರಸಾರದ ೪ನೆಯ ಅಧ್ಯಾಯದ** ವ್ಯಾಖ್ಯಾನ ರೂಪ ವಚನ). ಈ ಪ್ರಕಾರ ಚಿಂತಿಸಬೇಕೆಂದು ತಾತ್ಪರ್ಯ.

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ಬಲ ಎಡಬಾಹುಗಳಲ್ಲಿ ಕಪಿಲಾದಿ ದಶ ಭಗವದ್ರೂಪಗಳು ಅವೆ ಎಂದು ಹೇಳುತ್ತಾರೆ ॥ಕಪಿಲೇತಿ॥

**ತದುಕ್ತಂ ಪ್ರಕಾಶಸಂಹಿತಾಯಾಂ :**

**ಕಪಿಲಃ ಖಪತಿರ್ಗರುಡಾಸನಃ ।**
**ಘರ್ಮೋ ಙಸಾರಶ್ಚಾರ್ವಾಂಗೋ ಛಂದೋಗಮ್ಯೋ ಜನಾರ್ದನಃ ।**
**ಝಟಿತಾರಿ ಞಮುಯಿತಿ ಪಾರ್ಶ್ವೇತಿ ॥**

ಪರ ಸುಫಲೀ ಎಂದು, ಗುದದಲ್ಲಿ ಬಲಿ, ಭಗದಲ್ಲಿ ಭಗ ಎಂದು. ಈ ರೀತಿ ರೂಪಗಳು ಚಿಂತಿಸೋದಲ್ಲದೆ ಅವಯವಗಳ ಚಲನಾದಿಗಳನ್ನೂ ಸಹ ಶ್ರೀಹರಿಯು ಮಾಡಿ ಮಾಡಿಸುತ್ತಾನೆಂದು ದಾರ್ಢ್ಯ ಮಾಡತಕ್ಕದೆಂದು ಭಾವ.

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಕಪಿಲೇತಿ ಅಯಂ ಮಾತೃಕಾನ್ಯಾಸಕ್ರಮಃ ॥ಪರಮೇತಿ॥ ಪಂ–ಪರಾಯ

ನಮಃ ಇತಿ ಪಾರ್ಶ್ವಯೋಃ ಫಲಿನೇ ನಮಃ ಇತಿ ಚ। ಬಲ ಬಲಿನೆ ೀನಮಃ ಇತಿ। ಗುದೇ ಭಂ ಭಗಾಯನಮಃ ಇತಿ ಉಪಸ್ಥೇ। ಮಂ–ಮನವೇನಮಃ ನಾಭ್ಯಧೋ ದೇಶೇಃ ॥

## ಕನ್ನಡಾನುವಾದ

ಮಾತೃಕಾನ್ಯಾಸಪದ್ಧತಿಯ ಪ್ರಕಾರ ಕಪಿಲ ಎಂದು ಹೇಳುತ್ತಾರೆ. ಪಂ–ಪರಾಯನಮಃ, ಫಂ–ಫಲಿನೇನಮಃ, ಪರ ಮತ್ತು ಫಲೀ ಎಂಬ ರೂಪ ಗಳು ದೇಹದ ಉಭಯಪಾರ್ಶ್ವಗಳಲ್ಲಿವೆ. ಬಂ–ಬಲಿನೇನಮಃ, ಭಂ–ಭಗಾಯ ನಮಃ, ಗುದದಲ್ಲಿ ಬಲಿ ಎಂಬ ವರ್ಣವಾಚ್ಯರೂಪ. ಉಪಸ್ಥದಲ್ಲಿ ಭಗ ಎಂಬ ರೂಪ. ಮಂ–ಮನವೇ ನಮಃ, ಹೊಕ್ಕಳಿನ ಅಧೋಭಾಗದಲ್ಲಿ ರುವ ತುಂದಿಯಲ್ಲಿ ಮನ ಎಂಬ ಹೆಸರಿನ ರೂಪದ ಚಿಂತನೆ.

## ೫. ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಹಸ್ತಗತ ಮಾತೃಕಾಮಂತ್ರ ಪ್ರತಿಪಾದ್ಯರೂಪ ತಿಳಿಸುತ್ತಾರೆ, ಕಪಿಲ ಎಂದು. ಕಂ-ಕಪಿಲ ಎಂಬ ರೂಪ ಮೊದಲು (ಕಪಿಲಾಯ ನಮಃ ಎಂಬ ರೂಪ ಮೊದಲು), ಜಂ ಜಸಾರಾಯ ನಮಃ ಎಂಬ ರೂಪದ ತನಕ ಐದು ರೂಪವು. ಚಂ ಚಾರ್ವಾಂಗಾಯನಮಃ ಎಂಬ ರೂಪ ಮೊದಲು, ಞಂ–ಞಮಾಯನಮಃ ಎಂಬ ಪರ್ಯಂತರ ಐದು ರೂಪ ಸಹ, ಹತ್ತು ರೂಪದಿಂದ ಇದ್ದು, ಎಡ-ಬಲ ಶರೀರ ಬಾಹು–ಹಸ್ತಗಳ ಸಂಧಿಗಳಲ್ಲಿದ್ದು, ಸದಾ ಅನೇಕ ಕರ್ಮಗಳ ಮಾಡಿ ಮಾಡಿಸುವನು. ಕೃಪಣವತ್ಸಲ ಎಂದರೆ, ದೀನರಾದ ಅಶಕ್ತಜೀವರಲ್ಲಿ ದಯಾಪರನಾದ ದೇವರು, ದೇಹದ ಎಡ–ಬಲ ಪಾರ್ಶ್ವದಲ್ಲಿ ಪಂ–ಪರ, ಫಂ–ಸುಫಲಿ ಎಂಬ ಎರಡು ರೂಪದಿಂದ ಇರುವನು. ಗುದ ಉಪಸ್ಥವೆಂದು ಹೆಸರುಳ್ಳ ಮಲಮೂತ್ರ ಬಿಡುವ ಅವಯವ ಎರಡರಲ್ಲಿ ಬಂ-ಬಲಿ, ಭಂ- ಭಗಾ ಎಂಬ ಎರಡು ರೂಪದಿಂದ ಇರುವನು. ಮಂ–ಮನವೇ ನಮಃ ಎಂದು, ಮನ ಎಂಬ ರೂಪದಿಂದ, ತುಂದಿ ಎಂದು ಹೆಸರುಳ್ಳ ನಾಭಿ ಬುಡದಲ್ಲಿರುವನು.

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಉಭಯ ಪಾದಗತ ವರ್ಣವಾಚ್ಯಭಗವದ್ರೂಪಗಳ ಚಿಂತನಾಕ್ರಮವನ್ನು ತಿಳಿಸಿ, ಪ್ರಸಕ್ತ ಪದ್ಯದಿಂದ ಉಭಯಕರಗತ ವರ್ಣ ಸಾಂಕೇತಭಗವದ್ರೂಪಗಳನ್ನೂ, ಅಂತೆಯೇ ದೇಹದ ಉಭಯಪಾರ್ಶ್ವಗತ ಗುದ, ಉಪಸ್ಥೇಂದ್ರಿಯಗತ, ತುಂದಿಗತ ಭಗವದ್ರೂಪಗಳ ಚಿಂತನಾಕ್ರಮ ವನ್ನು ಮಾತೃಕಾಪದ್ಧತಿಯ ಪ್ರಕಾರ ತಿಳಿಸುತ್ತಾರೆ ೨ನೆಯ ಈ ಪದ್ಯದಿಂದ.

೧. ಬಲಗೈಯನ ಭುಜದ ಕೀಲು, ಮೊಣಕೈ, ಮಣಿಗಂಟು, ಹಸ್ತದ ಬೆರಳುಗಳ ಕೀಲುಗಳು ಮತ್ತು ಬೆರಳುಗಳಲ್ಲಿರುವ ಮಧ್ಯಗತ ಸಂಧಿಗಳು. ಈ ಐದು ಸ್ಥಾನಗಳಲ್ಲಿ ಕ್ರಮವಾಗಿ ಕವರ್ಗ ಪಂಚಕ ವರ್ಣಗಳ ಶಬ್ದವಾಚ್ಯನಾಗಿ ರುವ ಐದು ಭಗವದ್ರೂಪಗಳನ್ನು ತಿಳಿಸುತ್ತಾರೆ.

1. ಕಂ–ಕಪಿಲಾಯನಮಃ 2. ಖಂ–ಖಪತೇನಮಃ
3. ಗಂ–ಗರುಡಾಸನಾಯನಮಃ 4. ಘ–ಘರ್ಮಾಯನಮಃ
ಮತ್ತು 5. ಙಂ–ಙಸಾರಾಯನಮಃ

೨. ಅಂತೆಯೇ ಎಡಗೈಯನ ಐದು ಸಂಧಿಗಳ ಸ್ಥಾನಗತ ಭಗವದ್ರೂಪಗಳು

1. ಭುಜದಕೀಲು–ಚ–ಚರ್ವಾಂಗರೂಪ
2. ಮೊಣಕೈಸಂಧಿ–ಛ–ಛಂದೋಗಮ್ಯರೂಪ
3. ಮಣಿಗಂಟು–ಜ–ಜನಾರ್ದನರೂಪ
4. ಅಂಗೈಕೀಲು–ಝ–ಝೂಟಿತಾರಿರೂಪ
5. ಕೈಬೆರಳುಗಳ ಕೀಲುಗಳು–ಞ–ಞಮರೂಪ

ಮೇಲಿನ ಪಂಚರೂಪಗಳು ಚವರ್ಗಪಂಚಕ ವರ್ಣವಾಚ್ಯರೂಪಗಳು.

೩. ದೇಹದ ಬಲಭಾಗದಲ್ಲಿ ಪ–ಪರ ಎಂಬ ರೂಪ.

ದೇಹದ ಎಡಪಾರ್ಶ್ವದಲ್ಲಿ ಫ–ಫಲೀ ಎಂಬ ಸಮೀಚೀನರೂಪ,

೪. ಗುದ ಎಂಬ ಮಲವಿಸರ್ಜನಾಂಗವಾದ ಕರ್ಮೇಂದ್ರಿಯದಲ್ಲಿ ಬ–ಬಲಿ ಎಂಬ ಭಗವದ್ರೂಪ.

ಉಪಸ್ಥವೆಂಬ ಮೂತ್ರರೇತೋವಿಸರ್ಜನಾಂಗವಾದ ಕರ್ಮೇಂದ್ರಿಯದಲ್ಲಿ ಭ–ಭಗನಾಮಕ ವರ್ಣವಾಚ್ಯ ಭಗವದ್ರೂಪ.

೫. ಹೊಕ್ಕಳಿನ ತಳದಲ್ಲಿ ತುಂದಿ ಎಂಬ ಮೂಲಾಧಾರವಿದೆ. ಇದರಲ್ಲಿ ಮ–ಮನನಾಮಕ ವರ್ಣವಾಚ್ಯರೂಪ.

ಇಂತು ವರ್ಗೀಯ ವ್ಯಂಜನಾಕ್ಷರಶ್ರೇಣಿಯಲ್ಲಿ ೫ನೆಯ ವರ್ಗ ಪವರ್ಗ ಪಂಚಕಗತ ವರ್ಣವಾಚ್ಯಭಗವದ್ರೂಪಗಳನ್ನು ಕ್ರಮವಾಗಿ ದೇಹಗತ ಬಲ ಮತ್ತು ಎಡಪಾರ್ಶ್ವ, ಗುದ, ಉಪಸ್ಥಗಳಲ್ಲಿ ಮತ್ತು ತುಂದಿಯಲ್ಲಿ ಹೀಗೆ ಪಂಚಸ್ಥಾನಗಳಲ್ಲಿ ಮಾತೃಕಾನ್ಯಾಸಪದ್ಧತಿಯ ಪ್ರಕಾರ ಚಿಂತನೆ.

೬. ಪೂರ್ವೋಕ್ತ ಭಗವದ್ರೂಪಗಳ ಚಿಂತನಾಕ್ರಮವನ್ನು ಈ ಕೆಳಗಿನ ಪಟ್ಟಿಯಿಂದ ಸುಲಭವಾಗಿ ಗ್ರಹಿಸಬಹುದು.

| ಕ್ರ. ಸಂ. | ದೇಹಗತಸ್ಥಾನ | ವರ್ಣ | ವರ್ಣವಾಚ್ಯರೂಪ |
|---|---|---|---|
| | ಬಲಹಸ್ತ | | |
| ೧. | ಭುಜದ ಕೀಲು | ಕ | ಕಪಿಲ |
| ೨. | ಮೊಣಕೈಸಂಧಿ | ಖ | ಖಪತಿ |
| ೩. | ಮಣಿಗಂಟು | ಗ | ಗರುಡಾಸನ |
| ೪. | ಅಂಗೈಕೀಲು | ಘ | ಘರ್ಮ |
| ೫. | ಬೆರಳುಗಳಕೀಲುಗಳು | ಙ | ಙಸಾರ |

| | | | |
|---|---|---|---|
| | **ಎಡಹಸ್ತ** | | |
| ೬. | ಭುಜದಕೀಲು | ಚ | ಚಾರ್ವಾಂಗ |
| ೭. | ಮೊಣಕೈಕೀಲು | ಛ | ಛಂದೋಗಮ್ಯ |
| ೮. | ಮಣಿಗಂಟು | ಜ | ಜನಾರ್ದನ |
| ೯. | ಅಂಗೈಕೀಲು | ಝ | ಝೂಟಿತಾರಿ |
| ೧೦. | ಬೆರಳುಗಳಕೀಲುಗಳು | ಞ | ಞಾಮ |
| | **ಉಭಯಪಾರ್ಶ್ವ** | | |
| ೧೧. | ಬಲಭಾಗದಲ್ಲಿ | ಪ | ಪರ |
| ೧೨. | ಎಡಭಾಗದಲ್ಲಿ | ಫ | ಫಲೀ |
| | **ಕರ್ಮೇಂದ್ರಿಯಗಳಲ್ಲಿ** | | |
| ೧೩. | ಗುದದಲ್ಲಿ | ಬ | ಬಲೀ |
| ೧೪. | ಉಪಸ್ಥದಲ್ಲಿ | ಭ | ಭಗ |
| | **ನಾಭಿಯ ತಳ** | | |
| ೧೫. | ತುಂದಿಯಲ್ಲಿ | ಮ | ಮನ |

೭. ಇಂತು ಸಾಧನಶರೀರವೆಂದೆನಿಪ ಈ ಸ್ಥೂಲಶರೀರಗತ ತತ್ತ್ವಸ್ಥಾನಗಳಲ್ಲಿ ವಿದ್ಯಮಾನನಾಗಿರುವ ವರ್ಣವಾಚ್ಯ ಭಗವದ್ರೂಪಗಳನ್ನು ಮಾತೃಕಾನ್ಯಾಸವಿಧಿಯಂತೆ ಚಿಂತಿಸುವ ಭಗವದ್ಭಕ್ತರನ್ನು ಶರಣಾಗತವತ್ಸಲನು ಕೃಪಾದೃಷ್ಟಿಯಿಂದ ನಿರಂತರದಲ್ಲಿ ಸಂರಕ್ಷಿಸುವನು. ॥೨॥

## ಪದ್ಯ ೩

ಮೂಲ

ಐದುನೋಲೊಂದಧಿಕ ದಳವು ।
ಳ್ಳೈದು ಪದ್ಮವು ನಾಭಿಮೂಲದಿ ।
ಐದುಮೂರ್ತಿಗಳಿಹವು ಅನಿರುದ್ಧಾದಿನಾಮದಲಿ ॥
ಐದಿಸುತ ಗರ್ಭವನು ಜೀವರ ।
ನಾದಿಕರ್ಮ ಪ್ರಕೃತಿಗುಣಗಳ ।
ಹಾದಿ ತಪ್ಪಲಿಗೊಡದೆ ವ್ಯಾಪಾರಗಳ ಮಾಡುತಿಹ॥ ॥೩॥

ಅವತರಣಿಕೆ

ನಾಭಿಮೂಲದಲ್ಲಿರುವ ಆರುದಳವುಳ್ಳ ಐದು ಪದ್ಮಗಳ ವಿಷಯ ತಿಳಿಸುತ್ತಾರೆ. **ಐದುನೋಲೊಂದಧಿಕ** ಎಂಬ ಪ್ರಸಕ್ತ ಸಂಧಿಗತ ೩ನೆಯ ಈ ಪದ್ಯದಿಂದ.

ನಾಭಿಮೂಲ ಎಂದರೆ, ನಾಭಿಯ ಅಧೋಭಾಗದಲ್ಲಿ ಗುದ ಮತ್ತು ವೃಷಣಗಳ ನಡುವೆ ತುಂದಿ ಎಂಬ ಭಾಗವಿದೆ. ಇದಕ್ಕೆ ಮೂಲಾಧಾರ ಎನ್ನುವರು. ಇಲ್ಲಿಂದ ಸುಷುಮ್ನಾನಾಡಿಯು ಪ್ರಾರಂಭವಾಗಿ ನೇರವಾಗಿ ಹೊರಟು, ಬ್ರಹ್ಮರಂಧ್ರವನ್ನು ಸೇರುವುದು. ಈ ಪ್ರದೇಶದಲ್ಲಿ ಐದು ಕಮಲಗಳಿವೆ. ಪ್ರತಿ ಕಮಲವೂ ಆರು ದಳಗಳಿಂದ ಕೂಡಿದೆ. ಈ ಪಂಚಕಮಲಗಳಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ ಶ್ರೀಪರಮಾತ್ಮನು ಇದ್ದಾನೆ. ಈ ಸ್ಥಾನದಲ್ಲಿ ಶುಕ್ಲ–ಶೋಣಿತ ಸಂಬಂಧದಿಂದ ಗರ್ಭವನ್ನು ಉತ್ಪತ್ತಿಮಾಡಿ, ಜೀವರ ಅನಾದಿ ಲಿಂಗದೇಹಗತ ಕರ್ಮಪರಂಪರೆಯನ್ನು ಅನುಸರಿಸಿ ಗುಣತ್ರಯಗಳ ಗತಿಯಲ್ಲಿ

ವ್ಯತ್ಯಾಸವಾಗದಂತೆ ಜನ್ಮಾದಿಗಳನ್ನು ಕೊಟ್ಟು, ಆಯಾಯಾ ಜನ್ಮಗಳಿಗನು ಗುಣವಾಗಿ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿದ್ದಾನೆ. ॥೩॥

**ಪ್ರತಿಪದಾರ್ಥ**

**ಐದುಮೇಲೊಂದಧಿಕ**=ಐದರಮೇಲೆ ಒಂದು ಹೆಚ್ಚಾದ ಅಂದರೆ, ೫+೧=೬ ಸಂಖ್ಯಾಕವಾದ, **ದಳವುಳ್ಳ**=ದಳಗಳಿರುವ, ಅಂದರೆ ಷಡ್ದಳಗಳಿರುವ, **ಐದು ಪದ್ಮವು**=ಪಂಚಕಮಲಗಳು, **ನಾಭಿಮೂಲದಿ**=ಹೊಕ್ಕಳಿನ ಕೆಳಭಾಗದಲ್ಲಿ ವಿದ್ಯಮಾನವಾಗಿವೆ. **ಅನಿರುದ್ಧಾದಿ ನಾಮದಲಿ**=ಇಂತಹ ಐದು ಕಮಲಗಳಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ಮತ್ತು ನಾರಾಯಣ ಎಂಬ ಹೆಸರಿನಿಂದ, **ಮೂರ್ತಿಗಳಿಹವು**=ಪಂಚರೂಪಾತ್ಮಕನಾದ ಶ್ರೀಪರಮಾತ್ಮನು ಇದ್ದಾನೆ. **ಗರ್ಭವನು**=ಜೀವರುಗಳಿಗೆ ಗರ್ಭವಾಸವನ್ನು, **ಐದಿಸುತ**=ಕೊಡಿಸುತ್ತ (ಹೊಂದಿಸುತ್ತ), **ಜೀವರ**=ತ್ರಿವಿಧ ಜೀವರಾಶಿಗಳ, **ಅನಾದಿಕರ್ಮ**=ಅನಾದಿಕರ್ಮಪರಂಪರೆಯನ್ನು (ಲಿಂಗದೇಹಗತ ತೃತೀಯಪರಿಚ್ಛೇದಗತ ಅನಾದಿಕರ್ಮಬೀಜ), **ಪ್ರಕೃತಿಗುಣಗಳ**=ಅನಾದಿಕರ್ಮಕ್ಕೆ ಕಾರಣವಾದ ಗುಣತ್ರಯಗಳ, (ಪ್ರಕೃತಿ ಸಂಬಂಧವಾದ ಸತ್ತ್ವಾದಿ ತ್ರಿಗುಣಗಳು) **ಹಾದಿ ತಪ್ಪಲಿಗೊಡದೆ**=ಅದರ ಯೋಗ್ಯತೆಯನ್ನು ಮೀರದಂತೆ(ತದನುಸಾರವಾಗಿ), **ವ್ಯಾಪಾರಗಳ**=ತ್ರಿಗುಣಗಳ ಕ್ರಿಯೆ, ತದ್ದ್ವಾರಾ ಅನಾದಿಕರ್ಮಾನುಸಾರ ತಜ್ಜನ್ಯ ಸಂಚಿತ ಆಗಾಮಿಕರ್ಮಗಳ ರೂಪವಾದ ಕ್ರಿಯಾವಿಶೇಷಗಳನ್ನು, **ಮಾಡುತಿಹ**=ಬಿಂಬಕ್ರಿಯಾದ್ವಾರಾ ತಾನೇ ಮಾಡಿ, ತತ್ತ್ವೇಶರ ಮೂಲಕ ಮಾಡಿಸುತ್ತಾ, ಆ ಕರ್ಮಬಂಧನಕ್ಕೆ ಒಳಗಾಗಿರುವ ಜೀವರ ಅನುಭವಕ್ಕೆ ತಂದೀಯುವನು. ॥೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವ ಸ್ಥೂಲದೇಹದಿಂದ ಮಾತೃಗರ್ಭದಿಂದ ಜನಿಸಬೇಕಾದರೆ ಮಾತೃ ಗರ್ಭದಲ್ಲಿ ಆವಾಸಸ್ಥಾನ ಹೇಳತಾರೆ.

ಐದು ಮೇಲೊಂದಧಿಕ–ಆರು ಸಂಖ್ಯಾ ಎಂತ ಅರ್ಥ. ದಳವುಳ್ಳ-ಆರು ದಳಗಳು ಉಳ್ಳ, ಐದು ಪದ್ಮವು–ಐದು ಪದ್ಮಗಳು, ನಾಭಿಮೂಲದಿ–ನಾಭಿ ಸ್ಥಾನದಲ್ಲಿ ಇರೋದಾಗಿ ಅದೆ. ನಾಭಿಗೆ ಮೂಲಸ್ಥಾನವಾದ ವೃಷಣಾಸನ ಮಧ್ಯದಲ್ಲಿ ಚತುರ್ದಳ ಕಮಲಗಳು ಐದು ಅವೆ. ಮೂಲಶಬ್ದದಿಂದ ಗ್ರಂಥಾಂತರ ಸಂಗತಿಯಿಂದ ಶೇಷಪೂರ್ತಿಯು. ಅಂತು ನಾಭಿಯಲ್ಲಿ ಷಟ್ ದಳಕಮಲಗಳು ಐದು. ಮೂಲಾಧಾರದಲ್ಲಿ ಚತುರ್ದಳ ಕಮಲಗಳು ಐದು, ಅಂತು ಹತ್ತು ಹೇಳಿದಂತಾಯಿತು.

ಸುಷುಮ್ನಾ ನಾಡಿಗೆ ನಾಲ್ಕು ದಿಕ್ಕಿಗೆ ನಾಲ್ಕು ನಾಡಿಗಳು, ಅಂತು ಐದು.

೧. ಸುಷುಮ್ನಾ—ಮಧ್ಯಗತನಾಡಿ.
೨. ಪ್ರಕಾಶಿನೀ—ಪೂರ್ವಗತನಾಡಿ.
೩. ವೈದ್ಯುತಾ—ದಕ್ಷಿಣಗತನಾಡಿ.
೪. ವಜ್ರಿಕಾ—ಪಶ್ಚಿಮಗತನಾಡಿ.
೫. ಆರ್ಯಾ—ಉತ್ತರಗತನಾಡಿ.

**'ಸುಷುಮ್ನಾ ಪಂಚಪ್ರಭೇದಿನೀ'** ಎಂತ ಪ್ರಮಾಣ. ಈ ನಾಡಿಗಳು ಮೂಲಾಧಾರ ಹಿಡಿದು ಬಂದದೆ. ಅದರಿಂದ ಈ ಐದು ನಾಡಿಗಳಲ್ಲಿ ಐದು, ಮೂಲಾಧಾರದಲ್ಲಿ ಚತುರ್ದಳಕಮಲಗಳು ಐದು ಇವೆ. ಇದರಂತೆ ೫ ನಾಭಿ ಯಲ್ಲಿ ಆರುದಳಕಮಲಗಳು ಐದು ಇವೆ. ಅಂತು ಹತ್ತುದಳ ಕಮಲಗಳು. ಒಂದೊಂದು ನಾಡಿಯಲ್ಲಿ ಒಂದೊಂದು ಕಮಲ ಇರೋಣದಾಗಿ, ಅನಿರುದ್ಧಾದಿ ನಾಮದಲಿ ಶ್ರೀಪರಮಾತ್ಮ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸು

ದೇವ, ನಾರಾಯಣ, ಐದು ಮೂರ್ತಿಗಳಿಹವು. ಒಂದೊಂದು ಕಮಲದಲ್ಲಿ ಒಂದೊಂದು ಮೂರ್ತಿ ಮ್ಯಾರಿಗೆ ಐದು ಭಗವನ್ಮೂರ್ತಿಗಳು ಇರೋದಾಗಿ ಅವೆ. ಉಭಯವಿಧ ಕಮಲಗಳಲ್ಲೂ ಸುಷುಮ್ನಾಗತ ಕಮಲದಲ್ಲಿ ನಾರಾಯಣ ನೆಂದು ತಿಳಿಯಬೇಕು. ಸುಷುಮ್ನಾಬಹಿರ್ಭಾಗದಲ್ಲಿ, ಸುಷುಮ್ನಾವನ್ನನುಸರಿಸಿ ಆರುದಳಯುಕ್ತವಾದ ಮಾಂಸನಿರ್ಮಿತವಾದ ಆರುದಳಕಮಲ ನಾಭಿಯಲ್ಲಿ ಅದೆ. ಇಂಥಾ ಮಾಂಸರೂಪವಾದ ಆರುದಳಕಮದಲಿ, ಜೀವರ–ಪ್ರಾಣಿಗಳ, ಪ್ರಕೃತಿಗುಣಗಳ, ಪ್ರಕೃತಿ ಸಾಂಕೇತ ಅನಾದಿಲಿಂಗದೇಹದ ಸಾತ್ವಿಕಾದಿ ಗುಣ ಗಳ ಅನುಸರಿಸಿ ಇರತಕ್ಕ, ಅನಾದಿಕರ್ಮ, ಲಿಂಗದ ತೃತೀಯ ಪರಿಚ್ಛೇದವಾದ ತಮಃ ಪರಿಚ್ಛೇದಗತ ಅನಾದಿಕರ್ಮ, ಹಾದಿ ತಪ್ಪಲಿಗೊಡದೆ–ಈ ಅನಾದಿ ಕರ್ಮವನುಸರಿಸಿ ಬಂದ ಆಗಾಮಿ ಸಂಚಿತ ಕರ್ಮಗಳು, ಇದನ್ನನುಸರಿ ಬಂದದ್ದು ಜನ್ಮಗಳು, ಪೂರ್ವಜನ್ಮಕರ್ಮವನನುಸರಿಸಿ ದಾವಜನ್ಮ ಬರಬೇಕೋ ಆ ಹಾದಿ ತಪ್ಪಿಸದೇನೇ, ಐದಿಸುತ ಗರ್ಭವನು–ಗರ್ಭವನ್ನು ಪಿತೃದ್ವಾರಾ ಮಾತೃಗರ್ಭಗತ ಮಾಂಸಗತ ಆರುದಳಕಮಲ ಗರ್ಭವನು ರೇತೋದ್ವಾರಾ, ಐದಿಸುತ–ಪ್ರವೇಶಮಾಡಿಸುತ, ವ್ಯಾಪಾರಗಳ ಮಾಡುತಿಹ–ಐದಿಸಿದ ನಂತರ ಆ ರೇತಸ್ಸಿನ ಸಂಗಡ ಮಾತೃಸಂಬಂಧ ಮಾಡಿ, ಶುಕ್ಲ–ಶೋಣಿತ ಮಿಲನ ದಿಂದ, ಅವಯವಸಹಿತಾ,ದೇಹನಿರ್ಮಾಣರೂಪವಾದ ವ್ಯಾಪಾರಗಳ ಆರುದಳ ಕಮಲ ಐದರಲಿ, ನಾಲ್ಕುದಳಕಮಲ ಐದರಲಿ ಅಂತೂ ಹತ್ತರಲಿ ವಿದ್ಯಮಾನ ವಾದ ಅನಿರುದ್ಧಾದಿ ದಶರೂಪಗಳಿಂದ ಮಾಡುತಾ ಇರೋವನಾಗಿ ಇರತಾನೆ. ಭೂತಭವಿಷ್ಯದ್ವರ್ತಮಾನದಲ್ಲಿ ಇದೇ ಪ್ರಕಾರ ಎಂತ ತಾತ್ಪರ್ಯ. ॥೩॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

'ಐದುಮೇಲೊಂದಧಿಕ ದಳವುಳ್ಳೈದು ಪದ್ಮವು ನಾಭಿಮೂಲದಿ' ಎಂಬೀ ಪದ್ಯಕ್ಕೆ ಸಾಧಾರಣವಾಗಿ ನಾಭಿಮೂಲದಲ್ಲಿ ೬ ದಳಗಳುಳ್ಳ ೫ ಪದ್ಮಗಳು ಇರುವುದೆಂದತಲೂ, ಅವುಗಳಲ್ಲಿ ಅನಿರುದ್ಧಾದಿ ೫ರೂಪಗಳಿರುವುವೆಂತಲೂ ಅರ್ಥವಾಗುವುದು.

ಮಾನಸಸ್ಮೃತಿ ಎಂಬ ಗ್ರಂಥದಲ್ಲಿ-

**ತತಸ್ಸುಷುಮ್ನಾ ಸಂಸಕ್ತಾ ನಾಭಿಸಂಸ್ಥೇಷು ಪಂಚಸು ।**
**ಷಡ್ದಳಾರುಣ ಪತ್ರೇಷು ಅನಿರುದ್ಧಾದಿಕಾನ್ ಸ್ಮರೇತ್ ॥**

—ಎಂಬ ಪ್ರಮಾಣವು ಇದಕ್ಕಾಧಾರವಾಗಿರುವುದು.

ಆದರೆ, ತಂತ್ರಸಾರದಲ್ಲಿ (ಅಧ್ಯಾಯ-೪, ಶ್ಲೋಕ-೧೬೦ರಿಂದ೧೬೪)

**ಮೂಲಾಧಾರಂ ಸಮಾರಭ್ಯ ತ್ವಾಮೂರ್ಧಾನಮೃಜುಸ್ಥಿತಾ ।**
**ಮಧ್ಯೇ ಸುಷುಮ್ನಾ ವಿಜ್ಞೇಯಾ ವಜ್ರಿಕಾದ್ಯ ಪ್ರಕಾಶಿನಿ ॥**
**ವೈದ್ಯುತಾ ಬ್ರಹ್ಮನಾಡೀತಿ ಸೈವ ಪಂಚಪ್ರಭೇದಿನಿ ॥೧೬೦॥**

**ಪೃಷ್ಟವಾಮಾಗ್ರದಕ್ಷಾಂತರ್ಭೇದಾಸ್ತೇಚ ಕ್ರಮೇಣತು ।**
**ಪ್ರದ್ಯುಮ್ನಾದಿ ಸ್ವರೂಪೇಣ ಧ್ಯೇಯಂ ಸಿದ್ಧಿಮಭೀಪ್ಸಿತಾ॥೧೬೧॥**

ಛಲಾರಿವ್ಯಾಖ್ಯಾನದರೀತ್ಯಾ ಇದರ ಅರ್ಥ ಹೀಗಿದೆ-

ಮಧ್ಯೇ-ಶರೀರ ಮಧ್ಯದಲ್ಲಿ, ಮೂಲಾಧಾರಂ, ಮೂಲಸ್ಯ-ವೃಷಣಕ್ಕೆ, ಆಧಾರಂ-ಅಧೋಭಾಗವನ್ನು, ಸಮಾರಭ್ಯ-ಆರಂಭಮಾಡಿ, ಆಮೂರ್ಧಾನಂ-ಶಿರಸ್ಸಿನವರೆಗೂ, ಋಜುಸ್ಥಿತಾ-ನೆಟ್ಟಗೇ ಇರುವುದು ಸುಷುಮ್ನಾನಾಡಿಯು.

ಇದರ ಅಭಿಪ್ರಾಯವೇನೆಂದರೆ-ಗುದದ್ವಾರಕ್ಕೂ ವೃಷಣಕ್ಕೂ ಮಧ್ಯ ಪ್ರದೇಶದಲ್ಲಿ ಎರಡು ಅಂಗುಲ ದೀರ್ಘವಾಗಿಯೂ, ನಾಲ್ಕು ಅಂಗುಲ ವಿಸ್ತಾರ ವಾಗಿಯೂ ಇರುವ ವರ್ತುಲಾಕಾರವಾದ ಒಂದು ಗೆಡ್ಡೆಯು ಇರುವುದು. ಅದರಿಂದಲೇ ನಾಡಿಗಳು ಹುಟ್ಟಿರುವುದು. ಸುಷುಮ್ನಾನಾಡಿಯು ಅಲ್ಲಿಂದಲೇ ಹುಟ್ಟುದುದು. ಅದು ಒಂದೇ ನಾಡಿಯೇ ವಜ್ರಿಕಾ. ಆರ್ಯಾ, ಪ್ರಕಾಶನೀ, ವೈದ್ಯುತಾ, ಬ್ರಹ್ಮನಾಡೀ ಎಂಬ ೫ ಭೇದದಿಂದ ಕೂಡಿರುವುದು.

ಇದೇ ಸುಷುಮ್ನಾನಾಡಿಯ ಹಿಂಭಾಗಕ್ಕೆ 'ವಜ್ರಿಕಾ' ಎಂದು ಹೆಸರು, ಎಡಭಾಗಕ್ಕೆ 'ಆರ್ಯಾ' ಎಂದು ಹೆಸರು. ಮುಂಭಾಗಕ್ಕೆ 'ಪ್ರಕಾಶಿನೀ' ಬಲ

ಭಾಗಕ್ಕೆ 'ವೈದ್ಯುತಾ' ಎಂದು ಹೆಸರುಗಳು. ಮಧ್ಯಭಾಗಕ್ಕೆ 'ಬ್ರಹ್ಮನಾಡೀ' ಎಂದು ಹೆಸರು. ಈ ಐದು ಸ್ಥಾನಗಳಲ್ಲಿ ಕ್ರಮವಾಗಿ ಪ್ರದ್ಯುಮ್ನ, ಅನಿರುದ್ಧ, ವಾಸುದೇವ, ಸಂಕರ್ಷಣ, ನಾರಾಯಣ ಸ್ವರೂಪವುಳ್ಳ ಪರಮಾತ್ಮನನ್ನು ಚಿಂತಿಸಬೇಕು.

ಮೂಲೇ ಚ ನಾಭೌ ಹೃದಯೇಂದ್ರಿಯೋನಿ ।
ಭ್ರೂಮಧ್ಯ ಮೂರ್ಧ್ನಿ ದ್ವಿಷಡಂತಕೇಷು ॥೧೬೩॥

ಚತುರ್ದ್ವಿಷಷ್ಟಂ ದ್ವಿಚತುರ್ದ್ವಿಷಟ್ಕಂ ದಳೇಷು
ಪದ್ಮೇಷು ಸಿತಾರುಣೇಷು ।
ಪಂಚಾತ್ಮಕೋಸೌ ಭಗವಾನ್ಸದೈವ ಧ್ಯೇಯೋ
ಹೃದಂತಾನ್ಯರುಣಾನಿತಾನಿ॥ ॥೧೬೪॥

ಈ ಮಧ್ಯಗತ ಸುಷುಮ್ನಾನಾಡಿಯಲ್ಲಿ ಮೂಲದಲ್ಲೂ. ನಾಭಿ, ಹೃದಯ ಇಂದ್ರಿಯೋನಿ, ಭ್ರೂಮಧ್ಯ, ಶಿರಸ್ಸು ಎಂಬ ಆರು ಸ್ಥಳಗಳಲ್ಲಿ ಆರು ಪದ್ಮಗಳುಂಟು. ಮೂಲಶಬ್ದಕ್ಕೆ ಮೇಲೆ ಅರ್ಥ ಬರೆದಿದೆ. ಅಲ್ಲಿ ಚತುರ್ದಳ ಕಮಲ ೧. ನಾಭಿಯಲ್ಲಿ ಷಡ್ದಳಗಳುಳ್ಳ ಕಮಲ ೧, ಹೃದಯದಲ್ಲಿ ೮ ದಳಗಳುಳ್ಳ ಕಮಲ ೧, ಇಂದ್ರಿಯೋನಿ ಅಂದರೆ ಕಿರುನಾಲಿಗೆ ಎಂದು ಕಂಠದಲ್ಲಿ ಜೋಲುತ್ತಿರುವುದು.

ತೈತ್ತರೀಯ ಉಪನಿಷತ್ತಿನಲ್ಲಿ–

ಅಂತರೇಣ ತಾಳುಕೇಯ ಏಷಸ್ತನ ಇವಾವಲಂಬತೇಸೇಂದ್ರಿಯೋನಿಃ

ಎಂದು ಇಂದ್ರಿಯೋನಿ ಲಕ್ಷಣವನ್ನು ಹೇಳಿರುವರು. ಅಂದರೆ, ಗಂಟಲ ಮಧ್ಯದಲ್ಲಿ ಸ್ತನದಂತೆ ಜೋಲುತ್ತಿರುವುದು ಯಾವುದೋ ಅದೇ ಇಂದ್ರಿಯೋನಿ ಎಂದು ಹೇಳಿರುವರು. ಆ ಇಂದ್ರಿಯೋನಿಯಲ್ಲಿ ದ್ವಿದಳ ಕಮಲ ೧, ಹುಬ್ಬಿನ ಮಧ್ಯದಲ್ಲಿ ಚತುರ್ದಳಕಮಲ ೧, ಶಿರಸ್ಸಿನಿಂದ ೧೨ ಅಂಗುಲ ಪ್ರಮಾಣದ ಎತ್ತರ ಪ್ರದೇಶದಲ್ಲಿ ೧೨ ದಳ ಕಮಲ ೧, ಅಂತು

ಆರು ಕಮಲಗಳಿರುವುವು. ಈ ಪದ್ಮಗಳು ಕೆಲವು ಬೆಳ್ಳಗೂ ಕೆಲವು ಕೆಂಪಗೂ ಇರುವುವು. ಯಾವ ಪದ್ಮಗಳು ಬಿಳುಪು ಎಂದರೆ ಯಾವುದು ಕೆಂಪೆಂದರೆ,

**ಹೃದಂತಾನ್ಯರುಣಾನಿ** ಎಂಬ ವಾಕ್ಯರೀತ್ಯಾ ಮೂಲ, ನಾಭಿ, ಹೃದಯ ಈ ಮೂರು ಕಮಲಗಳು ಕೆಂಪಗಿರುವುವು. ಅವುಗಳಿಗೆ ಮೇಲಿನ ಪದ್ಮಗಳು ಮೂರೂ ಶುಕ್ಲವರ್ಣದವುಗಳಾಗಿರುವುವು. ಇವುಗಳಲ್ಲಿ ಪಂಚಾತ್ಮಕನಾದ ಪರಮಾತ್ಮನನ್ನು ಅಂದರೆ, ಪ್ರದ್ಯುಮ್ನ, ಅನಿರುದ್ಧ, ವಾಸುದೇವ, ಸಂಕರ್ಷಣ ನಾರಾಯಣ ಎಂಬ ಐದು ರೂಪಗಳನ್ನು ಕ್ರಮವಾಗಿ ಧ್ಯಾನಮಾಡಬೇಕೆಂದು ಈ ಶ್ಲೋಕಗಳಿಗೆ **ಛಲಾರಿ ಆಚಾರ್ಯರ ವ್ಯಾಖ್ಯಾನವಿರುವುದು.** ಇದಲ್ಲದೆ ಸುಷುಮ್ನಾಡಿಗೆ ನಾಲ್ಕು ಪಾರ್ಶ್ವಗಳಲ್ಲಿಯೂ, ನಾಲ್ಕು ನಾಡಿಗಳು ಬೇರೆಯಾಗಿರುವುವು.

**ಇಡಾ ಚ ಪಿಂಗಳಾ ಚೈವ ವಜ್ರಿಕಾ ಧಾರಿಣೀ ತಥಾ।**
**ಸುಷುಮ್ನಾ ಯಾಶ್ಚತುರ್ದಿಕ್ಷು ವಜ್ರಿಕಾದ್ಯಾಸು ತತ್ರ ಚ॥೧೬॥**

**ಚತುರ್ಮೂರ್ತಿಃ ಸ ಭಗವಾನ್ ಹೃದಯೇ ಸುವ್ಯಸ್ಥಿತಃ ॥**

ಅದೇ ತಂತ್ರಸಾರ ೪ನೆಯ ಅಧ್ಯಾಯದಲ್ಲಿನ ಮೇಲಿನ ಶ್ಲೋಕದ ವ್ಯಾಖ್ಯಾನದ ಅರ್ಥ.

ಸುಷುಮ್ನಾನಾಡಿಗೆ ನಾಲ್ಕು ದಿಕ್ಕುಗಳಲ್ಲೂ ಇಡಾ, ಪಿಂಗಳಾ, ವಜ್ರಿಕಾ, ಧಾರಣೀ ಎಂಬ ನಾಲ್ಕು ನಾಡಿಗಳಿವೆ. ಅವುಗಳಲ್ಲಿ ಅನಿರುದ್ಧಾದಿ ನಾಲ್ಕು ರೂಪಗಳಿಂದ ೪ ನಾಡಿಗಳಲ್ಲೂ ನಾರಾಯಣನಾಮದಿಂದ ಸುಷುಮ್ನಾನಾಡಿಯಲ್ಲಿಯೂ ಇರುವನು. ಆದರೆ ಇಡಾ, ಪಿಂಗಳಾ ಎಂಬ ಕ್ರಮದಿಂದ ಅನಿರುದ್ಧಾದಿಗಳು ಇರುವರೆಂಬ ಭ್ರಾಂತಿಯನ್ನು ನಿವಾರಣೆ ಮಾಡುವುದಕ್ಕಾಗಿ **ವಜ್ರಿಕಾದ್ಯಾಸು** ಎಂದು ಹೇಳಿರುವರು. ವಜ್ರಿಕಾ ಮೊದಲುಮಾಡಿ ಅನಿರುದ್ಧಾದಿ ರೂಪಗಳಿರುವುವು. ಇದರ ವಿವರ **ಛಾಂದ್ಯೋಗೋಪನಿಷದ್ಭಾಷ್ಯದಲ್ಲಿ.**

**ಸ ಯೇಷ ಹೃದಿನಾಡೀಷು ಪಂಚರೂಪಃ ಪ್ರತಿಷ್ಠಿತಃ ।**
**ನಾರಾಯಣಾಖ್ಯಂ ಸೌಷುಮ್ನಂ ಮಧ್ಯಗಂ ರಕ್ತವರ್ಣಕಂ ॥**
**ಶುಕ್ಲಂತು ವಾಸುದೇವಾಖ್ಯಂ ನಂದಿನ್ಯಾಮಗ್ರತ ಸ್ಥಿತಂ ।**
**ಪಿಂಗಳಾಯಾಂ ಪಿಂಗಳಂ ಚ ರೂಪಂ ಸಂಕರ್ಷಣಾಭಿಧಂ ॥**
**ಪಶ್ಚಿಮೇ ವಜ್ರಿಕಾಂ ಚ ಪೀತಂ ಪ್ರದ್ಯುಮ್ನನಾಮಕಂ ।**
**ಇಡಾಯಾಮನಿರುದ್ಧಾಖ್ಯಂ ನೀಲರೂಪಂ ವ್ಯವಸ್ಥಿತಮ್ ॥**

ಅಂದರೆ, ಸುಷುಮ್ನಾಕ್ಕೆ ಪಶ್ಚಿಮದಲ್ಲಿರುವ ವಜ್ರಿಕಾನಾಡಿಯಲ್ಲಿ ಪೀತ ವರ್ಣನಾಗಿ ಪ್ರದ್ಯುಮ್ನ. ಉತ್ತರದಲ್ಲಿರುವ ಇಡಾನಾಡಿಯಲ್ಲಿ ಅನಿರುದ್ಧನು ನೀಲವರ್ಣನಾಗಿರುವನು. ಪೂರ್ವದಿಕ್ಕಿನ ನಂದಿನೀ ಎಂಬ ನಾಮಾಂಕಿತ ಉಳ್ಳ ಧಾರಿಣೀನಾಡಿಯಲ್ಲಿ ಶುಕ್ಲವರ್ಣನಾಗಿ ವಾಸುದೇವ. ದಕ್ಷಿಣದಲ್ಲಿ ಪಿಂಗಳಾನಾಡಿಯಲ್ಲಿ ಪಿಂಗಳವರ್ಣನಾಗಿ ಸಂಕರ್ಷಣ. ಮಧ್ಯದಲ್ಲಿ ಸುಷುಮ್ನಾ ನಾಡಿಯಲ್ಲಿ ರಕ್ತವರ್ಣನಾಗಿ ನಾರಾಯಣ, ಹೀಗೆ ೫ ರೂಪಗಳಿಂದ ಭಗವಂತ ನಿರುವನು. ಇವೇ ಮೊದಲಾದ ಆಧಾರದಮೇಲೆ, 'ಐದುಮೇಲೊಂದಧಿಕ ವುಳ್ಳ ಐದು ಪದ್ಮವು ನಾಭಿಮೂಲದಿ'–ಎಂಬ ಪದಗಳಿಗೆ ಒಂದೊಂದು ಸ್ಥಳ ದಲ್ಲೂ ೫–೫ ಪದ್ಮಗಳು ಎಂಬ ಅರ್ಥಮಾಡುವುದು ನಿರಾಧಾರವೆಂತಲೂ, ೫ ಸ್ಥಾನಗಳಲ್ಲಿ ೫ ಪದ್ಮಗಳೆಂತಲೂ, ಮತ್ತೊಂದು ಪದ್ಮವು ಕಣ್ಣಿಗೆ ಅಗೋಚರ ವಾಗಿ ತಲೆಗೆ ೧೨ ಅಂಗುಲ ಪ್ರಮಾಣದ ಎತ್ತರದ ಒಳಗೆ ಇರುವುದೆಂದು ಸಿದ್ಧ ವಾಗುವುದು. ಈ ವಾಕ್ಯಕ್ಕೂ, **ಮಾನಸಸ್ಮೃತಿಯ** ವಾಕ್ಯಕ್ಕೂ ಪರಸ್ಪರ ವಿರೋಧಬರುವುದು. ಇದಕ್ಕೆ ಸಮಾಧಾನ ಹೇಗೆಂದರೆ–

ನಾಭಿಯಲ್ಲಿ ಷಡ್ದಳಕಮಲಗಳು ಐದು ಇದ್ದರೂ, ಒಂದೇ ಗೆಡ್ಡೆಯಲ್ಲಿ ಸೇರಿಕೊಂಡು, ಒಂದನ್ನೊಂದು ಸಂಬಂಧಿಸಿಯೇ ಇರುವುದರಿಂದ ಅವುಗಳು ಒಂದೇ ಕಮಲವೆಂದು **ಶ್ರೀಮಧ್ವಾಚಾರ್ಯರ** ಅಭಿಪ್ರಾಯವು. ಮಾನಸ ಸ್ಮೃತಿಯ ವಾಕ್ಯವನ್ನನುಸರಿಸಿ, ದಾಸರಾಯರು ಹೇಳಿದ ೫ ಕಮಲಗಳೆಂಬ ವಾಕ್ಯಾಭಿಪ್ರಾಯದಿಂದ, ಅವು ೫ ಕಮಲಗಳನ್ನು ಬೇರೆಬೇರೆ ಹೇಳಿರುವರೆಂದು ಭಾವಿಸಬೇಕು. ಹೀಗೆ ೫ ಕಮಲಗಳಲ್ಲಿ ಅನಿರುದ್ಧಾದಿ ೫ ರೂಪಗಳಿಂದ ಪರ

ಮಾತ್ರನಿದ್ದು, ಅವರವರ ಕರ್ಮಾನುಸಾರವಾಗಿ ಜೀವರನ್ನು ಗರ್ಭಕ್ಕೆ ತಂದು, ಹುಟ್ಟಿಸಿ, ಅನಾದಿಕರ್ಮಗಳನ್ನು ಮೀರದೆ ಕರ್ಮಗಳನ್ನು ಮಾಡಿ ಮಾಡಿಸುತ್ತಿರುವನು. ॥೩॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ಈಗ **ತತಃ ಸುಷುಮ್ನಾಸಂಸಕ್ತಾ ನಾಭಿಸಂಸ್ಥೇಷು ಪಂಚಸು ।**
**ಷಟ್ದಳಾರುಣಪತ್ರೇಷು ಅನಿರುದ್ಧಾದಿಕಾ ಸ್ಮರೇತ್ ॥**

ಎಂತ **ಮಾನಸಸ್ಮೃತ್ಯಾನುಸಾರ** ಷಟ್ದಳ ಉಳ್ಳ ಐದು ಪದ್ಮಗಳು ನಾಭಿಯಲ್ಲಿ ಅವೆ ಎಂದು ಹೇಳುತ್ತಾರೆ. ॥೩॥

## ೪. ಶ್ರೀವ್ಯಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಐದು–ಇತಿ॥ ಪಂಚನಾಡೀಸ್ಥಂ ಪದ್ಮಪಂಚಕಮ್॥ ಮೂಲಾಧಾರಂ ಸಮಾರಭ್ಯ ತ್ವಾಮೂರ್ಧಾನಂ ಋಜುಸ್ಥಿತಾ। ಮಧ್ಯೇ ಸುಷುಮ್ನಾ ವಿಜ್ಞೇಯು ವಜ್ರಿಕಾರ್ಯಾ ಪ್ರಕಾಶಿನೀ॥ ವೈದ್ಯುತಾ ಬ್ರಹ್ಮನಾಡೀತಿ ಸೈವ ಪಂಚಪ್ರಭೇದಿನೀ॥ ಪೃಷ್ಠ ವಾಮಾಗ್ರ ದಕ್ಷಾಂತರ್ಭೇದಾಃ ತೇಷು ಕ್ರಮೇಣ ತು। ಹರಿನ್ನೀಲಃ ಸಿತಃ ಪಿಂಗಃ ಲೋಹಿತಾಶ್ಚಸ್ಯ ಕೇಶವಃ॥ ಪ್ರದ್ಯುಮ್ನಾದಿ ಸ್ವರೂಪೇಣ ಧ್ಯೇಯಃ ಸಿದ್ಧಿಮಭೀಪ್ಸಿತಮ್॥ ಇತಿ ಸಾರಸಂಗ್ರಹೇ॥

ಮೂಲೇ ಚ ನಾಭೌ ಹೃದಯೇಂದ್ರಯೋನಿಃ ಭ್ರೂಮಧ್ಯೇ–ಇತ್ಯುಕ್ತ್ವಾ, ಪದ್ಮೇಷು ಇತಿ ಚ ಉಕ್ತಮ್॥ ಐದಿಸುತ ಇತಿ। ಅನಿರುದ್ಧಾಶ್ರಯತ್ವಾತ್ ಗರ್ಭಾಣಾಂ ಪಿತುಃ ಶರೀರಾತ್ ಅನ್ಯತ್ರ ಪ್ರತಿಹೃತಾಃ ಅಪಿನ ವಿನಶ್ಯಂತಿ ವರ್ಧಂತ್ಯೈ ಚ ತತ್ರೈವ॥ ಧಾತಾ ಗರ್ಭಂ ದಧಾತು–ಇತಿ ಶ್ರುತೇ॥ ಧಾತಾಹಿ ಭಗವಾನ್ ಅನಿರುದ್ಧಃ ॥ಯೋಗಿ ಕ್ಲೃಪ್ತಿಃ ವಾಸುದೇವಾತ್ ರೂಪಂ ಸಂಕರ್ಷಣಾತ್ ಚ ಧಾರಣಮ್॥ ಇತಿ ಛಾಂದೋಗ್ಯೇ॥ ಭೃಗ್ವಿಂದ್ರದ್ಯುಮ್ನ ಸಂವಾದೇ ವಿಷ್ಣುರಹಸ್ಯೇ ಕರ್ಮಾದಿ ನಿರೂಪಣ ಪ್ರಕರಣೇ॥ ಯದೇಶ್ವರಃ ಪ್ರಾಣಯುತಃ ಪಿತರಿ ಸ್ಥಾಪಯತ್ಯಮುಮ್॥ ತದಾಪ್ರಭೃತಿ ತದ್ದೇಹಸ್ಥಿತೋ

ಮಾಸದ್ವಯಾವಧಿ॥ರೇತೋರೂಪೋ ಮಾತರಿ ಸ ಕಾಲೇ ಯೋನಿಂವಿಶಾತ್ಯಪಿ। ಯೋನಿಂ ಶೋಧಯತೇ ತತ್ರ ವಾಸುದೇವಾಭಿಧೋ ಹರಿ:॥ ರೇತಃ ಸಿಂಚತಿ ತತ್ರೈವ ಪ್ರದ್ಯುಮ್ನೋ ಹಿ ಪ್ರಜಾಪತಿಃ॥ ತ್ವಷ್ಟ್ವಾ ಸಂಕರ್ಷಣಃ ತತ್ರಧತ್ತೇ ರೂಪವಿಭಾಗಕಾನ್॥ ಧೃತ್ವಾ ಪೃಷ್ಣಾತಿ ತಂ ಗರ್ಭಂ ಸ್ವಯಂ ಧಾತಾಽನಿರುದ್ಧಕಃ॥ಗ್ರಹಾಸ್ತು ತೇಜಮೇಷಾದ್ಯಾಃ ತದ್ರೋಪದ್ರವಕಾರಿಣಃ॥ ರಾಜನ್ ಸ್ವೇಚ್ಛ ಯಾ ನಃ ಜಾಯತೇ ಗರ್ಭ ಸಂಭವಃ ॥ಇತಿ॥ ॥೩॥

**ಕನ್ನಡಾನುವಾದ**

ಐದುಮೇಲೊಂದು ಎಂಬ ಈ ಪದ್ಯದಲ್ಲಿ ನಾಭಿಮೂಲಗತ ಭಗವದ್ರೂಪ ವಿಚಾರ ತಿಳಿಸುತ್ತಾರೆ.

ನಾಡಿಗಳು ಐದು. ಇದರಲ್ಲಿ ಐದು ಕಮಲಗಳಿವೆ. ಮೂಲಾಧಾರದಿಂದ (ನಾಭಿ) ಪ್ರಾರಂಭಿಸಿ, ನೇರವಾಗಿ ಮಸ್ತಕದವರೆಗೂ (ಮೂರ್ಧ್ನಿ) ಇರುವ ನಾಡಿಗೆ ಸುಷುಮ್ನಾನಾಡಿ ಎಂದು ಹೆಸರು. ಇದು ದೇಹಮಧ್ಯಗತ ನಾಡಿಯು. ಈ ಸುಷುಮ್ನಾನಾಡಿಯ ನಾಲ್ಕು ದಿಕ್ಕುಗಳಲ್ಲಿರುವ ಶಾಖಾನಾಡಿಗಳು ನಾಲ್ಕು. ಅವು ವಜ್ರಿಕಾ, ಆರ್ಯಕಾ, ಪ್ರಕಾಶಿನೀ ಮತ್ತು ವೈದ್ಯುತಾ ಎಂಬ ನಾಲ್ಕು ಹೆಸರಿನ ನಾಡಿಗಳು. ಈ ಪಾರ್ಶ್ವನಾಡಿಗಳ ಬಣ್ಣಗಳು ಕ್ರಮವಾಗಿ ನೀಲ, ಶುಭ್ರ (ಸಿತ), ನಸುಗೆಂಪು (ಪಿಂಗ) ಮತ್ತು ಕೆಂಪು (ಲೋಹಿತ) ಆಗಿವೆ. ನಾಡಿಗಳಲ್ಲಿ ನಾರಾಯಣನು ಪ್ರದ್ಯುಮ್ನಾದಿರೂಪಗಳಿಂದ ಇದ್ದಾನೆ. ಈ ವಿಷಯವನ್ನು **ಶ್ರೀಮದಾಚಾರ್ಯರು ತಂತ್ರಸಾರದಲ್ಲಿ** ನಿರೂಪಿಸಿರುತ್ತಾರೆ. ಇದಲ್ಲದೇ, ಮೂಲಧಾರದಲ್ಲಿ, ನಾಭಿಯಲ್ಲಿ, ಹೃದಯದಲ್ಲಿ, ತಾಲುವಿನ ಹತ್ತಿರ ಇರುವ ಕಿರುನಾಲಿಗೆ ಎಂಬ ಇಂದ್ರಯೋನಿ ಎಂಬ ಸ್ಥಾನದಲ್ಲಿ, ಭ್ರೂಮಧ್ಯದಲ್ಲಿ ಇರುವ ಕಮಲಗಳಲ್ಲಿ ಪಂಚಾತ್ಮಕವಾದ ಶ್ರೀಹರಿಯ ಧ್ಯಾನೋಪಾಸನೆ ಮಾಡಬೇಕೆಂದು ನಿರೂಪಿಸುತ್ತಾರೆ, ಐದಿಸುತ ಎಂಬ ಶಬ್ದ ಪ್ರಯೋಗದಿಂದ. ಅನಿರುದ್ಧರೂಪಿ ಶ್ರೀಹರಿಯು ಗರ್ಭವನ್ನು ಹೊಂದಿಸುವ ಕ್ರಮವನ್ನು ತಿಳಿಸುತ್ತಾರೆ. ಗರ್ಭಸ್ಥ ಜೀವರು ಅನಿರುದ್ಧನ ಆಶ್ರಯದಲ್ಲಿರು

ವರು. ಇದರಿಂದ ಪಿತೃರೇತಸ್ಸಿನಿಂದ ಮಾತೃಗರ್ಭವನ್ನು ಸೇರಿದರೂ, ನಾಶ ರಹಿತರಾಗಿರುವರು. ಧಾತನು ನಿನ್ನ ಗರ್ಭವನ್ನು ಧಾರಣ ಮಾಡಲಿ ಎಂದು **ಶ್ರುತಿವಚನವಿದೆ.** ಇಲ್ಲಿ **ಧಾತಾ** ಎಂಬ ಶಬ್ದಕ್ಕೆ **ಅನಿರುದ್ಧ** ಎಂದು ಅರ್ಥ. ಇದರಿಂದ ಅನಿರುದ್ಧನಾಮಕ ಶ್ರೀಪರಮಾತ್ಮನು ಗರ್ಭವನ್ನು ಐದಿಸುವನು ಎಂಬ ತತ್ತ್ವವು **ಛಾಂದೋಗ್ಯಭಾಷ್ಯ**ದಲ್ಲಿ ಉಕ್ತವಾಗಿದೆ. ವಾಸುದೇವ ರೂಪಿಯು ಯೋನಿಗೆ ಪುತ್ರೋತ್ಪತ್ತಿ ಸಾಮರ್ಥ್ಯವನ್ನೀಯುವನು. ಸಂಕರ್ಷಣನು ಶಿಶುವಿನ ಅಂಗಗಳನ್ನು ನಿರ್ಮಾಣಮಾಡುವನು. ಪ್ರದ್ಯುಮ್ನನು ಗರ್ಭದಲ್ಲಿ ರೇತಸ್ಸನ್ನು ಹೊಂದಿಸುವನು. ಅನಿರುದ್ಧನು ಗರ್ಭಧಾರಣೆಗೆ ಕಾರಣನು. ಇದು **ಛಾಂದೋಗ್ಯಉಪನಿಷದ್ಭಾಷ್ಯದಲ್ಲಿದೆ.** ಇದೇ ವಿಷಯವು **ಶ್ರೀವಿಷ್ಣುರಹಸ್ಯ**ದಲ್ಲಿ ಭೃಗು ಮತ್ತು ಇಂದ್ರದ್ಯುಮ್ನ ಇವರ ಸಂವಾದರೂಪದಲ್ಲಿ ಹೊರಟಿರುವ ಕರ್ಮಾದಿ ನಿರೂಪಣ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ. ॥೩॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಈ ತುಂದಿಯೆಂಬ ನಾಭಿಮೂಲಗತ ಆರುದಳವುಳ್ಳ ಐದು ಪದ್ಮದಲ್ಲಿ, ಜೀವರಿಗೆಲ್ಲಾ ಗರ್ಭಪ್ರಾಪ್ತಿ ಮಾಡಿಕೊಡುವ ರೂಪವನ್ನು ತಿಳಿಸುತ್ತಾರೆ, ಐದು ಎಂದು. ಆರುದಳಗಳು ಇರುವ ಐದು ಪದ್ಮಗಳು, ಪುರುಷ ಸ್ತ್ರೀ ಸರ್ವದೇಹಗಳಲ್ಲೆಲ್ಲಾ ತುಂದಿಯಲ್ಲಿ ಇರುವುವು. ಆ ಐದು ಪದ್ಮಗಳಲ್ಲೂ ಅನಿರುದ್ಧಾದಿ ನಾರಾಯಣಾಂತ ಐದು ರೂಪಗಳು, ಜೀವರ ಅನಾದಿಕರ್ಮದ ಮಾರ್ಗತಪ್ಪದಂತೆ, ಜೀವರಿಗೆಲ್ಲಾ ದೇಹ ಉಂಟಾಗುವ ಗರ್ಭಪ್ರಾಪ್ತಿ ಮಾಡಿಸುತ್ತಾ–

> **ವಿಷ್ಣುರ್ಯೋನಿ ಪ್ರಕಲ್ಪಯತು ತ್ವಷ್ಟಾರೂಪಾಣಿ ಪಿಂಶತು ।**
> **ಆಸಿಂಚತು ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ॥**

ಎಂಬ ಶ್ರುತ್ಯುಕ್ತ ವ್ಯಾಪಾರ ಮಾಡುತ್ತಿರುವವು. ॥೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ನಾಭಿಮೂಲದಲ್ಲಿರುವ ಷಡ್ದಳಕಮಲಗಳ ವಿವರಗಳು ಮತ್ತು ಜೀವರನ್ನು ಗರ್ಭವನ್ನು ಐದಿಸುವ ಪ್ರಕಾರವನ್ನು ತಿಳಿಸುತ್ತಾರೆ ಪ್ರಸಕ್ತ ೩ನೆಯ ಪದ್ಯದಿಂದ. ೧. ನಾಭಿಯ ತಳದಲ್ಲಿ ಗುದದ್ವಾರ ಮತ್ತು ವೃಷಣಗಳ ನಡುವೆ ಒಂದು ಗ್ರಂಥಿ ಇದೆ. ಇದಕ್ಕೆ **ಮೂಲಾಧಾರ**ವೆಂದು ಹೆಸರು. ಇದನ್ನು **ತುಂದಿ** ಎಂತಲೂ ಕರೆಯುವರು. ಈ ಗ್ರಂಥಿಯು ದೇಹಾದ್ಯಂತ ವ್ಯಾಪಿಸಿರುವ ನಾಡಿಗಳ ಮೂಲಸ್ಥಾನವು. ಮೂಲಾಧಾರದಲ್ಲಿ ಚತುರ್ದಳ ಕಮಲವಿದೆ, ನಾಭಿಪ್ರದೇಶದಲ್ಲಿ ಆರುದಳಗಳಿರುವ ಐದು ಪದ್ಮಗಳಿವೆ. ಮಧ್ಯದಲ್ಲಿ ತುಂದಿಯಿಂದ ಹೊರಟು ನೇರವಾಗಿ ಶಿರಸ್ಸಿನ ಬ್ರಹ್ಮರಂಧ್ರ ಪರ್ಯಂತ ಹೊರಟಿರುವ ನಾಡಿಗೆ **ಸುಷುಮ್ನಾನಾಡಿ** ಎಂದು ಹೆಸರು. ಇದೇ ಮಧ್ಯನಾಡಿ ಅಥವಾ ಬ್ರಹ್ಮನಾಡಿಯು. ಇದು ಅತ್ಯಂತ ಸೂಕ್ಷ್ಮವಾಗಿದ್ದು, ಸಮಗ್ರ ನರವ್ಯೂಹಗಳಿಗೆ ಆಧಾರವಾಗಿದೆ. ಈ ನಾಡಿಯ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ನಾಡಿಗಳಿವೆ. ಇವುಗಳ ವಿವರಗಳು ಇಂತಿವೆ.

೧. ಮಧ್ಯಗತನಾಡಿ–**ಸುಷುಮ್ನಾ**

೨. ಪೂರ್ವಗತನಾಡಿ–**ಪ್ರಕಾಶಿನೀ**

೩. ದಕ್ಷಿಣಗತನಾಡಿ–**ವೈದ್ಯುತಾ**

೪. ಪಶ್ಚಿಮಗತನಾಡಿ–**ವಜ್ರಿಕಾ**

೫. ಉತ್ತರಗತನಾಡಿ–**ಆರ್ಯಾ**

**ಸುಷುಮ್ನಾ ಪಂಚಪ್ರಭೇದಿನೀ** ಎಂದು ಇದಕ್ಕೆ ಪ್ರಮಾಣ.

೨. ಪೂರ್ವೋಕ್ತ ಐದು ನಾಡಿಗಳಲ್ಲಿ ಪಂಚಕಮಲಗಳಿವೆ. ಪ್ರತಿ ಕಮಲದಲ್ಲಿಯೂ ಆರುದಳಗಳಿವೆ. ಇಂತಹ ಷಡ್ದಳಯುಕ್ತವಾದ ಪಂಚಪದ್ಮಗಳು ಅತ್ಯಂತ ಸೂಕ್ಷ್ಮ ಹಾಗೂ ಅತೀಂದ್ರಿಯ. ದೃಗ್ಗೋಚರವಲ್ಲ. ಈ ಪಂಚಕಮಲಗಳಲ್ಲಿ ಶ್ರೀಪರಮಾತ್ಮನು ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ,

ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂದು ಪಂಚರೂಪಗಳಿಂದ ವಿದ್ಯಮಾನನಾಗಿದ್ದಾನೆ.

ಇದಕ್ಕೆ ಮಾನಸಸ್ಮೃತಿಯ ವಾಕ್ಯವೇ ಪ್ರಮಾಣವಾಗಿರುವುದು.

ತತಸ್ಸುಷುಮ್ನಾ ಸಂಸಕ್ತಾ ನಾಭಿಸಂಸ್ಥೇಷು ಪಂಚಸು ।
ಷಡ್ದಳಾರುಣ ಪತ್ರೇಷು ಅನಿರುದ್ಧಾದಿಕಾನ್ ಸ್ಮರೇತ್ ॥

—ಷಡ್ದಳಾತ್ಮಕವಾದ ಪಂಚಕಮಲಗಳ ವಿವರಗಳಿಗೆ ಪ್ರಮಾಣವು ತಂತ್ರ ಸಾರದ ೪ನೆಯ ಅಧ್ಯಾಯಗತ ಶ್ಲೋಕದಲ್ಲಿದೆ–

ಇಡಾ ಚ ಪಿಂಗಳಾ ಚೈವ ವಜ್ರಿಕಾ ಧಾರಿಣೀ ತಥಾ।
ಸುಷುಮ್ನಾ ಯಾತ್ಮ ತುರ್ದಿಕ್ಷು ವಜ್ರಿಕಾದ್ಯಾಸು ತತ್ರ ಚ।
ಚತುರ್ಮೂರ್ತಿಃ ಸ ಭಗವಾನ್ ಹೃದಯೇ ಸ ವ್ಯಸ್ಥಿತಃ॥

ಅಂದರೆ, ೧. ಮಧ್ಯಗತನಾಡಿಯು ಸುಷುಮ್ನಾ (ಬ್ರಹ್ಮನಾಡಿ)

೨. ಅದರ ಮುಂದೆ (ಪೂರ್ವಕ್ಕೆ) ಧಾರಿಣಿ (ಪ್ರಕಾಶಿನೀ)

೩. ಬಲಪಾರ್ಶ್ವದಲ್ಲಿ (ದಕ್ಷಿಣಕ್ಕೆ) ಪಿಂಗಳಾ (ನೈರ್ಋತಾ)

೪. ಹಿಂಭಾಗದಲ್ಲಿ (ಪಶ್ಚಿಮಕ್ಕೆ) ವಜ್ರಿಕಾ ಮತ್ತು

೫. ಎಡಪಾರ್ಶ್ವದಲ್ಲಿ (ಉತ್ತರಕ್ಕೆ) ಇಡಾ (ಆಯಾ್ರ) ಎಂದು ಐದು ಪ್ರಕಾರವಾದ ನಾಡೀಗತಕಮಲಗಳಿವೆ,

ಪೂರ್ವೋಕ್ತ ಪಂಚಕಮಲಗಳಲ್ಲಿ ವಿರಾಜಮಾನನಾಗಿರುವ ಅನಿರುದ್ಧಾದಿ ಪಂಚರೂಪಗಳು ಮತ್ತು ವರ್ಣಗಳ ವಿವರಗಳನ್ನು ಈ ಮುಂದಿನ ಪಟ್ಟಿಯಿಂದ ತಿಳಿಯಬಹುದು.

| ಕ್ರಮ ಸಂಖ್ಯೆ | ನಾಡಿಗಳು | ದಿಕ್ಕು | ಸ್ಥಾನ | ಭಗವದ್ರೂಪ | ವರ್ಣವಿಶೇಷ |
|---|---|---|---|---|---|
| ೧. | ಸುಷುಮ್ನಾ | ಮಧ್ಯದಲ್ಲಿ | ಮಧ್ಯದಲ್ಲಿ | ನಾರಾಯಣ | ರಕ್ತವರ್ಣ |
| ೨. | ಪ್ರಕಾಶಿನೀ (ಧಾರಿಣೀ) | ಪೂರ್ವ | ಮುಂದೆ | ವಾಸುದೇವ | ಶುಕ್ಲವರ್ಣ |
| ೩. | ವೈದ್ಯುತಾ (ಪಿಂಗಳ) | ದಕ್ಷಿಣ | ಬಲಕ್ಕೆ | ಸಂಕರ್ಷಣ | ಪಿಂಗಳವರ್ಣ |
| ೪. | ವಜ್ರಿಕಾ | ಪಶ್ಚಿಮ | ಹಿಂದೆ | ಪ್ರದ್ಯುಮ್ನ | ಪೀತವರ್ಣ |
| ೫. | ಆರ್ಯಾ (ಇಡಾ) | ಉತ್ತರ | ಎಡಕ್ಕೆ | ಅನಿರುದ್ಧ | ನೀಲವರ್ಣ |

೩. ಇಂತು ಅನಿರುದ್ಧಾದಿ ಪಂಚರೂಪಗಳಿಂದ ಪಂಚಕಮಲಗಳಲ್ಲಿ ವಿದ್ಯಮಾನನಾಗಿರುವ ಮೂಲಕಾರಣ ಶ್ರೀಪರಮಾತ್ಮನು ಪಿತನರೇತೋದ್ವಾರಾ ಜೀವರನ್ನು ಮಾತೃಗರ್ಭಕ್ಕೆ ಸೇರಿಸಿ, ಶುಕ್ಲ–ಶೋಣಿತ ಸಂಬಂಧದಿಂದ ಜೀವರ ಅನಾದಿಕರ್ಮಪರಂಪರೆಗಳಿಗನುಗುಣವಾಗಿ ತ್ರಿಗುಣಗಳ ಮೇಲನದಿಂದ, ಯಾವ ಯಾವ ಜನ್ಮಗಳನ್ನು ಕೊಡಬೇಕೋ, ಅದರಂತೆ ಸ್ವಲ್ಪವೂ ವ್ಯತ್ಯಾಸವಾಗದಂತೆ (ಹಾದಿತಪ್ಪಲಿಗೊಡದೆ), ಗರ್ಭವನ್ನು ಐದಿಸುವನು. ಅನಿರುದ್ಧಾದಿ ಪಂಚ ರೂಪಗಳಿಂದ ಸೃಷ್ಟಿಕರ್ತನಾದ ಶ್ರೀಹರಿಯು ಎಸಗುವ ಗರ್ಭೋತ್ಪತ್ತಿ ವಿಧಾನವನ್ನು ತಿಳಿಸುತ್ತಾರೆ. ವಿವರಗಳಿಗೆ ಪಟ್ಟಿ ನೋಡಬೇಕು.

| ಕ್ರಮ ಸಂಖ್ಯೆ | ಭಗವದ್ರೂಪ | ಕಾರ್ಯವಿವರಗಳು |
|---|---|---|
| ೧. | ಅನಿರುದ್ಧರೂಪದಿಂದ | ಪಿತೃರೇತಸ್ಸನ್ನು ಮಾತೃಗರ್ಭಕ್ಕೆ ಸೇರಿಸುವುದು. ಜೀವರಿಗೆ ಆಶ್ರಯ ದಾತನು. |
| ೨. | ಪ್ರದ್ಯುಮ್ನರೂಪದಿಂದ | ಶುಕ್ಲ–ಶೋಣಿತ ಸಂಬಂಧಕ್ರಿಯೆ. |
| ೩. | ಸಂಕರ್ಷಣರೂಪದಿಂದ | ಶಿಶುವಿನ ಅವಯವಗಳ ನಿರ್ಮಾಣ. |
| ೪. | ವಾಸುದೇವರೂಪದಿಂದ | ತಾಯಿಗೆ ಪುತ್ರೋತ್ಪತ್ತಿ ಸಾಮರ್ಥ್ಯ ಪ್ರದತ್ವ. |
| ೫. | ನಾರಾಯಣರೂಪದಿಂದ | ಶಿಶುವಿನ ಜನನ. |

ಶ್ರೀಗೋಪಾಲದಾಸವರ್ಯರ ತಮ್ಮಂದಿರಾದ **ತಂದೆಗೋಪಾಲವಿಠ್ಠಲಾಂಕಿತ ರಂಗಪ್ಪದಾಸರು** ತಮ್ಮ ಕೀರ್ತನೆಯೊಂದರಲ್ಲಿ ಪಂಚಕಮಲಗಳ ವಿಷಯವನ್ನು ಹೀಗೆ ನಿರೂಪಿಸಿರುವರು.

ಪಂಚನಾಡಿಗಳಲ್ಲಿ— ತುಂದಿಯು ಚತುರ್ದಶ ।
ಪಂಚಕಮಲಗಳಲ್ಲಿ— ಅನಿರುದ್ಧ ನಾಭಿಯು ।
ಪಂಚಷಡ್ದಳದಲ್ಲಿ— ಪ್ರದ್ಯುಮ್ನನಲ್ಲಿ ॥

ಪಂಚಕಮಲವು ಹೃದಯಮಧ್ಯದಿ ।
ಪಂಚಪಂಚಾ ಚತುರಸ್ತಂಭದಿ ।
ಮಿಂಚಿನಂದದಿ ಮೂಲೇಶನಿರುತಿಹ ॥

ಎಂದು ಪಂಚಕಮಲಗತ ಅನಿರುದ್ಧಾದಿ ಪಂಚರೂಪಗಳನ್ನು ಸ್ತೋತ್ರಮಾಡಿರುತ್ತಾರೆ. ॥೩॥

## ಪದ್ಯ ೪

ಮೂಲ

ನಾಭಿಯಲಿ ಷಟ್ಕೋಣಮಂಡಲ ।
ದೀ ಭವಿಷ್ಯದ್ ಬ್ರಹ್ಮನೊಳು ಮು ।
ಕ್ತಾಭ ಶ್ರೀಪ್ರದ್ಯುಮ್ನನಿಪ್ಪನು ವಿಬುಧಗಣಸೇವ್ಯ ॥
ಶೋಭಿಸುತ ಕೌಸ್ತುಭವೆ ಮೊದಲಾ ।
ದಾಭರಣದಾಯುಧಗಳಿಂದ ಮ ।
ಹಾಭಯಂಕರ ಪಾಪಪುರುಷನ ಶೋಷಿಸುತ ನಿತ್ಯ॥ ॥೪॥

ಅವತರಣಿಕೆ

ನಾಭಿಸ್ಥಾನಗತ ಷಟ್ಕೋಣಮಂಡಲದ ವಿವರಗಳು. ಅಲ್ಲಿ ಪಾಪಪುರುಷನ ಶೋಷಣಾಕಾರ್ಯಗಳನ್ನು ತಿಳಿಸುತ್ತಾರೆ ಪ್ರಸಕ್ತ ಸಂಧಿಗತ ೪ನೆಯ ಈ ಪದ್ಯದಿಂದ.

ನಾಭೀಪ್ರದೇಶದಲ್ಲಿ ಷಟ್ಕೋಣಮಂಡಲವಿದೆ. ಇದು ಭಾವೀಬ್ರಹ್ಮರಾದ ಶ್ರೀವಾಯುದೇವರ ಸ್ಥಾನವು. ನೀಲವರ್ಣದಿಂದ ಶೋಭಾಯಮಾನ

ರಾದ ವಾಯುದೇವರ ಅಂತರ್ಯಾಮಿಯಾಗಿ ಶ್ರೀಪ್ರದ್ಯುಮ್ನನಾಮಕ ಪರಮಾತ್ಮನಿರುವನು. ನೀಲಮಣಿ ಸಮೂಹಗಳ ಮಧ್ಯೆ ಮುತ್ತಿನಂತೆ ಪ್ರಕಾಶವುಳ್ಳ ಪ್ರದ್ಯುಮ್ನನು ಕೌಸ್ತುಭಾದಿ ದಿವ್ಯ ಆಭರಣಗಳಿಂದ ಪರಿಶೋಭಿತ ನಾಗಿ, ಚಕ್ರಶಂಖಾದ್ಯಾಯುಧಗಳಿಂದ ವಿರಾಜಮಾನವಾಗಿ ಸಕಲ ಸುರಗಣದಿಂದ ಸಂಸೇವ್ಯಮಾನನಾಗಿದ್ದು, ಭಯಂಕರಸ್ವರೂಪವುಳ್ಳ ಪಾಪಪುರುಷನಾದ ಕಲಿಯನ್ನು ನಾಭೀಪ್ರದೇಶಕ್ಕೆ ತಂದು, ಅಲ್ಲಿ ಷಟ್ಕೋಣಮಂಡಲಸ್ಥಿತ ವಾಯು ಬೀಜದಿಂದ ಪ್ರತಿದಿನದಲ್ಲಿಯೂ ಶೋಷಿಸಿ, ಜೀವರಿಗೆ ಅವನಿಂದಾಗತಕ್ಕ ಪಾಪಕಾರ್ಯಗಳನ್ನು ತಡೆಯುವನು,

## ಪ್ರತಿಪದಾರ್ಥ

**ನಾಭಿಯಲಿ**=ಹೊಕ್ಕಳಿನಲ್ಲಿ, **ಷಟ್ಕೋಣಮಂಡಲದಿ**=ಆರು ಮೂಲೆಗಳಿಂದ ಯುಕ್ತವಾದ ವಾಯುಮಂಡಲದಲ್ಲಿ, **ಈ ಭವಿಷ್ಯದ್ಬ್ರಹ್ಮನೊಳು**=ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುವ ವರ್ತಮಾನಸ್ಥ ಶ್ರೀವಾಯುದೇವರಲ್ಲಿ, **ಮುಕ್ತಾಭೆ**=ಮುತ್ತಿನಂತೆ ಪ್ರಕಾಶಮಾನನಾಗಿ, **ವಿಬುಧಗಣಸೇವ್ಯ**=ದೇವತಾಗಣದಿಂದ ಸೇವ್ಯಮಾನನಾದ, **ಕೌಸ್ತುಭನೆ ಮೊದಲಾದ**=ಕೌಸ್ತುಭವೆಂಬ ಆಭರಣವೇ ಆದಿಯಾಗಿ, **ಆಭರಣ**=ನಾನಾ ಪ್ರಕಾರದ ಆಭರಣಗಳಿಂದಲೂ, **ಆಯುಧಗಳಿಂದ**=ಶಂಖ ಚಕ್ರಾದಿ ಆಯುಧಗಳಿಂದ ಪ್ರಕಾಶಮಾನನಾಗಿರುವ, **ಶ್ರೀಪ್ರದ್ಯುಮ್ನನು**=ಶ್ರೀಪ್ರದ್ಯುಮ್ನರೂಪಿ ಪರಮಾತ್ಮನು, **ಇಪ್ಪನು**=ವಿದ್ಯಮಾನನಾಗಿದ್ದಾನೆ. **ಮಹಾಭಯಂಕರ**=ಭಯಂಕರಸ್ವರೂಪನಾದ, **ಪಾಪಪುರುಷನ**=ಪರಮಪಾಪಿಷ್ಠನಾದ ಕಲಿಪುರುಷನನ್ನು. **ನಿತ್ಯ**=ನಿರಂತರದಲ್ಲಿ **ಶೋಷಿಸುತಿಪ್ಪನು**=ಷಟ್ಕೋಣಮಂಡಲಗತ ವಾಯುವಿನಿಂದ ಶೋಷಿಸುತ್ತಾ ಇದ್ದಾನೆ. ॥೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪಾಪಪುರುಷನಾದ ಕಲಿಪುರುಷನ ಶೋಷಣಸ್ಥಾನ ಹೇಳತಾರೆ. ನಾಭಿಯಲಿ–ನಾಭಿ ಒಳಗೆ ಪೂರ್ವೋಕ್ತ ಆರುದಳಯುಕ್ತವಾದ ಐದು ಕಮಲಗಳ ಅಧೋಭಾಗದಲ್ಲಿ, ಷಟ್ಕೋಣಮಂಡಲದಿ– ಆರು ಮೂಲೆಗಳಿಂದ ಯುಕ್ತವಾದ ವಾಯುಮಂಡಲಗಳು ಇರೋದಾಗಿ ಇದೆ. ಅದರಲ್ಲಿ ಐದು ವಾಯುರೂಪಗಳು, ಐದು ಪ್ರದ್ಯುಮ್ನರೂಪಗಳು, ಈ ಪ್ರಕಾರ ಇರತಕ್ಕ ಐದರಲ್ಲಿ, ಮಧ್ಯನಾಡಿಗತ ಎಂದರೆ, ಸುಷುಮ್ನಾನಾಡಿಗತ ಆರುದಳ ಕಮಲದ ಅಧೋಭಾಗಗತ ಆರುಕೋಣವಾಯುಮಂಡಲದಲ್ಲಿ, ಭವಿಷ್ಯದ್‌ಬ್ರಹ್ಮ– ಮುಂದಿನ ಕಲ್ಪಕ್ಕೆ ಬ್ರಹ್ಮನಾಗತಕ್ಕ, ಈಗ್ಗೆ ವರ್ತಮಾನದಲ್ಲಿ, ಇರತಕ್ಕ ಶ್ರೀವಾಯದೇವರೊಳು–ಈ ವಾಯುದೇವರಂತರ್ಗತನಾದ, ಮುಕ್ತಾಭ– ಮುತ್ತಿನೋಪಾದಿಯಲ್ಲಿ ಕಾಂತಿಯುಕ್ತನಾದ, ಶ್ರೀಪ್ರದ್ಯುಮ್ನನು–ಷಡ್ಗುಣೈಶ್ವರ್ಯಸಂಪನ್ನನಾದ ಪ್ರದುಮ್ನನು, ವಿಬುಧಗಣಸೇವ್ಯ– ದೇವತಾಗಣದಿಂದ ಸೇವಿತನಾಗಿ, ಕೌಸ್ತುಭವೇ ಮೊದಲಾದ– ಕೌಸ್ತುಭನಾಮಕ ಆಭರಣವೇ ಮೊದಲಾದ, ಆಭರಣ ಆಯುಧಗಳಿಂದ– ಆಭರಣಗಳೇನು, ಶಂಖ, ಚಕ್ರಾದಿ ಆಯುಧಗಳೇನು ಇವುಗಳಿಂದ, ಶೋಭಿಸುತ– ಪ್ರಕಾಶವಾನನಾಗುತ, ಮಹಾಭಯಂಕರಪಾಪಪುರುಷನ– ಅತ್ಯಂತ ಭಯಂಕರನಾದ, ಸುಧರ್ಮಗಳ ನಾಶಮಾಡತಕ್ಕ ಕಲಿಪುರುಷನ, ನಿತ್ಯ ಶೋಷಿಸುತ– ಪ್ರತಿದಿನದಲ್ಲೂ ವಾಯು ಮಂಡಲಗತ ವಾಯುವಿನಿಂದ ದೇಹಗತ ರಕ್ತಮಾಂಸಾದಿಗಳ ಶೋಷಿಸುತ ಪ್ರದ್ಯುಮ್ನನು, ಇಪ್ಪನು–ಇರೋವನಾಗಿದ್ದಾನೆ ಎಂತ ತಾತ್ಪರ್ಯ.

### ವಿಶೇಷಾರ್ಥ

ಪೂರ್ವೋಕ್ತ ಪಾಪಪುರುಷನ ರೂಪ ಎಂಥಾದ್ದೆಂದರೆ–ಬ್ರಹ್ಮಹತ್ಯವೇ ಶಿರ. ಸ್ವರ್ಣಸ್ತೇಯವೇ ಭುಜದ್ವಯಗಳು. ಸುರಾಪಾನವೇ ಹೃದಯ. ಗುರುಪತ್ನಿ ಗಮನವೇ ಟೊಂಕದ ಭಾಗದ್ವಯಗಳು, ಎಂದರೆ ಎರಡು ಪಿರ್ರೆಗಳು.

ಇಂಥಾ ಪಾಪಿಗಳ ಸಂಗವೇ ಪಾದದ್ವಯಗಳು. ಅವಶಿಷ್ಟ ಅಂಗಗಳು ಪೂರ್ವೋಕ್ತ ಪಾಪಗಳಿಗೆ ಅನುಸರಿಸಿದ ಅನೇಕ ಪಾಪಗಳೇ, ಖಡ್ಗ ಚರ್ಮ ಎಂದರೆ ಆಯುಧ ವಿಶೇಷ. ಏತಾದೃಶನಾದ ಪಾಪಪುರುಷ ಪಾಪಿಗಳಿಗೆ ಅತ್ಯಂತ ನೀಚತಮನಾದವ ಎಂತ ತಿಳಿಯಬೇಕು.

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಮೇಲಿನ ಪದ್ಯದಲ್ಲಿ ಮೂಲಾಧಾರ ಮೊದಲು ಶಿರಸ್ಸಿನವರೆಗೂ ೬ ಸ್ಥಳಗಳಲ್ಲಿ ೬ಪದ್ಮಗಳ ಪೈಕಿ, ಶಿರಸ್ಸಿಗೆ ಮೇಲೆ ಇರುವ ಪದ್ಮವನ್ನು ಬಿಟ್ಟು, ೫ ಪದ್ಮಗಳಲ್ಲಿ ಭಗವಂತನ ಅನಿರುದ್ಧಾದಿ ರೂಪಗಳ ಚಿಂತನಾಪ್ರಕಾರ ಹೇಳಿ, ಈ ಪದ್ಯದಿಂದ ಆ ಕಮಲಗಳ ಮಧ್ಯಗತವಾದ ತ್ರಿಕೋಣಾದಿ ಮಂಡಲಗಳನ್ನು, ತದ್ಗತಭಗವದ್ರೂಪಗಳ ಚಿಂತನೆಗಳನ್ನು ಹೇಳುತ್ತಾ, ಪಾಪಪುರುಷ ವಿಸರ್ಜನಾಲಕ್ಷಣವನ್ನೂ ಸಹ ತಿಳಿಸುತ್ತಾರೆ,

ಮೂಲಾಧಾರ ಮೊದಲು ಮೇಲೆ ಹೇಳಿದ ಆರು ಪದ್ಮಗಳಲ್ಲೂ ಮಧ್ಯಪ್ರದೇಶದಲ್ಲಿ ೬ ಮಂಡಲಗಳು ಇರುವುವು. ತ್ರಿಕೋಣಮಂಡಲ, ಷಟ್ಕೋಣಮಂಡಲ, ದ್ವಾದಶಕೋಣ, ವರ್ತುಳಮಂಡಲ, ತ್ರಿಕೋಣವರ್ತುಳ ವೆಂಬ ೬ ಮಂಡಲಗಳು ಇರುವುವು. ಇದಕ್ಕೆ ಆಧಾರ,

**ತ್ರಿಕೋಣವನ್ಹಾ ಚಷಡಸ್ರವಾಯೋ ದ್ವಿಸ್ತಾವದಸ್ರ ರವಿವೃತ್ತಶಶಿತ್ರಿ ವನ್ಹಾ॥ ವೃತ್ತೇ ವಥಾವಪಿ ವಿಚಿಂತ್ಯಮಿದಂ ದಶಾರ್ಧರೂಪಂ ಸಿತಂ ತದಖಿಳಂ ಹೃದಯಾತ್ಪರಸ್ಥಮ್॥೧೬೫॥**

—ಎಂಬ ಈ ಪ್ರಮಾಣ ಬಲದಿಂದ ಮೇಲೆ ಹೇಳಿದಂತೆ ೬ ಮಂಡಲ ಗಳಿರುವುವು. ತ್ರಿಕೋಣಮಂಡಲವು ಅಗ್ನಿಮಂಡಲವೆಂತಲೂ, ವರ್ತುಲ ಮಂಡಲವು ಚಂದ್ರಮಂಡಲವೆಂತಲೂ, ಷಟ್ಕೋಣ ವಾಯುಮಂಡಲ ವೆಂತಲೂ, ದ್ವಾದಶಕೋಣ ಸೂರ್ಯಮಂಡಲವೆಂತಲೂ ಹೀಗೆ ೪ ಮಂಡಲ ಗಳು ಇರುವುವು. ಇವುಗಳಲ್ಲಿ ಅನಿರುದ್ಧಾದಿ ೫ ರೂಪಗಳನ್ನು ಚಿಂತಿಸ ಬೇಕೆಂದು ಹೇಳಿರುವರು. ಅದರ ಪೈಕಿ ಈ ಪದ್ಯದಲ್ಲಿ ನಾಭೀಗತಷಟ್ಕೋಣ ಮಂಡಲದಲ್ಲಿ ಚಿಂತಿಸಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ.

ನಾಭಿಯಲ್ಲಿ ಷಟ್ಕೋಣಮಂಡಲವಿರುವುದು. ನೀಲವರ್ಣರಾಗಿ ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಯನ್ನು ಹೊಂದುವ ವಾಯುದೇವರು ಇಲ್ಲಿರುವರು. ಅವರಂತರ್ಯಾಮಿಯಾಗಿ ದೇವತಾಗಣಸೇವಿತನಾದ ಶ್ರೀಪ್ರದ್ಯು ಮ್ನನು ನೀಲಮಣಿಯ ಮಧ್ಯಗತವಾದ ಮುತ್ತಿನಂತೆ ಕಾಂತಿಯುಕ್ತನಾಗಿ, ಕೌಸ್ತುಭ ಮೊದಲಾದ ಆಭರಣಗಳಿಂದಲೂ,ಚಕ್ರಶಂಖಾದ್ಯಾಯುಧಗಳಿಂದಲೂ ಶೋಭಿಸುತ್ತ, ಮಹಾಭಯಂಕರನಾದ ಪಾಪಪುರುಷನನ್ನು ನಿತ್ಯದಲ್ಲೂ ಶೋಷಿಸುತ್ತಿರುವನು.

ಪಾಪಪುರುಷನ ಲಕ್ಷಣವನ್ನು ಪಾಪಪುರುಷವಿಸರ್ಜನ ಮಂತ್ರದಲ್ಲಿ **ಬಹ್ಮಹತ್ಯಾ ಶಿರಸ್ಕಂಟ** ಇತ್ಯಾದಿ ವಾಕ್ಯಗಳಿಂದ ಹೇಳಿರುವರು. ಪಾಪ ಪುರುಷನಿಗೆ ಬ್ರಹ್ಮಹತ್ಯೆಯೇ ಶಿರಸ್ಸು, ಸ್ವರ್ಣಸ್ತೇಯವೆಂಬ ಮಹಾಪಾಪವು ಎರಡು ಭುಜಗಳು. ಸುರಾಪಾನವೆಂಬುದೇ ಹೃದಯ. ಗುರುಸ್ತ್ರೀಗಮನ ವೆಂಬ ಮಹಾಪಾಪವೇ ಕಟಿಪ್ರದೇಶವು. ತತ್ಸಂಯೋಗ ಎಂದರೆ ಮೇಲಿನ ಪಾಪಿಗಳ ಸಹವಾಸಗಳೆಂದರ್ಥ. ಇಂತಹ ಮಹಾಪಾಪವು ಎರಡು ಪಾದಗಳು ಮಿಗಿಲಾದ ಪಾತಕಗಳು ಅಂಗಗಳು,ಮತ್ತು ಪ್ರತ್ಯಂಗಗಳು. ಉಪಪಾತಕಗಳೇ ರೋಮಗಳು. ಕೈಯ್ಯಲ್ಲಿ ಕತ್ತಿ, ಢಾಲು ಇವುಗಳನ್ನು ಧರಿಸಿಕೊಂಡು ಕಪ್ಪುಬಣ್ಣವಾಗಿರುವನೆಂದು ವಾಮಕುಕ್ಷಿಯಲ್ಲಿ ಚಿಂತಿಸಿ, ತದನಂತರ ಆ ಪಾಪ ಪುರುಷನನ್ನು ನಾಭಿ ಪ್ರದೇಶಕ್ಕೆ ತಂದದ್ದಾಗಿ ಭಾವಿಸಿಕೊಂಡು, ನಾಭಿಯಲ್ಲಿ–

**ಷಟ್ಕೋಣ ಮಂಡಲಸ್ಥೋ ನೀಲವರ್ಣೋ ವಾಯುಬೀಜವಾಚ್ಯಃ ಪರಮಾತ್ಮಾ ವಾಯ್ವಂತರ್ಯಾಮಿ ಶ್ರೀಪ್ರದ್ಯುಮ್ನೋ ಭಗವಾನ್ ಮಚ್ಛರೀರಸ್ಥಂ ಪಾಪಪುರುಷಂ ವಾಯುನಾ ಶೋಷಯತು**

–ಎಂದು ಉಚ್ಚರಿಸು, ವಾಯುಬೀಜವಾದ **ಯಂ** ಎಂಬ ಬೀಜಾಕ್ಷರವನ್ನು ೬ಸಲ ಓಂಕಾರ ಪೂರ್ವಕವಾಗಿ ಜಪಿಸಿ, ಪಾಪಪುರುಷನು ಶುಷ್ಕೀಭೂತನಾದು ನೆಂದು ಭಾವಿಸಬೇಕು ಎಂದು ಹೇಳಿರುವರು. ಈ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುವರು.

ಮುಕ್ತಾಭ–ಪ್ರದ್ಯುಮನು ಮುತ್ತಿನಂತೆ ಪ್ರಕಾಶಮಾನವಾಗಿ ಎಂದರು. ಮೇಲಿನ ಮಂತ್ರದಲ್ಲಿ **ನೀಲವರ್ಣೋ ವಾಯು ಬೀಜವಾಚ್ಯಃ** ಎಂಬ

ಪದದಿಂದ ಪ್ರದ್ಯುಮ್ನನು ನೀಲವರ್ಣನಾಗಿರುವನೆಂದು ಹೇಳಿರುವರು. ಇದರ ತಾತ್ಪರ್ಯವೇನೆಂದರೆ- ಷಟ್ಕೋಣಮಂಡಲದಲ್ಲಿ ನೀಲವರ್ಣದವರಾದ ವಾಯುದೇವರು ಇರುವರು, ಅವರಂತರ್ಯಾಮಿಯಾದುದರಿಂದ ಜ್ಞಾನಿಗಳಿಗೆ ಸಾಮಾನ್ಯವಾದ ಪ್ರಕಾಶವುಳ್ಳವನಾಗಿ, ಕತ್ತಲೆಯೊಳಗೆ ಇರುವ ಮುತ್ತಿನಂತೆ ಹೆಚ್ಚು ಬಿಳುಪು ಕಾಣದೇ, ನೀಲಸಂಬಂಧವಾದ ಮುತ್ತಿನಂತೆ ಕಾಣುವನು. ಸಾಧಾರಣ ಜನರು, ನೀಲವರ್ಣವಾಯ್ವಂತರ್ಯಾಮಿಯಾದುದರಿಂದ ಅಂತರ್ಯಾಮಿ ರೂಪವನ್ನು ಕಾಣದೆ ನೀಲವರ್ಣವನ್ನೇ ಕಾಣುತ್ತಿರುವರು, ಆದುದರಿಂದ ನೀಲವರ್ಣನೆಂದು ಮಾತ್ರ ಹೇಳಿದರೆಂದು ತಿಳಿಯಬೇಕು. ॥೪॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ನಾಭೀತಿ॥ ;ತದುಕ್ತಂ ತಂತ್ರಸಾರೇ-

**ತ್ರಿಕೋಣ ವಸ್ತ್ವಂ ಚ ಸಡಸ್ರವಾಯುದ್ವಿಸ್ತಾವ ದಸ್ರ ರವಿವೃತ್ತ ಶಶಿತ್ರಿವಹ್ನ್ಯಾಃ॥**

**ವೃತ್ತೇ ವಿಧಾವಪಿ ವಿಚಿಂತ್ಯಮಿದಂ ದಶಾರ್ಧರೂಪಂ ಸಿತಂ ತದಖಿಲಂ ಹೃದಯಾತ್ಪರಸ್ಥಮಿತಿ॥**

ಈ ವಿಷಯ ಪಾಪಪುರುಷವಿಸರ್ಜನಮಂತ್ರದಲ್ಲೂ ಹೇಳುತ್ತದೆ. ॥೪॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ನಾಭಿಯಲಿ- ಇತಿ॥ ವಾಯ್ವಗ್ನಿವಾರುಣ್ಯೈಃ ಬೀಜೈಃ ಧ್ಯಾತ್ವಾ ತನ್ಮಂಡಲೇ ಹರೀಂ॥ ಪಾಪ ಇತಿ॥ ಶೋಷಣಂ ದಹನಂ ಪ್ಲುತಿಮ್॥ ಇತಿಸಾರಸಂಗ್ರಹೇ॥ ವಾಯುಪುರಾಣೇಚ- ಷಟ್‌ಕೋಣ ಚಕ್ರಗಂ ನೀಲಂ ಭಗವಂತಂ ಅನುಸ್ಮರನ್॥ ದೇಹಸ್ಥಂ ಪಾಪಪುರುಷಂ ವಾಯುನಾ ಶೋಷಯೇತ್ತತಃ॥ ॥೪॥

**ಕನ್ನಡಾನುವಾದ**

ನಾಭಿಯಲಿ ಎಂಬ ಪದ್ಯದಿಂದ ನಾಭಿಗತಷಟ್ಕೋಣಮಂಡಲ ಹಾಗೂ ಅಲ್ಲಿ ಪಾಪಪುರುಷಶೋಷಕನಾದ ವಾಯ್ವಂತರ್ಗತ ಭಗವದ್ರೂಪ ವಿಚಾರ ತಿಳಿಸುತ್ತಾರೆ. ವಾಯು, ಅಗ್ನಿ, ವರುಣಬೀಜಾಕ್ಷರಗಳಿಂದ ಕ್ರಮವಾಗಿ ಶೋಷಣ-ದಹನಗಳನ್ನು ಮಾಡಿ ತದನಂತರ ವರುಣಬೀಜದಿಂದ (ವಂ) ಅಮೃತವೃಷ್ಟಿಯನ್ನು ಸಿಂಪಡಿಸಬೇಕು. ಇದು ತಂತ್ರಸಾರೋಕ್ತವಾಕ್ಯ.

ನಾಭಿಯಲ್ಲಿ ಷಟ್ಕೋಣಮಂಡಲವಿದೆ. ಅಲ್ಲಿ ನೀಲವರ್ಣದಿಂದ ಭಗವಂತನನ್ನು ಚಿಂತಿಸಿ, ವಾಯುವಿನ ದ್ವಾರಾ ಪಾಪಪುರುಷನನ್ನು ಶೋಷಿಸತಕ್ಕದ್ದು ಎಂದು ವಾಯುಪುರಾಣಗತ ಪ್ರಮಾಣದಲ್ಲಿ ವಚನವಿದೆ. ॥೪॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ನಾಭಿಸ್ಥಿತ ಪಾಪಪುರುಷ ಶೋಷಕರೂಪ ತಿಳಿಸುತ್ತಾರೆ, ನಾಭಿಯಲಿ ಎಂದು. ಹೊಕ್ಕಳಲ್ಲಿ ಭವಿಷ್ಯತ್‌ಬ್ರಹ್ಮನೆಂಬ ವಾಯುದೇವರ ಸನ್ನಿಧಾನ ಇರುವ ಷಟ್ಕೋಣಮಂಡಲ ಕಮಲದಲ್ಲಿ ವಾಯ್ವಂತರ್ಯಾಮಿ ಮುಕ್ತಾಮಣಿಕಾಂತಿಯುಳ್ಳ ಶ್ರೀಪ್ರದ್ಯುಮ್ನರೂಪನು ವಿಬುಧರೆಂಬ ದೇವಗಣಪೂಜ್ಯನಾಗಿದ್ದು, ಕೌಸ್ತುಭ ಮೊದಲಾದ ಆಭರಣದಿಂದಲೂ, ಚಕ್ರಾದ್ಯಾಯುಧದಿಂದಲೂ ಸಹ ಶೋಭಿಸುತ್ತ, ಮಹಾಭಯಂಕರ ಪಾಪಪುರಷನ್ನ ನಿತ್ಯದಲ್ಲೂ ಶೋಷಿಸುವನೆಂದರ್ಥ. ॥೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ನಾಭಿಯಲ್ಲಿರುವ ಷಟ್ಕೋಣಮಂಡಲ. ಅಲ್ಲಿ ಪಾಪಪುರುಷ ವಿಸರ್ಜನಾ ಕ್ರಮವನ್ನು ತಿಳಿಸುತ್ತಾರೆ, ಪ್ರಸಕ್ತ ೪ನೆಯ ಪದ್ಯದಿಂದ.

೧. ನಾಭೀಪ್ರದೇಶದಲ್ಲಿ, ಅಂದರೆ ಹೊಕ್ಕಳಿನಲ್ಲಿ ಆರು ಕೋಣಗಳಿರುವ ಮಂಡಲವಿದೆ. ಇದಕ್ಕೆ ಷಟ್ಕೋಣಮಂಡಲವೆಂದು ಹೆಸರು. ಈ

ಮಂಡಲದಲ್ಲಿ ಭಾವೀಬ್ರಹ್ಮಪದವಿಗೆ ಬರುವ ಶ್ರೀಭಾರತೀರಮಣರಾದ ಮುಖ್ಯಪ್ರಾಣದೇವರಿರುವರು. ಆ ವಾಯುದೇವರ ಬಣ್ಣವು ನೀಲಿ.

೨. ನೀಲವರ್ಣಯುಕ್ತರಾದ ನಾಭೀಗತ ಷಟ್ಕೋಣಮಂಡಲದಲ್ಲಿರುವ ಶ್ರೀವಾಯುದೇವರ ಅಂತರ್ಗತನಾಗಿ **ಪ್ರದ್ಯುಮ್ನ**ನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಸಮಸ್ತ ದೇವತಾವರ್ಗದಿಂದ ಸಂಸೇವ್ಯಮಾನನಾಗಿ ವಾಯ್ವಂತರ್ಗತ ಪ್ರದ್ಯುಮ್ನನು ಕೌಸ್ತುಭಾದಿ ದಿವ್ಯರತ್ನಾಭರಣಗಳಿಂದ ಪರಿಶೋಭಿಸುತ್ತಿರುವನು. ಅನೇಕ ಆಭರಣಗಳಿಂದ ಅಲಂಕೃತನಾದ ಆ ಪರಮಮಂಗಳಮೂರ್ತಿಯು ಶಂಖ ಚಕ್ರಾದಿ ಅನೇಕ ಆಯುಧಗಳನ್ನ ಧರಿಸಿ ರುವನು.

೩. ಚೇತನರಿಗೆ ಪಾಪಕಾರ್ಯಪ್ರೇರಕನಾದ **ಪಾಪಪುರುಷ**ನೆಂಬ ಕಲಿಯ ಶೋಷಣಾಕಾರ್ಯ ಈ ಷಟ್ಕೋಣಮಂಡಲದಲ್ಲಿ ವಾಯುಬೀಜಾಕ್ಷರದಿಂದ ನಡೆಯುತ್ತದೆ.

ಇದಕ್ಕೆ ಪ್ರಮಾಣ–

**ಷಟ್ಕೋಣಮಂಡಲಸ್ಥೋ ನೀಲವರ್ಣೋ ವಾಯುಬೀಜವಾಚ್ಯಃ ಪರಮಾತ್ಮಾ ವಾಯ್ವಂತರ್ಯಾಮಿ ಶ್ರೀಪ್ರದ್ಯುಮ್ನೋ ಭಗವಾನ್ ಮಚ್ಛರೀರಸ್ಥಂ ಪಾಪಪುರುಷಂ ವಾಯುನಾ ಶೋಷಯತು ||**

ನನ್ನ ನಾಭೀಸ್ಥಾನಗತ ಷಟ್ಕೋಣಮಂಡಲದಲ್ಲಿರುವ ನೀಲವರ್ಣ ಯುಕ್ತರಾದ ಶ್ರೀವಾಯುದೇವರ ಅಂತರ್ಯಾಮಿ ಶ್ರೀಪ್ರದ್ಯುಮ್ನನಾಮಕನಾದ ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಪರಮಾತ್ಮನು **ಯಂ** ಎಂಬ ವಾಯು ಬೀಜಾಕ್ಷರವಾಚ್ಯನಾಗಿದ್ದು, ಶ್ರೀವಾಯುದೇವರ ದ್ವಾರಾ, ಭಯಂಕರನಾದ ಪಾಪಪುರುಷನನ್ನು ಶೋಷಿಸಲಿ ಎಂದು ವಾಯುಬೀಜವಾದ ಯಂ ಎಂಬ ಪೂರ್ವೋಕ್ತ ಬೀಜಾಕ್ಷರವನ್ನು ಆರುಸಲ ಓಂಕಾರಪೂರ್ವಕ ಜಪಿಸಬೇಕು.

ಇಂತಹ ಪಾಪಪುರುಷನು ಕಲಿಯು. ಅವನು ಪರಮಭಯಂಕರ ಸ್ವರೂಪನು. ಅವನ ದುರ್ಲಕ್ಷಣಗಳೇನೆಂದರೆ–

೧. ಬ್ರಹ್ಮಹತ್ಯವೇ **ಶಿರ.**

೨. ಸ್ವರ್ಣಸ್ತೇಯವೇ **ಎರಡು ಭುಜಗಳು**

೩. ಸುರಾಪಾನವೇ **ಹೃದಯ.**

೪. ಗುರುಪತ್ನೀಗಮನವೇ **ಸೊಂಟದ ಭಾಗದ್ವಯಗಳು**

೫. ಇಂತಹ ಪಾಪಿಗಳ ಸಹವಾಸವೇ **ಪಾದದ್ವಯಗಳು**

೬. ಪೂರ್ವೋಕ್ತ ಪಾಪಸಮೂಹಗಳಿಗೆ ಅನುಸರಿಸಿದ ದುಷ್ಕರ್ಮಗಳೇ **ಅವಶಿಷ್ಟ ಅಂಗಾಂಗಗಳು.**

೭. ಖಡ್ಗ ಚರ್ಮವೇ **ಆಯುಧವಿಶೇಷ**

ಇಂತು ಭಯಂಕರಸ್ವರೂಪನಾದ ನೀಚತಮನಾದ ಕಲಿಯೇ ಆ ಪಾಪ ಪುರುಷನು.

೪. ಈ ಪದ್ಯದಲ್ಲಿ ಮುಕ್ತಾಭ ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ ದಾಸರಾಯರು. ಅಂದರೆ ಮುತ್ತಿನಂತೆ ಪ್ರಕಾಶಮಾನನಾಗಿ ಹೊಳೆಯುತ್ತಿರುವವನು ಎಂದರ್ಥ. ವಾಯುದೇವರು ನೀಲವರ್ಣಯುಕ್ತರಾದುದರಿಂದ, ನೀಲಮಣಿಗಳ ಮಧ್ಯ ಪ್ರಕಾಶಮಾನವಾದ ಹರಳಿದ್ದರೆ ಅದೂ ಸಹ ನೀಲಿಯ ಛಾಯೆಯಿಂದ ಹೇಗೆ ಕೂಡಿರುತ್ತದೆಯೋ, ಅಂತೆಯೇ ನೀಲವರ್ಣಯುಕ್ತವಾದ ಶ್ರೀವಾಯ್ವಂತರ್ಗತನಾದ ಶ್ರೀಪ್ರದ್ಯುಮ್ನನು ಮುಕ್ತಾಭನಾಗಿದ್ದರೂ ನೀಲವರ್ಣದ ಛಾಯೆಯಿಂದ ಕೂಡಿರುವನು.

ತಂತ್ರಸಾರದ ಪ್ರಮಾಣ ಇಂತಿದೆ–

ವಾಯ್ವಗ್ನಿ ವಾರುಣೈಃ ಬೀಜೈಃ ಧ್ಯಾತ್ವಾ ತನ್ಮಂಡಲೇ ಹರಿಮ್॥

ಅಂದರೆ, ವಾಯು, ಅಗ್ನಿ, ವರುಣ ಬೀಜಾಕ್ಷರಗಳಿಂದ ಕ್ರಮವಾಗಿ, ವಾಯುಬೀಜಾಕ್ಷರದಿಂದ ಶೋಷಣೆ, ಅಗ್ನಿಬೀಜಾಕ್ಷರದಿಂದ ದಹನ ಮಾಡಿ, ನಂತರ ವಾರುಣಬೀಜರಿಂದ (ವಂ) ಅಮೃತವೃಷ್ಟಿಯನ್ನು ಸಿಂಪಡಿಸಬೇಕು.

ಇದು ನಾಭೀಗತಷಟ್ಕೋಣಮಂಡಲದಿಂದ ವಾಯುವಿನ ದ್ವಾರಾ ಪಾಪ ಪುರುಷನ ವಿಸರ್ಜನಾಕಾರ್ಯ ಎಂದು ತಿಳಿಯಬೇಕು.

**ಅಂತೆಯೇ ವಾಯುಪುರಾಣದ ಪ್ರಮಾಣ**

**ಷಟ್ಕೋಣಚಕ್ರಗಂ ನೀಲಂ ಭಗವಂತಂ ಅನುಸ್ಮರನ್।**
**ದೇಹಸ್ಥಂ ಪಾಪಪುರುಷಂ ವಾಯುನಾ ಶೋಷಯತ್ತೇತಃ॥**

ಅಂದರೆ ನಾಭೀಗತ ಷಟ್ಕೋಣಮಂಡಲದಲ್ಲಿರುವ ಚಕ್ರಾದಿ ಆಯುಧ ವಿಶಿಷ್ಟನಾಗಿರುವ ನೀಲವರ್ಣಛಾಯೆಯಿಂದ ಇರುವ ಷಡ್ಗುಣೈಶ್ವರ್ಯಸಂಪನ್ನನಾದ ಪ್ರದ್ಯುಮ್ನನು ವಾಯುದ್ವಾರಾ ದೇಹಸ್ಥನಾಗಿರುವ ಪಾಪಪುರುಷನನ್ನು ಶೋಷಿಸುವನು ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು. ॥೪॥

## ಪದ್ಯ ೫

**ಮೂಲ**

**ದ್ವಾದಶಾರ್ಕರ ಮಂಡಲವು ಮ।**
**ಧ್ಯೋದರದೊಳು ಸುಷುಮ್ನದೊಳಗಿಹು।**
**ದೈದು ರೂಪಾತ್ಮಕನು ಅರವತ್ತಧಿಕ ಮುನ್ನೂರು॥**
**ಈ ದಿವಾರಾತ್ರಿಗಳ ಮಾನಿಗ।**
**ಳಾದ ದಿವಿಜರ ಸಂತಯಿಸುತ ನಿ।**
**ಷಾದರೂಪಕದೈತ್ಯರನು ಸಂಹರಿಪ ನಿತ್ಯದಲಿ॥** ॥೫॥

**ಅವತರಣಿಕೆ**

ಹಿಂದಿನ ಪದ್ಯದಿಂದ ಷಟ್ಕೋಣಮಂಡಲಸ್ಥಿತ ಪ್ರದ್ಯುಮ್ನರೂಪವನ್ನು ವಿವರಿಸಿ, ಪ್ರಸಕ್ತ ಪದ್ಯದಿಂದ ಮಧ್ಯೋದರಸ್ಥಾನಗತ ದ್ವಾದಶಮಂಡಲದ ವಿವರಗಳನ್ನು ತಿಳಿಸುತ್ತಾರೆ.

ನಾಭಿಯ ಮೇಲ್ಭಾಗಕ್ಕೂ ಮತ್ತು ಹೃದಯದ ಕೆಳಗೂ ಇರುವ ಪ್ರದೇಶಕ್ಕೆ ಮಧ್ಯೋದರ ಎಂದು ಹೆಸರು. ಈ ಸ್ಥಾನದಲ್ಲಿ ೧೨ ಮೂಲೆಗಳಿರುವ ಮಂಡಲವಿದೆ. ಈ ದ್ವಾದಶಮಂಡಲವು ದ್ವಾದಶಾದಿತ್ಯರ ಸ್ಥಾನವು. ಇದು ಸುಷುಮ್ನಾನಾಡಿಗೆ ಸಂಬಂಧಿಸಿದೆ. ಇದರಲ್ಲಿ ಅನಿರುದ್ಧಾದಿ ಪಂಚರೂಪಗಳಿಂದ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಒಂದು ಸಂವತ್ಸರಕ್ಕೆ ೩೬೦ ದಿವಸಗಳು. (ಅರವತ್ತಧಿಕ ಮುನ್ನೂರು). ಅಂದರೆ ೩೬೦ ಹಗಲು ಮತ್ತು ೩೬೦ ರಾತ್ರಿಗಳು. ಇಂತಹ ೩೬೦ ದಿವಾಮಾನಿದೇವತೆಗಳು ಮತ್ತು ೩೬೦ ರಾತ್ರಿ ಅಭಿಮಾನಿದೇವತೆಗಳೂ ಇರುವರು. ಇವರನ್ನು ಪ್ರತಿ ನಿತ್ಯವೂ ಹಿಂಸೆಪಡಿಸುವ ಕಿರಾತರೂಪಿಯಾದ ದೈತ್ಯರನ್ನು ಕ್ಷಯಗೊಳಿಸುತ್ತಾ, ಪೂರ್ವೋಕ್ತ ದ್ವಾದಶಮಂಡಲಸ್ಥಿತನಾಗಿ **ಸಂಕರ್ಷಣನಾಮಕ** ಪರಮಾತ್ಮನಿದ್ದಾನೆ. ॥೫॥

## ಪ್ರತಿಪದಾರ್ಥ

**ದ್ವಾದಶಾರ್ಕರ ಮಂಡಲವು**= ಹನ್ನೆರಡು ಮೂಲೆಗಳಿರುವ ಮಂಡಲದಲ್ಲಿ ದ್ವಾದಶಾದಿತ್ಯರಿದ್ದಾರೆ. **ಮಧ್ಯೋದರದೊಳು**= ನಾಭಿಗೂ ಮತ್ತು ಹೃದಯಕ್ಕೂ ಮಧ್ಯೆ ಇರುವ ಉದರವೆಂಬ ಸ್ಥಾನದಲ್ಲಿ, **ಸುಷುಮ್ನದೊಳಗೆ**= ಸುಷುಮ್ನಾನಾಡೀಗತವಾಗಿ, **ಇಹುದು**= ಇದೆ. **ಐದು ರೂಪಾತ್ಮಕನು**= ಅನಿರುದ್ಧಾದಿ ಪಂಚರೂಪಾತ್ಮಕನಾದ ಶ್ರೀಪರಮಾತ್ಮನು, **ಅರವತ್ತಧಿಕಮುನ್ನೂರು**= ಅರವತ್ತು ಹೆಚ್ಚಾದ ಮುನ್ನೂರು, ಅಂದರೆ, ೩೦೦+೬೦=೩೬೦ ಸಂಖ್ಯಾಕವಾದ, **ಈ ದಿವಾರಾತ್ರಿಗಳ**= ೩೬೦ ಹಗಲು ಮತ್ತು ೩೬೦ ರಾತ್ರಿಗಳಿಗೆ, **ಮಾನಿಗಳಾದ**= ಅಭಿಮಾನಿಗಳಾದ, **ದಿವಿಜರ**= ದೇವತೆಗಳನ್ನು ಅಂದರೆ, ೩೬೦ ದಿವಾಭಿಮಾನಿದೇವತೆಗಳು ಮತ್ತು ೩೬೦ ನಿಶಾಭಿಮಾನಿದೇವತೆಗಳು, **ಸಂತಯಿಸುತ**= ರಕ್ಷಿಸುತ್ತಾ, **ನಿಷಾದರೂಪಕ**= ಕಿರಾತಜಾತಿಯವರಂತೆ ಕಾಣುತ್ತಿರುವ, **ದೈತ್ಯರನು**= ದೈತ್ಯರನ್ನು, **ನಿತ್ಯದಲಿ**= ಪ್ರತಿದಿವಸದಲ್ಲಿಯೂ, ಸಂಹರಿಪ+ಸಂಹರಿಸುವನು. ॥೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ದೇಹಗತ ದೈತ್ಯರನ್ನ ಸಂಹಾರ ಮಾಡತಾನೆ ಎಂತ ಹೇಳತಾರೆ.

ಮಧ್ಯೋದರದೊಳು–ನಾಭಿಗೆ ಮ್ಯಾಲೆ,ಹೃದಯಕ್ಕೆ ಅಧೋಭಾಗ, ಈ ಪ್ರದೇಶಕ್ಕೆ ಮಧ್ಯೋದರ ಎಂತ ನಾವು. ಈ ಸ್ಥಾನದೊಳು, ಸುಷುಮ್ನಾ–ಪೂರ್ವೋಕ್ತ ಪ್ರಕಾರ ಪಂಚಭೇದದಿಂದ ಯುಕ್ತವಾದ ಸುಷುಮ್ನಾನಾಡೀ, ದೊಳಗೆ–ಈ ಐದು ಪ್ರಭೇದವುಳ್ಳ ನಾಡಿಗಳ ಒಳಗೆ. ದ್ವಾದಶಾರ್ಕರ ಮಂಡಲವು–ಹನ್ನೆರಡು ಸೂರ್ಯರು ಆವಾಸರಾಗಿ ಇರತಕ್ಕ ಹನ್ನೆರಡು ಮೂಲೆಗಳು ಉಳ್ಳ ಮಂಡಲವೂ, ಒಂದೊಂದು ನಾಡಿ ಒಳಗೆ ಒಂದೊಂದು ಮ್ಯಾರಿಗೆ ಐದು ಮಂಡಲಗಳು, ಇಹುದು–ಇರೋದಾಗಿ ಅದೆ. ಐದುರೂಪಾತ್ಮಕನು–ಅನಿರುದ್ಧಾದಿ ಐದುರೂಪದಿಂದ ಪ್ರಚುರನಾದ ಶ್ರೀಪರಮಾತ್ಮನು, ಐದರಲಿ ಐದು ರೂಪದಿಂದ ಇದ್ದಾನೆ. ಮತ್ತು, ಅರವತ್ತಧಿಕ ಮುನ್ನೂರು–ಮುನ್ನೂರಾ ಅರವತ್ತು ರೂಪದಿಂದ ಇದ್ದಾನೆ, ಎಂದರೆ ವಿವರ–

೭೨ ಅನಿರುದ್ಧ ರೂಪಗಳು
೭೨ ಪ್ರದ್ಯುಮ್ನರೂಪಗಳು
೭೨ ಸಂಕರ್ಷಣರೂಪಗಳು
೭೨ ವಾಸುದೇವರೂಪಗಳು
೭೨ ನಾರಾಯಣರೂಪಗಳು

ಒಂದೊಂದು ದ್ವಾದಶಾರ್ಕರ ಮಂಡಲ್ಲದಲ್ಲಿ ೭೨ರೂಪದ ಮ್ಯಾರಿಗೆ ಐದರಲಿ ೩೬೦ ರೂಪದಿಂದ ಇದ್ದಾನೆ. ಸೂರ್ಯಕಿರಣಗಳು ೧೦೦೦. ಒಂದೊಂದರಲ್ಲಿ ೨೦೦ ಕಿರಣಗಳ ಮ್ಯಾರಿಗೆ, ಐದರಲಿ ಒಂದು ಸಾವಿರ ಕಿರಣಗಳು ಇರೋದಾಗಿ ಅವೆ. (೬ನೇ ಸಂಧಿ ಶ್ಲೋಕ ಒಂದರ ವ್ಯಾಖ್ಯಾನ ನೋಡಿ). ವರುಷಕ್ಕೆ ಆಗತಕ್ಕ ದಿನಗಳು ಪೂರ್ವೋಕ್ತ ಪ್ರಕಾರ ಎಪ್ಪತ್ತೆರಡು

ಸಾಂಕೇತದಿಂದ ಒಂದೊಂದರಲ್ಲಿ ಅದೆ. ಈ ದಿವಾರಾತ್ರಿಗಳ ಈ ಪ್ರಕಾರ ಇರತಕ್ಕ ಹಗಲುರಾತ್ರಿಗಳು ಎಂದರೆ ೩೬೦ ಹಗಲುಗಳು, ೩೬೦ ರಾತ್ರಿಗಳು, ಅಂತು ೭೨೦. ಸೂರ್ಯಮಂಡಲದ ಮ್ಯಾಲೆ ಚಂದ್ರಮಂಡಲವಿದೆ. ಆದ್ದರಿಂದ ಸೂರ್ಯಮಂಡಲದಂತೆ ಚಂದ್ರಮಂಡಲಗಳು, ಐದರಲಿ ಒಂದೊಂದರಲ್ಲಿ ೭೨ ರಾತ್ರಿಗಳು ಮ್ಯಾರಿಗೆ ರಾತ್ರಿಗಳು ೩೬೦. ಇದರಲ್ಲಿ ಅನಿರುದ್ಧಾದಿ ರೂಪಗಳು ಐದು. ಪೂರ್ವೋಕ್ತ ಪ್ರಕಾರ ಒಂದೊಂದರಲ್ಲಿ ೭೨ರೂಪದ ಮ್ಯಾರಿಗೆ ೩೬೦ ರಾತ್ರಿರೂಪಗಳು ಅವೆ ಅಂತ ತಾತ್ಪರ್ಯ. ಈ ರಾತ್ರಿಹಗಲುಗಳಿಗೆ, ಮಾನಿಗಳಾದ ದಿವಿಜರ–ಅಭಿಮಾನಿಗಳಾದ ದೇವತೆಗಳು ಅಲ್ಲಲ್ಲಿ ಇರೋವರಾಗಿದ್ದಾರೆ. ಈ ದೇವತೆಗಳ,ನಿಷಾದರೂಪಕ–ಕಿರಾತರೂಪಿಯಾದ ಸಂಕರ್ಷಣನು, ಸಂತಯಿಸುತ–ರಕ್ಷಣೆ ಮಾಡುತ, ದೈತ್ಯರನ–ದೇವತೆಗಳೋಪಾದಿಯಲ್ಲಿ ಹಗಲು ರಾತ್ರಿಗಳಿಗೆ ಅಭಿಮಾನಿಗಳಾಗಿ ಇರತಕ್ಕ ದೈತ್ಯರನ್ನ ಸಂಹರಿಪ-ಸಂಹಾರ ಮಾಡತಾನೆ. ನಿತ್ಯದಲಿ–ಪ್ರತಿದಿನದಲ್ಲೂ ಎಂತ ತಾತ್ಪರ್ಯ (ಪ್ರತಿದಿನದಲ್ಲೂ ಎಂಬ ಶಬ್ದದಿಂದ ಸಂಹಾರಾನಂತರ ಮತ್ತೂ ಜೀವಿಸತಾರೆ ಎಂತಲೂ ಮತ್ತೂ ಸಂಹರಿಸುತಾನೆ ಎಂತಲೂ ಈ ಪ್ರಕಾರ ಮಾಡುತಾ ಇರುತಾನೆ ಎಂತ ತಾತ್ಪರ್ಯ). ೭೨,೦೦೦ ಇಷ್ಟು ಸಂಖ್ಯಾ ನೂರು ವರುಷಕ್ಕೆ ಹಗಲುರಾತ್ರಿಗಳು, ೩೬,೦೦೦ ಹಗಲುನಾಡಿಗಳು. ಸೂರ್ಯ ಅಭಿಮಾನಿ, ಇಷ್ಟು ಸಾಂಕೇತ ಅಭಿಮಾನಿದೇವತೆಗಳು, ಇಷ್ಟು ಸಾಂಕೇತ ದೈತ್ಯರು. ೩೬೦೦೦ ರಾತ್ರಿನಾಡಿಗಳು, ಚಂದ್ರ ಅಭಿಮಾನಿ. ಇಷ್ಟು ಸಂಖ್ಯಾ ದೇವತೆಗಳು, ಅಭಿಮಾನಿಗಳು, ಇಷ್ಟು ಸಂಖ್ಯಾ ದೈತ್ಯರು. ಈ ಪ್ರಕಾರ ಇರತಕ್ಕ ದೇವತೆಗಳಿಗೆ ದೈತ್ಯರ ಬಾಧಾ ಆಗದಂತೆ ಸಂಹರಿಸುತಾ ಇರತಾನೆ. ರಾತ್ರಿಗೆ ಸ್ತ್ರೀದೇವತೆಗಳು ಅಭಿಮಾನಿಗಳು, ಹಗಲಿಗೆ ಪುರುಷದೇವತೆಗಳು ಅಭಿಮಾನಿಗಳು ಎಂತ ತಾತ್ಪರ್ಯ. ॥೫॥

**ವಿಶೇಷಾರ್ಥ– 'ರಾತ್ರಿರಜ್ಞಾನಮುದ್ದಿಷ್ಟಂ ಸಮ್ಯಯಜ್ಞಾನಂ ದಿವಾಸ್ಮೃತಂ'–ಇತಿ ಭಾಗವತೇ, ವಿಜಯುಧ್ವಜೀಯೇ.** ॥೫॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಉದರ ಮಧ್ಯದಲ್ಲಿ ಸುಷುಮ್ನಾಡಿಗೆ ಸೇರಿ ದ್ವಾದಶಕೋಣವುಳ್ಳ ಸೂರ್ಯ ಮಂಡಲವಿರುವುದು. ಅದರಲ್ಲಿ ಪಂಚರೂಪಾತ್ಮಕನೆಂದರೆ, ಅನಿರುದ್ಧಾದಿ ೫ ರೂಪಾತ್ಮಕನಾದ ಶ್ರೀಪರಮಾತ್ಮನು ಸಂಕರ್ಷಣರೂಪದಿಂದ ಇದ್ದು, ೩೬೦ ಹಗಲು ಮತ್ತು ೩೬೦ ರಾತ್ರಿಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ಸಂತೋಷಪಡಿಸುತ್ತಾ, ನಿಷಾದ ಅಂದರೆ, ಕಿರಾತರೂಪಿಗಳಾದ, ಸೂರ್ಯನಿಗೆ ಶತ್ರುಭೂತರಾದ,ಮಂದೋಹ ಎಂಬ ಹೆಸರಿನ ರಾಕ್ಷಸರನ್ನು ನಿತ್ಯದಲ್ಲೂ ಸಂಹರಿಸುವನು. ಒಂದು ದಿವಸ ಸಂಹಾರವಾದ ಮೇಲೆ ಪುನಃ ಅವರನ್ನೇ ಸಂಹಾರ ಮಾಡುವುದೆಂತು ? ಏತಕ್ಕಾಗಿ ಅವರನ್ನು ಕೊಲ್ಲುವುದೆಂದರೆ–

**ಸಂಧ್ಯಾಭಾಷ್ಯದಲ್ಲಿ**

**ಸಂಧ್ಯಾ ಕಾಲೇಚ ಸಂಪ್ರಾಪ್ತೇ ಘೋರೇ ಪರಮದಾರುಣೇ।**
**ಮಂದೇಹಾ ರಾಕ್ಷಸಾ ಘೋರಾಃ ಸೂರ್ಯಮಿಚ್ಛಂತಿ ಖಾದಿತುಂ।**
**ಪ್ರಜಾಪತಿ ಕೃತಃ ಶಾಪಸ್ತೇಷಾಂ ಮೈರೇಯ ರಾಕ್ಷಸಾಂ।**
**ಅಕ್ಷಯತ್ವಂತ ಶರೀರಾಣಾಂ ಮರಣಂ ಚ ದಿನೇ ದಿನೇ।**
**ತತಃ ಸೂರ್ಯಸ್ಯತೈರ್ಯುದ್ಧಂ ಭವತ್ಯೇವ ಸುದಾರಣಂ॥**

ಪರಮದಾರುಣವಾದ ಘೋರವಾದ ಸಂಧ್ಯಾಕಾಲವು ಪ್ರಾಪ್ತವಾಗಲು, ಮಾಹೇಹ ಎಂಬ ಕೆಲವು ಘೋರವಾದ ರಾಕ್ಷಸರು ಸೂರ್ಯನನ್ನು ಭಕ್ಷಿಸಲು ಇಚ್ಛಿಸುವರು. ಆ ರಾಕ್ಷಸರಿಗೆ ಬ್ರಹ್ಮದೇವರು ಪ್ರತಿದಿವಸದಲ್ಲೂ ಮರಣ ಹೊಂದುವಂತೆಯೂ, ಅವರ ದೇಹಗಳಿಗೆ ಅಕ್ಷಯತ್ವವಿರುವ ಹಾಗೆಯೂ ಶಾಪವನ್ನು ಕೊಟ್ಟಿರುವರು. ಅದೆಂತೆಂದರೆ, ನಿತ್ಯದಲ್ಲೂ ಪ್ರಾತಃ ಸಂಧ್ಯಾ ಕಾಲಕ್ಕೆ ಆ ರಾಕ್ಷಸರು ಸೂರ್ಯನನ್ನು ಭಕ್ಷಿಸಲು ಬರುವರು. ಸೂರ್ಯನಿಗೂ ಆ ರಾಕ್ಷಸರಿಗೂ ಪ್ರತಿದಿವಸದಲ್ಲಿಯೂ ಯುದ್ಧ ನಡೆಯುವುದು. ಆ ಸಮಯದಲ್ಲಿ ಬ್ರಾಹ್ಮಣರು ಗಾಯಿತ್ರೀ, ಮಂತ್ರದಿಂದ ಅಭಿಮಂತ್ರಿತವಾದ ಉದಕದಿಂದ ಅರ್ಘ್ಯಕೊಟ್ಟರೆ. ಆ ಉದಕವು ವಜ್ರಪ್ರಾಯವಾಗಿ ಆ ರಾಕ್ಷಸ

ರನ್ನು ಕೊಲ್ಲುವುದು. ಅವರು ಮತ್ತೂ ರಾತ್ರಿಕಾಲಗಳಲ್ಲಿ ತಮ್ಮ ಅಕ್ಷಯ ಶರೀರದಲ್ಲಿಯೇ ಸೇರಿ, ಬದುಕಿ ಬಂದು, ಮಾರನೆಯ ದಿವಸ ಮತ್ತು ಸೂರ್ಯ ನನ್ನು ಭಕ್ಷಿಸಲು ಬರುವರು. ಮತ್ತೂ ಸಾಯುವರು. ಹೀಗೆ ಬ್ರಹ್ಮದೇವರ ಶಾಪವೇ ಇರುವುದರಿಂದ, **ಸಂಧ್ಯಾಭಾಷ್ಯದಲ್ಲಿ ವಿಷ್ಣುಪುರಾಣದ** ಆಧಾರದ ವಾಕ್ಯವಿದೆ.

ಬ್ರಾಹ್ಮಣರ ಅರ್ಘ್ಯಮಾತ್ರದಿಂದ ರಾಕ್ಷಸರು ನಾಶವಾಗುವುದಾದರೆ, ಇಲ್ಲಿ ದ್ವಾದಶಕೋಣಮಂಡಲದಲ್ಲಿರುವ ಸಂಕರ್ಷಣನು ರಾಕ್ಷಸರನ್ನು ಸಂಹರಿಸು ವನೆಂದು ಹೇಳಿರುವರು. ಅದಕ್ಕೂ ಇದಕ್ಕೂ ಸಂಬಂಧವೆಲ್ಲಿಯದು ಎಂದರೆ, ಬರಿಯ ಮಂತ್ರಕ್ಕಾಗಲೀ, ಅರ್ಘ್ಯೋದಕಕ್ಕಾಗಲೀ ರಾಕ್ಷಸರನ್ನು ಕೊಲ್ಲುವ ಯೋಗ್ಯತೆ ಇಲ್ಲವಾದ ಕಾರಣ, ನಮ್ಮ ದೇಹದ ಉದರಮಧ್ಯದಲ್ಲಿ ದ್ವಾದಶ ಕೋಣ ಸೂರ್ಯಮಂಡಲ ಮಧ್ಯಗತನಾದ ಸಂಕರ್ಷಣನು ನಾವು ಕೊಡುವ ಅರ್ಘ್ಯದಲ್ಲಿದ್ದು, ಆ ರಾಕ್ಷಸರನ್ನು ಸಂಹರಿಸುವನು. ಸೂರ್ಯಶತ್ರು ಮೃತ ನಾಗುವುದರಿಂದ ಹಗಲು–ರಾತ್ರಿಗಳಿಗೆ ಅಭಿಮಾನಿಗಳಾದ ದೇವತೆಗಳಿಗೆ ಆನಂದ ವಾಗುವುದು. ॥೫॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ದ್ವಾದಶಾರ್ಕೇತಿ

**ದ್ವಿಷಟ್ಕೋಣಾದಿತ್ಯಾಬಿಂಬಸ್ತತ್ರ ವೃಂದೇತು ಮಂಡಲೇ ।**
**ಸಷಷ್ಠಿ ತ್ರಿಶಾತಾನ್ಯೇವ ವಿಷ್ಣೋರೂಪಾಣಿ ವಿಚಿಂತಯೇತ್ ॥**

ಇತಿ ವಿಷ್ಣುಪುರಾಣೋಕ್ತೇಃ।

ನಿಷಾದೇತಿ–ಕಿರಾತಕರಾದ ದೈತ್ಯರನ್ನು ಸಂಹರಿಸುವ ರೂಪ ಎಂಬರ್ಥ. ॥೫॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ದ್ವಾದಶ ಇತಿ, ತತೋಹೃದಿಕರಂ ನ್ಯಸ್ಯ ವಹ್ನಿಬೀಜಮನುಸ್ಮರನ್

ತ್ರಿಕೋಣಚಕ್ರಗಂ ರಕ್ತಂ ಭಗವಂತಂ ಅನುಸ್ಮರನ್ ದೇಹಸ್ಥಂ ಪಾಪಂ ಪುರುಷಂ ವಹ್ನಿನಾ ನಿರ್ದಹೇತತ್ ಇತಿ ಚ॥ ॥೫॥

## ಕನ್ನಡಾನುವಾದ

ದ್ವಾದಶರವಿಮಂಡಲವೆಂಬ ದ್ವಾದಶದಳ ಕಮಲವು ಉದರಮಧ್ಯದಲ್ಲಿದೆ. ಅಲ್ಲಿ ಶ್ರೀಪರಮಾತ್ಮನು ಪಂಚರೂಪಗಳಿಂದ ಇದ್ದಾನೆ. ೩೬೦ ದಿನಗಳ ಹಗಲು, ರಾತ್ರಿಗಳ ಅಭಿಮಾನಿ ದೇವತೆಗಳನ್ನು ಸಂತೋಷಪಡಿಸುವನು. ಆ ದೇವತೆಗಳ ಶತ್ರುಗಳಾದ ಕಿರಾತರೂಪಿ (ನಿಷಾದ) ದೈತ್ಯರನ್ನು ಸಂಹರಿಸುವನು. ದ್ವಾದಶಮಂಡಲಗತ ಭಗವದ್ರೂಪಗಳನ್ನು ಚಿಂತಿಸುತ್ತಿರುವಾಗಲೇ ಹೃದಯಗತ ತ್ರಿಕೋಣಮಂಡಲದಲ್ಲಿರುವ ರಕ್ತವರ್ಣವಿಶಿಷ್ಟನಾದ ಅಗ್ನಿಬೀಜದಿಂದ ವಾಚ್ಯನಾದ ಅಗ್ನ್ಯಂತರ್ಗತ ಸಂಕರ್ಷಣರೂಪಿ ಭಗವಂತನನ್ನು ಧ್ಯಾನಿಸುತ್ತಾ 'ಅವನಿಂದ ಪಾಪಪುರುಷನು ಸುಟ್ಟುಹೋದನು, ಹೋಗಲಿ' ಎಂದು ಭಾವಿಸಬೇಕು. ಈ ವಿಷಯವು **ಶ್ರೀಮದಾಚಾರ್ಯರಿಂದ** ಉಕ್ತವಾಗಿದೆ. ॥೫॥

## ೫. ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಮಧ್ಯಉದರದಲ್ಲಿ ದ್ವಾದಶದಳಕಮಲಸ್ಥ ದ್ವಾದಶಾದಿತ್ಯಗತರೂಪ ಚಿಂತನಾ ಹೇಳುತ್ತಾರೆ, ದ್ವಾದಶ ಎಂದು. ಉದರಮಧ್ಯದಲ್ಲಿ, ದ್ವಾದಶಾದಿತ್ಯ ಸನ್ನಿಧಾನ ದ್ವಾದಶದಳಕಮಲವು ಸುಷುಮ್ನಾನಾಡಿಯಲ್ಲಿರುವುದು. ಅನಿರುದ್ಧಾದಿ ನಾರಾಯಣಾಂತ ಐದು ರೂಪವುಳ್ಳ ದೇವರು, ಸಂವತ್ಸರಕ್ಕೆ, ಮುನ್ನೂರರವತ್ತು ದಿವಾರಾತ್ರಿಗಳ ಅಭಿಮಾನಿದೇವತೆಗಳನ್ನು ಸಂತೋಷಪಡಿಸುತ್ತಾ, ನಿಷಾಧನಾಮ ರೂಪಕ ದೈತ್ಯರನ್ನು ನಿತ್ಯದಲ್ಲೂ ಸಂಹರಿಸುತ್ತಿರುವನು. ಹೊರಗಾಗುವ ಮಂದೇಹರ ಸಂಹಾರ ಒಳಗೂ ಚಿಂತಿಸೆಂದರ್ಥ. ॥೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಷಟ್ಕೋಣಮಂಡಲಗತ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನ ವ್ಯಾಪಾರವಿಶೇಷಗಳು, ಪಾಪಪುರುಷವಿಸರ್ಜನಾಕಾರ್ಯವನ್ನು ತಿಳಿಸಿ, ಪ್ರಸಕ್ತ ೫ನೆಯ ಪದ್ಯದಿಂದ ದ್ವಾದಶಮಂಡಲದ ವಿವರಗಳನ್ನು ತಿಳಿಸುತ್ತಾರೆ.

೧. ನಾಭಿಯ ಮೇಲ್ಭಾಗ ಮತ್ತು ಹೃದಯದ ಕೆಳಗೆ ಇರುವ ಮಧ್ಯಗತ ಪ್ರದೇಶಕ್ಕೆ ಮಧ್ಯೋದರ ಎಂದು ಹೆಸರು. ಈ ಸ್ಥಾನದಲ್ಲಿ ೧೨ ಮೂಲೆಗಳಿರು ಸೂರ್ಯಮಂಡಲವಿದೆ. (ದ್ವಾದಶಾರ್ಕಮಂಡಲವು)

೨. ಈ ದ್ವಾದಶಕೋಣಮಂಡಲವು ತುಂದಿಯಿಂದ ನೇರವಾಗಿ ಬ್ರಹ್ಮರಂಧ್ರದವರೆಗೆ ಹೋಗಿರುವ ಸುಷುಮ್ನಾನಾಡಿಗೆ ಹೊಂದಿಕೊಂಡು ಉದರ ಪ್ರದೇಶದಲ್ಲಿದೆ.

೩. ಈ ಮಂಡಲದಲ್ಲಿ ದ್ವಾದಶಾದಿತ್ಯರಿರುವರು. ದ್ವಾದಶಾದಿತ್ಯಾಂತರ್ಗತನಾಗಿ **ಸಂಕರ್ಷಣ**ನಾಮಕ ಶ್ರೀಪರಮಾತ್ಮನು ಈ ದ್ವಾದಶಕೋಣ ಮಂಡಲದಲ್ಲಿ ವಿದ್ಯಮಾನನಾಗಿದ್ದಾನೆ.

೪. ಒಂದು ಸಂವತ್ಸರ ಕಾಲಕ್ಕೆ ೩೬೦ ದಿನಗಳು. ಅಂದರೆ ೩೬೦ ಹಗಲು ಮತ್ತು ೩೬೦ ರಾತ್ರಿಗಳು. ಜೀವರ ಆಯುರ್ಮಾನವು ೧೦೦ವರ್ಷಗಳೆಂದು ಪರಿಗಣಿಸಿದರೆ,

| | | |
|---|---|---|
| 1. | ಹಗಲುಗಳ ಸಂಖ್ಯೆ | ೩೬೦ × ೧೦೦—೩೬.೦೦೦ |
| 2. | ರಾತ್ರಿಗಳ ಸಂಖ್ಯೆ | ೩೬೦ × ೧೦೦—೩೬,೦೦೦ |
| | ಮೊತ್ತ | ೭೨,೦೦೦ |

ಇದಕ್ಕನುಗುಣವಾಗಿ ನಮ್ಮ ದೇಹಾದ್ಯಂತ ೭೨,೦೦೦ ನಾಡಿಗಳು ವ್ಯಾಪಿಸಿ, ಹಬ್ಬಿ ಹರಡಿಕೊಂಡಿವೆ. ಈ ನಾಡೀವ್ಯೂಹಗಳಿಗೆ ಪ್ರಧಾನವಾದದ್ದು ಸುಷುಮ್ನಾನಾಡಿಯು.

೫. ಒಂದು ಸಂವತ್ಸರಕ್ಕೆ ೩೬೦ ದಿವಾಭಿಮಾನಿದೇವತೆಗಳೂ (ಹಗಲಿಗೆ) ಮತ್ತು ೩೬೦ ನಿಶಾಭಿಮಾನಿದೇವತೆಗಳೂ (ರಾತ್ರಿಗೆ) ವಿದ್ಯಮಾನರಾಗಿದ್ದಾರೆ. ಇದಕ್ಕನುಗುಣವಾಗಿ, ೩೬,೦೦೦ ದಿವಾನಾಡಿಗಳಿಗೆ **ಸೂರ್ಯನು** ಅಭಿಮಾನಿ ಮತ್ತು ೩೬,೦೦೦ ನಿಶಾನಾಡಿಗಳಿಗೆ **ಚಂದ್ರನು** ಅಭಿಮಾನಿ.

೬. ಇಂತಹ ೩೬೦ ದಿವಾಭಿಮಾನಿದೇವತೆಗಳಿಗೂ ಮತ್ತು ೩೬೦ ನಿಶಾಭಿಮಾನಿದೇವತೆಗಳಿಗೊ ಪ್ರತಿನಿತ್ಯದಲ್ಲಿಯೂ ನಿಷಾದರೂಪರಾದ(ಕಿರಾತ) ರಾಕ್ಷಸರು ಹಿಂಸೆಕೊಡುತ್ತಾರೆ. ಇಂತಹ ಹಿಂಸಪ್ರದರಾದ ದೈತ್ಯರನ್ನು ದ್ವಾದಶಕೋಣಮಂಡಲಸ್ಥಿತ, ದ್ವಾದಶಾದಿತ್ಯಾಂತರ್ಗತ **ಶ್ರೀಸಂಕರ್ಷಣನು** ಸಂಹರಿಸುತ್ತಾ, ಆ ದೇವತೆಗಳಿಗೆ ಸಮಾಧಾನಪಡಿಸುತ್ತಾ, ರಕ್ಷಕನಾಗಿರುವನು. ಅಂತಹ ಸಂಕರ್ಷಣನಾಮಕ ಶ್ರೀಪರಮಾತ್ಮನು ರಕ್ತವರ್ಣವಿಶಿಷ್ಟನಾಗಿ, ಅಗ್ನಿಬೀಜವಾಚ್ಯನಾಗಿದ್ದಾನೆ.

## ವಿಶೇಷ ವಿಚಾರ

1. ಬ್ರಾಹ್ಮಣರು ಸೂರ್ಯನಿಗೆ ಕೊಡುವ ಅರ್ಘ್ಯದ ಉದಕದಲ್ಲಿ ಸಂಕರ್ಷಣನು ಅಗ್ನಿವಾಚ್ಯನಾಗಿದ್ದು, ದಿವಾ ಮತ್ತು ನಿಶಾಭಿಮಾನಿದೇವತೆಗಳಿಗೆ ಹಿಂಸೆಕೊಡುವ ಕಿರಾತರೂಪೀ ದೈತ್ಯರನ್ನು ಪ್ರತಿದಿವಸದಲ್ಲಿಯೂ ಸಂಹರಿಸುವನು. ಬ್ರಹ್ಮದೇವರ ವರದಿಂದ ಆ ಅಸುರರು ಪುನಃ ಮಾರನೆಯದಿನ ಜಾಗ್ರತರಾಗುವರು. ಇದರಿಂದಲೇ ಸೂರ್ಯನಿಗೆ ಗಾಯತ್ರೀಮಂತ್ರದಿಂದ ಅಭಿಮಂತ್ರಿತವಾದ ಅರ್ಘ್ಯವನ್ನು ಕೊಡಬೇಕು.

2. ಸಂಕರ್ಷಣನು ಲಯಕಾರಕನಾದ್ದರಿಂದ, ಪ್ರತಿದಿನದ ಕಾಲಮಾನದಂತೆ, ಪ್ರತಿಸಂವತ್ಸರದ ಪ್ರಕಾರ, ಜೀವರ ಆಯುರ್ಮಾನವನ್ನು ಕ್ಷಯಿಸುತ್ತಾ ಜನನದಿಂದ ಮರಣಪರ್ಯಂತ ಹಗಲು–ರಾತ್ರಿಗಳ ವ್ಯಾಪಾರಗಳನ್ನು ನಿರ್ವಹಿಸುತ್ತಿರುವರನು. ॥೫॥

## ಪದ್ಯ ೬

**ಮೂಲ**

ಹೃದಯದೊಳಗಿಪ್ಪಷ್ಟದಳಕಮ।
ಲದರೊಳಗೆ ಪ್ರಾದೇಶನಾಮಕ।
ನುದಿತಭಾಸ್ಕರನಂತೆ ತೋರ್ಪನು ಬಿಂಬನೆಂದೆನಿಸಿ॥
ಪದುಮ ಚಕ್ರ ಸುಶಂಖ ಸುಗದಾಂ।
ಗದ ಕಟಕ ಮುಕುಟಾಂಗುಳೀಯುಕ।
ಪದಕ ಕೌಸ್ತುಭಹಾರಗ್ರೈವಾದಿ ಭೂಷಿತನು॥ ॥೬॥

**ಅವತರಣಿಕೆ**

ಹಿಂದಿನ ಎರಡು ಪದ್ಯಗಳಿಂದ ಷಟ್ಕೋಣಮಂಡಲಗತ ಹಾಗೂ ದ್ವಾದಶ ಕೋಣಮಂಡಲಗತ ಭಗವದ್ರೂಪಗಳ ವಿವರಗಳನ್ನು ತಿಳಿಸಿ, ಪ್ರಸಕ್ತಸಂಧಿಗತ ೬ನೆಯ ಈ ಪದ್ಯದಲ್ಲಿ ಹೃದಯಕಮಲಾಧಿಷ್ಠಿತನಾದ ಪ್ರಾದೇಶನಾಮಕ ಶ್ರೀಪರಮಾತ್ಮನ ವಿವರಗಳನ್ನು ತಿಳಿಸುತ್ತಾರೆ.

ಹೃದಯಸ್ಥಾನದಲ್ಲಿ ಅಷ್ಟದಳಕಮಲವಿದೆ. ಅದರಲ್ಲಿ ಪ್ರಾದೇಶಪರಿಮಿತಿಯುಳ್ಳ, **ಪ್ರಾದೇಶ** ಎಂಬ ಹೆಸರಿನ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಆಗತಾನೇ ಉದಯಿಸುತ್ತಿರುವ ಬಾಲಸೂರ್ಯನಂತೆ ಕಾಂತಿಯುಕ್ತನಾಗಿದ್ದಾನೆ. ಆ ಪ್ರಾದೇಶನಾಮಕ ಪರಮಾತ್ಮನೇ ಬಿಂಬರೂಪಿಯು. ಪದ್ಮ, ಚಕ್ರ, ಶಂಖ, ಗದಾ ಈ ಆಯುಧಗಳಿಂದ ಯುಕ್ತನಾಗಿ, ಕಡಗಗಳು, ಭುಜಕೀರ್ತಿ, ದಿವ್ಯಕಿರೀಟ, ಉಂಗುರಗಳು, ಕೌಸ್ತುಭವೆಂಬ ಪದಕ ಇತ್ಯಾದಿ ನಾನಾ ರತ್ನಖಚಿತವಾದ ಆಭರಣಗಳಿಂದ ಪರಿಶೋಭಿತನಾಗಿ, ಹೃದಯಕಮಲಸ್ಥಿತನಾಗಿದ್ದು, ಬಿಂಬಕ್ರಿಯಾದ್ವಾರಾ ವ್ಯಾಪಾರಗಳನ್ನು ನಡೆಯಿಸುತ್ತಿರುವನು.
॥೬॥

**ಪ್ರತಿಪದಾರ್ಥ**

**ಹೃದಯದೊಳಗೆ**= ಹೃದಯಪ್ರದೇಶದಲ್ಲಿ, **ಅಷ್ಟದಳಕಮಲ**= ಎಂಟು ದಳಗಳುಳ್ಳ ಕಮಲವು, **ಇಹುದು**= ಇರುವುದು. **ಅದರೊಳಗೆ** = ಆ ಅಷ್ಟದಳಕಮಲದಲ್ಲಿ, **ಪ್ರಾದೇಶನಾಮಕನು**= ಪ್ರಾದೇಶ ಎಂಬ ಹೆಸರುಳ್ಳ ಶ್ರೀಪರಮಾತ್ಮನು, **ಉದಿತಭಾಸ್ಕರನಂತೆ**= ಆಗತಾನೇ ಉದಯಿಸುತ್ತಿರುವ ಸೂರ್ಯನಂತೆ ಪ್ರಕಾಶಮಾನನಾಗಿ, **ಬಿಂಬನೆಂದೆನಿಸಿ** = ಬಿಂಬ ಎಂದು ಕರೆಯಿಸೋವವನಾಗಿ, **ತೋರ್ಪನು**= ಗೋಚರಿಸುವನು (ಅಪರೋಕ್ಷಕ್ಕೆ ವಿಷಯನಾಗುತ್ತಾನೆ). **ಪದುಮ ಚಕ್ರ ಸುಶಂಖ ಸುಗದಾ**= ಪದ್ಮ, ಸುದರ್ಶನವೆಂಬ ಚಕ್ರಾಯುಧ, ಸಮೀಚೀನವಾದ ಶಂಖ ಮತ್ತು ಸಮೀಚೀನವಾದ ಗದಾಯುಧಗಳನ್ನು ತನ್ನ ಚತುರಹಸ್ತಗಳಲ್ಲಿ ಧರಿಸಿದವನಾಗಿ, **ಕಟಕ**= ಕಡಗ (ಹಸ್ತಾಭರಣ), **ಅಂಗದ**= ಭುಜಕೀರ್ತಿ, **ಮುಕುಟ**= ದಿವ್ಯಕಿರೀಟ, **ಅಂಗುಳೀಯಕ**= ಉಂಗುರಗಳು, **ಕೌಸ್ತುಭ**= ಕೌಸ್ತುಭವೆಂಬ ರತ್ನ **ಹಾರಪದಕ**= ಪದಕಯುಕ್ತ ಹಾರಗಳು, **ಗ್ರೈವೇಯ**= ಕಂಠದಲ್ಲಿ ಧರಿಸಿರುವ ಆದಿ **ಭೂಷಿತನು**= ಇತ್ಯಾದಿಗಳಿಂದ ಭೂಷಿತನಾಗಿ ಪರಿಶೋಭಿಸುತ್ತಿರುವನು. ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಷ್ಟದಳಕಮಲಗತ ಪ್ರಾದೇಶ ಮೂರ್ತಿ ವಿಚಾರ ಹೇಳತಾರೆ.

ಹೃದಯೊಳಗೆ–ದ್ವಾದಶಾರ್ಕರ ಮಂಡಲಕ್ಕೆ ಮ್ಯಾಲೆ ಹೃದಯಪ್ರದೇಶದಲಿ ಸಂಬಂಧಿಸಿರುವ ಪಂಚಪ್ರಭೇದ ಸುಷುಮ್ನಾನಾಡಿ ಐದರಲಿ, ಅಷ್ಟದಳಕಮಲ–ಎಂಟುದಳ ಕಮಲ, ಒಂದೊಂದರಲ್ಲಿ ಒಂದೊಂದು ಕಮಲದ ಮ್ಯಾರಿಗೆ ಐದು ಕಮಲಗಳು, ಇಹ–ಇರೋವಾಗಿ ಅವೆ. ಅದರೊಳಗೆ–ಆ ಐದು ಅಷ್ಟದಳಕಮಲದೊಳಗೆ, ಪ್ರಾದೇಶನಾಮಕ–ಒಂದೊಂದರಲ್ಲಿ ಒಂದೊಂದು ಪ್ರಾದೇಶನಾಮಕ ಭಗವದ್ರೂಪಗಳು ಅವೆ. ಈ ಪ್ರಾದೇಶನಾಮಕನು,

ಉದಿತಭಾಸ್ಕರನಂತೆ–ಆಗಲೇ ಉದಯವಾದ ಸೂರ್ಯನ ಕಾಂತಿಯೋಪಾದಿಯಲಿ ಕಾಂತಿಯುಕ್ತನಾಗಿ ಅಪರೋಕ್ಷಿಗಳಿಗೆ, ತೋರ್ಪನು–ತನ್ನ ರೂಪ ತೋರಿಸೋವನಾಗತಾನೆ. ಬಿಂಬನೆಂದೆನಿಸಿ–ಇವ ಬಿಂಬ ಎಂತ ಕರೆಸಿದವನಾಗಿ ಪ್ರತ್ಯಕ್ಷನಾಗತಾನೆ ಎಂತ ಅರ್ಥ. ಪದುಮ ಚಕ್ರ ಸುಶಂಖ ಸುಗದಾ–ಪದ್ಮ, ಚಕ್ರ, ಸಮೀಚೀನವಾದ ಶಂಖ, ಸಮೀಚೀನ ಗದಾ ಈ ನಾಲ್ಕು ಕರಗಳಲ್ಲಿ ಪ್ರಾದೇಶ ಧರಿಸಿ ಇದ್ದಾನೆ. ಅಂಗದ–ಭುಜಕೀರ್ತಿ, ಕಟಕ–ಕಡಗಗಳು, ಮುಕುಟ–ದಿವ್ಯಕಿರೀಟ, ಅಂಗುಲೀಯಕ–ಉಂಗುರಗಳು, ಕೌಸ್ತುಭ–ಕೌಸ್ತುಭನಾಮಕ, ಪದಕ–ಪದಕವೂ, ಆದಿ–ಇವೇ ಮೊದಲಾದ, ಹಾರ–ನಾನಾ ವಿಧವಾದ ರತ್ನಗಳಿಂದ ಯುಕ್ತವಾದ ಹಾರಗಳು, ಗ್ರೈವೇಯ–ಕಂಠ ಪ್ರದೇಶದಲ್ಲಿ ಉಳ್ಳವನು. ಭೂಷಿತನು–ಈ ಪ್ರಕಾರ ಅಲಂಕೃತನಾದವ ಪ್ರಾದೇಶನಾಮಕ ಬಿಂಬರೂಪಿ ಪರಮಾತ್ಮ ಎಂತ ತಾತ್ಪರ್ಯ.

**ವಿಶೇಷಾರ್ಥ**

ಪೂರ್ವೋಕ್ತ ಪ್ರಾದೇಶನಾಮಕನ ಸ್ಥಾನ ದಾವದೆಂದರೆ–ಪ್ರತಿಕಮಲದಲ್ಲಿ ಕಮಲಕರ್ಣಿಕಾಮೂಲದಲ್ಲಿ ಮೂಲೇಶನಾಮಕನು. ಕಮಲಕರ್ಣಿಕಾದ ಮ್ಯಾಲೆ ಅಗ್ರೇಶನಾಮಕನು. ಅಗ್ರೇಶನ ಮ್ಯಾಲೆ ಪ್ರಾದೇಶನಾಮಕನು. ಶ್ರೀಪರಮಾತ್ಮ ಸೋಪಾನದೋಪಾದಿಯಲಿ ಇರೋವನಾಗಿದ್ದಾನೆ. ಮೂಲೇಶ ಅಂಗುಷ್ಠಾಗ್ರ ಪರಿಮಿತಿ, ಅಗ್ರೇಶ ಅಂಗುಷ್ಟಪರಿಮಿತಿ, ಪ್ರಾದೇಶ ಪ್ರಾದೇಶ ಪರಿಮಿತಿ. ಈ ಪ್ರಕಾರ ಭಗವನ್ಮೂರ್ತಿಗಳು ಇದ್ದಾರೆ.

ಅಷ್ಟದಳಕಮಲಗತ ಮೂಲೇಶಾದಿ ಮೂರು ವಿಧ ರೂಪಗಳಿಗೂ ಬಿಂಬ ಎಂತಲೇ ತಾತ್ಪರ್ಯ. ಮೂಲೇಶಗೆ ಅಷ್ಟದಳ ಭುಜ, ಜಾಗ್ರತ್ಪ್ರದ. ಅಗ್ರೇಶ ಜೀವಾಕಾರ, ಸ್ವಪ್ನಪ್ರದ. ಪ್ರಾದೇಶ ಚತುರ್ಭುಜ, ನಿದ್ರಾಪ್ರದ. ಈ ಪ್ರಕಾರ ತ್ರಿವಿಧಕ್ಕೆ ತ್ರಿವಿಧ ಬಿಂಬರು ಎಂದು ಅರ್ಥ. ಸ್ಥೂಲದೇಹದ ಆದಿಯಲಿ ಪ್ರಾದೇಶನ ಅಪರೋಕ್ಷವಾಗತದೆ, ಆದ್ದರಿಂದ ಪ್ರಾದೇಶನ ಮಾತ್ರ ಹೇಳೋದಕ್ಕೆ ಕಾರಣ ಎಂತ ತಾತ್ಪರ್ಯ.

ಪೂರ್ವೋಕ್ತ ಆಯುಧಗಳು ಬಲದಲ್ಲಿ ಪದ್ಮ, ಎಡದಲ್ಲಿ ಚಕ್ರ, ಅಧೋ ಭಾಗದಲ್ಲಿ ಬಲದಲ್ಲಿ ಶಂಖ. ಅಧೋಭಾಗ ಎಡದಲ್ಲಿ ಗದಾ ಇರೋದಾಗಿ ಆದೆ.

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಹೃದಯದಲ್ಲಿ ಅಷ್ಟದಳಕಮಲದಲ್ಲಿ ಪ್ರಾದೇಶಮಾತ್ರನಾಗಿ ವಾಸ ಮಾಡುವ ಭಗವಂತನ ಸೂಕ್ಷ್ಮೋಪಾಸನಾಕ್ರಮವನ್ನು **ಭಾಗವತ ದ್ವಿತೀಯ ಸ್ಕಂಧ ಎರಡನೆಯ ಅಧ್ಯಾಯದ**–

**ಕೇಚಿತ್ಸ್ವದೇಹಾಂತ ಹೃದಯಾವಕಾಶೇ ಪ್ರಾದೇಶಮಾತ್ರಂ ಪುರುಷಂ ವಸಂತಂ.**

ಎಂಬ ೮ನೆಯ ಶ್ಲೋಕ ಮೊದಲು ೧೩ನೆಯ ಶ್ಲೋಕದವರೆಗೂ ಹೇಳಿರುವರು. ಅದನ್ನೇ ದಾಸರಾಯರು ಈ ಪದ್ಯದಿಂದ ಹೇಳುತ್ತಾರೆ.

ಹೃದಯದಲ್ಲಿ ಅಷ್ಟದಳಕಮಲವಿರುವುದು. ಅದರೊಳಗೆ ಪ್ರಾದೇಶ ಅಂದರೆ, ಚೋಟು ಉದ್ದವಾಗಿರುವನೆಂದರ್ಥ. ಅದೇ ನಾಮಧೇಯದಿಂದ ಬಿಂಬರೂಪಿ ಪರಮಾತ್ಮನು ಬಾಲಸೂರ್ಯನಂತೆ ಪ್ರಕಾಶಮಾನನಾಗಿ ಪದ್ಮ, ಚಕ್ರ, ಶಂಖ, ಗದಾ, ಅಂಗದಾದಿ ಆಭರಣಗಳಿಂದ ಭೂಷಿತನಾಗಿ ಶೋಭಿಸುತ್ತಿರುವನು. ಇಂತಹ ಪರಮಾತ್ಮನ ಸೂಕ್ಷ್ಮರೂಪೋಪಾಸನೆಯನ್ನು ಅಧಿಕಾರಿಗಳು ಮಾಡುವರೆಂದು ತಾತ್ಪರ್ಯ. ||೬||

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ಹೃದಯೇತಿ||–

**ಹೃದಯೇ ಅಷ್ಟದಳೇ ಪದ್ಮೇ ಕರ್ಣಿಕಾಯಾಂ ಸುಶೋಭಿತಃ।**
**ಜ್ಞಾನಾನಂದಾದ್ಯ ಸಂಖ್ಯೇಯ ಕಲ್ಯಾಣಗುಣವಿಗ್ರಹಃ||**

**ಶಂಖಚಕ್ರಗದಾಪದ್ಮಧರಃ ಪರಮಸುಂದರಃ।**
**ದಿವ್ಯರತ್ನೋಜ್ವಲಚ್ಚಿತ್ರ ಸರ್ವಭೂಷಣ ಭೂಷಣಾ ಇತಿ॥**
**—ಸತತ್ತ್ವರತ್ನಮಾಲೋಕ್ತೇಃ**

**ಯುಸ್ತ್ವೇತಮೇವಂ ಪ್ರಾದೇಶಮಾತ್ರಮಿತಿ ಶ್ರುತೇಃ॥**
ಅಂಗದ–ಬಾಹುಪುರಿ, ಗ್ರೈವೇಯ-ಕಂಠದಲ್ಲಿದ್ದ ಆಭರಣಗಳು ಎಂಬರ್ಥ.

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಹೃದಯ–ಇತಿ॥ ಹೃದಯೇ ಸರ್ವತೋವ್ಯಾಪೀ ಪ್ರಾದೇಶಃ ಪುರುಷೋತ್ತಮಃ ॥ಇತಿ ವಚನಾತ್॥

## ಕನ್ನಡಾನುವಾದ

ಹೃದಯದಲ್ಲಿ ಅಷ್ಟದಳಕಮಲವಿದೆ. ಅದರಲ್ಲಿ ಉದಿತಸೂರ್ಯನಂತೆ ಪ್ರಕಾಶಮಾನನಾಗಿರುವ ಶ್ರೀಪರಮಾತ್ಮನಿರುವನು. ಅವನಿಗೆ ಪ್ರಾದೇಶನೆಂದು ಹೆಸರು. ಪ್ರಾದೇಶನಾಮಕನಾದ ಬಿಂಬರೂಪಿ ಪರಮಾತ್ಮನು ಆಯುಧಾಭರಣಗಳಿಂದ ಭೂಷಿತನಾಗಿದ್ದಾನೆ.

'ಪುರುಷೋತ್ತಮನಾದ ಬಿಂಬರೂಪಿ ಶ್ರೀಹರಿಯು ಪ್ರಾದೇಶನಾಮಕನಾಗಿ ಪ್ರಾದೇಶಪರಿಮಿತಿ ಪ್ರಮಾಣವುಳ್ಳವನಾಗಿ ಹೃದಯಕಮಲದಲ್ಲಿ ಸರ್ವದಾ ಆವಾಸನಾಗಿದ್ದಾನೆ' ಎಂದು **ಭಾಗವತಾದಿ ವಚನಗಳಿವೆ.** ॥೬॥

## ೫. ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

**ಕೇ ಚಿತ್ಸ್ವದೇಹಾಂತಹೃದಯಾವಕಾಶೇ ಪ್ರಾದೇಶ ಮಾತ್ರಂ**
**ಪುರುಷಂ ವಸಂತಂ।**
**ಚತುರ್ಭುಜಂ ಕಂಜ ರಥಾಂಗ ಶಂಖಂ ಗದಾಧರಂ**
**ಧಾರಣಯಾಸ್ಮರಂತಿ॥**

ಎಂಬ ಭಾಗವತೋಕ್ತ ಹೃದ್ಗತಅಷ್ಟದಳಕಮಲಸ್ಥರೂಪೋಪಾಸನೆ ನಿರೂಪಿಸುತ್ತಾರೆ, ಹೃದಯ ಎಂದು. ದೇಹದ ಹೃದಯದಲ್ಲಿ ಅಷ್ಟದಳಕಮಲ ಇರುವುದು. ಅದರೊಳಗೆ ಪ್ರಾದೇಶನಾಮಕ ಎಂದರೆ ಹತ್ತುಬೆರಳುದ್ದ ಪ್ರಮಾಣರೂಪದಲ್ಲಿ ಸರ್ವಸುಲಕ್ಷಣ ಸಂಪೂರ್ಣಾವಯವವುಳ್ಳವನಾಗಿ ದೇವರು ಉದಯಿಸಿದ ಸೂರ್ಯನಂತೆ ಪ್ರಕಾಶಮಾನನಾಗಿ, ಬಿಂಬನೆಂಬ ಹೆಸರಿನಿಂದ ಪದ್ಮ, ಚಕ್ರ, ಶಂಖ, ಗದಾಧರಿಸಿದ ಚತುರ್ಭುಜದಿಂದ ಒಪ್ಪುತ್ತ, ತೋಳ್ಬಳೆ, ಹಸ್ತಾಭರಣ, ಕಿರೀಟ, ಬೆರಳುಂಗುರಗಳು, ಪದಕ, ಕೌಸ್ತುಭರತ್ನ, ಸರಿಗೆ ಮೊದಲಾದಾಭರಣಭೂಷಿತನಾಗಿ ಧ್ಯಾನಿಸುವವರಿಗೆ ಗೋಚರಿಸುವನು. ||೬||

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯಗಳಲ್ಲಿ ನಾಭೀಗತ ಷಟ್ಕೋಣಮಂಡಲ ಮತ್ತು ಮಧ್ಯೋದರಗತ ದ್ವಾದಶಕೋಣಮಂಡಲಗಳ ವಿವರಗಳನ್ನು ತಿಳಿಸಿ, ಪ್ರಸಕ್ತ ೬ನೆಯ ಪದ್ಯದಿಂದ ಹೃತ್ಕಮಲಗತ ಭಗವದ್ರೂಪದ ವಿವರಗಳನ್ನು ತಿಳಿಸುತ್ತಾರೆ.

೧. ಉದರದ ಮೇಲೆ ಹೃದಯಸ್ಥಾನವಿದೆ. ಈ ಪ್ರದೇಶದಲ್ಲಿ ಸುಷುಮ್ನಾಡಿಗೆ ಸೇರಿದಂತೆ ಕಮಲವಿದೆ. ಈ ಕಮಲಕ್ಕೆ ಎಂಟು ದಳಗಳು. ಇದಕ್ಕೆ ಹೃತ್ಪದ್ಮ ಅಥವಾ ಹೃತ್ಕಮಲ ಎನ್ನುವರು.

೨. ಹೃದಯಸ್ಥಾನಗತ ಈ ಹೃದಯಕಮಲದಲ್ಲಿ **ಪ್ರಾದೇಶ**ನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಹೃತ್ಕಮಲದ ಕರ್ಣಿಕಾಮೂಲದಲ್ಲಿ **ಮೂಲೇಶ**ನಾಮಕ ಪರಮಾತ್ಮನಿರುವನು. ಮೂಲೇಶನು ಅಂಗುಷ್ಠಾಗ್ರ ಪರಿಮಿತಿಯುಳ್ಳವನು (ಅಂದರೆ ಹೆಬ್ಬೆರಳಿನ ತುದಿಭಾಗದಷ್ಟು).

ಕಮಲದ ಕರ್ಣಿಕಾದ ಮೇಲೆ ಅಗ್ರೇಶನಾಮಕ ಪರಮಾತ್ಮನಿರುವನು. ಈ ಅಗ್ರೇಶನು ಅಂಗುಷ್ಠಪರಿಮಿತಿಯುಳ್ಳವನು. (ಹೆಬ್ಬೆರಳಿನ ಗಾತ್ರದಷ್ಟು)

ಅಗ್ರೇಶನ ಮೇಲೆ **ಪ್ರಾದೇಶ**ನಾಮಕ ಪರಮಾತ್ಮನಿದ್ದಾನೆ. ಪ್ರಾದೇಶನು ಪ್ರಾದೇಶಪರಿಮಿತಿಯುಳ್ಳವನು.

ಅಷ್ಟದಳಕಮಲಗತ ಮೂಲೇಶಾದಿ ಮೂರು ರೂಪಗಳಿಗೂ ಬಿಂಬ ಎಂತಲೇ ತಾತ್ಪರ್ಯ. ಈ ಮೂರ್ತಿತ್ರಯಗಳು ಹೃತ್ಪದ್ಮದಲ್ಲಿ ಸೋಪಾನ ದೋಪಾದಿಯಲ್ಲಿ ಇದ್ದಾರೆ.

ಇದಕ್ಕೆ ಪ್ರಮಾಣ–

**ಕೇಚಿತ್ಸ್ವದೇಹಾಂತಹೃದಯಾವಕಾಶೇ ಪ್ರಾದೇಶಮಾತ್ರಂ ಪುರಂಷಂ ವಸಂತಂ॥**

**—ಭಾಗವತ ದ್ವಿತೀಯಸ್ಕಂಧ–ಅಧ್ಯಾಯ ೨.**

೩. ಹೃದಯ ಅಷ್ಟದಳಕಮಲನಿವಾಸಿಯಾದ ಪ್ರಾದೇಶನಾಮಕ ಶ್ರೀಪರಮಾತ್ಮನು ಆಗತಾನೇ ಪೂರ್ವದಲ್ಲಿ ಉದಯಿಸುತ್ತಿರುವ ಸೂರ್ಯನಂತೆ ಪ್ರಕಾಶಮಾನನಾಗಿದ್ದಾನೆ (ಉದಿತಭಾಸ್ಕರನಂತೆ). ಆ ಪ್ರಾದೇಶನಾಮಕನೇ ಜೀವರ ಬಿಂಬನೆಂದೆನಿಸಿ, ದೇಹಗತ ಸಮಸ್ತ ವ್ಯಾಪಾರಗಳನ್ನು ಬಿಂಬಕ್ರಿಯಾ ದ್ವಾರಾ ನಡೆದು ನಡೆಯಿಸುತ್ತಿರುವನು. ಇಂತಹ ಬಿಂಬರೂಪಿಯಾದ ಪ್ರಾದೇಶನಾಮಕ ಶ್ರೀಹರಿಯು ತನ್ನ ನಾಲ್ಕು ಕೈಗಳಲ್ಲಿ ಕ್ರಮವಾಗಿ ಪದ್ಮ, ಸುದರ್ಶನವೆಂಬ ಚಕ್ರ, ಪಾಂಚಜನ್ಯವೆಂಬ ಶಂಖ, ಕೌಮೋದಕೀ ಎಂಬ ಸಮೀಚೀನವಾದ ಗದೆ ಈ ಚತುರಾಯುಧಗಳಿಂದ ಪರಿಶೋಭಿತನಾಗಿದ್ದಾನೆ.

ಅಲ್ಲದೆ ಕಡಗಗಳೆಂಬ ಕರಾಭರಣಗಳು, ಭುಜಕೀರ್ತಿ ಎಂಬ ತೋಳು ಬಂದಿ, ತಲೆಯಮೇಲೆ ದಿವ್ಯವಾದ ರತ್ನಖಚಿತ ಕಿರೀಟ, ಬೆರಳುಗಳಿಗೆ ಮನೋ ಹರ ಉಂಗುರಗಳು ಈ ದಿವ್ಯ ಆಭರಣಗಳಿಂದ ಶೋಭಿಸುತ್ತಿರುವನು. ಕಂಠ ದಲ್ಲಿ ರತ್ನಮಯಪದಕ, ಕೌಸ್ತುಭವೆಂಬ ಅನರ್ಘ್ಯಮಣಿ ನಾನಾವಿಧ ಹಾರ ಗಳು ಇವುಗಳಿಂದ ಭೂಷಿತನಾಗಿ, ದಿವ್ಯಸುಂದರನಾದ ಆ ಪರಮ ಮಂಗಳ ಮೂರ್ತಿಯೂ ಹೃದ್ಗುಹಾನಿವಾಸಿಯಾಗಿದ್ದಾನೆ ಎಂದು ಪ್ರಸಕ್ತ ಪದ್ಯದ ತಾತ್ಪರ್ಯವು.

ಪ್ರಮಾಣ–

**ಹೃದಯೇ ಅಷ್ಟದಳೇ ಪದ್ಮೇ ಕರ್ಣಿಕಾಯಾಂ ಸುಶೋಭಿತಃ।**
**ಜ್ಞಾನಾನಂದಾಸ್ಯ ಸಂಖ್ಯೇಯ ಕಲ್ಯಾಣಗುಣವಿಗ್ರಹಃ॥**
**ಶಂಖಚಕ್ರಗದಾಪದ್ಮಧರಃ ಪರಮಸುಂದರಃ।**
**ದಿವ್ಯ ರತ್ನೋಜ್ವಲಚ್ಚಿತ್ರ ಸರ್ವಭೂಷಣ ಭೂಷಣಾ ಇತಿ॥**

**—ಸತ್ತತ್ತ್ವರತ್ನಮಾಲಾವಾಕ್ಯ.**

ಪ್ರಾದೇಶ ಎಂದರೆ ಹತ್ತು ಬೆರಳುಗಳ ಪ್ರಮಾಣವೆಂಬರ್ಥ (**ಅತ್ಯತಿಷ್ಟದ್ಧಶಾಂಗುಲಂ**) ॥೬॥

## ಪದ್ಯ ೭

**ಮೂಲ**

**ದ್ವಿದಳಪದ್ಮವು ಶೋಭಿಪುದು ಕಂ।**
**ಠದಲಿ ಮುಖ್ಯಪ್ರಾಣ ತನ್ನಯು।**
**ಸುದತಿಯಿಂದೊಡಗೂಡಿ ಹಂಸೋಪಾಸನೆಯ ಮಾಳ್ಪ॥**
**ಉದಕವನ್ನಾದಿಗಳಿಗವಕಾ।**
**ಶದನು ತಾನಾಗಿದ್ದುದಾನಾ।**
**ಭಿಧನು ಶಬ್ದವ ನುಡಿದು ನುಡಿಸುವ ಸರ್ವಜೀವರೊಳು॥ ॥೭॥**

**ಅವತರಣಿಕೆ**

ಹಿಂದಿನ ಮೂರು ಪದ್ಯಗಳಿಂದ ನಾಭೀಗತ, ಮಧ್ಯೋದರಗತ ಹಾಗೂ ಹೃದಯಗತ ಪದ್ಮಗಳ ವಿವರಗಳನ್ನು ತಿಳಿಸಿ, ಅಲ್ಲಿ ಭಗವದ್ರೂಪಗಳ ಉಪಾಸನಾ ಕ್ರಮವನ್ನು ವಿವರಿಸಿ, ಪ್ರಸಕ್ತ ಸಂಧಿಗತ ೭ನೆಯ ಈ ಪದ್ಯದಿಂದ ಕಂಠಗತಕಮಲದ ವಿಚಾರವನ್ನು ತಿಳಿಸುತ್ತಾರೆ **ದ್ವಿದಳ ಪದ್ಮವು** ಎಂಬ ಪದ್ಯದಿಂದ.

ಕಂಠಪ್ರದೇಶದಲ್ಲಿ ಎರಡುದಳಗಳ್ಳುಳ ಕಮಲವಿದೆ. ಇದರಲ್ಲಿ ಶ್ರೀಮುಖ್ಯಪ್ರಾಣದೇವರು ತಮ್ಮ ಸುದತಿಯಾದ ಶ್ರೀಭಾರತೀದೇವಿಯ ಸಹಿತ ವಾಗಿ ಇದ್ದು, ಉದಾನನಾಮಕರಾಗಿ, ೨೧,೬೦೦೦ ಸಂಖ್ಯಾಕವಾದ ಶ್ವಾಸಜಪ ರೂಪವಾದ ಹಂಸೋಪಾಸನೆಯನ್ನು ಮಾಡುತ್ತಾ, ಆ ಮಂತ್ರದ ಫಲವನ್ನು ಬಿಂಬನಾದ ಶ್ರೀಪರಮಾತ್ಮನ ಪಾದಕಂಜಗಳಿಗೆ ಅರ್ಪಿಸುತ್ತಿರುತ್ತಾರೆ. ಸರ್ವ ಜೀವರಲ್ಲಿ ಆ ಸ್ಥಳದಲ್ಲಿ ಶ್ರೀಪರಮಾತ್ಮನು **ಉದಾನನಾಮಕನಾಗಿದ್ದು**, ಅನ್ನೋದಕಗಳು ಆಹಾರನಾಳದ ಮೂಲಕ ಜಠರವನ್ನು ಸೇರುವುದಕ್ಕೆ ಅವ ಕಾಶಪ್ರದನಾಗಿದ್ದಾನೆ. ಕಂಠದ್ವಾರಾ ಹೊರಡುವ ಶಬ್ದಗಳ ಉಚ್ಚಾರಣೆಗೆ ಸಹಾಯಕನಾಗಿ ಶಬ್ದಗಳನ್ನು ನುಡಿದು ನುಡಿಸುತ್ತಾನೆ. ॥೭॥

## ಪ್ರತಿಪದಾರ್ಥ

**ದ್ವಿದಳಪದ್ಮವು**= ಎರಡುದಳಗಳಿಂದ ಯುಕ್ತವಾದ ಕಮಲವು, **ಕಂಠ ದಲಿ**= ಕಂಠಪ್ರದೇಶದಲ್ಲಿ, **ಶೋಭಿಪುದು**= ಪ್ರಕಾಶಿಸುತ್ತಿದೆ. **ಮುಖ್ಯ ಪ್ರಾಣ**= ಜೀವೋತ್ತಮರಾದ ಮುಖ್ಯಪ್ರಾಣದೇವರು, **ತನ್ನಯ ಸುದತಿ ಯಿಂದೊಡಗೂಡಿ**= ತನ್ನ ಪತ್ನಿಯರಾದ ಶ್ರೀಭಾರತೀದೇವಿಯರ ಸಮೇತ ರಾಗಿ, **ಹಂಸೋಪಾಸನೆಯ**= ಮಧ್ಯನಾಡಿಯಾದ ಸುಷುಮ್ನಾನಾಡೀಗತ ದ್ವಿದಳಕಮಲಗತ ರೂಪದಿಂದ ಹಂರೂಪೀಪರಮಾತ್ಮನ ಉಪಾಸನೆಯನ್ನು, **ಮಾಳ್ಪ**= ಮಾಡುತ್ತಾ, ಈ ದೇಹದಲ್ಲಿ ಶ್ವಾಸಕಾರ್ಯವೆಸಗುತ್ತಾರೆ. **ಉದಕ**= ನಾವು ಸೇವಿಸುವ ನೀರು (ದ್ರವರೂಪ ಆಹಾರ ವಸ್ತುಗಳು), **ಅನ್ನಾದಿಗಳಿಗೆ**= ಅನ್ನಕ್ಕೆ (ಘನರೂಪ ಆಹಾರ ಪದಾರ್ಥಗಳು), **ಅವ ಕಾಶಾದನು**= ಉದರ ಪ್ರವೇಶವಾಗುವುದಕ್ಕೆ ಅವಕಾಶವನ್ನು ಕೊಡುತ್ತಾ, **ಉದಾನಾಭಿದನು**= ಉದಾನ ಎಂಬ ಹೆಸರಿನಿಂದ, **ತಾನಾಗಿದ್ದು** = ಸ್ವಯಂ ವಿದ್ಯಮಾನನಾಗಿದ್ದು, **ಸರ್ವಜೀವರೊಳು**= ಸಮಸ್ತ ಜೀವ ರಾಶಿಗಳಲ್ಲಿ, **ನುಡಿದು**= ಶಬ್ದೋಚ್ಚಾರಣೆಯನ್ನು ತಾನೇಮಾಡಿ, **ನುಡಿಸುವ**= ವಾಗೀಂದ್ರಿಯಾಭಿಮಾನಿಗಳ ದ್ವಾರಾ ನುಡಿಸುತ್ತಾನೆ. ॥೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಹಿಂದಿನ ಶ್ಲೋಕಗಳಲ್ಲಿ ಚತುರ್ದಳಕಮಲಾರಭ್ಯಅಷ್ಟದಳಕಮಲದ ವರೆಗೂ ಮೂರು ಸ್ಥಳಗಳು ಹೇಳಿದರು, ಈ ದ್ವಿದಳಕಮಲದಲ್ಲಿ ನಡೀತಕ್ಕ ವಿಚಾರವನ್ನು ಹೇಳತಾರೆ.

ದ್ವಿದಳಪದ್ಮವು–ಎರಡುದಳಗಳಿಂದ ಯುಕ್ತವಾದ ಕಮಲವು, ಕಂಠದಲ್ಲಿ ಶೋಭಿಪುದು–ಕಂಠಪ್ರದೇಶ ಮಧ್ಯದಲ್ಲಿ ಪ್ರಕಾಶಮಾನವಾಗಿ ಅದೆ. ಇದೂನೂ ಪೂರ್ವೋಕ್ತ ಪ್ರಕಾರ ಐದು ಕಮಲಗಳೇವೆ. ಈ ಐದು ಕಮಲಗಳಲ್ಲಿ, ಮುಖ್ಯಪ್ರಾಣ–ಜೀವೋತ್ತಮರಾದ ವಾಯುದೇವರು, ತನ್ನಯ ಸುದತಿ ಯಿಂದೊಡಗೂಡಿ–ತನ್ನ ಪತ್ನಿಯಾದ ಭಾರತೀದೇವೇರಿಂದ ಸಹಿತನಾಗಿ ಐದು ರೂಪಗಳಿಂದ ಇದ್ದವನಾಗಿ, ಹಂಸೋಪಾಸನೆಯ ಮಾಳ್ಪ–ಎಂದರೆ ಮಧ್ಯ ನಾಡಿಯಾದ ಸುಷುಮ್ನಾನಾಡೀಗತ, ದ್ವಿದಳಕಮಲಗತ ರೂಪದಿಂದ ಹಂಸ ರೂಪಿ ಶ್ರೀಪರಮಾತ್ಮನ್ನ ಉಪಾಸನ ಮಾಡತಾರೆ. ಉದಕ ಅನ್ನಾದಿಗಳಿಗೆ ಪಾನಮಾಡಿದ ಉದಕವೇನು, ಭೋಜನ ಮಾಡಿದ ಅನ್ನವೇನು ಇವುಗಳಿಗೆ, ಅವಕಾಶದನು–ಉದರಪ್ರವೇಶವಾಗೋದಕ್ಕೆ ಅವಕಾಶಪ್ರದನು, ಶಬ್ದವ– ಇನ್ನು ಉದರದಿಂದ ಹೊರಗೆ ಬರತಕ್ಕ ಶಬ್ದಕ್ಕೆ ಅವಕಾಶ ಕೊಡತಕ್ಕವನು ಮತ್ತು ಒಳಗಿಂದ ಬರತಕ್ಕ ಶಬ್ದಕ್ಕೆ ಅವಕಾಶ ಕೊಡತಕ್ಕವನು ಮತ್ತು ಒಳ ಗಿಂದ ಬರುವ ಸಮೂಹವ, ನುಡಿದು, ಶಬ್ದಾದಿಗಳಲ್ಲಿ ಶಬ್ದವಾಚ್ಯನಾಗಿ ಮುಖ ದ್ವಾರಕ್ಕೆ ಬಂದು, ನುಡಿಸುವ–ಜಿಹ್ವೇಂದ್ರಿಯದ್ವಾರಾ ಸರ್ವಶಬ್ದಗಳ ನುಡಿ ಸುವ. ಪರಮಾತ್ಮನ ತರುವಾಯ ಬಿಂಬಸದೃಶರಾದವರು ವಾಯುದೇವರು, ಆದ್ದರಿಂದ ತಾವು ಶಬ್ದಕ್ರಿಯಾ ನಡೆಸಿ ನಡೆಸುತಾರೆ ಎಂತ ತಾತ್ಪರ್ಯ. ಉದಾನಾಭಿಧನು–ಈ ವಾಯುದೇವರು ಕಂಠಸ್ಥಾನದಲ್ಲಿ ಇದ್ದು ಉದಾನ ಎಂತ ಕರೆಸೋವರಾಗತಾರೆ. ತಾನಾಗಿದ್ದು–ಈ ಉದಾನನಾಮಕ ವಾಯು ದೇವರೇವೇ, ಸರ್ವಜೀವರೊಳು–ಸರ್ವಪ್ರಾಣಿಗಳು ಧರಿಸಿರುವ ಸ್ಥೂಲದೇಹದ

ಕಂಠಸ್ಥಾನದಲ್ಲಿ ಇದ್ದಾರೆ. ಈ ಸರ್ವಶಬ್ದಗಳೂನೂ ವಾಯುದೇವರ ದ್ವಾರಾ ನಡೀತದೆ ಎಂತ ತಾತ್ಪರ್ಯ.

## ವಿಶೇಷಾರ್ಥ

ಹಂಸಮಂತ್ರ ಮಾಡತಾನೆ ಎಂದರೆ ಶ್ವಾಸಜಪ ಮಾಡತಾನೆ. ಉಚ್ಛ್ವಾಸ ನಿಶ್ವಾಸ ಎಂತ ಎರಡು ಪ್ರಕಾರ. ಉಚ್ಛ್ವಾಸ ಎಂಬುದು ಒಳಗಿಂದ ಹೊರಗೆ ಬರೋದು. ನಿಶ್ವಾಸ ಎಂದರೆ ಹೊರಗಿಂದ ಒಳಗೆ ಹೋಗೋದು. ಈ ಎರಡರೊಳಗೆ ಒಳಗಿಂದ ಹೊರಗೆ ಬರೋ ಶ್ವಾಸಕಾರ್ಯ, ಹೃದಯ ಅಷ್ಟದಳ ಕಮಲಗತ ಮೂಲೇಶನ ಪಾದಮೂಲದಲ್ಲಿ ಇರತಕ್ಕ ಪ್ರಾಣದೇವರ ಕಾರ್ಯ. ಹೊರಗಿನಿಂದ ಒಳಗೆ ಹೋಗೋ ಶ್ವಾಸಕಾರ್ಯ ಕಂಠಗತ ದ್ವಿದಳಗತ ಮುಖ್ಯ ಪ್ರಾಣದೇವರ ಕಾರ್ಯ. ಒಳಗೆ ಬರೋ ಶ್ವಾಸಕಾರ್ಯ ಹಂ ಎಂಬ ವರ್ಣ ಸಹಿತವಾಗಿ ಬರುತ್ತದೆ. ಹೊರಗೆ ಹೋಗೋ ಕಾಲದಲ್ಲಿ ಸ ಎಂಬ ವರ್ಣ ವಿಶಿಷ್ಟವಾಗಿ ಹೊರಗೆ ಹೋಗತದೆ. ಉಚ್ಛ್ವಾಸ-ನಿಶ್ವಾಗಳು ಎರಡು ಸೇರಿ ಹಂಸ ಎಂತ ಆಯಿತು. ಇದು ಒಂದು ಶ್ವಾಸ. ಒಳಗಿನ ಶ್ವಾಸ ಹೊರಗೆ ಬಿಡೋದಕ್ಕೆ, ಹೊರಗಿನ ಶ್ವಾಸ ಒಳಗೆ ಬಿಡೋದಕ್ಕೆ ಕಾರಣ ಕಂಠಗತ ಮುಖ್ಯ ಪ್ರಾಣದೇವರು. ಇಂಥ ಶ್ವಾಸಕಾರ್ಯ ಅಷ್ಟದಳಕಮಲಗತ, ದ್ವಿದಳಗತ ಮುಖ್ಯಪ್ರಾಣರೂಪಗಳಿಗೆ ಸಂಬಂಧಿಸಿ ಅದೆ, ಈ ರೀತ್ಯಾ ವಾಯುದೇವರು ಕಂಠಗತರಾಗಿ ಹಂಸೋಪಾಸನೆ ಮಾಡತಾರೆ. ॥೭॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಕಂಠದಲ್ಲಿ ಎರಡುದಳಗಳುಳ್ಳ ಕಮಲವು ಶೋಭಿಸುತ್ತಿರುವುದು. ಅದರಲ್ಲಿ ಉದಾನನಾಮಕರಾದ ವಾಯುದೇವರು ತಮ್ಮ ಭಾರ್ಯೆಯಿಂದ ಕೂಡಿ ವಾಸ ಮಾಡುತ್ತಾ, ಶ್ವಾಸೋಚ್ಛ್ವಾಸರೂಪವಾದ ಹಂಸಮಂತ್ರಜಪರೂಪೋಪಾಸನೆಯನ್ನು ಮಾಡುತ್ತಿರುವರು. ಅಲ್ಲದೆ ಪ್ರಾಣಿಗಳು ಭೋಜನಮಾಡುವ ಅನ್ನಾದಿಗಳು ಉದರಸ್ಥಾನಕ್ಕೆ ಹೋಗಿ ಸೇರಲು ಅವಕಾಶವನ್ನು ಕೊಡುವರು, ತಾವು ಮಾತನಾಡುತ್ತಾ ಪ್ರಾಣಿಗಳಿಂದಲೂ ಮಾತನಾಡಿಸುವರು.

**ಪ್ರಾಣಾಪಾನ ಇಡಾಯಾಂಚ ಪಿಂಗಳಾಯಾಂಚ ಸರ್ವತಃ।**
**ವ್ಯಾನಸ್ಸಂಧಿಷು ಸರ್ವತ್ರ ಉದಾನೋ ಬ್ರಹ್ಮನಾಡಿಗಃ॥**
**—ಎಂಬ ಭಾಗವತ ದ್ವಿತೀಯಸ್ಕಂಧ ತಾತ್ಪರ್ಯವಚನ.**

ಪ್ರಾಣ, ಅಪಾನವಾಯುಗಳು ಇಡಾ ಮತ್ತು ಪಿಂಗಳಾನಾಡಿಗಳಲ್ಲಿ ಇರುವರೆಂತಲೂ, ವ್ಯಾನಪ್ರಾಣದೇವರು ಸಕಲಸಂಧಿಗಳಲ್ಲಿಯೂ, ಉದಾನ ವಾಯುದೇವರು ಬ್ರಹ್ಮನಾಡಿ ಅಂದರೆ, ಮೂಲಾಧಾರ ವೊದಲು ಶಿರಸ್ಸಿನ ವರೆಗೂ ನೆಟ್ಟಗೆ ಹೋಗಿರುವ ಮಧ್ಯಪ್ರದೇಶದಲ್ಲಿರುವ ಸುಷುಮ್ನಾನಾಡಿಯಲ್ಲಿ ರುವರು ಎಂತಲೂ ಸಿದ್ಧವಾಗುವುದು. ಆ ನಾಡಿಯಲ್ಲಿ ಉದಾನವಾಯು ದೇವರು ವ್ಯಾಪ್ತರಾಗಿ ಕಂಠದಲ್ಲಿ ಅದೇ ಸುಷುಮ್ನಾನಾಡಿಯ ಮಧ್ಯದಲ್ಲಿರು ವರು. ॥೭॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ದ್ವಿದಳೇತಿ॥ ಅನ್ನೋದಕಾದಿಗಳ ವಿಭಾಗದಿಂದ ಸಕಲಕಾರ್ಯ ಮಾಡ ತಕ್ಕ ವಾಯುಗಳ ವಿವರ ಪ್ರಸಂಗಸಂಗತ್ಯಾ ಹೇಳಲ್ಪಡುತ್ತದೆ.

೧. ಮುಖದಲ್ಲಿ ನಾಸಿಕದಲ್ಲಿ **ಪ್ರಾಣವಾಯು** ಇದ್ದು,ಶ್ವಾಸೋಚ್ಛ್ವಾಸ ದಿಂದ ಭೋಜನಮಾಡಿದ ಅನ್ನ ಪಚನ ಮಾಡಿಸುತ್ತಾನೆ.

೨. **ಅಪಾನವಾಯು** ಇಂದ್ರಿಯಗಳಲ್ಲಿದ್ದು ಮಲಮೂತ್ರ ವಿಸರ್ಜನೆ ಮಾಡಿಸುತಾನೆ.

೩. **ವ್ಯಾನವಾಯು** ಸಂಧಿಗಳಲ್ಲಿದ್ದು ಅನ್ನಪಾನಾದಿ ತುಂಬಿಸುತ್ತಾನೆ.

೪. **ಉದಾನವಾಯು** ಕಂಠದಲ್ಲಿದ್ದು ಸೀನೋಣ, ಕೆಮ್ಮೋಣ, ಸ್ವಪ್ನ ತೋರಿಸೋಣ ಇತ್ಯಾದಿ ಕಾರ್ಯ ಮಾಡಿಸುತ್ತಾನೆ.

೫. **ಸಮಾನವಾಯು** ನಾಭಿಯಲ್ಲಿ ನಿಂತು ಅಂಗುಷ್ಠಾದಿ ಶಿರಃ ಪರ್ಯಂತ ಪಸರಿಸಿ ಅನ್ನರಸವನ್ನು ಸರ್ವಾಂಗಕ್ಕೆ ಹಂಚಿಹಾಕುತ್ತಾನೆ.

೬. **ನಾಗವಾಯು** ರೋಮದಲ್ಲಿದ್ದು ಚಲನೆ ಮಾಡಿಸುತ್ತಾನೆ.

೭. **ಕೂರ್ಮವಾಯು** ಉದರ, ಲಲಾಟದಲ್ಲಿ ನಿಂತು ಶರೀರ ರಕ್ಷಿಸುತ್ತಾನೆ.

೮. **ಕೃಕಲವಾಯು** ನಾಸಾಗ್ರದಲ್ಲಿ ನಿಂತು ಹಸಿವಿ, ನೀರಡಿಕೆ, ಗಮನಾಗಮನಗಳನ್ನು ಮಾಡಿಸುತ್ತಾನೆ.

೯. **ದೇವದತ್ತವಾಯು** ಕಂಠದಲ್ಲಿ ನಿಂತು ಮಲಗಿಸೋಣ, ಎಬ್ಬಿಸೋಣ, ಭಯ ತೋರಿಸೋಣ ಮಾಡಿಸುತ್ತಾನೆ.

೧೦. **ಧನಂಜಯವಾಯು** ಬ್ರಹ್ಮರಂಧ್ರದಲ್ಲಿ ನಿಂತು ಕಿವಿಯಲ್ಲಿ ಸಮುದ್ರಶಬ್ದದೋಪಾದಿಯಲ್ಲಿ ಘೋಷವನ್ನು ಸರ್ವದಾ ಮಾಡಿಸುತ್ತಾನೆ. ಈ ವಾಯು ಮರಣಕಾಲದಲ್ಲಿ ಮಾತ್ರ ಶಬ್ದ ಇಲ್ಲದ್ಹಾಗೆ ಮಾಡಿಸುತ್ತಾನೆ. ಶ್ರೀಮುಖ್ಯಪ್ರಾಣದೇವರ ಆಜ್ಞಾನುಬದ್ಧರಾಗಿ ಮಾಡಿಸುತ್ತಾರೆಂದು ನಿಶ್ಚಯಿಸತಕ್ಕದ್ದು.॥೭॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

**ದ್ವಿದಲ ಇತಿ। ಉದಾನಃ ಕಂಠದೇಶಗಃ–ಇತ್ಯುಕ್ತೇಃ॥ ಮೂಲೇ ಚ ನಾಭಿಹೃದಯೇಂದ್ರಿಯೋನಿಂ ಭ್ರೂಮಧ್ಯಕೇ ದ್ವಿಷಡಂತಕೇಷು। ಚತುಃಷ್ಟದ್ವಿಚತುರ್ದ್ವಿಷಟ್ಕದಳೇಷು ಪದ್ಮೇಷು ಸಿತಾರುಣೇಷು। ಪಂಚಾತ್ಮಕೋ ವೈ ಭಗವಾನ್ ಸದೈವ। ಧ್ಯೇಯೋಹ್ಯದಂತಾನ್ಯರುಣಾನಿತಾನೀತಿ॥ ॥೭॥**

### ಕನ್ನಡಾರ್ಥ

ಕಂಠದಲ್ಲಿ ದ್ವಿದಲಪದ್ಮವಿದೆ. ಅದರಲ್ಲಿ ಮುಖ್ಯಪ್ರಾಣನು ತನ್ನ ಸತಿಸಹಿತ ಉದಾನನಾಮಕನಾಗಿದ್ದಾನೆ. ಅಲ್ಲಿ ಶ್ವಾಸರೂಪಹಂಸಮಂತ್ರಗಳನ್ನು ಜಪಿಸುತ್ತಾನೆ. ಪ್ರಾಣನಲ್ಲಿ ಶ್ರೀಹರಿಯು ಉದಾನನಾಮಕನಾಗಿ, ಭೋಜನವಸ್ತುಗಳಿಗೆ ಒಳಗೆ ಪ್ರವೇಶಿಸಲು ಅವಕಾಶವೀಯುವನು. ಶಬ್ದಪ್ರಯೋಗ

ಗಳನ್ನು ನಡೆಸುತ್ತ ಇರುವನು. ಉದಾನನು ಕಂಠದಲ್ಲಿರುತ್ತಾನೆ ಎಂದು ಹೇಳುವ ಪುರಾಣವಚನವು ಇದಕ್ಕೆ ಆಧಾರವಾಗಿದೆ. ॥೭॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಕಂಠಸ್ಥಿತ ದ್ವಿದಳಪದ್ಮಗತ ಉದಾನರೂಪದೇವರ ಚಿಂತನೆ ನಿರೂಪಿಸುತ್ತಾರೆ, ದ್ವಿದಳವೆಂದು ಕುತ್ತಿಗೆಯಲ್ಲಿ ದ್ವಿದಳಪದ್ಮ ಇರುವುದು. ಉದಾನನೆಂದು ಹೆಸರುಳ್ಳ ಮುಖ್ಯಪ್ರಾಣದೇವರು ಸ್ವಪತ್ನಿ ಭಾರತಿಯೊಡನೆ, ಶ್ವಾಸರೂಪ ಹಂಸಮಂತ್ರೋಪಾಸನೆ ಮಾಡುವನು. ಅನ್ನ, ನೀರು ನುಂಗುವುದಕ್ಕೆ ಅವಕಾಶಕೊಟ್ಟು ಕಾರ್ಯ ನಡೆಸುವ. ಆ ಉದಾನನಲ್ಲಿ, ಉದಾನನಾಮಕ ದೇವರು ಶಬ್ದವೆಂಬ ಮಾತು ಮುಂತಾದ್ದು ಸರ್ವರಲ್ಲೂ ನುಡಿದು ನುಡಿಸುತ್ತಿರುವನು.

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯಗಳಲ್ಲಿ ನಾಭೀಗತ ಷಟ್ಕೋಣಮಂಡಲ, ಮಧ್ಯೋದರಗತ ದ್ವಾದಶಕೋಣಮಂಡಲ, ಹೃದಯಸ್ಥಾನಗತ ಅಷ್ಟದಳಕಮಲ ಇವುಗಳ ವಿವರಗಳನ್ನು ತಿಳಿಸಿ, ಪ್ರಸಕ್ತ ಸಂಧಿಗತ ೭ನೆಯ ಈ ಪದ್ಯದಿಂದ ಕಂಠಗತ ದ್ವಿದಳಕಮಲದ ವಿವರಗಳನ್ನು ತಿಳಿಸುತ್ತಾರೆ.

೧. ಕಂಠಪ್ರದೇಶದಲ್ಲಿ ಎರಡುದಳಗಳುಳ್ಳ ಕಮಲವಿದೆ. ಇವೆರಡು ದಳಗಳಲ್ಲಿ **ಉದಾನನಾಮಕ ಶ್ರೀ**ಮುಖ್ಯಪ್ರಾಣದೇವರು ವಿದ್ಯಮಾನರಾಗಿದ್ದಾರೆ. ಅಂತಹ ಮುಖ್ಯಪ್ರಾಣದೇವರು ತಮ್ಮ ನೀತಪತ್ನಿಯರಾದ ಶ್ರೀ ಭಾರತೀದೇವಿಯರಿಂದ ಒಡಗೂಡಿ ಶ್ವಾಸಕ್ರಿಯಾರೂಪವಾದ ೨೧,೬೦೦ ಸಂಖ್ಯಾಕವಾದ ಹಂಸಮಂತ್ರವನ್ನು ಜಪಿಸುತ್ತಾರೆ. ಹಂಸಮಂತ್ರಜಾಪಕರಾದ ಭಾರತೀರಮಣಮುಖ್ಯಪ್ರಾಣರು ತ್ರಿವಿಧಜೀವರಲ್ಲಿದ್ದು ಶ್ವಾಸಮಂತ್ರಗಳನ್ನು ರಚಿಸಿ, ಜಪಿಸುತ್ತಾ, ಆಯಾಯಾ ಜೀವರ ಸ್ವರೂಪಯೋಗ್ಯತೆಗಳಿಗನುಗುಣವಾದ ನಿತ್ಯಸುಖ, ಸುಖ-ದುಃಖ ಮಿಶ್ರಿತವಾದ ಮಿಶ್ರಫಲ. ನಿತ್ಯದುಃಖ

ಎಂಬ ಗತಿಗಳನ್ನು ಶ್ರೀಪರಮಾತ್ಮನ ದ್ವಾರಾ ಕೊಡಿಸುತ್ತಾ, ಶ್ವಾಸಮಂತ್ರದ ಫಲವನ್ನು ಬಿಂಬರೂಪಿ ಶ್ರೀಪರಮಾತ್ಮನ ಪಾದಪಂಕಜಗಳಿಗೆ ಅರ್ಪಿಸುತ್ತಿರುವರು.

೨. ಅಂತಹ ಉದಾನನಾಮಕ ವಾಯುದೇವರ ಅಂತರ್ಗತನಾಗಿ ಶ್ರೀಪರಮಾತ್ಮನು **ಉದಾನ** ಎಂಬ ಹೆಸರಿನಿಂದಲೇ ಕರೆಯಿಸುತ್ತಾ, ಕಂಠಗತ ದ್ವಿದಳಕಮಲದಲ್ಲಿದ್ದು, ಕಂಠದ ಮೂಲಕ ಉದರಕ್ಕೆ ಪ್ರವೇಶಮಾಡುವ ಅನ್ನ ಮತ್ತು ಉದರಗಳಿಗೆ ಒಳಗೆ ಹೋಗುವಂತೆ ಅವಕಾಶಪ್ರದನಾಗಿರುವನು.

೩. ಶಬ್ದಗಳ ಉಚ್ಚಾರಣೆಯು ಕಂಠದ ಮೂಲಕ ಆಗುವುದು. ಶಬ್ದಗಳ ಉಚ್ಚಾರಣಾಕ್ರಿಯೆಯನ್ನು ಕಂಠಗತ ದ್ವಿದಳಪದ್ಮವಾಸಿಯಾದ ಶ್ರೀಪರಮಾತ್ಮನು ಮಾಡಿ ಮಾಡಿಸುತ್ತಾ, ವಾಗ್ರೂಪವಾದ ವ್ಯಾಪಾರವನ್ನು ನುಡಿದು ನುಡಿಸುವನು. ॥೭॥

## ಪದ್ಯ ೮

**ಮೂಲ**

ನಾಸಿಕದಿ ನಾಸತ್ಯದಸ್ರರು ।
ಶ್ವಾಸಮಾನಿಪ್ರಾಣ ಭಾರತಿ ।
ಹಂಸ ಧನ್ವಂತ್ರಿಗಳು ಅಲ್ಲಲ್ಲಿಪ್ಪರವರೊಳಗೆ ॥
ಭೇಶ ಭಾಸ್ಕರರಕ್ಷಿಯುಗಳಕ ।
ಧೀಶರೆನಿಪರು ಅವರೊಳಗೆ ಲ ।
ಕ್ಷ್ಮೀಶ ದಧಿವಾಮನರು ನಿಯಾಮಿಸುತಲಿರುತಿಹರು॥ ॥೮॥

**ಅವತರಣಿಕೆ**

ನಾಸಿಕೇಂದ್ರಿಯ ಮತ್ತು ನೇತ್ರೇಂದ್ರಿಯಗಳ ಇಂದ್ರಿಯಾಭಿಮಾನಿ ದೇವತೆಗಳು ಮತ್ತು ಆ ಸ್ಥಾನಗಳಲ್ಲಿ ಚಿಂತಿಸಬೇಕಾದ ಭಗವದ್ರೂಪಗಳ ವಿವರ

ಗಳನ್ನು ತಿಳಿಸುತ್ತಾರೆ–ಪ್ರಸಕ್ತ ಸಂಧಿಗತ ೮ನೆಯ ಈ ಪದ್ಯದಿಂದ **ನಾಸಿಕದಿ** ಎಂದು.

ಮೂಗಿನ ಎರಡು ಹೊಳ್ಳೆಗಳಲ್ಲಿ ನಾಸತ್ಯ ಮತ್ತು ದಸ್ರರೆಂಬ ಹೆಸರಿದ ಇಬ್ಬರು ಅಶ್ವಿನೀದೇವತೆಗಳಿರುವರು. ಬಲಶ್ವಾಸಕ್ಕೆ ಸೂರ್ಯನಲ್ಲಿ ಶ್ವಾಸಾಭಿಮಾನಿಯಾದ ಮುಖ್ಯಪ್ರಾಣದೇವರು. ಎಡಶ್ವಾಸದಲ್ಲಿ ಚಂದ್ರನಲ್ಲಿ ಭಾರತೀದೇವಿಯರು. ಅಲ್ಲಿ ಮುಖ್ಯಪ್ರಾಣಾಂತರ್ಗತಹಂಸನಾಮಕಪರಮಾತ್ಮ ಮತ್ತು ಭಾರತ್ಯಂತರ್ಗತಮುಖ್ಯಪ್ರಾಣಾಂತರ್ಗತ ಧನ್ವಂತ್ರೀನಾಮಕಪರಮಾತ್ಮನನ್ನು ಚಿಂತಿಸಬೇಕು. ಅಂತೆಯೇ ನೇತ್ರದ್ವಯಗಳಲ್ಲಿ ಸೂರ್ಯ ಮತ್ತು ಚಂದ್ರರು ಅಭಿಮಾನಿಗಳು. ಬಲಗಣ್ಣಿಗೆ ಸೂರ್ಯ ಮತ್ತು ಎಡಗಣ್ಣಿಗೆ ಚಂದ್ರ. ಸೂರ್ಯನಲ್ಲಿ ರಮಾಪತಿಯಾದ ಶ್ರೀಮನ್ನಾರಾಯಣ (ಲಕ್ಷ್ಮೀಶ) ಮತ್ತು ಚಂದ್ರನಲ್ಲಿ ದಧಿವಾಮನದೇವರು ಇದ್ದು, ಇಂದ್ರಿಯಗತ ವ್ಯಾಪಾರಗಳನ್ನು ನಿಯಾಮಿಸುತ್ತಿರುವರು ಎಂದು ಜ್ಞಾನಾನುಸಂಧಾನಪೂರ್ವಕ ಚಿಂತಿಸಬೇಕೆಂದು ಪದ್ಯದ ತಾತ್ಪರ್ಯವು. ॥೮॥

**ಪ್ರತಿಪದಾರ್ಥ**

**ನಾಸಿಕದಿ**＝ಮೂಗಿನ ಬಲಹೊಳ್ಳೆ ಮತ್ತು ಎಡಹೊಳ್ಳೆಗಳಲ್ಲಿ (ನಾಸಿಕದ್ವಾರಗಳಲ್ಲಿ), **ನಾಸತ್ಯ ದಸ್ರರು**＝ನಾಸತ್ಯ ಮತ್ತು ದಸ್ರ ಎಂಬ ಹೆಸರಿನ ಇಬ್ಬರು ಅಶ್ವಿನೀದೇವತೆಗಳು ಇದ್ದಾರೆ. **ಶ್ವಾಸಮಾನಿ**＝ದೇಹದಲ್ಲಿ ಶ್ವಾಸೋಚ್ಛ್ವಾಸಕ್ರಿಯೆಗಳನ್ನು ಮಾಡಿಸುತ್ತಿರುವ ಶ್ವಾಸಾಭಿಮಾನಿಯಾದ, **ಪ್ರಾಣ**＝ಶ್ರೀಮುಖ್ಯಪ್ರಾಣದೇವರು, **ಭಾರತಿ**＝ಅವರ ಪತ್ನಿ ಶ್ರೀಭಾರತೀದೇವಿಯರು, **ಹಂಸ ಧನ್ವಂತ್ರಿಗಳು**＝ಬಲಶ್ವಾಸದಲ್ಲಿ ಶ್ರೀಮುಖ್ಯಪ್ರಾಣಾಂತರ್ಗತನಾಗಿ, **ಹಂಸನಾಮಕ** ಪರಮಾತ್ಮನೂ, ಎಡಶ್ವಾಸದಲ್ಲಿ ಶ್ರೀಭಾರತೀದೇವಿಯವರ ಅಂತರ್ಗತ ಶ್ರೀಮುಖ್ಯಪ್ರಾಣದೇವರಲ್ಲಿ **ಧನ್ವಂತ್ರಿನಾಮಕ** ಶ್ರೀಪರಮಾತ್ಮನೂ ಇದ್ದಾರೆ. **ಅಲ್ಲಲ್ಲಿ**＝ದೇಹಗತ

ಆಯಾಯ ಇಂದ್ರಿಯಗಳಲ್ಲಿ. **ಇಪ್ಪರು**=ವಿದ್ಯಮಾನರಾಗಿದ್ದಾರೆ. **ಅವರೊಳಗೆ**=ಅಂತಹ ಇಂದ್ರಿಯಾಭಿಮಾನಿಗಳ ಪೈಕಿ, **ಭಾಸ್ಕರ**=ಸೂರ್ಯನು, **ಭೇಶ**=ನಕ್ಷತ್ರಾಧಿಪತಿಯಾದ ಚಂದ್ರನು, **ಅಕ್ಷಿಯುಗಳಕೆ**=ಎರಡು ಕಣ್ಣುಗಳಿಗೂ (ಬಲನೇತ್ರದಲ್ಲಿ ಸೂರ್ಯ, ಎಡನೇತ್ರದಲ್ಲಿ ಚಂದ್ರ), **ಅಧೀಶರೆನಿಪರು**=ನೇತ್ರೇಂದ್ರಿಯಾಭಿಮಾನಿ ದೇವತೆಗಳಾಗಿ ನೇತ್ರಗಳ ಕಾರ್ಯವನ್ನು ನಿಯಮಿಸುತ್ತಾ ಇರುವರು, **ಅವರೊಳಗೆ**=ಅಂತಹ ಚಕ್ಷುರಿಂದ್ರಿಯಾಭಿಮಾನಿಗಳಾದ ಸೂರ್ಯ ಮತ್ತು ಚಂದ್ರರಲ್ಲಿ, **ಲಕ್ಷ್ಮೀಶ**=ಇಂದಿರಾರಮಣನಾದ ಶ್ರೀಮನ್ನಾರಾಯಣ, **ದಧಿವಾಮನರು**=ದಧಿವಾಮನನಾಮಕ ಶ್ರೀಪರಮಾತ್ಮನೂ, **ನಿಯಾಮಿಸುತಲಿಹರು**=ಸೂರ್ಯ ಚಂದ್ರಾಂತರ್ಗತಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತರಾಗಿದ್ದುಕೊಂಡು, ನೇತ್ರೇಂದ್ರಿಯಗಳ ಕಾರ್ಯವನ್ನು ನಿಯಮನ ಮಾಡಿ ಮಾಡಿಸುತ್ತಿದ್ದಾರೆ. ॥೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ವಾಸಾಭಿಮಾನಿಗಳ ಹೇಳತಾರೆ.

ನಾಸಕದಿ–ಬಲಮೂಗು ಎಡಮೂಗು ಎರಡರಿಂದ ಬರತಕ್ಕ ಉಭಯವಿಧವಾದ, ಶ್ವಾಸ–ಶ್ವಾಸಗಳಿಗೆ, ಮಾನಿ–ಅಭಿಮಾನಿಗಳು ದಾರೆಂದರೆ, ನಾಸತ್ಯ ದಸ್ರರು–ಬಲಮೂಗಿಗೆ ನಾಸತ್ಯ, ಎಡಮೂಗಿಗೆ ದಸ್ರ (ಇವರು ಅಶ್ವಿನೀದೇವತೆಗಳು), ಭೇಶ ಭಾಸ್ಕರ–ಸೂರ್ಯ ಬಲಕ್ಕೆ, ಚಂದ್ರ ಎಡಕ್ಕೆ,ಪ್ರಾಣಭಾರತಿ–ಪ್ರಾಣದೇವರು ಬಲಕ್ಕೆ, ಭಾರತೀದೇವೇರು ಎಡಕ್ಕೆ, ಹಂಸ ಧನ್ವಂತ್ರಿ–ಹಂಸರೂಪಿ ಪರಮಾತ್ಮ ಬಲಕ್ಕೆ, ಧನ್ವಂತ್ರಿನಾಮಕ ಪರಮಾತ್ಮ ಎಡಕ್ಕೆ, ಗಳು–ಈ ಪ್ರಕಾರ ಇವರುಗಳು, ಅಲ್ಲಲ್ಲಿಪ್ಪರು–ಆಯಾ ಬಲ ಎಡಶ್ವಾಸಗಳಲ್ಲಿ ಇಪ್ಪರು, ಅವರೊಳಗೆ–ಈ ಅಭಿಮಾನಿದೇವತೆಗಳೊಳಗೆ ಹಂಸ ವಾಯುದೇವತಂತರ್ಗತದಲ್ಲಿ, ಧನ್ವಂತ್ರಿ ಭಾರತೀ ಅಂತರ್ಗತದಲ್ಲಿ ಇದ್ದಾರೆ. ಅಕ್ಷಿಯುಗಳಕೆ–ಶ್ವಾಸಮಾನಿಗಳೆಂದು ಉಕ್ತವಾದ ಸೂರ್ಯ-ಚಂದ್ರಾದಿಗಳು ನೇತ್ರದ್ವಯಗಳಿಗೆ

ಅಧೀಶರೆನಿಪರು–ಅಭಿಮಾನಿಗಳು ಎಂತ ಎನಿಸತಾರೆ. ಬಲನೇತ್ರಕ್ಕೆ ಸೂರ್ಯ ಎಡನೇತ್ರಕ್ಕೆ ಚಂದ್ರ, ಅವರೊಳಗೆ–ಈ ಸೂರ್ಯಚಂದ್ರರಲ್ಲಿ ಲಕ್ಷ್ಮೀಶ–ರಮಾಪತಿಯಾದ ಶ್ರೀನಾರಾಯಣದೇವರು ಸೂರ್ಯನಲ್ಲಿ, ದಧಿವಾಮನರು–ದಧಿವಾಮನಮೂರ್ತಿ ಚಂದ್ರದೇವರಲ್ಲಿ. ನಿಯಾಮಿಸುತ–ನೇತ್ರೇಂದ್ರಿಯವನ್ನು ನಿಯಮನ ಮಾಡುತ್ತಾ, ಇರುತಿಹರು–ಇರೋವರಾಗಿದ್ದಾರೆ ಎಂತ ತಾತ್ಪರ್ಯ. ॥೮॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

**ನಾಸತ್ಯದಸ್ರೌ ಪರಮಸ್ಯನಾಸೇ–ಎಂಬ ಭಾಗವತ ವಾಕ್ಯದಂತೆ,** ನಾಸತ್ಯ ಮತ್ತು ದಸ್ರ ಎಂಬ ಅಶ್ವಿನೀದೇವರೀರ್ವರೂ ಎಡಬಲಮೂಗುಗಳಿಗೆ ಅಭಿಮಾನಿಗಳಾಗಿ ಅಲ್ಲಿ ಇರುವರು. ಅಲ್ಲಿಂದ ಬಿಡುವ ಶ್ವಾಸೋಚ್ಛ್ವಾಸ ಕಾರ್ಯವನ್ನು ಮಾಡಿಸುತ್ತಾ, ಶ್ವಾಸಾಭಿಮಾನಿಗಳಾಗಿ ಪ್ರಾಣ–ಭಾರತಿಯರು ಇರುವರು. ಈ ನಾಲ್ವರಲ್ಲಿಯೂ ಆಯಾ ಸ್ಥಾನಗಳಲ್ಲಿಯೂ ಸಹ ಹಂಸ ಧನ್ವಂತ್ರಿ ಎಂಬ ಎರಡು ಭಗವದ್ರೂಪಗಳನ್ನು ಚಿಂತಿಸಬೇಕು. ಎರಡು ಕಣ್ಣುಗಳಿಗೆ ಅಭಿಮಾನಿಗಳು ಚಂದ್ರ-ಸೂರ್ಯರು. ಅವರಂತರ್ಯಾಮಿಯಾಗಿ ಶ್ರೀನಾರಾಯಣದೇವರೂ ಮತ್ತು ದಧಿವಾಮನದೇವರೂ ಸಹ ಇದ್ದು ನೋಡುವ ವ್ಯಾಪಾರವನ್ನು ಪ್ರೇರಿಸುವರು. ॥೮॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ನಾಸಿಕೇತಿ॥

**ಘ್ರಾಣಾತ್ಮನೇ ಅಶ್ವಿನೀಭ್ಯಾಂನಮಃ–ಇತ್ಯುಕ್ತೇಃ॥**
**ಉತ್ತಮಃ ಸರ್ವದೇವೇಷು ಪ್ರಾಣ ಏವ ಹರೇರನು।**
**ಚತುರ್ಮುಖಸ್ಯ ಪ್ರಾಣಸ್ಯ ನ ವಿಶೇಷೋಸ್ತಿ ಕಶ್ಚನ॥**
**ತಸ್ಮಾದ್ವಿಷ್ಣೋರ್ವ್ರತಂ ತಸ್ಯ ನಿತ್ಯಂ ಪ್ರಾಣ ವ್ರತಂಚರೇತ್॥**
**ಹಂಸೋಽಸ್ತಿರ್ಹಂಸರೂಪಂ ತಯೋರ್ವ್ರತಮುದೀರಿತಂ॥**

ಹಂಸರೂಪೌ ಹಿತೌ ದೇವೌ ಶ್ವಾಸೋಚ್ಛ್ವಾಸ ಪ್ರವರ್ತಕೌ ||
ತಸ್ಮಾತ್ಪ್ರಾಣಾದ್ಯದನ್ಯಂಶ್ಚ ತದ್ರೂಪಂ ಸಂಸ್ಮರೇತ್ಸದೇತಿ||
—ಇತಿ ಬೃಹದಾರಣ್ಯಕಭಾಷ್ಯೇ ||

ಅಕ್ಷೀತಿ|| ಸೂರ್ಯಚಂದ್ರರು ನೇತ್ರಾಭಿಮಾನಿಗಳೆಂದು ತಾತ್ಪರ್ಯ. ||೮||

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ನಾಸಿಕೇತಿ|| ನಾಸತ್ಯ ದಸ್ರೌ ತನ್ನಾಮಕೌ.

## ಕನ್ನಡಾರ್ಥ

ನಾಸಿಕೇಂದ್ರಿಯದಲ್ಲಿ ಅಶ್ವಿನೀದೇವತೆಗಳಿದ್ದಾರೆ. ಅವರಿಗೆ ನಾಸತ್ಯ-ದಸ್ರರೆಂದು ಹೆಸರು, ಅವರಲ್ಲಿ ಪ್ರಾಣ-ಭಾರತೀದೇವಿಯರು ಸ್ಥಿತರಾಗಿದ್ದಾರೆ. ವಾಯ್ವಂತರ್ಗತರಾಗಿ ಹಂಸ-ಧನ್ವಂತರಿ ಭಗವದ್ರೂಗಳು. ನೇತ್ರದ್ವಯಗಳಲ್ಲಿ ಚಂದ್ರ-ಸೂರ್ಯರು ಅಭಿಮಾನಿಗಳು. ಇವರಲ್ಲಿ ಲಕ್ಷ್ಮೀಪತಿ ಮತ್ತು ದಧಿವಾಮನ ಎಂಬ ಭಗವದ್ರೂಪಗಳ ಚಿಂತನೆ. ||೮||

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಮೂಗಿನಲ್ಲಿ ಕಣ್ಣಿನಲ್ಲಿ ಸಹ ಇರುವ ದೇವತೆಗಳನ್ನೂ, ತನ್ನಿಯಾಮಕ ದೇವರ ರೂಪ ಸಹ ತಿಳಿಸುತ್ತಾರೆ, ನಾಸಿಕ ಎಂದು. ಮೂಗಿನಲ್ಲಿ ನಾಸತ್ಯ-ದಸ್ರರೆಂದು ಹೆಸರುಳ್ಳ ಅಶ್ವಿನೀದೇವತೆಗಳು, ಶ್ವಾಸಾಭಿಮಾನಿ ಪ್ರಾಣ, ಭಾರತೀ ಸಹ ಇರುವರು. ಈ ದೇವತೆಗಳಲ್ಲಿ ಹಂಸ, ಧನ್ವಂತ್ರಿ ಎಂಬ ಎರಡು, ದೇವರ ರೂಪ ನಿಯಾಮಕಗಳು, ಭೇಶ-ಭಾಸ್ಕರರೆಂಬ ಹೆಸರುಳ್ಳ ಚಂದ್ರ-ಸೂರ್ಯರು ಕಣ್ಣಿಗಭಿಮಾನಿಗಳು, ಇವರಲ್ಲಿ ಲಕ್ಷ್ಮೀಪತಿ ದಧಿವಾಮನ ಎಂಬ ಎರಡು ದೇವರ ರೂಪಗಳು ನಿಯಾಮಿಸುತ್ತಿರುವವು. ||೮||

# ಸರ್ವವ್ಯಾಖ್ಯಾನಸಾರಸಂಗ್ರಹ

**ನಾಸಿಕದಿ** ಎಂಬ ಪ್ರಸಕ್ತ ೮ನೆಯ ಪದ್ಯದಿಂದ ನಾಸಿಕೇಂದ್ರಿಯ ಮತ್ತು ಚಕ್ಷುರಿಂದ್ರಿಯಗಳಲ್ಲಿರುವ ಅಭಿಮಾನಿದೇವತೆಗಳು, ತದಂತರ್ಗತ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ.

೧. ಮೂಗು ಘ್ರಾಣೇಂದ್ರಿಯವು. ಭೂತತ್ತ್ವದ ತನ್ಮಾತ್ರಗುಣವಾದ ಗಂಧವನ್ನು ಸ್ವೀಕರಿಸುವ ಜ್ಞಾನೇಂದ್ರಿಯವು. ಮೂಗಿನಲ್ಲಿ ನಾಸತ್ಯ ಮತ್ತು ದಸ್ರ ಎಂಬ ಇಬ್ಬರು ಇಂದ್ರಿಯಾಭಿಮಾನಿಗಳಿದ್ದಾರೆ. ಅವರು ಅಶ್ವಿನೀದೇವತೆಗಳು. ಬಲಮೂಗಿನ ಹೊಳ್ಳೆಯಲ್ಲಿ **ನಾಸತ್ಯನೆಂಬ** ಹೆಸರಿನ ಅಶ್ವಿನೀದೇವತೆ ಇದ್ದಾನೆ. ಎಡಮೂಗಿನ ಹೊಳ್ಳೆಯಲ್ಲಿ **ದಸ್ರನೆಂಬ** ಹೆಸರಿನ ಅಶ್ವಿನೀದೇವತೆ ವಿದ್ಯಮಾನನಾಗಿದ್ದಾನೆ.

೨. ಪೂರ್ವೋಕ್ತ ನಾಸತ್ಯ ಮತ್ತು ದಸ್ರರಲ್ಲಿ ಮುಖ್ಯಪ್ರಾಣದೇವರು ಮತ್ತು ತತ್ಪತ್ನೀ ಶ್ರೀಭಾರತೀದೇವಿಯರು ಶ್ವಾಸಾಭಿಮಾನಿಗಳಾಗಿದ್ದಾರೆ. ಬಲಮೂಗಿನಲ್ಲಿ ನಾಸತ್ಯನಲ್ಲಿ ಅಂತರ್ಗತರಾಗಿ **ಶ್ರೀಮುಖ್ಯಪ್ರಾಣದೇವರು** ಶ್ವಾಸಕಾರ್ಯ ಮಾಡಿ ಮಾಡಿಸುತ್ತಾರೆ. ಎಡಮೂಗಿನಲ್ಲಿ ದಸ್ರನಲ್ಲಿ ಅಂತರ್ಭೂತರಾಗಿ ಭಾರತೀದೇವಿಯರ ಅಂತರ್ಗತರಾಗಿ ಮುಖ್ಯಪ್ರಾಣದೇವರೇ ಶ್ವಾಸಾಭಿಮಾನಿಗಳು.

೩. ಬಲಮೂಗಿನಲ್ಲಿ ನಾಸತ್ಯ ಇಂದ್ರಿಯಾಭಿಮಾನಿ. ತದಂತರ್ಗತ ಶ್ರೀಮುಖ್ಯಪ್ರಾಣದೇವರು. ಆ ಮುಖ್ಯಪ್ರಾಣಾಂತರ್ಗತನಾಗಿ **ಹಂಸರೂಪೀ** ಶ್ರೀಪರಮಾತ್ಮನಿದ್ದಾನೆ. ಎಡಮೂಗಿನಲ್ಲಿ ದಸ್ರ ನಾಸಿಕೇಂದ್ರಿಯಭಿಮಾನಿ, ಇವನಲ್ಲಿ ಭಾರತೀದೇವಿಯರು. ಆ ಭಾರತೀರಮಣಾಂತರ್ಗತನಾಗಿ **ಧನ್ವಂತ್ರಿನಾಮಕ** ಶ್ರೀಪರಮಾತ್ಮನಿದ್ದಾನೆ. ಶ್ರೀಮುಖ್ಯಪ್ರಾಣದೇವರು ತತ್ಪತ್ನಿಸಹಿತರಾಗಿ ಪ್ರತಿದಿವಸದಲ್ಲಿಯೂ ೨೧,೬೦೦ ಸಂಖ್ಯಾಕವಾದ ಶ್ವಾನಜಪವನ್ನು ಮಾಡಿ, ತನ್ಮೂಲಕ ಶ್ವಾಸಕ್ರಿಯೆಗಳನ್ನು ಈಶನ ಆಜ್ಞೆಯಿಂದ ಮಾಡಿಸುತ್ತಾ,

ಆ ಹಂಸಮಂತ್ರದ ಫಲವನ್ನು ಹಂಸ–ಧನ್ವಂತ್ರಿ ರೂಪಗಳಿಗೂ, ಜೀವನ ಬಿಂಬಕ್ಕೂ ಐಕ್ಯಚಿಂತನೆ ಮಾಡಿ ಅರ್ಪಿಸುತ್ತಾರೆ. ಇದೇ ಜೀವನ ಅಧಿಷ್ಠಾನದಲ್ಲಿ ನಡೆಯುತ್ತಿರುವ ಮುಖ್ಯಪ್ರಾಣದೇವರ ವಿಶಿಷ್ಟಪೂರ್ಣವಾದ ಮಹದುಪಕಾರ.

೪. ಇನ್ನು ಎರಡು ಕಣ್ಣುಗಳು ಜ್ಞಾನೇಂದ್ರಿಯಗಳು. ತೇಜೋತತ್ತ್ವದ ತನ್ಮಾತ್ರಗುಣವು **ರೂಪವು.** ರೂಪವನ್ನು ಗ್ರಹಿಸುವ ಇಂದ್ರಿಯವೇ ನೇತ್ರದ್ವಯಗಳು. ಬಲನೇತ್ರದಲ್ಲಿ **ಸೂರ್ಯನು** ನೇತ್ರಾಭಿಮಾನಿದೇವತೆಯು, ಎಡಗಣ್ಣಿನಲ್ಲಿ **ಚಂದ್ರನು** ಚಕ್ಷುರಿಂದ್ರಿಯಾಭಿಮಾನಿಯು.

೫. ಸೂರ್ಯಾಂತರ್ಗತ ವಾಯುದೇವರಲ್ಲಿ ಲಕ್ಷ್ಮೀಪತಿಯಾದ **ಶ್ರೀಮನ್ನಾರಾಯಣನು** (ಲಕ್ಷ್ಮೀಶ) ನಿಯಾಮಕನಾಗಿದ್ದಾನೆ. ಎಡಗಣ್ಣಿನಲ್ಲಿ ಚಂದ್ರಾಂತರ್ಗತ ವಾಯ್ವಂತರ್ಗತ **ದಧಿವಾಮನನಾಮಕ** ಶ್ರೀಪರಮಾತ್ಮನು ನಿಯಾಮಕನಾಗಿದ್ದಾನೆ. ಪರಮಮುಖ್ಯವೃತ್ತಿಯಿಂದ ಹಂಸ ಮತ್ತು ಧನ್ವಂತ್ರೀನಾಮಕ ಶ್ರೀಪರಮಾತ್ಮನು ಶ್ವಾಸಕಾರ್ಯಗಳನ್ನು ಶ್ರೀಮುಖ್ಯಪ್ರಾಣರ ಮೂಲಕ ತಾವೇ ಮಾಡಿ, ಇಂದ್ರಿಯಾಭಿಮಾನಿ ನಾಸತ್ಯ ಮತ್ತು ದಸ್ರರ ಮೂಲಕ ಬಿಂಬಕ್ರಿಯಾದ್ವಾರಾ ಮಾಡಿಸುತ್ತಾರೆ. ಅಂತೆಯೇ ದರ್ಶನರೂಪವಾದ ಕಾರ್ಯವನ್ನು ನೇತ್ರದ್ವಯಗಳಲ್ಲಿ ಲಕ್ಷ್ಮೀಶ ಮತ್ತು ದಧಿವಾಮನರೂಪಗಳಿಂದ ತಾನೇ ಇದ್ದು, ವಾಯುದೇವರ ಮೂಲಕ ಚಕ್ಷುರಿಂದ್ರಿಯದ ಕಾರ್ಯಗಳನ್ನು ಮಾಡಿ, ನೇತ್ರೇಂದ್ರಿಯಾಭಿಮಾನಿಗಳಾದ ಸೂರ್ಯ-ಚಂದ್ರರ ದ್ವಾರಾ ಬಿಂಬಕ್ರಿಯಾದ್ವಾರಾ ಮಾಡಿಸುವನು. ಅಂದರೆ ನೇತ್ರೇಂದ್ರಿಯದಲ್ಲಿದ್ದು ನೋಡಿ ನೋಡಿಸುವನು. ಇದೇ ಈಶನಾದ ಶ್ರೀಪರಮಾತ್ಮನ ಇಂದ್ರಿಯವ್ಯಾಪಾರಗಳ ನಿಯಮನಕಾರ್ಯ. ॥೮॥

## ಪದ್ಯ ೯

### ಮೂಲ

ಸ್ತಂಭರೂಪದಲಿಪ್ಪ ದಕ್ಷಿಣ।
ಅಂಬರದಿ ಪ್ರದ್ಯುಮ್ನ ಗುಣರೂ।
ಪಾಂಭ್ರಣಿಯು ತಾನಾಗಿ ಇಪ್ಪಳು ವತ್ಸರೂಪದಲಿ॥
ಪೊಂಬಸಿರಪದಯೋಗ್ಯಪವನ ತ್ರಿ।
ಯಂಬಕಾದಿ ಸಮಸ್ತ ದಿವಿಜಕ।
ದಂಬ ಸೇವಿತನಾಗಿ ಸರ್ವಪದಾರ್ಥಗಳ ತೋರ್ಪ॥ ॥೯॥

### ಅವತರಣಿಕೆ

ಸಮಸ್ತ ಜೀವರ ಬಲಗಣ್ಣಿನಲ್ಲಿರುವ ಭಗದ್ರೂಪದ ವಿವರಗಳನ್ನು ತಿಳಿಸುತ್ತಾರೆ, **ಸ್ತಂಭರೂಪದಲಿಪ್ಪ** ಎಂಬ ಪ್ರಸಕ್ತ ಸಂಧಿಗತ ೯ನೆಯ ಈ ಈ ಪದ್ಯದಿಂದ.

ಸರ್ವಜೀವರ ಬಲಗಣ್ಣಿನಲ್ಲಿ (ದಕ್ಷಿಣಾಂಬಕ) ಆಧಾರರೂಪನಾಗಿ ಹಸುವನ್ನು ಕಟ್ಟುವ ಗೂಟದಂತೆ ಶ್ರೀಪರಮಾತ್ಮ ಇರುವನು. ಸ್ತಂಭರೂಪದಲಿರುವ ಶ್ರೀಪರಮಾತ್ಮನಿಗೆ ಪ್ರದ್ಯುಮ್ನನೆಂದು ಹೆಸರು. ಈ ಪ್ರದ್ಯುಮ್ನ ನಾಮಕ ಶ್ರೀಹರಿಯೇ ಜಾಗ್ರದಾವಸ್ಥ ಪ್ರೇರಕನಾದ ವಿಶ್ವಂಭರನು. ಅಂಭ್ರಣೀ ರೂಪಳಾದ ಮಹಾಲಕ್ಷ್ಮಿಯು ಗೂಟಕ್ಕೆ ಕಟ್ಟುವ ಹಗ್ಗದ ರೂಪದಲ್ಲಿರುವಳು (ಗುಣರೂಪ). ಮುಂದಿನ ಕಲ್ಪದಲ್ಲಿ ಹಿರಣ್ಯಗರ್ಭರೆಂಬ ಹೆಸರಿನಿಂದ ಚತುರ್ಮುಖಬ್ರಹ್ಮಪದವಿಗೆ ಬರುವ ವಾಯುದೇವರು ಕರುವಿನ ರೂಪದಲ್ಲಿರುವರು. ಅಂದರೆ ಪುರುಷನಾಮಕನಾದ ಸರ್ವೋತ್ತಮ ಶ್ರೀಪರಮಾತ್ಮನು ಗೂಟದ ರೂಪದಲ್ಲಿಯೂ, ತ್ರಿಗುಣಾಭಿಮಾನಿಯಾದ ಪ್ರಕೃತಿಸ್ವರೂಪಳಾದ ಶ್ರೀರಮಾ ಹಗ್ಗದಂತೆಯೂ ಮತ್ತು ಜೀವೋತ್ತಮರಾದ ವಾಯುದೇವರು ಕರುವಿನಂತೆಯೂ ಇದ್ದಾರೆ ಎಂದು ತಾತ್ಪರ್ಯ. ಪ್ರಕೃತಿ ಎಂಬ ರಂಗಮಂಟಪದಲ್ಲಿ

ಪುರುಷನಾಮಕನು ಲೀಲಾವಿನೋದಿಯಾಗಿ ಸಕಲ ಚರಾಚರಾತ್ಮಕವಾದ ಬ್ರಹ್ಮಾಂಡವನ್ನು ಸೃಷ್ಟಿಸಿ, ಅದಕ್ಕೆ ಶ್ರೀವಾಯುದೇವರನ್ನು ಕಾರ್ಯನಿರ್ವಹಣಾಧಿಕಾರಿಗಳನ್ನಾಗಿ ಮಾಡಿ, ಜಗದ್ವ್ಯಾಪಾರಗಳನ್ನು ಶ್ರೀರಮಾ ಮತ್ತು ವಾಯುಗಳ ದ್ವಾರಾ ಮಾಡಿ ಮಾಡಿಸುತ್ತಾ, ರುದ್ರಾದಿ ಸಕಲ ಸುರಗಣದಿಂದ ಸಂಸೇವ್ಯಮಾನನಾಗಿ, ಬ್ರಹ್ಮಾಂಡಗತಸರ್ವವಸ್ತುಗಳನ್ನು ಗೋಚರಿಸುವಂತೆ ಜಾಗ್ರದಾವಸ್ಥೆಗೆ ಪ್ರೇರಕನಾಗಿ ಮಾಡಿಸುವನು. ॥೯॥

**ಪ್ರತಿಪದಾರ್ಥ**

**ಪ್ರದ್ಯುಮ್ನ**=ಪ್ರದ್ಯುಮ್ನನಾಮಕ ಶ್ರೀಪರಮಾತ್ಮನು, **ದಕ್ಷಿಣ ಅಂಬಕದಿ**=ಬಲಗಣ್ಣಿನ ಕರಿಗುಡ್ಡೆಯಲ್ಲಿ, **ಸ್ತಂಭರೂಪದಲಿಪ್ಪ**= ಸ್ತಂಭಾಕಾರನಾಗಿ (ಗೂಟದಂತೆ) ವಿದ್ಯಮಾನನಾಗಿದ್ದಾನೆ. **ಅಂಭ್ರಣಿಯು** =ಅಂಭ್ರಣೀನಾಮಕ ಶ್ರೀಲಕ್ಷ್ಮೀದೇವಿಯು, **ಗುಣರೂಪ ತಾನಾಗಿ**= ಗೂಟಕ್ಕೆ ಕಟ್ಟುವ ಹಗ್ಗದ ರೂಪದಲ್ಲಿ ಸ್ವಯಂ, **ಇಪ್ಪಳು**=ಇದ್ದಾಳೆ. (ಹಗ್ಗವು ಸ್ತಂಭಕ್ಕೆ ಬಿಗಿಯಲ್ಪಟ್ಟಿದೆ. ಅಂದರೆ ರಜ್ಜು ಸ್ತಂಭಾಧೀನವು. ಅಂತೆಯೇ ರಮಾ ನಿತ್ಯಭಗವದಧೀನಳು ಎಂತ ತಾತ್ಪರ್ಯ.) **ಪೊಂಬಸಿರ** =ಹಿರಣ್ಯಗರ್ಭನೆಂಬ ನಾಮವುಳ್ಳ (ಪೊನ್ನು-ಭಂಗಾರ, ಬಸಿರ-ಗರ್ಭ) ಚತುರ್ಮುಖಬ್ರಹ್ಮದೇವರ, **ಪದಯೋಗ್ಯ**=ಪದವಿಗೆ ಯೋಗ್ಯರಾದ, ಅಂದರೆ ಮುಂದಿನ ಕಲ್ಪದಲ್ಲಿ ಬ್ರಹ್ಮಪದವಿಗೆ ಬರುವ, **ಪವನ**=ಭಾವೀ ಬ್ರಹ್ಮರಾದ ಪವಮಾನನಾಮಕ ಶ್ರೀಮುಖ್ಯಪ್ರಾಣದೇವರು, **ವತ್ಸರೂಪದಿ** ಕರುವಿನ ರೂಪದಲ್ಲಿದ್ದಾರೆ. (ಸ್ತಂಭದ ಅಧೀನ ರಜ್ಜು. ರಜ್ಜುವಿನ ಅಧೀನ ಗೋವತ್ಸ. ಅಂದರೆ ಭಗವದಧೀನರಾದ ಶ್ರೀಲಕ್ಷ್ಮೀದೇವಿಯರ ಅಧೀನರಾಗಿ ಶ್ರೀವಾಯುದೇವರು ಇದ್ದಾರೆ ಎಂತ ತಾತ್ಪರ್ಯ). **ತ್ರಿಯಂಬಕಾದಿ**= ರುದ್ರದೇವರೇ ಮೊದಲಾದ (ತ್ರಿ-ಮೂರು, ಅಂಬಕ-ಕಣ್ಣು ಅಂದರೆ ತ್ರಿನೇತ್ರರಾದ ರುದ್ರದೇವರು), **ಸಮಸ್ತದಿವಿಜ**=ಸರ್ವದೇವತೆಗಳ, **ಕದಂಬ**= ಸಮೂಹದಿಂದ (ಅಂದರೆ ಸಮಸ್ತ ದೇವತಾಗಣದಿಂದ), **ಸೇವಿತನಾಗಿ**= ಸಂಸೇವ್ಯಮಾನನಾಗಿ, ದಕ್ಷಿಣನೇತ್ರಗತ ಶ್ರೀಪ್ರದ್ಯುಮ್ನನು, **ಸರ್ವ**

**ಪದಾರ್ಥಗಳ**=ಸಮಸ್ತ ವಸ್ತುಗಳನ್ನೂ, **ತೋರ್ಪ**=ವಾಯುದೇವರ ದ್ವಾರಾ ನೇತ್ರಕ್ಕೆ ವಿಷಯವನ್ನಾಗಿ ಮಾಡಿ ದರ್ಶನ ಮಾಡಿಸುತ್ತಾನೆ. ಅಂದರೆ ಜಾಗ್ರದಾವಸ್ಥಾ ಪ್ರೇರಕನು. ॥೯॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

**ಪ್ರಮಾಣ**

**ಭಗವತೋ ರೂಪಂ ರೂಪಂ ಪ್ರತಿಜೀವಾಖ್ಯ ಪ್ರತಿಬಿಂಬೋಬಭೂವ। ಆಧಾನಮವಸ್ಥಾನಂ ಸೂಕ್ಷ್ಮಶರೀರಂ। ಪ್ರತ್ಯಾಧಾನಂ ವಿತಾನಂ ಸ್ಥೂಲ ಶರೀರಂ। ಪ್ರಾಣೋ ನಾರಾಯಣಃ ಸ್ಥೂಣಾ। ವಾಯುರ್ಗೋವತ್ಸರೂಪೇಣ ಸರ್ವಪ್ರಾಣಿಷು ಸಂಸ್ಥಿತಃ। ಸೂಕ್ಷ್ಮದೇಹೋ ಗೃಹಂ ತಸ್ಯ ವಿತಾನಂ ಸ್ಥೂಲಮುಚ್ಯತೇ। ಅನ್ನಂ ದಾಮಾತ್ಮಕಂ ತಸ್ಯ ಸ್ಥೂಣಾತು ಭಗವಾನ್ ಹರಿಃ। ಧ್ಯಾಯತ್ಯೇವಂ ಹಿ ಯೋ ವಾಯುಂ ಶ್ರೋತ್ರಾದೀನ್ ಮನಸಾಸಹ। ಬುದ್ಧಿಂ ಚ ಸಪ್ತಶತ್ರೂನ್ ಸ ವಿಷಯೇಷ್ವಭಿಧಾವತಃ। ಅಸುರಾನ್ ಸನ್ನಿರುಧ್ಯೈವ ವೇತ್ತಿ ನಾರಾಯಣಂ ಪರಂ॥ ಇತಿ ಅಜಾತಶತ್ರು ಬ್ರಾಹ್ಮಣಂ॥**

**ಅರ್ಥ**

ಪ್ರತಿಬಿಂಬ–ಪ್ರತಿಬಿಂಬರಾದ ಜೀವರ ಸ್ವರೂಪದಲ್ಲಿ ಭಗವತಃ–ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಹರಿ, ಪ್ರತಿಜೀವಾಖ್ಯ–ಪ್ರತಿಜೀವರಲ್ಲಿ ಜೀವನಾಮದಿಂದ ಪ್ರಸಿದ್ಧನಾಗಿನ್ನೂ, ರೂಪಂ ರೂಪಂ–ಆಯಾ ಜೀವಾಕಾರ ಧರಿಸಿನ್ನೂ, ಬಭೂವ–ಬಿಂಬನಾಗಿ ಇರೋವನಾಗಿ ಇದ್ದಾನೆ. ಪ್ರಾಣೋ ನಾರಾಯಣಃ–ಜೀವನ ಸ್ವರೂಪದಲ್ಲಿ ಪ್ರಾಣಶಬ್ದವಾಚ್ಯನು ನಾರಾಯಣನು. ಇಲ್ಲಿಗೆ ಸ್ವರೂಪ ವಿಚಾರ ಮುಗಿಯಿತು, ಸೂಕ್ಷ್ಮಶರೀರ ಸಾಂಕೇತ ಅನಿರುದ್ಧಶರೀರ **ವಿಚಾರ ಹೇಳತಾರೆ.** ಪ್ರತಿ–ಸ್ವರೂಪ ದೇಹಕ್ಕೆ ಸದೃಶವಾದ, ದೇಹಕ್ಕೆ

ಸದೃಶವಾದ ತದಾಕಾರವಾದ, ವಿತಾನಂ–ಸ್ವರೂಪಕ್ಕೆ ಅನ್ಯವಾದ, ಆಧಾನಂ–ಶ್ರೀಪರಮಾತ್ಮನ ಆವಾಸಕ್ಕೆ ಯೋಗ್ಯವಾದ, ಸೂಕ್ಷ್ಮಶರೀರಂ–ಸೂಕ್ಷ್ಮ ಸಾಂಕೇತವಾದ ಅನಿರುದ್ಧ ಶರೀರವೂ, ಇದಕ್ಕೆ ಅನ್ಯವಾದ, ಆಧಾನಂ ಅವಸ್ಥಾನಂ–ಏಕಾರ್ಥವೂ, ಪರಮಾತ್ಮನ ಆವಾಸಕ್ಕೆ ಯೋಗ್ಯವಾದ ಅವಸ್ಥಾನವೂ, ಸ್ಥೂಲಶರೀರಂ–ಸ್ಥೂಲಶರೀರವು ಅಂತು ಸ್ವರೂಪ, ಅನಿರುದ್ಧ, ಸ್ಥೂಲ ಮೂರು ಶರೀರಗಳೂ ಹೇಳಿದಂತಾಯಿತು. ನೇತ್ರಗತ ಗೋವತ್ಸರೂಪಗಳ ಹೇಳತಾರೆ. ಸ್ಥೂಣಾ–ಸ್ವರೂಪನೇತ್ರಗತ ಗೂಟಗಳು, ಆ ಗೂಟಗಳಿಗೆ ಕಟ್ಟಿದ ರಜ್ಜುಗಳು, ಆ ರಜ್ಜುಗಳಿಗೆ ಕಟ್ಟತಕ್ಕ, ಗೋವತ್ಸ–ಆಕಳು ಕರುವುಃ ವಾಯುಃ–ವಾಯುಶಬ್ದವಾಚ್ಯನಾರಾಯಣ, ರೂಪೇಣ–ವತ್ಸರೂಪದಿಂದ, ಸರ್ವಪ್ರಾಣಿಷು–ಸಮಸ್ತಜೀವರ ಸ್ವರೂಪದಲ್ಲಿ, ಸಂಸ್ಥಿತಃ–ಇರೋವನಾಗಿದ್ದಾನೆ. ತಸ್ಯ–ಸ್ವರೂಪಕ್ಕೆ ಅನ್ಯವಾದ, ಗೃಹಂ- ಗೃಹವೂ ಅಂದರೆ, ಸೂಕ್ಷ್ಮ ಶರೀರವೂ, ಸೂಕ್ಷ್ಮದೇಹೇ–ಸೂಕ್ಷ್ಮಾಖ್ಯ ಅನಿರುದ್ಧಶರೀರದಲ್ಲಿ ಗೋವತ್ಸ ರೂಪಗಳು ಇರೋದಾಗಿ ಅವೆ. ವಿತಾನಂ–ಸೂಕ್ಷ್ಮಶರೀರಕ್ಕೆ ಅನ್ಯವಾದದ್ದು ಸ್ಥೂಲಂ–ಸ್ಥೂಲಶರೀರವೂ, ಈ ಪ್ರಕಾರ ದೇಹಗಳಲ್ಲಿ ಗೋವತ್ಸರೂಪಗಳ ಹೇಳತದೆ. ಅವಶಿಷ್ಟಕ್ಕೆ ಅನ್ವಯಪದಕ್ರಮ ಸ್ಥೂಲದೇಹದಲ್ಲಿ–ಸ್ಥೂಣಾತು ಭಗವಾನ್ ಹರಿಃ ತಸ್ಯ ಅನ್ನಂ ದಾಮಪಾತ್ಮಕಂ ಯಃ ವಾಯುಂ ಏವ, ಧ್ಯಾಯತಿ ಹಿ ಶ್ರೋತ್ರಾದೀನ್ ಮನಸಾ ಬುದ್ಧಿಂ ಚ ಸಹ ಸಪ್ತ ಶತ್ರೂನ್ ಅಭಿಧಾವತಃ ಅಸುರಾನ್ ಸಹ ವಿಷಯೇಷು ಸನ್ನಿರುದ್ಧ್ಯೈವ ಪರಂ ನಾರಾಯಣಂ ವೇತ್ತಿ.

ಪ್ರದ್ಯುಮ್ನ–ಪ್ರದ್ಯುಮ್ನರೂಪಿಯಾದ ಶ್ರೀಪರಮಾತ್ಮ, ದಕ್ಷಿಣಅಂಬಕದಿ–ಬಲದ ಕಣ್ಣಿನಲ್ಲಿ, ಸ್ತಂಭರೂಪದಲಿಪ್ಪ–ನೇತ್ರಗತ ಕೃಷ್ಣಗುಡ್ಡಿನಲ್ಲಿ ವಿದ್ಯಮಾನವಾದ ಕರೀಚುಕ್ಕಿನಲ್ಲಿ ಸ್ತಂಭರೂಪದಿಂದ ಇರೋವನಾಗಿದ್ದಾನೆ. ಗುಣರೂಪ–ಅದಕ್ಕೆ ಹಗ್ಗರೂಪಳು. ಅಂಭೃಣಿಯು–ಅಂಭ್ರಣಿನಾಮಕ ಲಕ್ಷ್ಮೀದೇವೇರು, ತಾನಾಗಿ–ಸಾಕ್ಷಾತ್ತು ತಾನೇ ಆಗಿ, ಇಪ್ಪಳು–ನೇತ್ರಗತ ದೊಡ್ಡದಾದ ಕೃಷ್ಣಗುಡ್ಡಿನಲ್ಲಿ ಇದ್ದಾಳೆ. ಇಂಥಾ ರಜ್ಜುಯುಕ್ತ ಸ್ತಂಭಕ್ಕೆ, ಕಟ್ಟಲ್ಪಟ್ಟಿದೆ ಎಂದರೆ ಸ್ತಂಭಾಧೀನ ರಜ್ಜು ಎಂತ ತಾತ್ಪರ್ಯ. ಪೊಂಬಸಿರಪದಯೋಗ್ಯ–ಭಾವೀಬ್ರಹ್ಮನಾದ, ಪವನ–ವಾಯುದೇವರು ಇಂಥ ರಜ್ಜುವಿನಿಂದ

ಕಟ್ಟಿಸಿಕೊಂಡವರಾಗಿ, ಎಂದರೆ ರಜ್ಜು ಅಧೀನರಾಗಿ. ವತ್ಸರೂಪದಲಿ- ಕರುವಿನರೂಪದಿಂದ ನೇತ್ರಗತಶುಭ್ರದಲಿ ಇರೋವರಾಗಿದ್ದಾರೆ, ತ್ರಿಯಂಬಕಾದಿ-ರುದ್ರದೇವರೇ ಮೊದಲಾದ, ಸಮಸ್ತ ದಿವಿಜ-ಯಾವತ್ತೂ ದೇವತೆಗಳ, ಕದಂಬ ಸೇವಿತನಾಗಿ-ಸಮೂಹದಿಂದ ಸೇವಾ ಮಾಡಿಸಿಕೊಂಡವನಾಗಿ, ಸರ್ವ ಪದಾರ್ಥಗಳ ತೋರ್ಪ-ಪ್ರದ್ಯುಮ್ನ, ವಾಯುದೇವರ ದ್ವಾರಾ ನೇತ್ರಕ್ಕೆ ಸರ್ವ ಪದಾರ್ಥಗಳೂ ತೋರಿಸೋವನಾಗುತ್ತಾನೆ. ಎಡನೇತ್ರದಲ್ಲಿ ಅನಿರುದ್ಧ, ಭಾರತ್ಯಾದಿ ಸ್ತ್ರೀದೇವತೆಗಳ ತಿಳಿಯಬೇಕೆಂದು ತಾತ್ಪರ್ಯ. ॥೯॥

೨. ಭಾವಪ್ರಕಾಶಿಕೆ ವ್ಯಾಖ್ಯಾನ

ಮೇಲಿನ ಪದ್ಯದಲ್ಲಿ ಚಂದ್ರ-ಸೂರ್ಯರು ನೇತ್ರಾಭಿಮಾನಿಗಳೆಂತಲೂ, ಅವರ ಅಂತರ್ಯಾಮಿಯಾಗಿ ನಾರಾಯಣ-ದಧಿವಾಮನರು ಇರುವರೆಂದು ಹೇಳಿದರು. ಈಗ ಬಲನೇತ್ರದಲ್ಲಿರುವ ವಿಶೇಷರೂಪಗಳನ್ನು ಹೇಳುತ್ತಾರೆ- ಸ್ತಂಭರೂಪದಲಿ ಮೊದಲಾದ ಮೂರು ಪದ್ಯಗಳಿಂದ-

**ಮಾನಸಸ್ಮೃತಿಯಲ್ಲಿ**

**ದಕ್ಷಿಣಾಕ್ಷಿಸ್ಥಿತೋ ವಿಷ್ಣುಃ ಸ್ತಂಭರೂಪೋ ರಮಾ ಸ್ವಯಂ।**
**ರಜ್ಜುರೂಪಾತಯಾಬದ್ಧಂ ವಾಯುಂ ಗೋವತ್ಸರೂಪಿಣಮ್॥**

ಎಂಬ ಶ್ಲೋಕಾಭಿಪ್ರಾಯವನ್ನೇ ಈ ಪದ್ಯದಲ್ಲಿ ದಾಸರಾಯರು ಹೇಳಿರುವರು. ಬಲದ ಕಣ್ಣಿನಲ್ಲಿ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನು ಸ್ತಂಭಾಕಾರನಾಗಿರುವನು. ರಮಾದೇವಿಯರು ಹಗ್ಗವಾಗಿದ್ದು, ಕರುವಿನ ರೂಪದಿಂದ ಇರುವರು, ಮುಂದಿನ ಕಲ್ಪಕ್ಕೆ ಬ್ರಹ್ಮಪದವಿಗೆ ಬರುವ ವಾಯುದೇವರನ್ನು ಕಟ್ಟಿರುವರು. ಆ ವಾಯುದೇವರು ರುದ್ರಾದಿ ಸಮಸ್ತ ದೇವತಾಸಮೂಹದಿಂದ ಸೇವಿತರಾಗಿ ಕಣ್ಣಿಂದ ನೋಡಲು ಯೋಗ್ಯವಾದ ಸಕಲ ಪದಾರ್ಥಗಳನ್ನು ನೋಡುವಂತೆ ಮಾಡುವರು. ॥೯॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ಸ್ತಂಭೇತಿ॥

ದಕ್ಷಿಣಾಕ್ಷಿಸ್ಥಿತೋ ವಿಷ್ಣುಃ ಸ್ತಂಭರೂಪೋ ರಮಾಸ್ವಯಂ।
ರಜ್ಜುರೂಪಾ ತಯಾ ಬದ್ಧಂ ವಾಯುಂ ಗೋವತ್ಸರೂಪಿಣಂ॥
ಶ್ವೇತತಾರಾಸ್ಥಿತಶ್ಚಂದ್ರೋ ವಸಿಷ್ಠಾಖ್ಯ ಸುರೇಶ್ವರಃ।
ನಯನೋ ರಕ್ತ ರಾಜಿಸ್ಥೋ ರುದ್ರೋ ಗೌತಮನಾಮಕಃ॥
ಕೃಷ್ಣ ತಾರಾಸ್ಥಿತೋ ವಹ್ನಿರ್ಜಮದಗ್ನಿರಿತಿಸ್ಮೃತಃ ।
ಕನನೀಂಯಾದಿತ್ಯಸಂಸ್ಥೋ ವಿಶ್ವಾಮಿತ್ರಾಭಿಧಃ ಸ್ಥಿತಃ॥
ವಾರಿಗೋ ವರುಣಃ ಸಾಕ್ಷಾದ್ಭಾರದ್ವಾಜಾಭಿಧಸ್ತಯಾ।
ಅಧರಾವರ್ತಿನೀ ಸಂಸ್ಥಾ ಪೃಥ್ವೀ ಕಶ್ಯಪನಾಮಿಕಾ॥
ಉತ್ತರಾಯಾಂ ಧ್ಯುನಾಮ್ನಿಯಾಂ ಭಾರತೀ ಹ್ಯಾತ್ರಿನಾಮಿಕಾ।
ಏತೇ ಹ್ಯಕ್ಷೀಣಮನಸಃ ಸಪ್ತದೇವಾ ಉಪಾಸತಿ ಇತಿ॥

—ಇತಿ ಮಾನಸಸ್ಮೃತ್ಯುಕ್ತೇಃ॥

ನೇತ್ರೇತಿ ಎಂಬ ಪದ್ಯಕ್ಕೆ ಇದೇ ಪ್ರಮಾಣ ಇಟ್ಟುಕೊಳ್ಳಬೇಕು. ಪತ್ರತಾಪಕ–ರುದ್ರನಾಮ. ॥೯॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಸ್ತಂಭರೂಪದಲಿ–ಇತಿ॥ ಪ್ರಾಣೋ ನಾರಾಯಣಃ ಸ್ಥೂಣಾ॥ ವಾಯುಃ ಗೋವತ್ಸರೂಪೇಣ ಸರ್ವಪ್ರಾಣಿಷು ಸಂಸ್ಥಿತಃ॥ ಅನ್ನಂ ದಾಮಾತ್ಮಕಂ ತಸ್ಯ ಸ್ಥೂಣಾ ತು ಭಗವಾನ್ ಹರಿಃ॥ ಧ್ಯಾಯತ್ಯೇವಂ ಹಿ ಯೋ ವಾಯುಂ ಶ್ರೋತ್ರಾದೀನ್ ಮನಸಾ ಸಹ॥ಬುದ್ಧಿಂ ಚ ಸಪ್ತ ಶತ್ರೂಂಶ್ಚ ವಿಷಯೇಷ್ವಭಿಧಾವತಃ॥ ಅಸುರಾನ್ ಸ ನಿರುಧ್ಯೈವ ವೇತ್ತಿ ನಾರಾಯಣಂ ಪರಮ್॥ ದಕ್ಷಿಣಾಕ್ಷಿಸ್ಥಿತಂ ವಾಯುಂ ಸಪ್ತದೇವಾಃ ಉಪಾಸತೇ॥ಅಕ್ಷೀಣ ಜ್ಞಾನ ಮನಸಃ ಸದಾಶಿವ ಪುರಸ್ಸರಾಃ॥ ಉಪಾಸ್ಯಮಾನಂ ತೈಃ ದೇವೈಃ ಮೋಕ್ಷಾರ್ಥಂ ವಾಯುಮೀಶ್ವರಮ್॥ ಸ್ಥೂಣಯಾ ವಿಷ್ಣುನಾ ಸಾರ್ಧಂ ಯೋವಿದ್ಯಾತ್

ಸೋನ್ನಮಶ್ನುತೇ॥ ಇತ್ಯುಕ್ತಂ ಬೃಹದ್ಭಾಷ್ಯೇ॥ ಛಾಂದೋಗ್ಯೇಚ–ಧರ್ಮ ಜ್ಞಾನಾದಿರೂಪೇಣ ವಿಷ್ಣೋಃ ಬಾಹು ಚತುಷ್ಟಯಾತ್॥ ಜಾತಂ ವಾಯುಂ ವಿದಿತ್ವೈವಂ ಪುತ್ರೋ ಭೂತ್ವಾನರೋದಿತಿ॥ ನಜಾಯತೇ ನ ಮ್ರಿಯತೇ ಮುಕ್ತೋಭ[illegible]ತ್ವಾ ಸುಖೀ ಭವೇತ್॥ ವಾಯುಂ ಹರೇಃ ಸುತಂ ಜ್ಞಾತ್ವಾ ನಾಹಂ ಪತ್ರತಯಾ ರುದ್ರಮ್॥ ಹರೇಃ ಪ್ರಸಾದ ಸಾಮರ್ಥ್ಯಾತ್ ಅಜರಾಃ ಚಾಮರೋಸ್ಮ್ಯಹಮ್॥ ಅನಾದಿಕಾಲಸಂಬಂಧಾತ್ ಇತ್ಯುವಾಚ ಪುರಾ ರಮಾ ಇತಿ॥ ॥೯॥

## ಕನ್ನಡಾನುವಾದ

ಬೃಹದಾರಣ್ಯಕೋಪನಿಷತ್ತಿನ ಶಿಶುಬ್ರಾಹ್ಮಣದಲ್ಲಿ ಈ ರೂಪೋಪಾಸನೆಯ ವಿದ್ಯೆಯು ಉಕ್ತವಾಗಿದೆ. ಸಮಸ್ತಚೇತನರಲ್ಲಿ ಗೋವತ್ಸ (ಹಸುವಿನ ಕರು) ರೂಪದಿಂದ ಶ್ರೀವಾಯುದೇವರು ಇರುತ್ತಾರೆ. ಇಂತಹ ಗೋವತ್ಸರೂಪಕ್ಕೆ ವಾಯ್ವಂತರ್ಗತಪ್ರಾಣಪತಿನಾಮಕ ಶ್ರೀಪರಮಾತ್ಮನು (ಕರುವನ್ನು) ಕಟ್ಟುವ ಗೂಟದ (ಸ್ತಂಭ) ರೂಪದಲ್ಲಿದ್ದಾನೆ. ಅನ್ನಾಭಿಮಾನಿಯಾದ ಶ್ರೀಲಕ್ಷ್ಮೀದೇವಿ ಹಗ್ಗ (ಗುಣ) ರೂಪದಲ್ಲಿದ್ದಾಳೆ. ಇಂತು ಪರಮಾತ್ಮನೆಂಬ ಗೂಟಕ್ಕೆ ಬಿಗಿದ ಶ್ರೀಲಕ್ಷ್ಮೀದೇವಿಯೆಂಬ ಹಗ್ಗದಿಂದ ಗೋವತ್ಸರೂಪಿಯಾದ ವಾಯುದೇವರು ಬಂಧಿತರಾಗಿದ್ದಾರೆ. ಇಂತಹ ರಹಸ್ಯವಾದ ಧ್ಯಾನೋಪಾಸನೆ ಮಾಡುವವರಿಗೆ ಪ್ರಾಪಂಚಿಕ ವಿಷಯಗಳಲ್ಲಿಯೇ ಎಳೆಯುವ ದಶೇಂದ್ರಿಯಗಳು, ಮನಸ್ಸು, ಬುದ್ಧಿ, ಚಿತ್ತ ಇವುಗಳು ಆ ಉಪಾಸಕನ ವಶವಾಗುವುವು. ಅದರಿಂದ ಜಿತಕರಣ, ಜಿತಮನಸ್ಕನಾಗಿ ಸಾಧನಕ್ಕೆ ಪ್ರತಿಬಂಧಕವನ್ನುಂಟುಮಾಡುವ ಇಂದ್ರಿಯಾಭಿಮಾನಿ ಅಸುರರನ್ನು ನಿಗ್ರಹಿಸುವ ಶಕ್ತಿಉಂಟಾಗುವುದು. ತನ್ಮೂಲಕ ಪರಾತ್ಪರನಾದ ಶ್ರೀಹರಿಯು ಆ ಉಪಾಸಕನ ಧ್ಯಾನಕ್ಕೆ ವಿಷಯನಾಗುವನು. ಇಂತು, ಗೋವತ್ಸರೂಪದಿಂದ ಬಲಗಣ್ಣಿನಲ್ಲಿ ವಿದ್ಯಮಾನರಾಗಿರುವ ಶ್ರೀವಾಯುದೇವರು ರುದ್ರಾದಿದೇವತಾವರ್ಗದಿಂದ ಸಂಸೇವ್ಯಮಾನರಾಗಿದ್ದಾರೆ. ಹೀಗೆ ಸಮಸ್ತಜೀವರ ದಕ್ಷಿಣಾಕ್ಷಿಯಲ್ಲಿ (ಬಲಗಣ್ಣಿನಲ್ಲಿ) ಸ್ತಂಭರೂಪದಿಂದ ಪ್ರದ್ಯುಮ್ನನಾಮಕ

ಶ್ರೀಪರಮಾತ್ಮನೂ, ಹಗ್ಗರೂಪದಿಂದಿರುವ ಶ್ರೀರಮಾ ಮತ್ತು ರುದ್ರಾದಿಗಳಿಂದ ಮೋಕ್ಷದಲ್ಲಿ ಆನಂದೋದ್ರೇಕಕ್ಕಾಗಿ ಸಂಸೇವ್ಯಮಾನರಾದ ಶ್ರೀವಾಯುದೇವರು ಹಗ್ಗದ ತುದಿಯಿಂದ ಕಟ್ಟಲ್ಪಟ್ಟಿದ್ದಾರೆ.

**ಛಾಂದೋಗ್ಯೋಪನಿಷದ್ಭಾಷ್ಯದಲ್ಲಿ**–ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯಗಳೆಂಬ ನಾಲ್ಕು ಬಾಹುಗಳಿಂದ ಉತ್ಪನ್ನನಾದವನು ವಾಯುದೇವರು ಎಂದು ಉಕ್ತವಾಗಿದೆ. ಈ ಜ್ಞಾನಾನುಸಂಧಾನದಿಂದ ಶ್ರೀವಾಯುದೇವರನ್ನು ಉಪಾಸಿಸುವ ಸಚ್ಚೇತನರು ಜನನ–ಮರಣ ರೂಪವಾದ ಈ ದುಸ್ತರವಾದ ಸಂಸಾರದಿಂದ ಮುಕ್ತರಾಗಿ, ನಿತ್ಯಸುಖಿಯಾಗುವರು.

'ವಾಯುವು ಹರಿಯ ಸುತನು. ವಾಯುಜನಕನು ಶ್ರೀಹರಿಯು.' ಈ ಸಮೀಚೀನವಾದ ಜ್ಞಾನವು ನಿತ್ಯದಲ್ಲಿಯೂ, ಅನಾದಿಕಾಲದಿಂದಲೂ ನನಗೆ ಇದೆ. ಇದರಿಂದಲೇ ನಿತ್ಯಮುಕ್ತಳಾಗಿರುತ್ತೇನೆ. ಜರಾಮರಣರಹಿತಳಾಗಿ ಸದಾ ನಿರ್ವಿಕಾರಳಾಗಿರುತ್ತೇನೆ' ಎಂದು ಶ್ರೀರಮಾದೇವಿಯರು ತಿಳಿದಿರುತ್ತಾರೆ. ಈ ವಿಷಯವನ್ನು **ಶ್ರೀಮದಾಚಾರ್ಯರು** ನಿರೂಪಿಸಿರುತ್ತಾರೆ. ॥೯॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಬಲಗಣ್ಣಿನಲ್ಲಿ ವಿಶ್ವಮೂರ್ತಿ ಉಪಾಸಕರ ಉಪಾಸನೆ ವಿವರಿಸುತ್ತಾರೆ, ಸ್ತಂಭವೆಂದು ಮೊದಲು ಮಾಡಿ ಹನ್ನೊಂದನೇ ಪದ್ಯದ ತನಕ. ದಕ್ಷಿಣ ಅಂಬಕವೆಂಬ ಬಲಗಣ್ಣಿನಲ್ಲಿ, ಪ್ರದ್ಯುಮ್ನದೇವರು ಸ್ತಂಭಾಕಾರದಿಂದ, ಶಾಸ್ತ್ರಪ್ರತಿಪಾದ್ಯನಾಗಿ, ಜ್ಞಾನಧ್ಯಾನಗೋಚರನು ಇರುವನು. ಗುಣವೆಂಬ ಹೆಸರುಳ್ಳ ಹಗ್ಗದ ಆಕಾರದಂತೆ ಶಾಸ್ತ್ರೋದಿತ ರಮಾರೂಪ, ಅಂಭ್ರಣೀ ಎಂಬ ನಾಮದಿಂದ ಇರುವುದು. ಕರುವಿನಂತೆ ಆಕಾರ ಧರಿಸಿ ಶಾಸ್ತ್ರೋಕ್ತ ಪೊಂಬಸುರಪದಯೋಗ್ಯ ಎಂದರೆ, ಹಿರಣ್ಯಗರ್ಭನೆಂಬ ಬ್ರಹ್ಮಪದಕ್ಕೆ ಯೋಗ್ಯನಾದ ವಾಯುದೇವರು ಇರುವರು. ತ್ರಯಂಬಕನೆಂಬ ರುದ್ರ

ಮೊದಲಾದ ಸಮಸ್ತದೇವತಾಸಮೂಹ ಸೇವಿತನಾಗಿ, ಸರ್ವಪದಾರ್ಥಗಳನ್ನು (ಪ್ರದ್ಯುಮ್ನ ರೂಪದಿಂದ) ಪ್ರಾಣಿಗಳಿಗೆಲ್ಲ ತೋರಿಸುವನು ॥೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಚೇತನರ ಬಲಗಣ್ಣಿನಲ್ಲಿ ಸ್ತಂಭರೂಪದಲ್ಲಿ ವಿದ್ಯಮಾನನಾಗಿರುವ **ಪ್ರದ್ಯುಮ್ನ**ನಾಮಕ ಶ್ರೀಹರಿಯ ರೂಪೋಪಾಸನೆಯ ವಿವರಗಳನ್ನು ತಿಳಿಸುತ್ತಾರೆ, **ಸ್ತಂಭರೂಪದಲಿಪ್ಪ** ಎಂಬ ಪ್ರಸಕ್ತ ೯ನೆಯ ಪದ್ಯದಿಂದ.

೧. ಸಮಸ್ತಜೀವರಾಶಿಗಳ ಬಲಗಣ್ಣಿನ ಕರೀಗುಡ್ಡೆಯಲ್ಲಿ (**ದಕ್ಷಿಣ ಅಂಬಕದಿ**) **ಪ್ರದ್ಯುಮ್ನ**ನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಆ ಪ್ರದ್ಯುಮ್ನರೂಪಿಯು ಹಸುವಿನ ಕರುವನ್ನು ಕಟ್ಟುವ ಗೂಟದ ರೂಪದಲ್ಲಿದ್ದಾನೆ. (**ಸ್ತಂಭರೂಪದಲಿಪ್ಪ**). ಸ್ತಂಭವು ಆಧಾರರೂಪವಾದದ್ದು, ಅಂತೆಯೇ ಪ್ರದ್ಯುಮ್ನನಾಮಕ ಶ್ರೀಹರಿಯು ಸರ್ವಚೇತನರಿಗೂ ಮತ್ತು ಪ್ರಕೃತಿಗೂ ಮುಖ್ಯಾಧಾರನು.

೨. ಸ್ತಂಭರೂಪದಲಿಪ್ಪ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನಿಗೆ ಅಧೀನಳಾಗಿ **ಅಂಭ್ರಣೀ**ನಾಮಕಳಾದ ಶ್ರೀಲಕ್ಷ್ಮೀದೇವಿಯು ಗೂಟಕ್ಕೆ ಕಟ್ಟುವ **ಹಗ್ಗದ** ರೂಪದಲ್ಲಿದ್ದಾಳೆ. (**ಗುಣರೂಪಾಂಭ್ರಣಿಯು**). ಗುಣ ಎಂದರೆ ಗೂಟಕ್ಕೆ ಕಟ್ಟುವ ಹಗ್ಗವೆಂದರ್ಥ. ಮಹಾಪ್ರಳಯಕಾಲದಲ್ಲಿ ಯೋಗನಿದ್ರೆಯಲ್ಲಿ ನಿದ್ರೆಮಾಡುವವನಂತೆ ನಟಿಸುತ್ತಿದ್ದ ಆ ಮಹಾವಿಡಂಬನ ಮೂರ್ತಿ ಶ್ರೀಮನ್ನಾರಾಯಣನನ್ನು (ವಟಪತ್ರಶಾಯಿ) ಶ್ರೀ ಭೂ ದುರ್ಗಾ ನಾಮಕಳಾದ ಶ್ರೀಇಂದಿರೆಯು **ಅಂಭ್ರಣೀ** ರೂಪದಿಂದ, 'ಯೋಗನಿದ್ರೆಯಿಂದ ಎಚ್ಚೆತ್ತು, ಬ್ರಹ್ಮಾಂಡವನ್ನು ಸೃಜಿಸು' ಎಂದು ಪ್ರಾರ್ಥಿಸುತ್ತಾಳೆ. ಅಂಭ್ರಣೀರೂಪಿ ಶ್ರೀಲಕ್ಷ್ಮೀದೇವಯು ಅನ್ನನಾಮಕಳು. ಅಂದರೆ ತ್ರಿಗುಣಾತ್ಮಕವಾದ ಸೂಕ್ಷ್ಮಪ್ರಕೃತಿಗೆ ಅಭಿಮಾನಿಯು. ರಜ್ಜುವು (ಹಗ್ಗ) ಸ್ತಂಭದ (ಗೂಟ) ಅಧೀನ. ಅಂತೆಯೇ ರಜ್ಜುರೂಪದಲ್ಲಿರುವ ಶ್ರೀಲಕ್ಷ್ಮೀ ಸ್ತಂಭ ರೂಪದಲ್ಲಿರುವ ಸರ್ವಾಧಾರನಾದ ಶ್ರೀಹರಿಯ ಅಧೀನಳೆಂದು ತಾತ್ಪರ್ಯ.

೩. ಶ್ರೀಭಾರತೀರಮಣರಾದ ಶ್ರೀವಾಯುದೇವರು **ಕರುವಿನ** ರೂಪದಲ್ಲಿದ್ದಾರೆ. **(ವತ್ಸಲರೂಪದಲಿ)**. ಮುಂದಿನ ಬ್ರಹ್ಮಕಲ್ಪದಲ್ಲಿ ಪ್ರಸಕ್ತ ಶ್ರೀವಾಯುದೇವರು ಚತುರ್ಮುಖಬ್ರಹ್ಮರಾಗುತ್ತಾರೆ. ಅಂದರೆ, ಇಂದಿನ ಶ್ರೀವಾಯುದೇವರು ಭಾವೀಬ್ರಹ್ಮಪದವಿಯೋಗ್ಯರು. ಈ ಅಭಿಪ್ರಾಯವನ್ನು ಶ್ರೀದಾಸರಾಯರು **'ಪೊಂಬಸಿರಪದಯೋಗ್ಯಪವನ'** ಎಂದು ವಿವರಿಸಿದ್ದಾರೆ. ಅಂದರೆ, ಪೊಂಬಸಿರ-ಹಿರಣ್ಯಗರ್ಭನಾಮಕರು. ಪೊನ್ನ+ಬಸಿರು -ಪೊಂಬಸಿರು. "ಪೊನ್ನು" ಎಂದರೆ ಚಿನ್ನ ಅಥವಾ ಬಂಗಾರ ಎಂದರ್ಥ. ಬಸಿರು ಎಂದರೆ ಗರ್ಭ ಅಥವಾ ಜನಿಸಿದವನು ಎಂದು ತಾತ್ಪರ್ಯ. ಶ್ರೀಪದ ನಾಭರೂಪೀ ಶ್ರೀಹರಿಯ ಅಪ್ರಾಕೃತವಾದ ನಾಭೀಕಮಲದಲ್ಲಿ ಚತುರ್ಮುಖಿ ಬ್ರಹ್ಮದೇವರು ಜನಿಸಿದರು. ಈ ಕಮಲವು ಚತುರ್ದಳಾತ್ಮಕವಾಗಿದ್ದು, ಲಕ್ಷ್ಮ್ಯಾತ್ಮಕವಾಗಿದೆ. ಸುವರ್ಣಮಯವಾದ ಈ ನಾಭೀಪದ್ಮದಲ್ಲಿ ಜಾತರಾದ ಚತುರ್ಮುಖಬ್ರಹ್ಮದೇವರಿಗೆ-**ಹಿರಣ್ಯಗರ್ಭ** ಎಂದು ಹೆಸರು. ಈ ಅರ್ಥವನ್ನೇ ಶ್ರೀದಾಸವರೇಣ್ಯರು **ಪೊಂಬಸಿರಪದಯೋಗ್ಯ** ಎಂಬ ಶಬ್ದದಿಂದ ತಿಳಿಸಿರುತ್ತಾರೆ. **ಪವನ** ಎಂದರೆ **ಮುಖ್ಯಪ್ರಾಣರು**, ಅಂದರೆ ಶ್ರೀಹರಿಯ ಪ್ರಥಮಾಂಗಭೂತರಾದ, ಜೀವೋತ್ತಮರಾದ ವಾಯುದೇವರು ಎಂದರ್ಥ. ಅಂತಹ ಭಾವೀಬ್ರಹ್ಮಪದವಿಗೆ ಬರುವ ಇಂದಿನ ಕಲ್ಪದ ಶ್ರೀವಾಯುದೇವರು **ವತ್ಸ** ಅಂದರೆ **ಆಕಳಕರುವಿನ** ರೂಪದಲ್ಲಿದ್ದಾರೆ. ರಜ್ಜುವು ಸ್ತಂಭಾಧೀನವಾಗಿರುವಂತೆ, ಆ ರಜ್ಜುವಿನ ತುದಿಗೆ ಕಟ್ಟಿರುವ ಕರುವು ರಜ್ಜುವಿನ ಅಧೀನವು, ಅದರಂತೆ ರಜ್ಜುರೂಪದಲ್ಲಿರುವ ಶ್ರೀರಮಾ ಸ್ತಂಭರೂಪೀ ಶ್ರೀಭಗವದಧೀನಳು. ಗೋವತ್ಸರೂಪೀ ಭಾವೀಬ್ರಹ್ಮರಾದ ಪವನರು ರಜ್ಜುರೂಪೀ ಶ್ರೀರಮಾಧೀನರಾಗಿದ್ದಾರೆ.

೪. ನಿತ್ಯ ಭಗವದಧೀನರಾದ ಶ್ರೀರಮಾದೇವಿಯರ ಅಧೀನದಲ್ಲಿರುವ ಗೋವತ್ಸರೂಪೀ ಶ್ರೀವಾಯುದೇವರು ಮಹರುದ್ರದೇವರೇ ಆದಿಯಾಗಿ ಸಮಸ್ತ ದೇವತಾಗಣದಿಂದ ಸಂಸೇವ್ಯಮಾನರಾಗಿದ್ದಾರೆ. **ತ್ರಿಯೆಂಬಕ** ಎಂದರೆ ತ್ರಿನೇತ್ರರಾದ ಮಹರುದ್ರದೇವರು ಎಂದರ್ಥ. ಅಂಬಕ ಎಂದರೆ ಕಣ್ಣು, ತ್ರಿಯಂಬಕ ಎಂದರೆ ಮೂರುಕಣ್ಣು ಉಳ್ಳವನು, ಅಂದರೆ ತ್ರಿನೇತ್ರ

ರಾದ ರುದ್ರದೇವರು. ಬಲಗಣ್ಣಿನಲ್ಲಿ ಸೂರ್ಯ, ಎಡಗಣ್ಣಿನಲ್ಲಿ ಚಂದ್ರ ಮತ್ತು ಹಣೆಗಣ್ಣಿನಲ್ಲಿ ಅಗ್ನಿ ಎಂದು ಸೂರ್ಯಸೋಮಾನಲಲೋಚನರು ಶ್ರೀರುದ್ರದೇವರು.

೫. ಸರ್ವಚೇತನರ ಬಲಗಣ್ಣಿನ ಕರೀಗುಡ್ಡೆ ಎಂಬ ಸ್ಥಾನದಲ್ಲಿ ಸ್ತಂಭ ರೂಪದಲ್ಲಿಪ್ಪ ಪ್ರದ್ಯುಮ್ನನಾಮಕ ಶ್ರೀಹರಿಯು, ರಜ್ಜುರೂಪದಲ್ಲಿರುವ ಶ್ರೀರಮಾದ್ವಾರಾ, ರುದ್ರಾದಿ ಸಮಸ್ತ ದೇವತಾವೃಂದದಿಂದ ಸಂಸೇವ್ಯಮಾನ ರಾಗಿರುವ, ಭಾವೀಬ್ರಹ್ಮರಾದ, ಗೋವತ್ಸರೂಪದಲ್ಲಿರುವ ಶ್ರೀವಾಯು ದೇವರ ಮೂಲಕ ನಮ್ಮ ಕಣ್ಣಿಗೆ ಕಾಣುತ್ತಿರುವ ಸಮಸ್ತ ಪದಾರ್ಥಗಳನ್ನು ನೇತ್ರೇಂದ್ರಿಯಕ್ಕೆ ವಿಷಯವನ್ನಾಗಿಸಿ, ರೂಪಸನ್ನಿಕರ್ಷದಿಂದ ಪ್ರತ್ಯಕ್ಷರೂಪ ದಲ್ಲಿ ತೋರಿಸುತ್ತಿರುವನು. ಅಂದರೆ ಸಮಸ್ತ ವಸ್ತುಗಳು ನೇತ್ರೇಂದ್ರಿಯದ ದ್ವಾರಾ ನಮಗೆ ಗೋಚರವಾಗುವುದು. ದಕ್ಷಿಣಾಂಬಕಗತ ಶ್ರೀಪ್ರದ್ಯುಮ್ನನ ಅನುಗ್ರಹದಿಂದಲೇ ಎಂದು ಪ್ರಸಕ್ತ ಪದ್ಯದ ತಾತ್ಪರ್ಯ.

ಇದಕ್ಕೆ ಪ್ರಮಾಣ

ದಕ್ಷಿಣಾಕ್ಷಿಸ್ಥಿತೋ ವಿಷ್ಣುಃ ಸ್ತಂಭರೂಪೋ ರಮಾಸ್ವಯಂ।
ರಜ್ಜುರೂಪಾತಯಾ ಬದ್ಧಂ ವಾಯುಂ ಗೋವತ್ಸರೂಪಿಣಮ್॥

ಇತಿ ಮಾನಸಸ್ಮೃತಿ ಪ್ರಮಾಣ ॥೯॥

## ಪದ್ಯ ೧೦

### ಮೂಲ

ನೇತ್ರಗಳಲಿ ವಸಿಷ್ಠ ವಿಶ್ವಾ।
ಮಿತ್ರ ಭಾರದ್ವಾಜ ಗೌತಮ।
ನತ್ರಿಯೂ ಜಮದಗ್ನಿ ನಾಮಗಳಿಂದ ಕರೆಸುತಲಿ॥
ಪತ್ರತಾಪಕ ಶಕ್ರ ಸೂರ್ಯ ಧ।
ರಿತ್ರಿ ಪರ್ಜನ್ಯಾದಿ ಸುರರು ಜ।
ಗತ್ರಯೇಶನ ಭಜಿಪರನುದಿನ ಪರಮಭಕುತಿಯಲಿ॥ ॥೧೦॥

### ಅವತರಣಿಕೆ

ಪೂರ್ವಪದ್ಯದಲ್ಲಿ ಬಲಗಣ್ಣಿನಲ್ಲಿ ವಿದ್ಯಮಾನನಾಗಿರುವ ಸ್ತಂಭರೂಪೀ ಶ್ರೀಪ್ರದ್ಯುಮ್ನ, ರಜ್ಜುರೂಪಿ ಶ್ರೀರಮಾ ಮತ್ತು ಗೋವತ್ಸರೂಪಿ ಶ್ರೀವಾಯುದೇವರ ವಿವರಗಳನ್ನು ತಿಳಿಸಿ, ಚೇತನರ ಎರಡು ಕಣ್ಣುಗಳಲ್ಲಿ ಗೋವತ್ಸರೂಪದಲ್ಲಿರುವ ಶ್ರೀವಾಯುದೇವರನ್ನು ನಿರಂತರ ಸಂಸೇವಿಸುತ್ತಿರುವ ದೇವತಾಗಣದ ವಿಚಾರ ತಿಳಿಸುತ್ತಾರೆ. ಪ್ರಸಕ್ತ ಸಂಧಿಗತ ೧೦ನೆಯ ಪದ್ಯದಿಂದ.

ಶ್ರೀರುದ್ರದೇವರು, ಇಂದ್ರ, ಸೂರ್ಯ, ಭೂದೇವಿ, ಪರ್ಜನ್ಯ ಇತ್ಯಾದಿ ದೇವತೆಗಳು, ವಸಿಷ್ಠ, ವಿಶ್ವಾಮಿತ್ರ, ಭಾರದ್ವಾಜ, ಗೌತಮ, ಅತ್ರಿ, ಜಮದಗ್ನಿ ಇತ್ಯಾದಿ ಋಷಿವರ್ಯರ ನಾಮಾಂಕಿತರಾಗಿದ್ದು, ಅಲ್ಲಿ ವಿದ್ಯಮಾನನಾಗಿರುವ ಲೋಕತ್ರಯಪ್ರಭುವಾದ ಶ್ರೀಪರಮಾತ್ಮನನ್ನು ನಿರಂತರವೂ ಅತ್ಯಧಿಕ ಶ್ರದ್ಧಾ-ಭಕ್ತ್ಯಾದಿಗಳಿಂದ ಸೇವಿಸುತ್ತಾ, ಅವನ ಅಪಾರಮಹಿಮಾತಿಶಯಗಳನ್ನು ಕೊಂಡಾಡುತ್ತಿರುವರು. ಈ ವಿವರಗಳು ಅಧ್ಯಾತ್ಮಮಾಲಾ ಎಂಬ ಗ್ರಂಥದಲ್ಲಿಯೂ, ಹಾಗೂ ಬೃಹದಾರಣ್ಯಕೋಪನಿಷತ್ತಿನ ಶಿಶುಬ್ರಾಹ್ಮಣದಲ್ಲಿಯೂ ಉಕ್ತವಾಗಿವೆ.

## ಪ್ರತಿಪದಾರ್ಥ

**ನೇತ್ರಗಳಲಿ**=ಸ್ಥೂಲದೇಹಗತ ಎರಡು ಕಣ್ಣುಗಳಲ್ಲಿ, **ವಸಿಷ್ಠ**= ವಸಿಷ್ಠ ಮಹಾಮುನಿಗಳು. **ವಿಶ್ವಾಮಿತ್ರ**=ಬ್ರಹ್ಮರ್ಷಿ ಎಂದು ಖ್ಯಾತ ರಾದ ವಿಶ್ವಾಮಿತ್ರರು, **ಭಾರದ್ವಾಜ**=ಭಾರದ್ವಾಜ ಋಷಿಗಳು, **ಗೌತಮ** =ಗೌತಮರೆಂಬ ಮಹಾತಪಸ್ವಿಗಳು, **ಅತ್ರಿ**=ಅನುಸೂಯಾಪತಿಗಳಾದ ಅತ್ರಿಮುನಿಗಳು, **ಜಮದಗ್ನಿ**=ಭಾರ್ಗವರಾಮರ ತಂದೆ ಜಮದಗ್ನಿಗಳು, **ನಾಮಗಳಿಂದ**=ಪೂರ್ವೋಕ್ತ ಮುನಿವರೇಣ್ಯರ ಹೆಸರುಗಳಿಂದ, **ಕರೆ ಸುತಲಿ**=ಕರೆಸಿಕೊಳ್ಳುತ್ತಾ, **ಪತ್ರತಾಪಕ**=ಪತ್ರತಾಪಕರೆಂಬ ನಾಮಾಂಕಿತ ರಾದ ಶ್ರೀರುದ್ರದೇವರು, **ಶಕ್ರ**=ಇಂದ್ರದೇವರು, **ಸೂರ್ಯ**= ಜಗತ್ತನ್ನು ಬೆಳಗುವ ಸೂರ್ಯದೇವರು, **ಧರಿತ್ರಿ**=ಭೂದೇವಿ, **ಪರ್ಜ ನ್ಯಾದಿ**=ಮೇಘಾಭಿಮಾನಿದೇವತೆಗಳಲ್ಲಿ ವರುಣದೇವರು ಇವರೇ ಮುಂತಾದ, **ಸುರರು**=ದೇವತಾವರ್ಗವು, **ಜಗತ್ರಯೇಶನ**=ಸ್ವರ್ಗ, ಮರ್ತ್ಯ ಮತ್ತು ಪಾತಾಳ ಎಂಬ ಮೂರು ಲೋಕಗಳಿಗೆ ಪ್ರಭುವಾದ ಶ್ರೀಪರಮಾತ್ಮನನ್ನು, **ಅನುದಿನ**=ಪ್ರತಿದಿವಸದಲ್ಲಿಯೂ, **ಪರಮಭಕುತಿಯಲಿ**=ಶ್ರೇಷ್ಠವಾದ ಭಕ್ತಿಭಾವದಿಂದ, **ಭಜಿಪರು**=ಕೊಂಡಾಡುತ್ತಾರೆ ॥೧೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಉಭಯನೇತ್ರಗತ ದೇವತೆಗಳ ಹೇಳತಾರೆ.

ನೇತ್ರಗಳಲಿ–ಸ್ಥೂಲದೇಹಗತ ಉಭಯನೇತ್ರಗಳಲ್ಲಿ, ವಸಿಷ್ಠ ವಿಶ್ವಾ ಮಿತ್ರ ಭಾರದ್ವಾಜ ಈ ನಾಮಾಂಕಿತರೇನು, ಗೌತಮ ಅತ್ರಿ ಜಮದಗ್ನಿ ಈ ನಾಮಾಂಕಿತರೇನು, ಪತ್ರತಾಪಕ ಶಕ್ರ ಸೂರ್ಯ ಧರಿತ್ರಿ–ಪತ್ರತಾಪಕನಾಮ ರುದ್ರದೇವರು, ಇಂದ್ರ, ಸೂರ್ಯ, ಭೂದೇವೇರು, ಪರ್ಜನ್ಯ ಆದಿ ಸುರರು– ಇವರೇ ಮೊದಲಾದ ದೇವತೆಗಳು ನೇತ್ರಗತ ನಾನಾವಿಧ ರೇಖೋಪರೇಖೆಗಳಲ್ಲಿ ಇದ್ದವರಾಗಿ, ನಾಮಗಳಿಂದ ಕರೆಸುತಲಿ–ಈ ನಾಮಗಳಿಂದ ಕರೆಸುತ್ತ, ಜಗತ್ರ

ಯೇಶನ-ಸರ್ವಸ್ವಾಮಿಯಾದ ಶ್ರೀಪರಮಾತ್ಮನ, ಪರಮಭಕುತಿಯಲಿ-ಅತ್ಯಂತ ಭಕ್ತಿಯಿಂದ, ಭಜಿಪರನುದಿನ-ಪ್ರತಿದಿನದಲ್ಲೂ ಭಜಿಸೋವರಾಗಿದ್ದಾರೆ. ಎಡದ ನೇತ್ರದಲ್ಲಿ ಅವರವರ ಸ್ತ್ರೀಯರು ಪೂರ್ವೋಕ್ತ ಪ್ರಕಾರದಲ್ಲಿ ಎಂತ ತಾತ್ಪರ್ಯ ॥೧೦॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಮೇಲಿನ ಪದ್ಯದಲ್ಲಿ ವತ್ಸರೂಪಿಯಾದ ವಾಯುದೇವರು ರುದ್ರಾದಿ ದೇವಿತೆಗಳಿಂದ ಸೇವಿತರಾಗಿ ಇರುವರೆಂದು ಹೇಳಿದರು. ಈಗ ಆ ದೇವತೆಗಳ ಉಪಾಸನಾಕ್ರಮವನ್ನು ಈ ಪದ್ಯದಲ್ಲಿ ಹೇಳುತ್ತಾರೆ.

ವಸಿಷ್ಠಾದಿನಾಮಗಳಿಂದ ರುದ್ರಾದಿಗಳು ಕಣ್ಣಿನೊಳಗೆ ಇದ್ದು ಉಪಾಸನಾ ಮಾಡುವರೆಂದು ಈ ಪದ್ಯದಲ್ಲಿ ಹೇಳಿರುವರು. ಇದಕ್ಕೆ ಮೂಲಗ್ರಂಥವಾದ ಮಾನಸಸ್ಮೃತಿಯಲ್ಲಿ ಕಣ್ಣುಗಳಲ್ಲಿ ಯಾವ ಯಾವ ಭಾಗದಲ್ಲಿ ಯಾರು ಯಾರು ಯಾವ ಯಾವ ನಾಮುಗಳಿಂದ ಇರುವರೆಂಬ ವಿಷಯವನ್ನು ಹೇಳಿರುವರು. ಹೇಗೆಂದರೆ,

> ಶ್ವೇತತಾರಾಸ್ಥಿತಶ್ಚಂದ್ರೋ ವಸಿಷ್ಠಾಖ್ಯ ಸುರೇಶ್ವರಃ।
> ನಯನೇ ರಕ್ತರಾಜಿಸ್ಥೋ ರುದ್ರೋಗೌತಮನಾಮಕಃ॥
> ಕೃಷ್ಣತಾರಾಸ್ಥಿತೋ ವಹ್ನಿರ್ಜಮದಗ್ನಿರಿತಿ ಸ್ಮೃತಃ।
> ಕಮನೀಯಾದಿತ್ಯಸಂಸ್ಥೋ ವಿಶ್ವಾಮಿತ್ರಾಭಿದಃ ಸ್ಥಿತಃ॥
> ವಾರಿಗೋ ವರುಣಃ ಸಾಕ್ಷಾದ್ಭಾರದ್ವಾಜಾಭಿಧಸ್ತಥಾ।
> ಅಥರಾವರ್ತಿನೀ ಸಂಸ್ಥಾ ಪೃಥ್ವೀ ಕಶ್ಯಪನಾಮಿಕಾ॥
> ಉತ್ತರಾಯಾಂ ದ್ಯುನಾಮ್ನಾಯಾಂ ಭಾರತೀಹ್ಯತ್ರಿನಾಮಿಕಾ।
> ಏತೇಹ್ಯಕ್ಷೀಣಮನಸಃ ಸಪ್ತದೇವಾ ಉಪಾಸತೇ॥

ಇದರ ಅರ್ಥ–

ಕಣ್ಣಿನ ಬಿಳಿಯ ಭಾಗದಲ್ಲಿ ಚಂದ್ರನಿರುವನು.

ಅಲ್ಲಿಯೇ ದೇವೇಂದ್ರನು ವಸಿಷ್ಠನಾಮಕನಾಗಿ ವಾಸ ಮಾಡುವನು.

ಕಣ್ಣಿನ ಕಡೆಯಭಾಗದ ಕೆಂಪಿನಲ್ಲಿ ರುದ್ರದೇವರು ಗೌತಮನೆಂಬ ಹೆಸರಿನಿಂದ ಇರುವರು.

ಕರಿಯ ಗುಡ್ಡಿನಲ್ಲಿ ಅಗ್ನಿಯು ಜಮದಗ್ನಿ ಎಂಬ ಹೆಸರಿನಿಂದ ಇರುವನು.

ಮನೋಹರವಾದ ದೃಷ್ಟಿಯಲ್ಲಿ ಸೂರ್ಯನು ವಿಶ್ವಾಮಿತ್ರನಾಮಕನಾಗಿರುವನು.

ಕಣ್ಣಿನ ನೀರಿನಲ್ಲಿ ವರುಣನು ಭಾರದ್ವಾಜನಾಮಕನಾಗಿರುವನು.

ಕಣ್ಣಿನ ಕೆಳಭಾಗದಲ್ಲಿ ಭೂದೇವಿಯು ಕಶ್ಯಪನಾಮಕನಾಗಿರುವಳು.

ಕಣ್ಣಿನ ಮೇಲ್ಭಾಗದಲ್ಲಿ ದ್ಯುನಾಮಕಳಾದ ಭಾರತೀದೇವಿಯು ಅತ್ರಿ ಎಂಬ ಹೆಸರಿನಿಂದ ಇರುವರು.

ಇಂತು ಏಳುದೇವತೆಗಳು (ಚಂದ್ರನ ಹೊರತು) ಪೂರ್ಣವಾದ ಮನಸ್ಸುಳ್ಳವರಾಗಿ, ವಾಯುದೇವರನ್ನು ಉಪಾಸನೆ ಮಾಡುತ್ತಿರುವರೆಂದು **ಮಾನಸಸ್ಮೃತಿ** ವಾಕ್ಯವಿರುವುದು. ಈ ಅಭಿಪ್ರಾಯವೇ ಈ ಪದ್ಯದಲ್ಲಿ ಸಂಕೋಚವಾಗಿ ಹೇಳಲ್ಪಟ್ಟಿರುವುದು ॥೧೦॥

೩. **ಭಾವದರ್ಪಣಟೀಕಾ ವ್ಯಾಖ್ಯಾನ**

**ದಕ್ಷಿಣಾಕ್ಷಿಸ್ಥಿತೋ ವಿಷ್ಣುಃ ಸ್ತಂಭರೂಪೋ ರಮಾಸ್ವಯಮ್।**
**ರಜ್ಜುರೂಪಾ ತಯಾ ಬದ್ಧಂ ವಾಯುಂ ಗೋವತ್ಸರೂಪಿಣಂ॥**

.......................................................................

**ಏತೇ ಹ್ಯಕ್ಷೀಣಮನಸಃ ಸಪ್ತದೇವಾ ಉಪಾಸತೇ॥**

**ಇತಿ ಮಾನಸಸ್ಮೃತ್ಯುಕ್ತೇಃ**

(ಈ ಪ್ರಮಾಣದ ಪೂರ್ಣಪಾಠವನ್ನು **ಭಾವಪ್ರಕಾಶಿಕೆ** ವ್ಯಾಖ್ಯಾನದಲ್ಲಿ ಕೊಟ್ಟಿದೆ. ಅಲ್ಲಿ ಅವಲೋಕಿಸುವುದು).

ನೇತ್ರೇತಿ ಎಂಬ ಈ ಪದ್ಯಕ್ಕೆ ಇದೇ ಪ್ರಮಾಣ ಹಚ್ಚಿಕೊಳ್ಳಬೇಕು. ಪತ್ರತಾಪಕ–ರುದ್ರನಾಮ ॥೧೦॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ನೇತ್ರ ಇತಿ॥ ಬೃಹದ್ಭಾಷ್ಯೇ ಶಿಶು ಬ್ರಾಹ್ಮಣೇ ಚ– ವಿಶ್ವರೂಪಂ ಯಶಶ್ಚೇತಿ ನಾಮ್ನಾ ವಿಷ್ಣೂ ರಮಾ ತಥಾ॥ ವಾಯುಶ್ಚ ಸಂಸ್ಥಿತೋ ನಿತ್ಯಂ ಸರ್ವೇಷಾಂ ದಕ್ಷಿಣಾಕ್ಷಿಣಾಃ॥ ಪೂರ್ಣತ್ವಾತ್ ವಿಶ್ವತೋ ವಿಷ್ಣೋಃ ರಮಾಯಾಃ ಸ್ತ್ರೀಷು ಪೂರ್ಣತಃ॥ ವಾಯುಃ ಜೀವೇಷು ಪೂರ್ಣತ್ವಾತ್ ಯಶೋಜ್ಞಾನ ಸುಖಾತ್ಮಕಾಃ॥ ಗೌತಮೋನಾಮ ರುದ್ರಸ್ತು ಸರ್ವಜ್ಞತ್ವಾತ್ ಪ್ರಕೀರ್ತಿತಃ॥ ಭರದ್ವಾಜಸ್ತು ಪರ್ಜನ್ಯಃ ವಾಜಮನ್ನಂ ಭರೇತ್ ಯತಃ॥ ವೃಷ್ಟ್ಯೈವ ವಿಶ್ವಾಮಿತ್ರಾಖ್ಯಃ ಆದಿತ್ಯಃ ಯತ್ಪ್ರಕಾಶನಾತ್॥ ವಿಶ್ವಂ ವಿಜ್ಞಾಪಯೇನ್ನಿತ್ ಅಗ್ನಿಸ್ತು ಜಮದಗ್ನಿಕಃ॥ ಜಾತಂ ಮಿತಂ ಚಾತ್ತಿ ಯಸ್ಮಾತ್ ವಸಿಷ್ಠಾಖ್ಯಸ್ತು ವಾಸವಃ॥ ವಸತಾಂ ಉತ್ತಮಃ ಯಸ್ಮಾತ್ ಪೃಥ್ವೀ ಕಶ್ಯಪನಾಮಿಕಾ॥ ಮೇಷು ವೃಷ್ಟಂ ಪಿಬೇತ್ ಯತ್ ಕಂ ಶಯಾನ್ಯೈವ ಹಿ ಸಾ ಸದಾ॥ ಧ್ಯೌ ರಾತ್ರಿ ರಿತಿ ಸಂಪ್ರೋಕ್ತಾ ತತ್‌ಸ್ಥೈರ್ಹಿ ಹುತಮದ್ಯತೇ॥ ಶ್ರೋತ್ರ ದೃಙ್ ನಾಸಿಕಾ ವಾಕ್ಷು ದಕ್ಷಿಣಾಕ್ಷಿಸು ಸಂಸ್ಥಿತಾಃ॥ ದ್ವಿತೀಯೇನ ತು ರೂಪೇಣ ದೇವಾ ಏತೇ ಶಿವಾದಯಃ॥ ಏವಮೇಷಾಂ ತು ನಾಮಾನಿ ವೇತ್ತಿಯಃ ಸರ್ವಭುಕ್ ಭವೇತ್ ॥೧೦॥

### ಕನ್ನಡಾನುವಾದ

ನೇತ್ರಗತ ದೇವತೆಗಳ ವಿವರಗಳನ್ನು ಬೃಹದಾರಣ್ಯಕೋಪನಿಷತ್ತಿನ ಶಿಶು ಬ್ರಾಹ್ಮಣದಲ್ಲಿ ನಿರೂಪಿಸಿರುತ್ತಾರೆ. ವಿಶ್ವರೂಪ ಮತ್ತು ಯಶ ಎಂದು ಕರೆಯಲ್ಪಡುವ ವಿಷ್ಣು, ರಮಾ ಮತ್ತು ವಾಯು ಎಲ್ಲರ ಬಲಗಣ್ಣಿನಲ್ಲಿ ವಿದ್ಯಮಾನರಾಗಿದ್ದಾರೆ. ವಿಷ್ಣುವು ಸರ್ವೋತ್ತಮನು. ಸರ್ವಗುಣಗಣ ಪರಿಪೂರ್ಣನು. ತದನಂತರ ಸರ್ವಸ್ತ್ರೀವರ್ಗದಲ್ಲಿ, ಅಂದರೆ ಪರತಂತ್ರರಾದ ಚೇತನವರ್ಗದಲ್ಲಿ ಲಕ್ಷ್ಮೀದೇವಿಯು ಪೂರ್ಣಳು. ತದನಂತರ ಜೀವಕೋಟಿ

ಯಲ್ಲಿ ವಾಯುವು ಪೂರ್ಣನು. ಈ ಕಾರಣದಿಂದ ವಿಷ್ಣು, ರಮಾ ಮತ್ತು ವಾಯು ಈ ಮೂವರೂ ವಿಶ್ವರೂಪ ಎಂದು ಕರೆಯಿಸಲ್ಪಡುತ್ತಾರೆ. ಜ್ಞಾನ ಸುಖಸ್ವರೂಪರಾದ್ದರಿಂದ ಯಶ ಎಂತಲೂ ಹೆಸರು. ಇವರು ಪ್ರವರ್ತಕರು ಹಾಗೂ ಸರ್ವಪ್ರೇರಕರು. ಈ ಕಾರಣದಿಂದ ಪ್ರಾಣ ಎಂದೂ ಕರೆಯಿಸಿ ಕೊಳ್ಳುತ್ತಾರೆ. ರುದ್ರಾದಿ ಸಮಸ್ತ ದೇವತೆಗಳು ಋಷಿಗಳೆಂದು ತಿಳಿಯ ಬೇಕು.

ಸರ್ವಜ್ಞನಾದುದರಿಂದ ರುದ್ರನು ಗೌತಮನೆನಿಸಿಕೊಳ್ಳುತ್ತಾನೆ.

ಮಳೆಯ ದ್ವಾರಾ ಅನ್ನಪ್ರದನಾದುದರಿಂದ ಪರ್ಜನ್ಯನು ಭಾರದ್ವಾಜ ನೆನಿಸಿಕೊಳ್ಳುವನು.

ವಿಶ್ವಕ್ಕೆ ಪ್ರಕಾಶಪ್ರದನಾದುದರಿಂದ ಆದಿತ್ಯನು ವಿಶ್ವಾಮಿತ್ರನಾಮಕನು.

ಸೃಷ್ಟಪದಾರ್ಥಗಳನ್ನು ಭಕ್ಷಿಸುವುದರಿಂದ ಅಗ್ನಿಗೆ ಜಮದಗ್ನಿ ಎಂದು ಹೆಸರು.

ವಾಸಿಸುವರಲ್ಲಿ ಉತ್ತಮನಾದುದರಿಂದ ಇಂದ್ರನು ವಸಿಷ್ಠನೆನಿಸಿಕೊಳ್ಳು ತ್ತಾನೆ.

ಕಂ-ಮಳೆಯನ್ನು (ನೀರನ್ನು), ಶ್ಯ-ಶಯನ ಮಾಡಿದವಳಾಗಿಯೇ (ಮಲಗಿಯೇ), ಪ-ಪಾನಮಾಡುವುದರಿಂದ, ಭೂದೇವಿಯು ಕಶ್ಯಪನೆನಿಸಿ ಕೊಳ್ಳುತ್ತಾಳೆ.

ವಾಗಾಭಿಮಾನಿಯಾದ ದ್ಯುಶಬ್ದವಾಚ್ಯಳಾದ (ದೌ) ಉಮಾದೇವಿ ದ್ಯುಲೋಕವಾಸಿಯಾಗಿದ್ದು, ಹೋಮಿಸಲ್ಪಟ್ಟಿದ್ದನ್ನು ತಿನ್ನುವುದರಿಂದ ಅತ್ರಿ ಎಂದು ಕರೆಯಿಸಿಕೊಳ್ಳುವಳು. ಒಂದು ರೂಪದಿಂದ, ಕಿವಿ. ಕಣ್ಣು. ಮೂಗು, ನಾಲಿಗೆ, ತ್ವಕ್ಕು, ಮನಸ್ಸು ಮತ್ತು ಬುದ್ಧಿ ಹೀಗೆ ಸಪ್ತೇಂದ್ರಿಯಗಳಲ್ಲಿ ನಿಯಾಮಕರಾಗಿರುವ ಈ ರುದ್ರಾದಿ ದೇವತೆಗಳು, ಮತ್ತೊಂದು ರೂಪದಿಂದ ದಕ್ಷಿಣಾಕ್ಷಿಯಲ್ಲಿ ಇರುತ್ತಾರೆ. ಇಂತು ನೇತ್ರಗತ ಈ ದೇವತೆಗಳ ನಾಮಗಳನ್ನು

ಅರಿತು, ಉಪಾಸನೆ ಮಾಡುವವರು ಸರ್ವಸುಖಭೋಗಿಯಾಗುತ್ತಾರೆ ಎಂದು ಶಿಶುಬ್ರಾಹ್ಮಣದಲ್ಲಿ ಉಕ್ತವಾಗಿದೆ ॥೧೦॥

೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಎರಡು ಕಣ್ಣಿನಲ್ಲೂ, ವಸಿಷ್ಠ, ವಿಶ್ವಾಮಿತ್ರ, ಭರದ್ವಾಜ, ಗೌತಮ, ಅತ್ರಿ, ಜಮದಗ್ನಿ ಎಂಬ ಋಷಿನಾಮ ಧರಿಸಿ ಪತ್ರತಾಪಕನೆಂಬ ರುದ್ರನು, ಶಕ್ರನೆಂಬ ಇಂದ್ರ, ಸೂರ್ಯನು, ಧರಿತ್ರೀ ಎಂಬ ಭೂದೇವಿಯು, ಪರ್ಜನ್ಯನೆಂಬ ಮೇಘಾಭಿಮಾನಿ ಸೂರ್ಯನು ಮುಂತಾದವರು ಜಗತ್ರಯಸ್ವಾಮಿಯಾದ ಆ ಪ್ರದ್ಯುಮ್ನ ದೇವರನ್ನು ಪರಮಭಕ್ತಿಯಿಂದ ಭಜಿಸುವರು.

ಪ್ರಮಾಣ

ದಕ್ಷಿಣಾಕ್ಷಿಸ್ಥಿತೋ ವಿಷ್ಣುಃ ಸ್ತಂಭರೂಪೋರಮಾಸ್ವಯಂ।
ರಜ್ಜು ರೂಪಾ ತಯಾಬದ್ಧಂ ವಾಯುಂ ಗೋವತ್ಸ ರೂಪಿಣಂ॥

...........................................................

ಏತೇ ಹ್ಯಕ್ಷೀಣಮನಸಃ ಸಪ್ತದೇವಾ ಉಪಾಸತೇ॥

ಇತಿ ಮಾನಸಸ್ಮೃತ್ಯುಕ್ತೇಃ

(ಈ ಪ್ರಮಾಣದ ಪೂರ್ಣಪಾಠವನ್ನು ಭಾವಪ್ರಕಾಶಿಕೆ ವ್ಯಾಖ್ಯಾನ ದಲ್ಲಿ ಕೊಟ್ಟಿದೆ ಅಲ್ಲಿ ಅವಲೋಕಿಸುವುದು)

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯಗಳಲ್ಲಿ ದಕ್ಷಿಣಾಕ್ಷಿಗತ ಭಗವದ್ರೂಪೋಪಾಸನಾಕ್ರಮವನ್ನು ತಿಳಿಸಿ ನೇತ್ರಗಳಲಿ ಎಂಬ ಪ್ರಸಕ್ತ ೧೦ನೆಯ ಪದ್ಯದಿಂದ, ಎರಡು ಕಣ್ಣುಗಳಲ್ಲಿ ಋಷಿನಾಮಕರಾಗಿರುವ ರುದ್ರಾದಿ ದೇವತಾವರ್ಗವನ್ನು ವಿವರಿಸುತ್ತಾರೆ,

೧. ಸ್ಥೂಲದೇಹಗತ ರೂಪವಿಷಯವನ್ನು ಸ್ವೀಕರಿಸುವ ಉಭಯ ನೇತ್ರಗಳಲ್ಲಿ ರುದ್ರಾದಿ ದೇವತಾವರ್ಗ, ವಸಿಷ್ಠಾದಿ ಋಷಿಗಳ ನಾಮದಿಂದ

ವಿದ್ಯಮಾನರಾಗಿದ್ದು, ಜೀವೋತ್ತಮರಾದ ಶ್ರೀವಾಯುದೇವರನ್ನು ಸಂಸೇವಿಸುತ್ತಿರುವರು. ಇಂತಹ ದೇವತಾಗಣದಿಂದ ಸಂಸೇವ್ಯಮಾನರಾದ ಗೋವತ್ಸ ರೂಪದಲ್ಲಿರುವ ಶ್ರೀವಾಯುದೇವರು, ರಜ್ಜುವಿನ ರೂಪದಲ್ಲಿರುವ, ಪ್ರಕೃತಿಗೆ ಅಭಿಮಾನಿಗಳಾದ ಶ್ರೀಲಕ್ಷ್ಮಿಯ ಅಧೀನದಲ್ಲಿರುವರು. ಜಗಜ್ಜನನಿಯಾದ ಹಾಗೂ ಈ ಸೃಷ್ಟಿಗೆ ಉಪಾದಾನಕಾರಣವಾದ ಮೂಲಪ್ರಕೃತಿಯ ಅಭಿಮಾನಿ ಇಂದಿರಾ, ಸ್ತಂಭರೂಪದಲ್ಲಿರುವ ಗೋವಿಂದನ ಅಧೀನಳಾಗಿದ್ದಾಳೆ.

೨. ಕಣ್ಣಿನ ಬಿಳಿಯ ಗುಡ್ಡೆಯಲ್ಲಿ **ಇಂದ್ರದೇವರು** ವಸಿಷ್ಠ ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. ವಾಸಿಸುವುದರಲ್ಲಿ ಉತ್ತಮನಾದ್ದರಿಂದ ಇಂದ್ರನಿಗೆ **ವಸಿಷ್ಠ** ಎಂದು ಹೆಸರು.

**ಶ್ವೇತತಾರಾಸ್ಥಿತಶ್ಚಂದ್ರೋ ವಸಿಷ್ಠಾಖ್ಯ ಸುರೇಶ್ವರಃ।**
**(ಮಾನಸಸ್ಮೃತಿ)**

ಈ ಬಿಳಿಯ ಗುಡ್ಡೆಯಲ್ಲಿ **ಚಂದ್ರನೂ** ಸಹ ಇರುವನು,

೩. ಮನೋಹರವಾದ ಕಣ್ಣಿನ ದೃಷ್ಟಿಯಲ್ಲಿ ತೇಜೋಪೂರ್ಣನಾದ **ಸೂರ್ಯನು** ವಿಶ್ವಾಮಿತ್ರನಾಮಕನಾಗಿರುವನು. ಕಣ್ಣಿನ ಕನೀಕ ಎಂಬ ಪ್ರದೇಶವೇ ವಿಶ್ವಾಮಿತ್ರನಾಮಕ ಸೂರ್ಯನ ಸ್ಥಾನವು. ವಿಶ್ವವನ್ನೇ ತನ್ನ ತೇಜಸ್ಸಿನಿಂದ ಬೆಳಗುವುದರಿಂದ, ಸೂರ್ಯನಿಗೆ ವಿಶ್ವಾಮಿತ್ರನೆಂದು ಹೆಸರು ಅಂದರೆ, ಜಗತ್ತಿಗೇ ಮಿತ್ರನಾದವನೆಂದರ್ಥ.

೪. ಕಣ್ಣೀರಿನಲ್ಲಿ **ಪರ್ಜನ್ಯನೆಂಬ ಮೇಘಾಭಿಮಾನಿ ಭಾರದ್ವಾಜ**ನೆಂಬ ಹೆಸರಿನಿಂದ ಇದ್ದಾನೆ. ಮಳೆಯದ್ವಾರಾ ಅನ್ನಪ್ರದನಾಗಿರುವುದರಿಂದ ಪರ್ಜನ್ಯನು ಭಾರದ್ವಾಜನಾಮಕನು.

೫. ಕಣ್ಣಿನ ತುದಿಯ ಕೆಂಪಾಗಿರುವ ಸ್ಥಾನದಲ್ಲಿ **ರುದ್ರದೇವರು, ಗೌತಮ**ನಾಮಾಂಕಿತದಿಂದ ಇರುವರು. ಸರ್ವಜ್ಞನಾದುದರಿಂದ ರುದ್ರದೇವರಿಗೆ ಗೌತಮ ಎಂಬ ಹೆಸರು.

**ನಯನೇ ರಕ್ತರಾಜಸ್ಥೋ ರುದ್ರೋ ಗೌತಮನಾಮಕಃ |**

**ಮಾನಸಸ್ಮೃತಿ**

೬. ಮೇಲಿನ ರೆಪ್ಪೆಯಲ್ಲಿ ವಾಗಾಭಿಮಾನಿಯಾದ **ಉಮಾದೇವಿ, ಅತ್ರಿ** ಎಂಬ ಹೆಸರಿನಿಂದ ಕರೆಯಿಸುತ್ತಾಳೆ. ದೌ ಎಂದರೆ ಸ್ವರ್ಗಲೋಕ (ಮೇಲಿನ ಎವೆ) ದ್ಯುಶಬ್ದವಾಚ್ಯಳಾದ ಶ್ರೀಭಾರತೀದೇವಿ ಉಮಾದೇವಿಯಲ್ಲಿ ಸ್ಥಿತಳಾಗಿದ್ದು, ಹೋಮಿಸಲ್ಪಟ್ಟ ಹವಿಸ್ಸನ್ನು ತಿನ್ನುವುದರಿಂದ **ಅತ್ರಿ** ನಾಮಕಳು.

೭. ಕಣ್ಣಿನ ಕರೀಗುಡ್ಡೆಯಲ್ಲಿ **ಜಮದಗ್ನಿ** ಎಂಬ ಹೆಸರಿನಿಂದ ಅಗ್ನಿ ದೇವರೂ ಇದ್ದಾರೆ. ಸಮಸ್ತ ವಸ್ತುಗಳನ್ನೂ ಅಗ್ನಿಯು ಭಕ್ಷಿಸುವುದರಿಂದ, ಅವನಿಗೆ ಸರ್ವಭಕ್ಷಕನೆಂದು ಹೆಸರು. ಇದೇ **ಜಮದಗ್ನಿಯ** ಶಬ್ದಾರ್ಥವು.

**ಕೃಷ್ಣಾತಾರಾಸ್ಥಿತೋವಹ್ನಿಃ ಜಮದಗ್ನಿರಿತಿಸ್ಮೃತಃ||**

**ಮಾನಸಸ್ಮೃತಿ**

೮. ಕೆಳಗಿನ ರೆಪ್ಪೆಯಲ್ಲಿ ಕಶ್ಯಪನಾಮಕಳಾಗಿ **ಧರಾದೇವಿ (ಭೂದೇವಿ)** ವಿದ್ಯಮಾನಳಾಗಿದ್ದಾಳೆ. ಮಳೆಯನ್ನು (ಕಂ) ಶಯನಮಾಡಿರುವವಳಾಗಿಯೇ, ಅಂದರೆ ಮಲಗಿಕೊಂಡೇ (ಶ್ಯ), ಪಾನಮಾಡುವುದರಿಂದ (ಪ) ಭೂದೇವಿಗೆ ಕಶ್ಯಪ ಎಂದು ಹೆಸರು. ಇದರಿಂದಲೇ ಭೂಮಿಯನ್ನು **ಕಾಶ್ಯಪಿ** ಎಂದು ಕರೆಯುತ್ತಾರೆ. ಕೆಳಗಿನ ಎವೆ ಅಧೋಲೋಕಸಾಂಕೇತ

**ಅಧರಾವರ್ತಿನೀ ಸಂಸ್ಥಾ ಪೃಥಿವೀ ಕಶ್ಯಪನಾಮಿಕಾ||**

**ಮಾನಸಸ್ಮೃತಿ**

ಇಂತು ಇಂದ್ರ, ಸೂರ್ಯ, ಪರ್ಜನ್ಯನಾಮಕ ವರುಣ, ರುದ್ರದೇವರು, ಉಮಾ (ಭಾರತೀ), ಅಗ್ನಿ ಮತ್ತು ಧರಾದೇವಿ ಎಂಬ ಏಳು ದೇವತೆಗಳು ನೇತ್ರಗಳ ಬೇರೆಬೇರೆ ಸ್ಥಾನಗಳಲ್ಲಿದ್ದು, ವಿಶ್ವರೂಪ ಮತ್ತು ಯಶನಾಮಕರಾದ

ಸ್ತಂಭರೂಪಿ ಪ್ರದ್ಯುಮ್ನ, ರಜ್ಜುರೂಪಿ ಶ್ರೀರಮಾ ಮತ್ತು ಗೋವತ್ಸರೂಪಿ ಶ್ರೀವಾಯುದೇವರನ್ನು ನಿರಂತರವೂ ಭಕ್ತ್ಯುದ್ರೇಕದಿಂದ ಭಜಿಸುತ್ತಾರೆ.

**ಏತೇಹ್ಯಕ್ಷೀಣಮನಸಃ ಸಪ್ತದೇವಾ ಉಪಾಸತೇ॥**

**ಮಾನಸಸ್ಮೃತಿ**

ಪತ್ರತಾಪಕನೆಂದು ಮಹರುದ್ರದೇವರಿಗೆ ಅಭಿದಾನ. ಶಕ್ರ ಎಂದರೆ ಸುರಪತಿಯಾದ ಇಂದ್ರದೇವರು. ಸೂರ್ಯ ಎಂದರೆ ಮಿತ್ರನಾಮಕ ಆದಿತ್ಯ. ಧರಿತ್ರಿ ಎಂದರೆ ಧರಾದೇವಿ (ಭೂದೇವಿ). ಪರ್ಜನ್ಯ ಎಂದರೆ ಮೇಘಾಭಿಮಾನಿ ದೇವತೆಗಳು. ವರುಣನು ಇದಕ್ಕೆ ಅಭಿಮಾನಿಯು ॥೧೦॥

## ಉಭಯನೇತ್ರಗತ ಸಪ್ತದೇವತೆಗಳ ಉಪಾಸನ ನಿರ್ದೇಶನದ ಪಟ್ಟಿ

| ಕ್ರ.ಸಂ | ಸಪ್ತದೇವತಾ ವರ್ಗ | ನೇತ್ರಗತಸ್ಥಾನ | ಹೆಸರು | ವಿವರಣೆ |
|---|---|---|---|---|
| ೧. | ಇಂದ್ರ | ಬಿಳೀಗುಡ್ಡೆ | ವಸಿಷ್ಠ | ವಾಸಿಸುವವರಲ್ಲಿ ಉತ್ತಮ. |
| ೨. | ಸೂರ್ಯ | ಕಣ್ಣಿನ ಕನೀಕಾ | ವಿಶ್ವಾಮಿತ್ರ | ಜಗತ್ತನ್ನೇ ಪ್ರಭೆಯಿಂದ ಬೆಳಗುವ ಮಿತ್ರನಾಮಕ ಸೂರ್ಯ. |
| ೩. | ವರುಣ (ಪರ್ಜನ್ಯ) | ಕಣ್ಣೀರಿನಲ್ಲಿ | ಭಾರದ್ವಾಜ | ಮಳೆಯುದ್ವಾರಾ ಅನ್ನಪ್ರದನು. |
| ೪. | ರುದ್ರದೇವರು | ಕಣ್ಣಿನ ತುದಿಯ ಕೆಂಪುರೇಖಾದಲ್ಲಿ | ಗೌತಮ | ಸರ್ವಜ್ಞನಾದುದರಿಂದ |
| ೫. | ಭಾರತೀಸನ್ನಿಧಾನ ಯುಕ್ತಳಾಗಿ ಉಮಾ | ಮೇಲಿನ ರೆಪ್ಪೆಯಲ್ಲಿ | ಅತ್ರಿ | ದ್ಯುಲೋಕವಾಸಿನಿಯಾಗಿ ಹವಿಸ್ಸನ್ನು ಸ್ವೀಕರಿಸುವುದರಿಂದ |
| ೬. | ಅಗ್ನಿ | ಕರೀಗುಡ್ಡೆಯಲ್ಲಿ | ಜಮದಗ್ನಿ | ಪದಾರ್ಥ ಭಕ್ಷಕ |
| ೭. | ಭೂದೇವಿ | ಕೆಳಗಿನ ರೆಪ್ಪೆಯಲ್ಲಿ | ಕಶ್ಯಪ | ಮಳೆಯ ನೀರನ್ನು ಪಾನಮಾಡಿ ಸಸ್ಯಗಳಿಗೆ ಆಶ್ರಯಪ್ರದಳು. |

# ಪದ್ಯ ೧೧

ಮೂಲ

ಜ್ಯೋತಿಯೊಳಗಿಪ್ಪನು ಕಪಿಲ ಪುರು।
ಹೂತಮುಖ ದಿಕ್ಪತಿಗಳಿಂದ ಸ।
ಮೇತನಾಗಿಹ ದಕ್ಷಿಣಾಕ್ಷಿಯ ಮುಖದೊಳಿಹ ವಿಶ್ವ॥
ಶ್ವೇತವರ್ಣ ಚತುರ್ಭುಜನು ಸಂ।
ಪ್ರೀತಿಯಿಂದಲಿ ಸ್ಥೂಲವಿಷಯವ
ಚೇತನರಿಗುಂಡುಣಿಪ ಜಾಗ್ರತೆಯನಿತ್ತು ನೃಗಜಾಸ್ಯ॥ ॥೧೧॥

ಅವತರಣಿಕೆ

ಬಲಗಣ್ಣಿನ ಜಾಗ್ರದವಸ್ಥೆಗೆ ಪ್ರೇರಕನಾಗಿರುವ ವಿಶ್ವನಾಮಕ ಶ್ರೀಪರಮಾತ್ಮನ ಉಪಾಸನಾಕ್ರಮವನ್ನು ವಿವರಿಸುತ್ತಾರೆ–ಜ್ಯೋತಿಯೊಳಗಿಪ್ಪನು ಎಂಬ ಪ್ರಸಕ್ತ ಸಂಧಿಗತ ೧೧ನೆಯ ಈ ಪದ್ಯದಿಂದ.

ಕಣ್ಣಿನ ತೇಜಸ್ಸಿನಲ್ಲಿ (ಜ್ಯೋತಿಯೊಳು) ಕಪಿಲನಾಮಕ ಪರಮಾತ್ಮನು ಇಂದ್ರಾದಿ ಅಷ್ಟದಿಕ್ಪಾಲಕರಿಂದ ಸಮೇತನಾಗಿದ್ದಾನೆ. ಬಲಗಣ್ಣಿನ (ದಕ್ಷಿಣಾಕ್ಷಿಯ) ತುದಿಯಲ್ಲಿ ವಿಶ್ವನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿರುವನು. ಈ ವಿಶ್ವನಾಮಕನು ಜಾಗ್ರದವಸ್ಥೆಗೆ ಪ್ರೇರಕನು. ಜಾಗ್ರದವಸ್ಥೆಯಲ್ಲಿರುವಾಗ, ನಾವು ನೇತ್ರಗಳ ದ್ವಾರಾ ಯಾವ ವಸ್ತುಗಳನ್ನು ನೋಡುತ್ತೇವೆಯೋ, ಅವು ತೇಜಃತತ್ತ್ವದ ತನ್ಮಾತ್ರಾಗುಣವಾದ ರೂಪವೆಂಬ ವಿಷಯ ಪದಾರ್ಥಗಳು. ರೂಪವೇ ನೇತ್ರೇಂದ್ರಿಯಕ್ಕೆ ವಿಷಯವು. ಕಣ್ಣಿನಲ್ಲಿದ್ದು ನೋಡಿ ನೋಡಿಸುವ ವಿಶ್ವನಾಮಕನು ಸ್ಥೂಲವಿಷಯಗತ ಸ್ವಾಖ್ಯರಸವನ್ನು ತಾನು ಸ್ವೀಕರಿಸಿ, ಅಂದರೆ ತದಂತರ್ಗತ ಭಗವದ್ರೂಪಗಳಲ್ಲಿ ಕ್ರೀಡಿಸಿ, ಬಿಂಬಕ್ರಿಯಾ ದ್ವಾರಾ ನೇತ್ರಗಳಿಂದ ನೋಡಿಸಿ, ವಸ್ತುಗಳ ದರ್ಶನರೂಪವಾದ ಅನುಭವವನ್ನು ಜೀವನಿಗೆ ಕೊಡುತ್ತಿರುವನು. ಇಂತಹ ವಿಶ್ವನಿಗೆ **ಸ್ಥೂಲಭುಕ್** ಎಂದು ಹೆಸರು. ಬಾಹ್ಯವಿಷಯಗಳ ಜ್ಞಾನವನ್ನು ಸ್ಫುರಣಮಾಡುವ ಇಂತಹ

ವಿಶ್ವನಿಗೆ ೧೯ಮುಖಗಳು ಮತ್ತು ಏಳು ಅವಯುವಗಳು. ಬಿಳುಪಾದ ವೈ ವರ್ಣ (ಶ್ವೇತವರ್ಣ) ಮತ್ತು ನಾಲ್ಕು ಭುಜಗಳಿರುವ ವಿಶ್ವನಿಗೆ ಮಧ್ಯ ಮುಖವು ಗಜಮುಖವು. ಉಳಿದ ೧೮ ವದನಗಳು ಮಾನವನ ಮುಖ ಗಳಂತಿವೆ. ಇದರಿಂದ ನೃಗಜಾಸ್ಯ ಎಂದಿದ್ದಾರೆ ॥೧೧॥

**ಪ್ರತಿಪದಾರ್ಥ**

**ಜ್ಯೋತಿಯೊಳಗೆ**=ಕಣ್ಣಿನ ತೇಜೋರೂಪವಾದ ಪ್ರದೇಶದಲ್ಲಿ (ನೇತ್ರ ಗತ ಕರೀಗುಡ್ಡೆಯ ಮಧ್ಯದಲ್ಲಿರುವ ಕರಿಯ ಚುಕ್ಕಿ), **ಕಪಿಲ**=ಕಪಿಲ ನಾಮಕ ಶ್ರೀಪರಮಾತ್ಮನು, **ಇಪ್ಪನು**=ವಿದ್ಯಮಾನನಾಗಿರುವನು, **ಪುರು ಹೂತಮುಖ**=ಇಂದ್ರನೇ ಮೊದಲಾಗಿ, **ದಿಕ್ಪತಿಗಳಿಂದ**=ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ವಾಯು, ಕುಬೇರ ಮತ್ತು ರುದ್ರ ಎಂಬ ಎಂಟುಮಂದಿ ದಿಕ್ಪಾಲಕದೇವತೆಗಳಿಂದ, **ಸಮೇತನಾಗಿ**=ಒಡಗೂಡಿ ಕೊಂಡು, **ಇಹ**=ಇರುವವನಾಗಿದ್ದಾನೆ. ಅಂದರೆ ಕಪಿಲನಾಮಕ ಶ್ರೀಪರ ಮಾತ್ಮನು ಕಣ್ಣಿನ ತೇಜಸ್ಸಿನಲ್ಲಿ ದಿಕ್ಪಾಲಕರ ಮಧ್ಯಗತನಾಗಿದ್ದಾನೆ. **ದಕ್ಷಿಣಾ ಕ್ಷಿಯು**=ಇದಲ್ಲದೆ, ಪ್ರತಿಜೀವರ ಬಲಗಣ್ಣಿನ, **ಮುಖದೊಳು**= ನಾಸಿಕಕ್ಕೆ ಸಂಬಂಧಿಸಿದ ಬಲನೇತ್ರದ ತುದಿಯಲ್ಲಿ (ಇದಕ್ಕೆ ಮುಖ ಎಂದು ಸಾಂಕೇತ), **ವಿಶ್ವ**=ವಿಶ್ವನಾಮಕ ಶ್ರೀಪರಮಾತ್ಮನು, **ಇಹ**=ವಿದ್ಯ ಮಾನನಾಗಿದ್ದಾನೆ. **ಶ್ವೇತವರ್ಣ**=ಅಂತಹ ವಿಶ್ವನಾಮಕನು ಬಿಳಿಯ ವರ್ಣದಿಂದ ಕೂಡಿದವನಾಗಿ, **ಚತುರ್ಭುಜನು**=ನಾಲ್ಕು ಬಾಹುಗಳಿಂದ ಯುಕ್ತನಾದವನಾಗಿ, **ನೃಗಜಾಸ್ಯ**=೧೯ ಮುಖಗಳಿಂದ ಕೂಡಿದವನಾಗಿ ಇದರಲ್ಲಿ ಮಧ್ಯಮುಖ ಆನೆಯ ಮುಖವು (ಗಜಾಸ್ಯ, ಗಜ–ಆನೆಯಂತೆ, ಆಸ್ಯ- ಮುಖವುಳ್ಳವನು), ಇಂತಹ ಗಜಮುಖಕ್ಕೆ ಬಲಭಾಗದಲ್ಲಿ ಒಂಭತ್ತು ಮಾನುಷ ಮುಖ ಮತ್ತು ಎಡಪಾರ್ಶ್ವದಲ್ಲಿ ಒಂಭತ್ತು ಮಾನುಷಮುಖ (ನೃ–ಮಾನವ) (ನೃ–ಮನುಷ್ಯರಂತೆ, ಗಜ–ಆನೆಯಂತೆ, ಆಸ್ಯ–ಮುಖ) **ಚೇತನರಿಗೆ**= ಇಂತಹ ೧೯ಮುಖ, ಶ್ವೇತವರ್ಣ, ಚತುರ್ಭುಜಗಳಿಂದ ಕೂಡಿದ ವಿಶ್ವನು ಸಕಲ ಜೀವರಾಶಿಗಳಿಗೆ, **ಜಾಗ್ರತೆಯನು**=ಜಾಗ್ರದವಸ್ಥೆಯನ್ನು(ಎಚ್ಚರವಾಗಿರುವ

ಕಾಲ), **ಇತ್ತು**=ಕೊಟ್ಟವನಾಗಿ, **ಸಂಪ್ರೀತಿಯಿಂದಲಿ**=ಅತ್ಯಂತ ಕಾರುಣ್ಯದಿಂದ, **ಸ್ಥೂಲವಿಷಯುವ**=ಸ್ಥೂಲವಾದ ವಿಷಯ ಸುಖಗಳನ್ನು (ನೇತ್ರದ್ವಾರಾ ಸಮಸ್ತ ವಸ್ತುಗಳ ರೂಪದರ್ಶನ), **ಉಂಡು**=ಬಿಂಬ ಕ್ರಿಯಾದ್ವಾರಾ ಸ್ಥೂಲಭುಕ್ ಎಂದೆನಿಸಿ, ಸ್ವಾಖ್ಯವನ್ನು ತಾನು ಸ್ವೀಕರಿಸಿ, **ಉಣಿಪ**=ಜೀವರಿಗೆ ಭೋಗರೂಪದಲ್ಲಿ ಅನುಭವಕ್ಕೆ ತಂದೀಯುವನು ॥೧೧॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದಕ್ಷಿಣನೇತ್ರವಾದ ಬಲನೇತ್ರ ವಿಚಾರ ಹೇಳತಾರೆ.

ಜ್ಯೋತಿಯೊಳಗೆ–ಬಲಭಾಗದಲ್ಲಿ ಇರತಕ್ಕ ನೇತ್ರಗತ ಕರೀಗುಡ್ಡಿನ ಒಳಗೆ ಇರತಕ್ಕ ಸಣ್ಣದಾದ ಕರಿಚುಕ್ಕಿ ಒಳಗೆ ಇರುವ ಜ್ಯೋತಿ ಎಂದರೆ ತೇಜಸ್ಸಿನ ಒಳಗೆ, ಕಪಿಲ–ಕಪಿಲನಾಮಕ ಪರಮಾತ್ಮನು, ಇಪ್ಪನು-ಇರೋವನಾಗಿದ್ದಾನೆ, ಪುರುಹೂತಮುಖ–ಇಂದ್ರನೇ ಮೊದಲಾದ ಎಂದರೆ ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ವಾಯು, ಕುಬೇರ, ರುದ್ರ ಈ ಅಷ್ಟಸಂಖ್ಯಾಕರಾದ, ದಿಕ್ಪತಿಗಳಿಂದ ಸಮೇತನಾಗಿ–ಆಯಾ ದಿಕ್ಕಿನಲ್ಲಿ, ಆಯಾ ದಿಕ್ಪತಿಗಳಿಂದ ಕೂಡಿಕೊಂಡು ಕಪಿಲನಾದ ತಾನು ಮಧ್ಯಗತನಾಗಿ, ಇಹ–ಇರೋವನಾಗಿದ್ದಾನೆ, ಈ ರೂಪವಲ್ಲದೇ ಇನ್ನೂ, ದಕ್ಷಿಣಾಕ್ಷಿಯ–ಬಲಭಾಗಗತ ಇದೇ ನೇತ್ರದ, ಮುಖದೊಳಿಹ ವಿಶ್ವ–ನಾಸಿಕಕ್ಕು ಸಂಬಂಧಿಸಿರುವ ನೇತ್ರದ ಆದಿಭಾಗವಾದದ್ದು ದಾವದದೆ ಅದಕ್ಕೆ ಮುಖ ಎಂತ ಸಾಂಕೇತವು. ಇಂಥಾ ಮುಖಸ್ಥಾನದೊಳಗೆ ಇರೋವನಾಗಿದ್ದಾನೆ ವಿಶ್ವರೂಪಿ ಪರಮಾತ್ಮ, ಶ್ವೇತವರ್ಣ ಚತುರ್ಭುಜನು–ಶ್ವೇತವರ್ಣನಾದವನು ಚತುರ್ಭುಜನಾದವನು, ನೃಗಜಾಸ್ಯ–ಗಜಾಸ್ಯ–ಮಧ್ಯಗತ ಮುಖ ಗಜಮುಖ, ನೃ–ಈ ಗಜಮುಖಕೆ ಎಡಭಾಗದಲ್ಲಿ ಮಾನುಷಮುಖ ಒಂಭತ್ತು, ಬಲಭಾಗದಲ್ಲಿ ಮಾನುಷಮುಖ ಒಂಭತ್ತು, ಅಂತು ಹದಿನೆಂಟು. ಮಧ್ಯಗತಮುಖ ಗಜಮುಖ ಒಂದು, ಅಂತು ಒಟ್ಟು ಹತ್ತೊಂಭತ್ತು ಮುಖ, ಚೇತನರಿಗೆ–ಏತಾದೃಶನಾದ ವಿಶ್ವ ಸರ್ವ ಪ್ರಾಣಿಗಳಿಗೆ, ಜಾಗ್ರತೆ ಇತ್ತು–ಜಾಗ್ರತ್‌ಪ್ರವರ್ತಕನಾದ ಪ್ರಯುಕ್ತ ಎಚ್ಚರಿಕೆ

ಯನ್ನು ಕೊಟ್ಟು, ಆ ಎಚ್ಚರಿಕೆ ಕಾಲದಲ್ಲಿ ಭೋಗಮಾಡತಕ್ಕ, ಸ್ಥೂಲ ವಿಷಯುವ–ಸ್ಥೂಲಸಂಬಂಧವಾದ ಎಂದರೆ ಸ್ಥೂಲದೇಹದಿಂದ ಭೋಗಮಾಡತಕ್ಕ. ಸಂಪ್ರೀತಿಯಿಂದಲಿ–ಅತ್ಯಂತ ಪ್ರೀತಿಯಿಂದ. ಉಂಡುಣಿಪ–ಉಣಿಸೋವನಾಗ ತಾನೆ.

ತಾತ್ಪರ್ಯ

ಬಲನೇತ್ರದಲಿ ಪುರುಷರೂಪದಿಂದ ವಿಶ್ವ ದಾವ ಪ್ರಕಾರದಿಂದ ಇದ್ದಾನೋ ಅದೇ ಪ್ರಕಾರ ಎಡಭಾಗದ ನೇತ್ರದಲಿ ವಿಶ್ವ ಹತ್ತೊಂಭತ್ತು ಮುಖದಿಂದ ಸ್ತ್ರೀರೂಪದಿಂದ ಇದ್ದಾನೆ. ಇದು ಪುರುಷರಲ್ಲಿ ನೇಮ. ಸ್ತ್ರೀಯರಲ್ಲಿ ತದ್ವಿಷಮವಾಗಿದ್ದಾನೆ. ಪೂರ್ವೋಕ್ತ ಜ್ಯೋತೀದ್ವಾರಾನೇ ಸರ್ವ ಪದಾರ್ಥಗಳು ಕಾಣತದೇಹೊರತು ತದ್ವ್ಯತಿರಿಕ್ತ ಕಾಣೋದಿಲ್ಲ ಎಂತ ತಾತ್ಪರ್ಯ.

ವಿಶೇಷಾರ್ಥ–ಪ್ರಮಾಣ–

ದಕ್ಷಿಣಾಕ್ಷಿಮುಖೇ ವಿಶ್ವೋ ಜ್ಯೋತಿಸ್ಥಃ ಕಪಿಲೋ ಹರಿಃ ।
ಏಕೋನವಿಂಶತಿಮುಖಶ್ಚತುರ್ಹಸ್ತೋ ದ್ವಿಪಾದಕಃ॥
ಏಕೋನವಿಂಶತಿರ್ದಕ್ಷೇ ಪುಮಾಕಾರಾಣಿ ವೈ ನವ।
ಏಕೋನವಿಂಶತಿರ್ವಾಮೇ ಸ್ತ್ರೀಯಾಕಾರಾಣಿ ವೈ ನವ।
ಮಧ್ಯಮಂ ತು ಗಜಾಕಾರಂ ಮುಖಂ ಜಾಗ್ರತ್ಪ್ರವರ್ತಕಂ॥

ಈ ಪ್ರಮಾಣ ದಿಕ್ಪ್ರದರ್ಶನದಿಂದ ಏಕನೇತ್ರ ವಿಚಾರ ಮಾತ್ರ ಹೇಳಿದ ಸ್ಥಳದಲ್ಲಿ ಉಭಯ ನೇತ್ರವೂ ಗ್ರಾಹ್ಯ ಎಂತ ಅರ್ಥ.

ಉಂಡುಣಿಪ ಎಂತ ಹೇಳಿದರು ಹ್ಯಾಂಗೆಂದರೆ–ಪ್ರಾಣಿಗಳ ಸ್ಥೂಲ ದೇಹದಲ್ಲಿ ಅಂತರ್ಗತನಾಗಿ ದೇಹಾಕಾರದಿಂದಲೂ, ವಿಷಯಗಳ ಅಂತರ್ಗತನಾಗಿ ವಿಷಯಾಕಾರದಿಂದಲೂ ಇದ್ದು, ಬಿಂಬಕ್ರಿಯಾ ದ್ವಾರಾ ತನ್ನ ಸ್ವಾಖ್ಯಗಳ ತಾನು ಉಂಡು, ದೇಹಗತ ತತ್ತ್ವಾಭಿಮಾನಿಗಳ ದ್ವಾರಾ ಜೀವನದ್ವಾರಾ ದೇಹ

ದಿಂದ ಪ್ರಾಕೃತಪದಾರ್ಥಗಳ ಪ್ರಾಣಿಗಳಿಗೆ ಉಣಿಸೋವನಾಗಥಾನೆ. ಉಂಡು ಉಣಿಸೋಣ ಎಂಬುದು ಏಕಕಾಲಾವಚ್ಛೇದೇನ ಹೊರ್ತು ಭಿನ್ನಕಾಲವಲ್ಲ. ಇದಕ್ಕೆ ದೃಷ್ಟಾಂತ–ಪುರುಷ, ಪುರುಷನ ಛಾಯವೇ ದೃಷ್ಟಾಂತ. ಪುರುಷನ ಕ್ರಿಯಾ, ಛಾಯಾಕ್ರಿಯಾ ಏಕಕಾಲಾವಚ್ಛೇದವತ್ ಎಂತ ತಾತ್ಪರ್ಯ ॥೧೧॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಕಪಿಲನಾಮಕ ಪರಮಾತ್ಮನು ಕಣ್ಣಿನ ಪ್ರಕಾಶದಲ್ಲಿ (ತೇಜಸ್ಸಿನಲ್ಲಿ) ಇರುವನು. ವಿಶ್ವನಾಮಕ ಪರಮಾತ್ಮನು ಇಂದ್ರಾದಿ ಅಷ್ಟದಿಕ್ಪಾಲಕರಿಂದ ಸೇವಿತನಾಗಿ, ಅವರಿಂದೊಡಗೂಡಿ, ಬಲಗಣ್ಣಿನ ಮುಂಭಾಗದಲ್ಲಿ ಅದರ ಆಕಾರವನ್ನು ವ್ಯಾಪಿಸಿಕೊಂಡು ಇರುವನು. ಈ ಪರಮಾತ್ಮನು ಶ್ವೇತವರ್ಣನಾಗಿಯೂ, ಚತುರ್ಭುಜ ಉಳ್ಳವನಾಗಿಯೂ ಇರುವನು, ಮನುಷ್ಯರ ಮುಖಗಳೂ, ಆನೆಯ ಮುಖವೂ ಸಹ ಇರುವುದೆಂದು ದಾಸರಾಯರು **ನೃಗಜಾಸ್ಯ** ಎಂಬ ಪದದಿಂದ ಹೇಳಿರುವರು. ಆದರೆ ಒಟ್ಟು ಎಷ್ಟು ಮುಖಗಳೆಂದು ಹೇಳದಿದ್ದರೂ, ನೃಗಜಾಸ್ಯ ಎಂಬ ಪದವು ಮನುಷ್ಯರ ಮುಖ ಮತ್ತು ಆನೆಯ ಮುಖವೆಂದು ಹೇಳಿದಮೇಲೆ, ಒಂದು ಮುಖವಲ್ಲವೆಂಬುದು ಸ್ಪಷ್ಟವಾಯಿತು. ಹಾಗಾದರೆ ಎಷ್ಟು ಮುಖವೆಂದರೆ:

**ಮಾಂಡೂಕೋಪನಿಷದ್ಭಾಷ್ಯದಲ್ಲಿ–**

> **ಅಷ್ಟಾದಶ ಮುಖಾನ್ಯಸ್ಯ ಪುಮಾಕಾರಾಣಿ ಸರ್ವಶಃ।**
> **ಮಧ್ಯಮಂ ತು ಗಜಾಕಾರಶ್ಚತುರ್ಬಾಹುಃ ಪರಃ ಪುಮಾನ್॥**

ಎಂಬ ಪ್ರಮಾಣದಂತೆ, ೧೮ ಮನುಷ್ಯ ಮುಖಗಳು; ಮಧ್ಯದಲ್ಲಿ ಒಂದು ಗಜಮುಖ ಮಾತ್ರ ಎಂತಲೂ, ನಾಲ್ಕು ಬಾಹುಗಳುಳ್ಳ ಪರಮಪುರುಷನೆಂದೂ ಉಕ್ತವಾಗಿದೆ. ಅದೇ ಅರ್ಥವನ್ನೇ ಇಲ್ಲಿ ತೆಗೆದುಕೊಳ್ಳಬೇಕು. ಈ ವಿಶ್ವನಾಮಕನು ಜೀವರುಗಳಿಗೆ ಜಾಗ್ರದವಸ್ಥೆ ಕೊಡುವನು. ಅದ್ದರಿಂದ ಪ್ರೀತಿಯಿಂದ ಜೀವರಿಗೆ ಜಾಗ್ರದವಸ್ಥೆಯಲ್ಲಿ ಅನುಭವಿಸಬೇಕಾದ ಸ್ಥೂಲವಿಷಯ

ಸುಖಗಳನ್ನು ಅವರ ನೇತ್ರದಲ್ಲಿದ್ದು, ತಾನು ಅನುಭವಿಸಿ ಜೀವನಿಗೂ ಸುಖವನ್ನು ಉಣಿಸುವನು. ಇದರಲ್ಲಿ ಸ್ವಲ್ಪ ವಿಶೇಷವುಂಟು, ಅದೇನೆಂದರೆ,

ವಿಶ್ವರೂಪಿಯಾದ ಪರಮಾತ್ಮನಿಗೆ ೧೯ ಮುಖಗಳೆಂದು ಹೇಳಿದರು. ಅದರಲ್ಲಿ ಯಾವ ಯಾವ ಮುಖದಿಂದ ಯಾರು ಯಾರಿಗೆ ಜಾಗ್ರದವಸ್ಥೆಯನ್ನು ಕೊಡುವನೆಂಬ ವಿಷಯದಲ್ಲಿ **ಪ್ರಕಾಶಸಂಹಿತಾ** ಎಂಬ ಗ್ರಂಥದಲ್ಲಿ ವಿಸ್ತಾರ ಮಾಡಿರುವರು. ಅದೆಂತೆನೆ-

**ದಕ್ಷಿಣಾಕ್ಷಿಗತೋ ವಿಶ್ವಃ ಸತ್ತ್ವಸ್ಥಃ ಸತ್ಯಭಾಗತಃ।**
**ಉತ್ತಮಾನಾಂ ಮಧ್ಯಮಾನಾಂ ನೀಚಾನಾಂ ತತ್ತ್ವಮಾನಿನಾಂ॥**
**ತ್ರಿಭಿರ್ಮುಖೈಃ ಸವ್ಯಗತೈರವಸ್ಥಾ ಜಾಗೃದಾಹ್ವಯಾ।**
**ಕರೋತ್ಯಯಂ ಮಧ್ಯಗಾಸ್ಯ ತೃತೀಯೇನ ಸ ದೈವಹಿಂ॥**
**ಉಚ್ಚಮಧ್ಯಾಂಶ್ಚ ಮರ್ತ್ಯಾನಾಂ ದಾಸಾನಾಂ ಜಾಗೃದಾಹ್ವಯಾ**
**ಕರೋತ್ಯವಸ್ಥಾಮಂ ತ್ಯಸ್ಥೈ ಸ್ತ್ರಿಭಿರಾಸ್ಯೈಃ ಸ ಏವ ಹಿ॥**
**ನಿರಂಶನಾಂ ಚ ಸಾಂಶಾನಾಂ ಜಾಗೃದಾ ಸಂಪ್ರವರ್ತಕಃ।**
**ಪುಂಸಾಮೇವಂ ವಾಮುಗಾಸ್ಯೈಃ ಸ್ತ್ರೀಣಾಮೇವಂ ಕರಿಷ್ಯತಿ॥**

ಇದರ ಅರ್ಥ–

ಚೇತನರ ಬಲಗಣ್ಣಿನಲ್ಲಿ ವಿಶ್ವನಾಮಕ ಪರಮಾತ್ಮನು ಸತ್ತ್ವಗುಣ ಪ್ರವಿಷ್ಟನಾಗಿದ್ದು, ಸತ್ತ್ವಭಾಗದಿಂದ ತತ್ತ್ವಾಭಿಮಾನಿಗಳಾದ ದೇವತೆಗಳಲ್ಲಿ ಉತ್ತಮರಾದ ಬ್ರಹ್ಮಾದಿಗಳಿಗೂ, ಮಧ್ಯಮರಾದ ಇಂದ್ರಾದಿಗಳಿಗೂ, ಅಧಮರಾದ ಪುಷ್ಕರಾದಿಗಳಿಗೂ, ಇಂತಹ ಮೂರು ವಿಧರಾದ ದೇವತೆಗಳಿಗೂ ಗಜಮುಖಕ್ಕೆ ಸೇರಿದ ಹಾಗಿರುವ ಬಲಗಡೆಯ ಮೂರು ಮುಖಗಳಿಂದ ಜಾಗ್ರದವಸ್ಥೆಯನ್ನು ಕೊಡುವನು. ಆ ಮೂರು ಮುಖಗಳಿಗೆ ಸೇರಿದ ಹಾಗೆ ನಡುವೆ ಇರುವ ಮೂರು ಮುಖಗಳಿಂದ ಮನುಷ್ಯೋತ್ತಮರು, ಮನುಷ್ಯಮಧ್ಯಮರು ಅಧಮರೆಂಬ ಮೂರುವಿಧ ಜೀವರಿಗೂ ಜಾಗ್ರದವಸ್ಥೆಯನ್ನು ಕೊಡುವನು. ಅವುಗಳಿಗೆ ಸೇರಿದ ಹಾಗೆ ಇರುವ ಕಡೇ ಭಾಗದ ಮುಖಗಳಿಂದ ದೈತ್ಯೋತ್ತಮರು, ಅಧಮರಾದ ಸಾಂಶರು, ನಿರಂಶರಾದ ದೈತ್ಯರು ಇವರುಗಳಿಗೆ ಜಾಗ್ರದ

ವಸ್ಥೆಯನ್ನು ಕೊಡುವನು. ಹೀಗೆ ಬಲಗಡೆ ಮುಖಗಳು ಒಂಭತ್ತರಿಂದ ಪುರುಷರಿಗೆ ಜಾಗ್ರದವಸ್ಥೆ ಉಂಟಾಗುವುದು. ಇದರಂತೆ ಗಜಮುಖಕ್ಕೆ ಎಡ ಭಾಗದಲ್ಲಿರುವ ಒಂಭತ್ತು ಮುಖಗಳಿಂದ ದೇವ, ಮಾನವ, ದೈತ್ಯ ಎಂಬ ಹೆಸರುಗಳಿಂದ ಸ್ತ್ರೀಯರಿಗೂ ಜಾಗ್ರದವಸ್ಥೆಯನ್ನು ಕೊಡುವನು. ಈ ವಿಶೇಷಾರ್ಥಗಳೆಲ್ಲವೂ ದಾಸರಾಯರು ಹೇಳಿದ ಪದ್ಯದಲ್ಲಿ ಗರ್ಭಿತವಾಗಿವೆ॥೧೧॥

೩. ಭಾವದರ್ಪಣಟೀಕಾ ವ್ಯಾಖ್ಯಾನ

ಹತ್ತೊಂಭತ್ತು ಮುಖವುಳ್ಳ ವಿಶ್ವನು ದಕ್ಷಿಣನೇತ್ರದ ಕರೀಗುಡ್ಡೆಯ ಜ್ಯೋತಿರ್ಮಧ್ಯದಲ್ಲಿದ್ದು, ಜಾಗ್ರದವಸ್ಥೆಯಲ್ಲಿ ಆಗತಕ್ಕ ಸ್ಥೂಲಕರ್ಮವ ತಾನುಂಡು, ಜೀವರಿಗೆ ಉಣಿಸುವನೆಂಬು ಹೇಳುತ್ತಾರೆ 'ಜ್ಯೋತಿಯೊಳಗೆ' ಎಂಬ ಪದ್ಯದಿಂದ.

> **ಚಕ್ಷುಸ್ಥಃ ಕಪಿಲೋ ವಿಷ್ಣುರಿತಿ॥**
>
> **–ಐತರೇಯಭಾಷ್ಯೋಕ್ತೇಃ**

> **ಪುರುಹೂತ ಮುಖೇತಿ ಏವಮುದ್ಧೃತರೂಪೋಽಸೌ**
> **ತ್ವಷ್ಟದಿಕ್ಪಾಲಸೇವಿತ॥**
>
> **ಇತಿ ಮಾನಸಸ್ಮೃತಿಮಾನಾತ್॥**

**ವಿಶ್ವೇತಿ**

> **ಅಷ್ಟಾದಶ ಮುಖಾನ್ಯಸ್ಯ ಪುಮಾಕಾರಾಣಿ ಸರ್ವಶಃ।**
> **ಮಧ್ಯಮಂ ತು ಗಜಾಕಾರಶ್ಚತುರ್ಬಾಹು ಪರಃ ಪುಮಾನ್॥**
> **ಪಾದೌ ಹಸ್ತಿಕರೌ ಹಸ್ತ ಇತಿ ಸಪ್ತಾಂಗ ಈರಿತ ಇತಿ॥**
>
> **–ಮಾಂಡೂಕಭಾಷ್ಯೋಕ್ತೇಃ।**

ಈ ವಿಶ್ವಮೂರ್ತಿಗೆ ಹತ್ತೊಂಭತ್ತು ಮುಖ ಇರುತ್ತವಷ್ಟೇ, ಇವುಗಳಲ್ಲಿ ಯಾವ ಯಾವ ಮುಖದಿಂದ ಏನೇನು ಕಾರ್ಯ ನಡೆಸುತ್ತಾನೆಂದರೆ– ಪ್ರಸಂಗ ಸಂಗತ್ಯಾ ಏಕೋನವಿಂಶತಿಮುಖದ ಕೃತ್ಯವು ವಿವರಿಸಲ್ಪಡುತ್ತದೆ.

೧. ಭಕ್ತಿಯೋಗಿಗಳಿಗೆ ಒಂದನೇ ಮುಖದಿಂದ.

೨. ಜ್ಞಾನಯೋಗಿಗಳಿಗೆ ನಾಲ್ಕನೇ ಮುಖದಿಂದ.

೩. ಕರ್ಮಯೋಗಿಗಳಿಗೆ ಏಳನೇ ಮುಖದಿಂದ ಜಾಗ್ರತಿಪ್ರದನಾಗುತ್ತಾನೆ.

೪. ಎರಡು, ಐದು ಮತ್ತು ಎಂಟನೇ ಮುಖಗಳಿಂದ ಉತ್ತಮ ಮಧ್ಯಮ ಅಧಮರಾದ ನಿತ್ಯಸಂಸಾರಿಗಳಿಗೆ ಜಾಗ್ರತ್ಪ್ರದನಾಗುತ್ತಾನೆ.

೫. ಉತ್ತಮ, ಮಧ್ಯಮ, ಅಧಮರಾದ ತಪೋಯೋಗ್ಯರಿಗೆ ಮೂರು, ಆರು ಮತ್ತು ಒಂಭತ್ತನೇ ಮುಖಗಳಿಂದ ಜಾಗ್ರತ್ಪ್ರದನಾಗುತ್ತಾನೆ. ಏವಂ ರೀತ್ಯಾ ದಕ್ಷಿಣಮುಖದಿಂದ ಜಾಗ್ರತ್ಪ್ರದನಾಗುತ್ತಾನೆ. ಇವರಿವರಿಗೆ ಪ್ರಾಪ್ತರಾದ ಸ್ತ್ರೀಯರಿಗೆ ವಾಮಮುಖದಿಂದ ಜಾಗ್ರತ್ಪ್ರವರ್ತಕನಾಗುತ್ತಾನೆಂದು ಹೇಳುತ್ತದೆ.

**ಉಕ್ತಂಚ ಪ್ರಕಾಶಸಂಹಿತಾಯಾಂ–**

**ದಕ್ಷಿಣಾಕ್ಷಿಗತೋ..........................................**
**..................................ಸ್ತ್ರೀಣಾಮೇವಂ ಕರಿಷ್ಯತಿ॥**

(ಈ ಮೇಲಿನ ಪ್ರಕಾಶಸಂಹಿತೆಯ ಪ್ರಮಾಣದ ಪೂರ್ಣಶ್ಲೋಕವನ್ನು ಭಾವಪ್ರಕಾಶಿಕೆ ವ್ಯಾಖ್ಯಾನದಲ್ಲಿ ಕೊಟ್ಟಿದೆ ಅಲ್ಲಿ ನೋಡುವುದು)

ತತ್ಪ್ರಯುಕ್ತ ವಿಶ್ವನು ಸ್ಥೂಲವಿಷಯವನ್ನುಂಡು, ಜೀವರಿಗೆ ಉಣಿಸುತ್ತಾನೆಂದರ್ಥ.

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಜ್ಯೋತಿ–ಇತಿ॥ ಚಕ್ಷುಸಿ–ಜ್ಯೋತಿರಾದ್ಯಧಿಷ್ಠಾನಮಿತಿ ಚ। ಜ್ಯೋತಿರ್ವ್ಯಾಪ್ತಸ್ತು ಕಪಿಲಃ ವಿಶ್ವೋ ಹಿ ಸ್ಥೂಲಭುಕ್ ಇತಿ॥ಜಾಗರಿತಸ್ಥಾನಃ ಬಹಿಃಪ್ರಜ್ಞಃ ಸಪ್ತಾಂಗ ಏಕೋನವಿಶಂತಿ ಮುಖಃ ಸ್ಥೂಲಭುಕ್ ವೈಶ್ವಾನರಃ ಪ್ರಥಮಃ ಪಾದಃ॥ವೈಶ್ವಾನರೋ ಜಾಗರಿತಸ್ಥಾನಗೋ ಗಜವಕ್ತ್ರಃ॥ನಿರ್ಮಾತಾ ಬಾಹ್ಯಸಂವಿತ್ತೇಃ ಜೀವಾನಾಂ ತದಗೋಚರಃ। ಅಷ್ಟಾದಶಮುಖಾನ್ಯಸ್ಯ ಪುಮಾಕಾರಾಣಿ ಸರ್ವಶಃ॥ ಮಧ್ಯಮಂ ತು ಗಜಾಕಾರಂ ಚತುರ್ಬಾಹುಃ ಪರಃ

ಪುಮ್ಹಾನ್। ಸ್ಥೂಲಾನ್ ಭೋಗಾನ್ ಇಂದ್ರಿಯೈಃ ಸಹ ಶುಭಾನ್ ಭುಂಕ್ತೇ ನ ಚಾಶುಭಾನ್। ಇತಿ॥

**ಕನ್ನಡಾನುವಾದ**

||ಓಂ ಜ್ಯೋತಿರಾದ್ಯಧಿಷ್ಠಾನಂ ತು ತದಾಮನನಾತ್ ಓಂ॥

ಎಂಬ ಬ್ರಹ್ಮಸೂತ್ರದಲ್ಲಿ–ಚಕ್ಷುರ್ಮುಂತಾದವುಗಳಲ್ಲಿ ಅಧಿಷ್ಠಿತವಾಗಿರುವುದು ಎಂದರ್ಥ. ಅಂದರೆ ಯಃ ಚಕ್ಷುಷಿ ತಿಷ್ಠನ್ ಎಂಬ ಉಕ್ತಿಯು ಪರಬ್ರಹ್ಮನಾದ ಶ್ರೀಮನ್ನಾರಾಯಣನೇ ಜ್ಯೋತಿಯೊಳಗಿಪ್ಪನು ಎಂದು ಪ್ರತಿಪಾದಿಸುತ್ತದೆ. ಕಣ್ಣಿನ ತೇಜಸ್ಸಿನಲ್ಲಿ ಅಂದರೆ ನೇತ್ರದ ಜ್ಯೋತಿಯಲ್ಲಿ ಕಪಿಲನಾಮಕ ಶ್ರೀಪರಮಾತ್ಮನು ಅಧಿಷ್ಠಿತನಾಗಿರುವನು. ವಿಶ್ವನಾಮಕನು ಸ್ಥೂಲವಿಷಯಗಳನ್ನು ಭುಂಜಿಸುವನು. ವಿಶ್ವನು ಜಾಗ್ರದವಸ್ಥಾಪ್ರೇರಕನು. ಕಣ್ಣಿನಲ್ಲಿದ್ದು ಬಾಹ್ಯವಿಷಯಕಜ್ಞಾನವನ್ನು ಪ್ರೇರಿಸುವನು. ಏಳು ಅವಯವಗಳುಳ್ಳ (ಸಪ್ತಾಂಗ) ಮತ್ತು ೧೯ ಮುಖಗಳಿರುವ (ಏಕೋನವಿಂಶತಿವದನ) ಈ ವಿಶ್ವನಿಗೆ ಸ್ಥೂಲಭುಕ್ ಎಂದು ಹೆಸರು. ಇಂತಹ ವೈಶ್ವಾನರ (ವಿಶ್ವನು) ಪ್ರಥಮ ಪಾದ ಅಂದರೆ ಅಂಶ ಅಕಾರವಾಚ್ಯನು. ವೈಶ್ವಾನರನು ಜಾಗರಿತ ಸ್ಥಾನವಾದ ಚಕ್ಷುಸ್ಸಿನಲ್ಲಿ ಜೀವರಿಗೆ ತಿಳಿಸದಲೆ ವಿದ್ಯಮಾನನಾಗಿರುವನು. ಅವನ ೧೯ ಮುಖಗಳಲ್ಲಿ ಮಧ್ಯಮುಖವು ಗಜಮುಖವು. ಉಳಿದ ೧೮ ಮನುಷ್ಯರ ಮುಖಗಳಂತೆ ಇವೆ. ಅವನಿಗೆ ನಾಲ್ಕು ಪುರುಷಾಕಾರದ ಬಾಹಗಳಿವೆ, ಇಂದ್ರಿಯಸಂಪರ್ಕ ದ್ವಾರಾ ಸ್ಥೂಲವಿಷಯಗಳ ಸಾರಶುಭಭಾಗಗಳನ್ನು (ಸ್ವಾಖ್ಯಾಂಶ) ಭುಂಜಿಸುತ್ತಾನೆ. ಈ ವಾಕ್ಯಗಳೇ ಈ ಪದ್ಯಕ್ಕೆ ಆಧಾರಭೂತವಾದ ಪ್ರಮಾಣಗಳು ॥೧೧॥

**೫. ಶ್ರೀಗುರುಹೃದಯ ಪ್ರಕಾಶಿಕೆ**

ಕಣ್ಣಿನ ಜ್ಯೋತಿ ಎಂಬ ತೇಜಸ್ಸಿನಲ್ಲಿ ಕಪಿಲರೂಪನು, ಪುರುಹೂತನೆಂಬ ಇಂದ್ರ ಮೊದಲಾದ ದೇವತೆಗಳಿಂದ ಸಹಿತನಾಗಿ, ಬಲಗಣ್ಣಿನ ಮುಂಭಾಗದಲ್ಲಿ ವಿಶ್ವಮೂರ್ತಿಯು ಶ್ವೇತವರ್ಣ ಚತುರ್ಭುಜವೆಂದು, ಗಜಶಿರಸ್ಸು, ಮನುಷ್ಯ

ಶಿರಸ್ಸು ಹದಿನೆಂಟು ಸಹ ಉಳ್ಳವನಾಗಿ ಸರ್ವಚೇತನರಿಗೆ ಜಾಗ್ರತೆ ಕೊಟ್ಟು ಸ್ಥೂಲವಿಷಯವೆಂಬ ಶಬ್ದ, ಸ್ಪರ್ಶ ಮೊದಲಾದ ಭೋಗಗಳನ್ನು ತಾನು ತೆಗೆದುಕೊಂಡು ಸರ್ವರಿಗೂ ಉಣಿಸುವನು ॥೧೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯಗಳಲ್ಲಿ ರುದ್ರಾದಿ ದೇವತಾಗಣದಿಂದ ಸಂಸೇವ್ಯಮಾನರಾದ ಶ್ರೀವಾಯುದೇವರು ನೇತ್ರಗಳಲ್ಲಿ ಗೋವತ್ಸರೂಪದಿಂದ ರಜ್ಜುರೂಪದಲ್ಲಿರುವ ಶ್ರೀಲಕ್ಷ್ಮೀದೇವಿಯರಿಗೆ ಅಧೀನರಾಗಿದ್ದಾರೆಂದೂ, ಲಕ್ಷ್ಮೀಸಂಸೇವ್ಯಮಾನನಾದ ಶ್ರೀಪ್ರದ್ಯುಮ್ನರೂಪೀ ಶ್ರೀಪರಮಾತ್ಮನು ಸ್ತಂಭರೂಪದಲ್ಲಿದ್ದು, ನೇತ್ರಗಳ ದ್ವಾರಾ ಜೀವರಿಗೆ ವಸ್ತುಗಳ ದರ್ಶನವನ್ನುಂಟುಮಾಡುವನೆಂದು ವಿವರಿಸಿ, ಪ್ರಸಕ್ತ ೧೧ನೆಯ **ಜ್ಯೋತಿಯೊಳಗಿಪ್ಪನು** ಎಂಬ ಪದ್ಯದಿಂದ ದಕ್ಷಿಣಾಕ್ಷಿಗತ ವಿಶ್ವನಾಮಕನ ರೂಪೋಪಾಸನಾಕ್ರಮ ತಿಳಿಸುತ್ತಾರೆ.

೧. ನೇತ್ರೇಂದ್ರಿಯವು **ರೂಪವನ್ನು** ಗ್ರಹಿಸುವ ಜ್ಞಾನೇಂದ್ರಿಯವು. ತೇಜಃತತ್ತ್ವದ ತನ್ಮಾತ್ರಗುಣವು ರೂಪವು. ನಮ್ಮ ಸುತ್ತಮುತ್ತಲಿನ ವಸ್ತುಗಳ ದರ್ಶನರೂಪವಾದ ಪರಿಚಯವಾಗಲು ನೇತ್ರೇಂದ್ರಿಯಗಳು ಸಹಕಾರಿ. ಇಂತಹ ಎರಡು ಕಣ್ಣಿನ ಮಧ್ಯದಲ್ಲೂ ಕರೀಗುಡ್ಡೆಗಳಿರುವುವು. ಆ ಗುಡ್ಡೆಯ ಮಧ್ಯದಲ್ಲಿ ಚುಕ್ಕೆ ಎಂಬ ಪ್ರದೇಶವಿದೆ. ಇದೇ ಕಣ್ಣಿನ ತೇಜಸ್ಸಿನ ಸ್ಥಾನವು. ಈ ಸ್ಥಾನಗತ ತೇಜಸ್ಸಿನಿಂದಲೇ ರೂಪವಿಷಯದ ಸನ್ನಿಕರ್ಷವಾಗುವುದು. ಇದಕ್ಕೆ ಕಣ್ಣಿನ ಜ್ಯೋತಿ ಎಂದು ಹೆಸರು. ಇದೇ ಪ್ರಕಾಶಮಾನವಾದ ಭಾಗ,

೨. ಇಂತಹ ಜ್ಯೋತಿಯಲ್ಲಿ ಕಪಿಲನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ಅವನೇ ರೂಪದರ್ಶನದ್ವಾರಾ ನೇತ್ರೇಂದ್ರಿಯದ ಮೂಲಕ ವಸ್ತುಗಳನ್ನು ಕಣ್ಣಿಗೆ ಕಾಣಿಸುವಂತೆ ಮಾಡುವನು. ವಸ್ತುಗಳ ಮೇಲೆ ಬಿದ್ದ ಬೆಳಕು ಪ್ರತಿಫಲಿಸಿ ಕಣ್ಣಿನ ಈ ಜ್ಯೋತಿ ಎಂಬ ಪ್ರದೇಶದ ದ್ವಾರಾ, ನೇತ್ರಪಟದ ಮೇಲೆ ಬಿದ್ದು, ಚಕ್ಷುನರಗಳ ಮೂಲಕ ವಸ್ತುವಿನ ಪರಿಚಯ ಉಂಟಾ

ಗುವುದು. ಈ ವ್ಯಾಪಾರಕ್ಕೆ ಕಪಿಲನಾಮಕ ಶ್ರೀಪರಮಾತ್ಮನೇ ಮುಖ್ಯ ಪ್ರವರ್ತಕನು.

೩. ಇಂತಹ ಕಪಿಲನಾಮಕನು ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ವಾಯು, ಕುಬೇರ ಮತ್ತು ರುದ್ರ ಎಂಬ ಈ ಅಷ್ಟದಿಕ್ಪಾಲಕರಿಂದ ಸಹಿತನಾಗಿ, ಕಣ್ಣಿನ ಜ್ಯೋತಿಯಲ್ಲಿದ್ದು ನೇತ್ರೇಂದ್ರಿಯದ ಕಾರ್ಯಗಳನ್ನು ಮಾಡಿ ಮಾಡಿಸುತ್ತಾನೆ.

೪. ಇದಲ್ಲದೆ ಸರ್ವಚೇತನರ ಬಲಗಣ್ಣಿನ ತುದಿಯಲ್ಲಿ ವಿಶ್ವನಾಮಕ ಶ್ರೀಪರಮಾತ್ಮನು ವಿದ್ಯಮಾನನಾಗಿದ್ದಾನೆ. ನಾಸಿಕದ ಮೇಲ್ಭಾಗದ ಬಲ ಪಾರ್ಶ್ವದಲ್ಲಿರುವ ಬಲಗಣ್ಣಿನ ತುದಿಗೆ **ಮುಖ** ಎಂದು ಹೆಸರು. ಇಂತಹ ದಕ್ಷಿಣಾಕ್ಷಿಯ ಮುಖದಲ್ಲಿ ವಿಶ್ವನಿದ್ದಾನೆ. ಇಂತಹ ವಿಶ್ವನಾಮಕ ಶ್ರೀಪರ ಮಾತ್ಮನ ರೂಪೋಪಾಸನಾಕ್ರಮವನ್ನು ತಿಳಿಸುತ್ತಾರೆ, ಉಪಾಸಕರಾದ ದಾಸ ವರ್ಯರು.

ಅ. ವಿಶ್ವನಾಮಕ ಪರಮಾತ್ಮನ ಶರೀರವು ಅಚ್ಚ ಬಿಳಿಯ ಬಣ್ಣ ವುಳ್ಳದ್ದು (ಶ್ವೇತವರ್ಣ). ಜ್ಞಾನಾನಂದಮಯಶರೀರವು.

ಆ. ಅವನಿಗೆ ಪುರುಷಾಕಾರದ ನಾಲ್ಕು ಬಾಹುಗಳು. (ಚತುರ್ಭುಜನು)

ಇ. ವಿಶ್ವನಿಗೆ ೧೯ ಮುಖಗಳಿವೆ.

ಈ. ಈ ೧೯ ಮುಖಗಳಲ್ಲಿ ಮಧ್ಯಮುಖವು **ಗಜಮುಖವು.**

೫. ಉಳಿದ ೧೮ ಮುಖಗಳು ಮನುಷ್ಯರ ಮುಖಗಳಂತೆ ಇವೆ. ಈ ಕಾರಣದಿಂದ ವಿಶ್ವನಿಗೆ **ನೃಗಜಾಸ್ಯ** ಎಂದಿದ್ದಾರೆ ದಾಸವರ್ಯರು. ನೃ ಎಂದರೆ ಮಾನವ (೧೮) ಮತ್ತು ಗಜ ಎಂದರೆ ಆನೆ (ಮಧ್ಯಮುಖ). ಆಸ್ಯ ಎಂದರೆ ಮುಖ. (ನೃ+ಗಜ+ಆಸ್ಯ=ನೃಗಜಾಸ್ಯ)

೬. ೧೮ ಮಾನವ ಮುಖಗಳಲ್ಲಿ ಗಜಮುಖದ ಬಲಗಡೆ ಇರುವ ೯ ಮುಖಗಳು ಪುರುಷರಿಗೆ ಜಾಗ್ರದವಸ್ಥಾ ಪ್ರೇರಕ.

೭. ಎಡಗಡೆ ಇರುವ ೯ ಮುಖಗಳು ಸ್ತ್ರೀಯರಿಗೆ ಜಾಗ್ರದವಸ್ಥಾ ಪ್ರೇರಕ.

೮. ಒಂಭತ್ತು ಮುಖಗಳ ವ್ಯಾಪಾರ ವಿವರ ಇಂತಿದೆ–

1. ಬಲಗಡೆಯ ಒಂದು, ನಾಲ್ಕು ಮತ್ತು ಏಳನೆಯ ಮುಖಗಳು **ಮುಕ್ತಿಯೋಗ್ಯಪುರುಷಚೇತನರ** ಅಂದರೆ ಕ್ರಮವಾಗಿ ಭಕ್ತಿಯೋಗಿಗಳು, (ಉತ್ತಮಧಿಕಾರಿಗಳಾದ ಬ್ರಹ್ಮಾದಿಗಳು), ಜ್ಞಾನಯೋಗಿಗಳು (ಮಧ್ಯಮರಾದ ಇಂದ್ರಾದಿಗಳು) ಮತ್ತು ಕರ್ಮಯೋಗಿಗಳು (ಸಾತ್ವಿಕವರ್ಗದಲ್ಲಿ ಅಧಮರಾದ ಪುಷ್ಕರಾದಿಗಳು), ಜಾಗ್ರದವಸ್ಥಾ ಪ್ರೇರಕನಾಗಿದ್ದು, ಬಾಹ್ಯ ವಿಷಯಗಳ ಜ್ಞಾನವನ್ನು ಪ್ರೇರಿಸುವನು.

2. ಬಲಗಡೆಯ ಎರಡು, ಐದು ಮತ್ತು ಎಂಟನೆಯ ಮುಖಗಳು **ರಜೋಗುಣಪ್ರವಿಷ್ಠರಾದ ನಿತ್ಯಸಂಸಾರಿಗಳಿಗೆ** ಕ್ರಮವಾಗಿ ಉತ್ತಮ, ಮಧ್ಯಮ ಮತ್ತು ಅಧಮ ಜೀವರಿಗೆ ಜಾಗ್ರದವಸ್ಥಾ ಪ್ರೇರಕ ರೂಪಗಳು.

3. ಬಲಗಡೆಯ ಉಳಿದ ಮೂರು, ಆರು ಮತ್ತು ಒಂಭತ್ತನೆಯ ಮುಖಗಳು **ತಮೋಯೋಗ್ಯಜೀವರಿಗೆ** ದೈತ್ಯವರ್ಗದಲ್ಲಿ ಉತ್ತಮರು, ಮಧ್ಯಮರು ಮತ್ತು ಅಧಮ ಚೇತನರಿಗೆ ಜಾಗ್ರತೆಯನ್ನುಂಟುಮಾಡುವುವು.

4. ಇಂತೆಯೇ ಗಜಮುಖದ ಎಡಭಾಗದಲ್ಲಿರುವ ೯ ಮುಖಗಳು. **ಸಾತ್ವಿಕ, ರಜ, ತಮೋಯೋಗ್ಯ** ಸ್ತ್ರೀಜೀವರಿಗೆ ಜಾಗ್ರದವಸ್ಥಾ ಪ್ರೇರಕ ರೂಪಗಳು.

**ವಿಶೇಷ ವಿಚಾರ**

ಗಣಪತಿಯು ವಿಶ್ವನಾಮಕ ಪರಮಾತ್ಮನ ಉಪಾಸಕನು. ಗಣಪತಿಯ ಬಿಂಬ ವಿಶ್ವಂಭರಮೂರ್ತಿ. ಇಂತಹ ವಿಶ್ವಂಭರನ ಮಧ್ಯಗತಮುಖವು ಗಜಮುಖವು. ಇದರಿಂದ ವಿಶ್ವಂಭರೋಪಾಸಕನಾದ, ವಿಶ್ವನ ಪ್ರತಿಬಿಂಬನಾದ

ಗಣಪತಿಯು ವದನವು ಗಜಮುಖವು. ಇದರಿಂದಲೇ ಗಜವದನನಾಗಿದ್ದಾನೆ. ಇದು ತಾತ್ತ್ವಿಕ ವಿಷಯ.

೯. ಇಂತಹ ವಿಶ್ವನಾಮಕ ಪರಮಾತ್ಮನು ತ್ರಿವಿಧಜೀವರ ದಕ್ಷಿಣಾಕ್ಷಿಯಲ್ಲಿದ್ದು ಅವರಿಗೆ ಜಾಗ್ರತಿಯನ್ನುಂಟುಮಾಡುವನು. ಜಾಗ್ರದವಸ್ಥಾಪ್ರೇರಕ ರೂಪವು ವಿಶ್ವನಾಮಕನು. ಇದರಿಂದಲೇ **ಗುರುಗೋಪಾಲದಾಸವರ್ಯರು** ತಮ್ಮ ಕೃತಿಯೊಂದರಲ್ಲಿ **ದಕ್ಷಿಣಾಕ್ಷಿಯಜಾಗ್ರವಿಶ್ವನೆ** ಎಂದಿದ್ದಾರೆ.

೧೦. ಇಂತಹ ವಿಶ್ವನಿಗೆ ಏಳು ಅವಯುವಗಳಿವೆ, ಅಂದರೆ ಸಪ್ತಾಂಗನು ಮತ್ತು ಏಕೋನವಿಂಶತಿ ವದನನು(ವಿಶಂತಿ=೨೦, ಏಕೋನ=ಒಂದು ಕಡಿಮೆ ಅಂದರೆ ೨೦ಕ್ಕೆ ೧ ಕಡಿಮೆ, ೧೯ ಮುಖಗಳೆಂದರ್ಥ)

೧೧. ಚೇತನರು ಎಚ್ಚರಿಕೆಯ ಸ್ಥಿತಿಯಲ್ಲಿರುವಾಗ, ವಸ್ತುಗಳನ್ನು ನೋಡುತ್ತಾರೆ. ಅವು ಬಾಹ್ಯಗತ ಸ್ಥೂಲವಿಷಯಗಳು, ಇಂತಹ ಬಾಹ್ಯ ವಿಷಯಗಳಲ್ಲಿ ಅಂತರ್ಗತನಾಗಿದ್ದು, ವಿಷಯ (ರೂಪ)ಸನ್ನಿಕರ್ಷಣ ದ್ವಾರಾ ದಕ್ಷಿಣಾಕ್ಷಿಗತ ವಿಶ್ವನು ಆ ಸ್ಥೂಲವಿಷಯಗಳಲ್ಲಿ ವಿದ್ಯಮಾನವಾಗಿರುವ ತನ್ನ ಸ್ವಾಖ್ಯಶುಭಸಾರವನ್ನು ಗ್ರಹಿಸಿ, ಬಿಂಬಕ್ರಿಯಾದ್ವಾರಾ, ಚೇತನರಿಗೆ ಬಾಹ್ಯ ಗತ ವಿಷಯಗಳ ದರ್ಶನರೂಪವಾದ ಭೋಗಗಳನ್ನು ಅವರ ಅನುಭವಕ್ಕೆ ಕೊಡುವನು.

೧೨. ಇಂತಹ ವಿಶ್ವನಾಮಕ ಶ್ರೀಪರಮಾತ್ಮನಿಗೆ **ಸ್ಥೂಲಭುಕ್** ಎಂದು ಹೆಸರು. ಈ ವಿಶ್ವನಿಗೆ ವೈಶ್ವಾನರ ಎಂತಲೂ ಹೆಸರು. ಸ್ಥೂಲ ವಿಷಯಗಳನ್ನು ಉಂಡು ಉಣಿಸುವನು.

೧೩. ಅಕಾರ ವಾಚ್ಯನಾದ ಈ ವಿಶ್ವನೇ ವೈಶ್ವಾನರನೆಂದೆನಿಸಿ, ಸಮಸ್ತ ತ್ರಿವಿಧಚೇತನರಿಗೆ ಜಾಗ್ರದವಸ್ಥೆಯನ್ನೀಯುತ್ತಿರುವನು.

ಪ್ರಮಾಣ

೧. ಚಕ್ಷುಸ್ಥಃ ಕಪಿಲೋ ವಿಷ್ಣುರಿತಿ॥ –ಐತರೇಯಭಾಷ್ಯ.
೨. ಏವಮುಧ್ಧೃತರೂಪೋಽಸೌ ತ್ವಷ್ಟ್ರ ದಿಕ್ಪಾಲಸೇವಿತಃ॥

–ಇತಿ ಮಾನಸಸ್ಮೃತಿ.

೩. ಅಷ್ಟಾದಶ ಮುಖಾನ್ಯಸ್ಯ ಪುಮಾಕಾರಾಣಿ ಸರ್ವಶಃ।
ಮಧ್ಯಮಂತು ಗಜಾಕಾರಶ್ಚತುರ್ಬಾಹು ಪರಃ ಪುಮಾನ್॥
ಪಾದೌ ಹಸ್ತಿಕರೌ ಹಸ್ತ ಇತಿ ಸಪ್ತಾಂಗ ಈರಿತ ಇತಿ॥

–ಮಾಂಡೂಕಭಾಷ್ಯ.

ವಿಶ್ವನ ಸಪ್ತಾಂಗಗಳು

1. ನಾಲ್ಕು ಪುರುಷಾಕಾರದ ಬಾಹುಗಳು 2. ಎರಡು ಪಾದಗಳು ಮತ್ತು 3. ಮಧ್ಯ, ಆನೆಯ ಸೊಂಡಿಲು (ಹಸ್ತಿಕರ) ॥೧೧॥

## ಪದ್ಯ ೧೨

ಮೂಲ

ನೆಲಸಿಹರು ದಿಗ್ದೇವತೆಗಳಿ ।
ಕ್ಕೆಲದಿ ಕರ್ಣಂಗಳಲಿ ತೀರ್ಥಂ ।
ಗಳಿಗೆ ಮಾನಿಗಳಾದ ಸುರನದಿಮುಖ್ಯನಿರ್ಜರರು॥
ಬಲದ ಕಿವಿಯಲಿ ಇರುತಿಹರು ಬಾಂ ।
ಬೊಳೆಯಜನಕ ತ್ರಿವಿಕ್ರಮನು ನಿ ।
ರ್ಮಲಿರನು ಮಾಡುವನು ಈ ಪರಿ ಚಿಂತಿಸುವ ಜನರ ॥ ॥೧೨॥

**ಅವತರಣಿಕೆ**

ಇನ್ನು ಉಭಯಕರ್ಣಗಳಲ್ಲಿ ವಿದ್ಯಮಾನರಾಗಿರುವ ದೇವತೆಗಳು, ತೀರ್ಥಾಭಿಮಾನಿಗಳ ವಿಚಾರ ಪ್ರಸ್ತಾಪಿಸುತ್ತಾರೆ, **ನೆಲೆಸಿಹರು** ಎಂಬ ಪ್ರಸಕ್ತ ಸಂಧಿಗತ ಈ ೧೨ನೆಯ ಪದ್ಯದಿಂದ.

ಎಡಗಿವಿ ಮತ್ತು ಬಲಗಿವಿಗಳೆಂಬ ಎರಡು ಕರ್ಣಗಳಲ್ಲಿ ಚಂದ್ರಾದಿ ದಿಗ್ದೇವತೆಗಳು ನೆಲೆಸಿದ್ದಾರೆ. ಕರ್ಣವು ಶಬ್ದವನ್ನು ಆಲಿಸುವ ಜ್ಞಾನೇಂದ್ರಿಯವು. ಇದರಿಂದ ಆಕಾಶದ ದಿಕ್ಕುಗಳಲ್ಲಿ ಕಂಪನಗಳಿಂದ ಪ್ರಸಾರವಾಗುತ್ತಿರುವ ಶಬ್ದತರಂಗಗಳನ್ನು ಕರ್ಣಗತದಿಗ್ದೇವತೆಗಳ ದ್ವಾರಾ, ತದಂತರ್ಗತ ಶ್ರೀಮುಖ್ಯಪ್ರಾಣರ ಮೂಲಕ ಸ್ವೀಕರಿಸಿ, ಶಬ್ದಾನುಭವವನ್ನು ಶ್ರೀಪರಮಾತ್ಮನು ಜೀವನಿಗೆ ತಂದುಕೊಡುವನು. ಬಲಗಿವಿಯಲ್ಲಿ ಗಂಗಾದಿ ಮುಖ್ಯ ನದಿಗಳ ಅಭಿಮಾನಿದೇವತೆಗಳು (ಸುರನದಿಮುಖ್ಯನಿರ್ಜರರು) ಕರ್ಣಗತ ನಾಡ್ಯಂತರ್ಗತರಾಗಿ ನೆಲೆಸಿದ್ದಾರೆ. ಗಂಗಾಜನಕನಾದ ಜಗತ್ಪಾವನಮೂರ್ತಿ ತ್ರಿವಿಕ್ರಮನಾಮಕ ಶ್ರೀಪರಮಾತ್ಮನು ಬಲಗಿವಿಯಲ್ಲಿ ನಾಡ್ಯಭಿಮಾನಿ ದೇವತೆಗಳಲ್ಲಿದ್ದು, ನಮ್ಮ ದೇಹವನ್ನು ಪವಿತ್ರೀಕರಿಸುವನು. ಈ ರೀತಿ ಅನುಸಂಧಾನ ಜ್ಞಾನಉಳ್ಳವರು ನಿತ್ಯನಿರ್ಮಲರು. ಅವರೇ ಮಡಿವಂತರು, ಎಂತ ಪ್ರಸಕ್ತ ಪದ್ಯದ ತಾತ್ಪರ್ಯ ॥೧೨॥

**ಪ್ರತಿಪದಾರ್ಥ**

**ಇಕ್ಕೆಲದಿ**= ಈ ಸ್ಥೂಲದೇಹದಲ್ಲಿ ಎರಡು ಪಾರ್ಶ್ವಗಳಲ್ಲಿ, **ಕರ್ಣಂಗಳಲಿ**= ಎರಡು ಕಿವಿಗಳಲ್ಲಿ, **ದಿಗ್ದೇವತೆಗಳು**= ಪೂರ್ವಾದಿ ಅಷ್ಟದಿಕ್ಕುಗಳಿಗೆ ಅಧಿಪತಿಗಳಾದ ಇಂದ್ರಾದಿ ಈಶಾನಾಂತ ದೇವತೆಗಳು (ಚಂದ್ರ ಮುಖ್ಯ ದೇವತಾ), **ನೆಲೆಸಿಹರು**= ಆವಾಸವಾಗಿದ್ದಾರೆ. **ಬಲದ ಕಿವಿಯಲಿ**= ಸರ್ವಜೀವರ ಬಲಪಾರ್ಶ್ವದ ಕಿವಿಯಲ್ಲಿ (ಬಲಗಿವಿಯಲ್ಲಿ), **ತೀರ್ಥಂಗಳಿಗೆ ಮಾನಿಗಳಾದ**= ತೀರ್ಥಾಭಿಮಾನಿಗಳಾದ ದೇವತೆಗಳು, **ಸುರನದಿ ಮುಖ್ಯ**= ದೇವಗಂಗೆಯೇ ಮುಂತಾದ, **ನಿರ್ಜರರು**= ದೇವತೆಗಳು, **ಇರುತಿ**

**ಹರು**=ವಿದ್ಯಮಾನರಾಗಿದ್ದಾರೆ. **ಬಾಂಬೊಳೆಯಜನಕ**=ಶ್ರೀಪರಮಾತ್ಮನ ಪಾದಾಂಗುಷ್ಟದಿಂದ ಉತ್ಪನ್ನವಾದ ಗಂಗಾನದಿಯ ಪಿತನಾದ (ಬಾನಿನಹೊಳೆ =ಬಾಂಬೊಳೆ-ಆಕಾಶಗಂಗೆ. ಅದೇ ದೇವಗಂಗೆ), **ತ್ರಿವಿಕ್ರಮನು**=ತ್ರಿವಿಕ್ರಮನಾಮಕ ಶ್ರೀಪರಮಾತ್ಮ, **ನಿರ್ಮಲರನು ಮಾಡುವ**=ಶುದ್ಧರನ್ನಾಗಿ ಮಾಡುವನು, **ಈ ಪರಿ ಚಿಂತಿಸುವ ಜನರ**=ಪೂರ್ವೋಕ್ತಪ್ರಕಾರ ಜ್ಞಾನಾನುಸಂಧಾನದಿಂದ ತಿಳಿದ ಸುಜನರ ದೋಷಗಳನ್ನು ಪರಿಹರಿಸಿ ಶುದ್ಧರನ್ನಾಗಿ ಮಾಡುವನು ॥೧೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಭಾಗೀರಥ್ಯಾದಿ ಸ್ನಾನದಿಂದ ದಾವ ನಿರ್ಮಲತ್ವ ಪ್ರಾಪ್ತಿಯೋ ಅಂಥಾ ನಿರ್ಮಲತ್ವಕ್ಕೆ ಅನುಸಂಧಾನವೂ, ಶ್ರೋತ್ರೋಭಿಮಾನಿಗಳನ್ನು ಹೇಳುತಾರೆ.

ಇಕ್ಕೆಲದಿ-ಈ ಸ್ಥೂಲದೇಹದಲ್ಲಿ ಎರಡು ಪಾರ್ಶ್ವಗಳಲ್ಲಿ ವಿದ್ಯಮಾನವಾದ. ಕರ್ಣಂಗಳಲಿ-ಎರಡು ಕಿವಿಗಳಲ್ಲಿ, ದಿಗ್ದೇವತೆಗಳು-ಪೂರ್ವಾದಿ ಅಷ್ಟದಿಕ್ಕುಗಳಿಗೆ ಅಭಿಮಾನಿಗಳಾದ ಇಂದ್ರಾದಿ ಈಶಾನಾಂತ ಎಂಟುಮಂದಿ ದೇವತೆಗಳು, ನೆಲಸಿಹರು-ಆವಾಸರಾಗಿ ಇರೋವರಾಗಿದ್ದಾರೆ. ಮತ್ತು, ಬಲದ ಕಿವಿಯಲಿ-ಬಲಭಾಗದ ಕರ್ಣದಲಿ, ತೀರ್ಥಂಗಳಿಗೆ ಮಾನಿಗಳಾದ-ಗಂಗಾದಿ ಸರ್ವತೀರ್ಥಸಾಂಕೇತವಾದ, ಜಡೋದಕಗಳಿಗೆ ಅಭಿಮಾನಿಗಳಾದ, ಮುಖ್ಯ-ಎಲ್ಲಾ ತೀರ್ಥಗಳಿಗೂ ಮುಖ್ಯ ತೀರ್ಥವಾದ, ಸುರನದಿ-ದೇವತಾನದಿಸಾಂಕೇತವಾದ ಭಾಗೀರಥೀ (ಇದಕ್ಕೆ ಅಭಿಮಾನಿ ವರುಣ, ಈ ವರಣುದೇವರ ಪತ್ನಿ ಭಾಗೀರಥೀ. ಇವಳಲ್ಲಿ ಸರ್ವಾಪೇಕ್ಷಯಾ ದೇವರ ವಿಭೂತಿಸನ್ನಿಧಾನ ಅಧಿಕವಾಗಿ ಇರೋಣದರಿಂದ ಸರ್ವಾಪೇಕ್ಷಯಾ ಅಧಿಕವಾಯಿತು. ಜಾಂಬವತೀದೇವೇರಲ್ಲಿ ಲಕ್ಷ್ಮೀದೇವೇರ ವಿಭೂತಿ ಅಧಿಕವಾಗಿ ಇರೋಣದರಿಂದ ಅಧಿಕಳೋಪಾದಿಯಲಿ ಎಂತ ಅರ್ಥ). ಏತಾದೃಶತೀರ್ಥಗಳಿಗೆ ಅಭಿಮಾನಿಗಳಾದ, ಸುರನದಿ ಸಾಂಕೇತಗಳಾದ ಭಾಗೀರಥೀ ಮೊದಲಾದ, ನಿರ್ಜರರು-ತೀರ್ಥಾಭಿಮಾನಿಗಳು, ಇರು

ಶಿಹರು-ಬಲದ ಕಿವಿಯಲ್ಲಿ ಇರೋಣವರಾಗಿದ್ದಾರೆ. ಈ ತೀರ್ಥಾಭಿಮಾನಿಗಳ ಅಂತರ್ಗತನಾಗಿ, ಚಾಂಚೊಳೆಯ ಜನಕ-ಆಕಾಶನದಿ ತ್ರಿವಿಕ್ರಮದೇವರ ಪಾದಾಂಗುಷ್ಠದಿಂದ ಅಂಡಖರ್ಪರ ಭೇದಿಸಿಕೊಂಡು ಆಕಾಶಮಾರ್ಗವಾಗಿ ಬಂದ ನದೀ ಭಾಗೀರಥೀ. ಈ ನದಿಯನ್ನು ತನ್ನ ಅಂಗುಷ್ಠದಿಂದ ಸೃಷ್ಟಿಮಾಡಿ ದಂಥಾ ತಂಡೆಯಾದ, ತ್ರಿವಿಕ್ರಮನು-ತ್ರಿವಿಕ್ರಮದೇವರು. (ತೀರ್ಥಾಭಿಮಾನಿ ದೇವತೆಗಳು ತ್ರಿವಿಕ್ರಮ ದೇವರನ್ನು ಉಪಾಸನೆ ಮಾಡತಾರೆ), ಈಪರಿ ಚಿಂತಿ ಸುವ-ಈ ಪೂರ್ವೋಕ್ತಪ್ರಕಾರ ಬಲದ ಕಿವಿಯಲ್ಲಿ ಅನುಸಂಧಾನ ಮಾಡಿ, ಬಲ ಕರ್ಣವನ್ನು ಸ್ಪರ್ಶಮಾಡಿದ, ಜನರ-ನಿರ್ಮಲವಾಗಬೇಕು ಎಂತ ಇರುವ ಜನ ರನ್ನ, ನಿರ್ಮಲಿನರನು ಮಾಡುವನು-ತ್ರಿವಿಕ್ರಮದೇವರು ನಿರ್ದೋಷಿಗಳನ್ನಾಗಿ ಇನ್ನು ಶುಚಿವಂತರನ್ನಾಗಿ ಮಾಡುವನು ಎಂತ ತಾತ್ಪರ್ಯ ॥೧೨॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ನೆಲಸಿಹರು-ಎಂಬೀ ಪದ್ಯದಿಂದ ಕಿವಿಯಲ್ಲಿ ಚಿಂತಿಸಬೇಕಾದ ದೇವತೆ ಗಳನ್ನು ಹೇಳುತ್ತಾರೆ.

**ಕಿವಿಗಳಲ್ಲಿ ದಿಗ್ದೇವತೆಗಳು ಅಭಿಮಾನಿಗಳಾಗಿ ವಾಸಮಾಡುವರು.**

**ಪುಷ್ಕರಾದ್ಯಾನಿ ತೀರ್ಥಾನಿ ಗಂಗಾದ್ಯಾಃ ಸರಿಸ್ತಥಾ ।**
**ವಿಪ್ರಸ್ಯ ದಕ್ಷಿಣೇ ಕರ್ಣೇ ಸಂತೀತಿ ಮನುರಬ್ರವೀತ್ ॥**

-ಎಂಬ ಪರಾಶರಸ್ಮೃತಿಯ ಪ್ರಕಾರ ಪುಷ್ಕರ ಮೊದಲಾದ ಸಕಲ ತೀರ್ಥಾಭಿ ಮಾನಿಗಳು ಗಂಗಾ ಮೊದಲಾದ ಪುಣ್ಯನದ್ಯಭಿಮಾನಿಗಳೆಲ್ಲರೂ ಬ್ರಾಹ್ಮಣರ ಬಲದ ಕಿವಿಯಲ್ಲಿ ವಾಸ ಮಾಡುತ್ತಾರೆಂದು ಸಿದ್ಧವಾಗುವುದು. ಆದ್ದರಿಂದಲೇ ಬ್ರಾಹ್ಮಣನು ಆಚಮನ ಮಾಡಬೇಕಾದ ಸಂದರ್ಭದಲ್ಲಿ ಉದಕವು ದೊರಕದೆ ಅಸಂದರ್ಭವಾದರೆ, **ಸ್ವಕರ್ಣಸ್ಪರ್ಶನಾಚ್ಛುಚಿಃ** ಎಂಬ ಧರ್ಮಶಾಸ್ತ್ರದ ವಾಕ್ಯ ದಂತೆ ತನ್ನ ಕಿವಿಯ ಸ್ಪರ್ಶದಿಂದಲೇ ಆಚಮನ ಮಾಡಿದಂತೆ ಶುದ್ಧನಾಗುವ ನೆಂದು ಸಿದ್ಧವಾಗುವುದು. ಇದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ

ವಿಸ್ತರಿಸಿರುವರು. ಈ ಪ್ರಕಾರ ಬಲದ ಕಿವಿಯಲ್ಲಿ ಸಕಲ ತೀರ್ಥಾಭಿಮಾನಿಗಳು ಇರುವರೆಂದು ಯಾವ ವಿಪ್ರರು ಕರ್ಣಸ್ಪರ್ಶ ಮಾಡುವರೋ ಅವರನ್ನು ಗಂಗೆಯನ್ನು ಪಡೆದ ತ್ರಿವಿಕ್ರಮನು ಶುಚಿರ್ಭೂತರನ್ನಾಗಿ ಮಾಡುವನು ॥೧೨॥

೩. ಭಾವದರ್ಪಣಟೀಕಾ ವ್ಯಾಖ್ಯಾನ

ನೆಲಸಿಹರು–ಇತಿ।

1. ಪುಷ್ಕರಾದ್ಯಾನಿ ತೀರ್ಥಾನಿ ಗಂಗಾದ್ಯಾಃ ಸರಿತಸ್ತಥಾ।
ವಿಪ್ರಸ್ಯ ದಕ್ಷಿಣೇ ಕರ್ಣೇ ಸಂತೀತಿಮನುರಬ್ರವೀತ್॥

—ಇತಿ ಪರಾಶರೋಕ್ತೇ।

2- ತೀರ್ಥಾನಿ ನಿವಸಂತ್ಯಸ್ಮಾತ್ಸ್ವಕರ್ಣ ಸ್ಪರ್ಶನಾಚ್ಛುಚಿರಿತಿ॥

–ಮಾನಸಸ್ಮೃತೇಃ।

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಉಭಯಕರ್ಣಗತ ಅಭಿಮಾನಿದೇವತೆಗಳನ್ನೂ ಮತ್ತು ತನ್ನಿಯಾಮಕ ಭಗವದ್ರೂಪಗಳನ್ನೂ ಪ್ರಸಕ್ತಪದ್ಯದಿಂದ ತಿಳಿಸುತ್ತಾರೆ. ಕಿವಿಗಳಲ್ಲಿ ಇಂದ್ರ, ಯಮ, ವರುಣ, ಕುಬೇರ, ಚಂದ್ರ ಈ ದೇವತೆಗಳಿದ್ದಾರೆ. ತೀರ್ಥಾಭಿಮಾನಿಗಳಾದ ಗಂಗಾದಿ ದೇವತೆಗಳು ಬಲಗಿವಿಯಲ್ಲಿ ನೆಲೆಸಿರುವರು. ಇಂತು ಚಿಂತಿಸುವವರ ಪಾಪಗಳನ್ನು ತೊಳೆದು, ದೋಷಪರಿಹರಿಸುವನು. ದಕ್ಷಿಣಕರ್ಣಗತ ತ್ರಿವಿಕ್ರಮನಾಮಕ ಶ್ರೀಪರಮಾತ್ಮನು ॥೧೨॥

೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಕಿವಿಗಳಲ್ಲಿ ಅಭಿಮಾನಿಗಳನ್ನು ತನ್ನಿಯಾಮಕ ದೇವರರೂಪ ಸಹ ತಿಳಿಸುತ್ತಾರೆ, ನೆಲಸಿಹರು ಎಂದು. ಎರಡು ಕಡೆಯ ಕಿವಿಗಳಲ್ಲೂ ದಿಗಭಿಮಾನಿ ಇಂದ್ರ, ಯಮ, ವರುಣ, ಚಂದ್ರ, ಕುಬೇರ ಇವರು ಇರುವರು. ಬಲಗಿವಿಯಲ್ಲಿ ಸರ್ವತೀರ್ಥಾಭಿಮಾನಿಗಳಾದ ಗಂಗೆ ಮೊದಲಾದ ದೇವತೆಗಳು ಇರು

ವರು. ಬಾಂಬೊಳೆ ಎಂದರೆ ಆಕಾಶನದಿ ಎಂಬ ಗಂಗೆಗೆ ಜನಕನಾದ ತ್ರಿವಿಕ್ರಮ ಅಲ್ಲಿದ್ದು, ತನ್ನನ್ನು ಚಿಂತಿಸುವ ಸಜ್ಜನರನ್ನು ಪರಿಶುದ್ಧರನ್ನು ಮಾಡುವನು ॥೧೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಕಿವಿಗಳಲ್ಲಿ ವಿದ್ಯಮಾನರಾಗಿರುವ ದೇವತಾವರ್ಗ, ಬಲಗಿವಿಯಲ್ಲಿರುವ ಸಮಸ್ತತೀರ್ಥಾಭಿಮಾನಿದೇವತೆಗಳ ವಿಷಯವನ್ನು ತಿಳಿಸುತ್ತಾರೆ–**ನೆಲೆಸಿಹರು** ಎಂಬ ಪ್ರಸಕ್ತ ೧೨ನೆಯ ಪದ್ಯದಿಂದ,

೧. ಎರಡು ಕಿವಿಗಳೂ ಜ್ಞಾನೇಂದ್ರಿಯಗಳ ವರ್ಗಕ್ಕೆ ಸೇರಿವೆ. ಆಕಾಶತತ್ತ್ವದ ತನ್ಮಾತ್ರಾಗುಣವು **ಶಬ್ದವು**. ಶಬ್ದವನ್ನು ಗ್ರಹಿಸುವ ಇಂದ್ರಿಯಗಳೇ ಉಭಯ ಕರ್ಣಗಳು. ಅಂದರೆ ಶಬ್ದವು ಕರ್ಣಕ್ಕೆ ವಿಷಯವು. ಎರಡು **ಕಿವಿಗಳು** ಮುಖದ ಬಲ ಮತ್ತು ಎಡಪಾರ್ಶ್ವಗಳಲ್ಲಿವೆ. ದಿಕ್ಕುಗಳಿಂದ ಬರತಕ್ಕ ಕಂಪನರೂಪವಾದ ಶಬ್ದತರಂಗಗಳು ಕರ್ಣದ ಮೇಲೆ ಬಿದ್ದಾಗ, ಕರ್ಣಪಟಲವು ಸ್ಪಂದಿಸಿ ಶಬ್ದಾನುಭವವಾಗುವುದು.

೨. ಇಂತಹ ಉಭಯಕರ್ಣೇಂದ್ರಿಯಗಳಲ್ಲಿ **ದಿಗ್ದೇವತೆಗಳು** ನೆಲೆಸಿದ್ದಾರೆ. **ಚಂದ್ರನೇ** ಕರ್ಣಾಭಿಮಾನಿಯು. ಚಂದ್ರನ ಜೊತೆಯಲ್ಲಿ ಅಷ್ಟದಿಕ್ಪಾಲಕರ ದೇವತಾವರ್ಗವಿದೆ. ಇವರೂ ದಿಗ್ದೇವತೆಗಳ ವರ್ಗಕ್ಕೆ ಸೇರಿದವರು. ಪೂರ್ವಕ್ಕೆ ಇಂದ್ರ, ಆಗ್ನೇಯಕ್ಕೆ ಅಗ್ನಿ, ದಕ್ಷಿಣಕ್ಕೆ ಯಮ, ನೈರುತ್ಯಕ್ಕೆ ನಿರಋತಿ, ಪಶ್ಚಿಮಕ್ಕೆ ವರುಣ, ವಾಯವ್ಯಕ್ಕೆ ಪ್ರವಹವಾಯು, ಉತ್ತರಕ್ಕೆ ಕುಬೇರ ಮತ್ತು ಈಶಾನ್ಯಕ್ಕೆ ಈಶಾನನಾಮಕ ಮಹರುದ್ರದೇವರು- ಇಂತು ಅಷ್ಟದಿಕ್ಪಾಲಕರು ಗ್ರಾಹ್ಯ.

೩. ಬಲಗಿವಿಯಲ್ಲಿ ಸಮಸ್ತ ತೀರ್ಥಾಭಿಮಾನಿದೇವತೆಗಳಿದ್ದಾರೆ. ನದಿಗಳಲ್ಲಿ ಅತಿಶ್ರೇಷ್ಠವಾದದ್ದು **ಗಂಗಾನದಿ**. ಜಲವು ಜಡ. [ಆದರೆ ಇದಕ್ಕೆ ಅಭಿಮಾನಿಗಳಾಗಿ ನದ್ಯಭಿಮಾನಿ ಹಾಗೂ ತೀರ್ಥಾಭಿಮಾನಿದೇವತೆಗಳ ಸಾನಿಧ್ಯ

ವಿಶೇಷದಿಂದ ಆ ಜಡೋದಕವು ಆ ನದಿಗಳಲ್ಲಿ ಮಜ್ಜನಮಾಡುವವರನ್ನು ನಿರ್ಮಲಗೊಳಿಸುವುದು. ವರುಣನು ಜಲಾಭಿಮಾನಿದೇವತೆ. ಗಂಗಾದೇವಿ ವರುಣನ ಪತ್ನಿ.

ಪ್ರಮಾಣ

ಪುಷ್ಕರಾದ್ಯಾನಿ ತೀರ್ಥಾನಿ ಗಂಗಾದ್ಯಾಃ ಸರಿತಸ್ತಥಾ।
ವಿಪ್ರಸ್ಯ ದಕ್ಷಿಣೇ ಕರ್ಣೇ ಸಂತೀತಿ ಮನುರಬ್ರವೀತ್॥
–ಹೀಗೆಂದು ಪರಾಶರಸ್ಮೃತಿ ವಾಕ್ಯ ಪ್ರಮಾಣವಿದೆ.

೪. ಬಲಿಚಕ್ರವರ್ತಿಯನ್ನು ಮೂರುಪಾದ ಭೂಮಿಯನ್ನು ಬೇಡಿದ ವಾಮನನು ತ್ರಿವಿಕ್ರಮನಾಗಿ ಬೆಳೆದ, ಸ್ವರ್ಗ, ಮರ್ತ್ಯ ಮತ್ತು ಪಾತಾಳ ಎಂಬ ಮೂರುಲೋಕಗಳನ್ನು ಅಂದರೆ ಸಮಗ್ರಬ್ರಹ್ಮಾಂಡವನ್ನೇ ತನ್ನ ಎರಡು ಪಾದಗಳಿಂದ ಆಕ್ರಮಿಸಿ, ಗೆದ್ದದ್ದರಿಂದ ಶ್ರೀಪರಮಾತ್ಮನಿಗೆ ತ್ರಿವಿಕ್ರಮ ಎಂದು ಹೆಸರಾಯಿತು. ಅಂತಹ ತ್ರಿವಿಕ್ರಮರೂಪೀ ಶ್ರೀಪರಮಾತ್ಮನ ವಾಮ ಪಾದಾಂಗುಷ್ಠದ ನಖಾಗ್ರವು ಬ್ರಹ್ಮಾಂಡಖರ್ಪರಕ್ಕೆ ಸೋಕಿತು. ಆಗ ಖರ್ಪರವು ಒಡೆದು, ಬಾಹ್ಯಘನೋದಕವು ಗಂಗಾನದಿಯಾಗಿ ಆಕಾಶಮಾರ್ಗವಾಗಿ ಹರಿಯಿತು. ಇದರಿಂದ ತ್ರಿವಿಕ್ರಮನಿಗೆ **ಗಂಗಾಜನಕನೆಂದು** ಹೆಸರು. ಬಾನಿನ ಹೊಳೆ, ಅಂದರೆ **ಬಾಂಬೊಳೆ.** ಅಂದರೆ ಆಕಾಶನದಿ ಎಂದರ್ಥ. ಅದೇ ಪರಮಪವಿತ್ರವಾದ ಗಂಗಾನದಿಯು. ತ್ರಿವಿಕ್ರಮನೇ ಅಂತಹ ಬಾಂಬೊಳೆಯ ಜನಕನು.

೫. ಬಲಗಿವಿಯಲ್ಲಿ ಪುಷ್ಕರಾದಿ ಸಮಸ್ತ ತೀರ್ಥಾಭಿಮಾನಿದೇವತೆಗಳ ದ್ವಾರೆ, ಗಂಗಾಜನಕನಾದ ತ್ರಿವಿಕ್ರಮನ ಸ್ಥಾನ. ಬಲಗಿವಿಯಲ್ಲಿ ಸ್ಪರ್ಶದಿಂದ ಗಂಗಾನದಿಯ ಸ್ನಾನದ ಫಲ. ಇಂತಹ ಜ್ಞಾನಾನುಸಂಧಾನ ಉಳ್ಳ ಬುಧರನ್ನು ಬಾಂಬೊಳೆಯ ಜನಕನಾದ ತ್ರಿವಿಕ್ರಮನು, ಅವರ ಸಮಸ್ತ ಪಾಪಗಳನ್ನೂ ಕ್ಷಾಳನಗೈದು ಪವಿತ್ರರನ್ನಾಗಿ ಮಾಡುವನು (ನಿರ್ಮಲರನು ಮಾಡುವನು) ಎಂದು ಜ್ಞಾನಿವರೇಣ್ಯರಾದ ದಾಸರಾಯರು ಈ ತತ್ತ್ವರಹಸ್ಯವನ್ನು ತಿಳಿಸಿರುತ್ತಾರೆ.

ತೀರ್ಥಾನಿ ನಿವಸಂತಿ ತಸ್ಮಾತ್ ಸ್ವಕರ್ಣಸ್ಪರ್ಶನಾಚ್ಚುರಿತಿ||
–ಮಾನಸಸ್ಮೃತಿಯ ವಾಕ್ಯ ಪ್ರಮಾಣ ಆಧಾರವಾಗಿದೆ ||೧೨||

## ಪದ್ಯ ೧೩

**ಮೂಲ**

ಚಿತ್ತಜೇಂದ್ರರು ಮನದೊಳಿಪ್ಪರು।
ಕೃತ್ತಿವಾಸನು ಅಹಂಕಾರದಿ।
ಚಿತ್ತ ಚೇತನವಮಾನಿಗಳು ವಿಹಗೇಂದ್ರ ಫಣಿಪರೊಳು||
ನಿತ್ಯದಲಿ ನೆಲೆಗೊಂಡು ಹತ್ತೊಂ
ಭತ್ತುಮೊಗತೈಜಸನು ಸ್ವಪ್ನಾ ।
ವಸ್ಥೆಯೈದಿಸಿ ಜೀವರನು ಪ್ರವಿವಿಕ್ತಭುಕುನೆನಿಪ ||೧೩||

**ಅವತರಣಿಕೆ**

ಮನಸ್ಸತ್ತತ್ತ್ವದಲ್ಲಿ ಅಭಿಮಾನಿಗಳಾಗಿರುವ ಕಾಮ ಮತ್ತು ಇಂದ್ರರ ವಿಷಯವನ್ನು ತಿಳಿಸುತ್ತಾರೆ, **ಚಿತ್ತಜೇಂದ್ರರು** ಎಂಬ ಪ್ರಸಕ್ತ ಸಂಧಿಗತ ಈ ೧೩ನೆಯ ಪದ್ಯದಿಂದ.

ಮನೋಭಿಮಾನಿಗಳಾಗಿ ಇಂದ್ರ ಮತ್ತು ಕಾಮರು ಉಪಮನಸ್ಸಿನಲ್ಲಿ ವಿದ್ಯಮಾನರಾಗಿದ್ದಾರೆ. ಗಜಚರ್ಮಾಂಬರಧಾರಿಯಾದ ಮಹರುದ್ರದೇವರು (ಕೃತ್ತಿವಾಸನು) ಅಹಂಕಾರ ತತ್ತ್ವಕ್ಕೆ ಅಭಿಮಾನಿಗಳಾಗಿದ್ದಾರೆ. ಚಿತ್ತಾಭಿಮಾನಿಗಳು ಗರುಡದೇವರು (ವಿಹಗೇಂದ್ರ), ಚೇತನಾಭಿಮಾನಿಗಳು ಶೇಷದೇವರು (ಫಣಿಪ). ಇಂತಹ ಮನೋಭಿಮಾನಿಗಳಾದ ತತ್ತ್ವಾಭಿಮಾನಿಗಳಲ್ಲಿ ತೈಜಸನಾಮಕ ಪರಮಾತ್ಮನು ಸರ್ವದಾ ನಿಯಾಮಕನಾಗಿದ್ದಾನೆ. ಆ ತೈಜಸನು ಸ್ವಪ್ನಾವಸ್ಥೆಗೆ ಪ್ರೇರಕನು. ಅವನಿಗೆ ೧೯ ಮುಖಗಳು. ಅಂತಹ

ತೈಜಸನಾಮಕ ಶ್ರೀಹರಿಯು ಕಂಠಸ್ಥಾನದಲ್ಲಿದ್ದು ಜೀವರಿಗೆ ಸ್ವಾಪ್ನವಸ್ತುಗಳನ್ನು ತತ್ಕ್ಷಣದಲ್ಲಿಯೇ ಸೃಷ್ಟಿಮಾಡಿ, ಸ್ವಪ್ನದ್ವಾರಾ ಗೋಚರಿಸುವಂತೆ ಮಾಡುವನು. ಸಂಸ್ಕಾರರೂಪವಾದ ವಾಸನಾಮಯ ಈ ರಸಕ್ಕೆ (ಸ್ವಪ್ನ ದರ್ಶನ) **ಪ್ರವಿವಿಕ್ತರಸ** ಎಂದು ಹೆಸರು. ಬಿಂಬಕ್ರಿಯಾದ್ವಾರಾ ಸ್ವಪ್ನ ದರ್ಶನವನ್ನು ಜೀವರಿಗೆ ಮಾಡಿಸುವ ತೈಜಸನಿಗೆ **ಪ್ರವಿವಿಕ್ತಭುಕ್** ಎಂದು ಹೆಸರು ॥೧೩॥

## ಪ್ರತಿಪದಾರ್ಥ

**ಚಿತ್ತಜ**=ಮನ್ಮಥ, **ಇಂದ್ರನು**=ಇಂದ್ರದೇವರು, **ಮನದೊಳಗೆ**=ಮನಸ್ಸತ್ತತ್ತ್ವದಲ್ಲಿ **ಇಪ್ಪರು**=ಮನೋಭಿಮಾನಿಗಳಾಗಿದ್ದಾರೆ. **ಕೃತ್ತಿವಾಸನು**=ಗಜಚರ್ಮಧಾರಿಯಾದ ಶ್ರೀಮಹರುದ್ರದೇವರು, **ಅಹಂಕಾರದಿ**=ಅಹಂಕಾರತತ್ತ್ವಕ್ಕೆ ಅಭಿಮಾನಿಗಳಾಗಿದ್ದಾರೆ. **ಚಿತ್ತ**=ಪಂಚಮನೋವೃತ್ತಿಗಳಲ್ಲಿ ಒಂದಾದ ಚಿತ್ತಕ್ಕೆ ಅಭಿಮಾನಿಗಳಾದ (ಸಂಕಲ್ಪಶಕ್ತಿ), **ವಿಹಗೇಂದ್ರ**=ಪಕ್ಷಿರಾಜರಾದ ಶ್ರೀಗರುಡದೇವರಲ್ಲಿ, **ಚೇತನವಮಾನಿಗಳು**=ಜೀವಾಭಿಮಾನಿಗಳಾದ, **ಫಣಿಪರೊಳು**=ಸರ್ವಶ್ರೇಷ್ಠರಾದ ಶ್ರೀಶೇಷದೇವರಲ್ಲಿ, ಅಂದರೆ ಪಂಚಮನೋವೃತ್ತಿಗಳಿಗೆ ಅಭಿಮಾನಿಗಳಾದ, ಕಾಮ, ಇಂದ್ರ, ರುದ್ರ, ಗರುಡ ಮತ್ತು ಶೇಷರುಗಳಲ್ಲಿ, **ಹತ್ತೊಂಭತ್ತುನೊಗ**=೧೯ ಮುಖಗಳಿಂದ ಯುಕ್ತನಾದ, **ತೈಜಸನು**=ತೈಜಸನಾಮಕ ಶ್ರೀಪರಮಾತ್ಮನು, **ನಿತ್ಯದಲಿ**=ಸರ್ವದಾ, **ನೆಲೆಗೊಂಡು**=ಆವಾಸನಾಗಿದ್ದು, **ಸ್ವಪ್ನಾವಸ್ಥೆಯೈದಿಸಿ**=ಜಾಗ್ರದವಸ್ಥೆಯಿಂದ ವಿಶ್ವನಾಮಕ ಶ್ರೀಪರಮಾತ್ಮನ ದ್ವಾರಾ, ಸ್ವಪ್ನಸ್ಥಿತಿಗೆ ತಂದು, **ಜೀವರು**=ಸರ್ವಚೇತನರನ್ನು ಹೊಂದಿಸಿ, **ಪ್ರವಿವಿಕ್ತ**=ಸ್ವಪ್ನಾವಸ್ಥೆಯಲ್ಲಿ ಪ್ರಕರ್ಷೇಣ ಬೇರೆ ಬೇರೆ ಆಗಿರತಕ್ಕ ಸ್ವಾಪ್ನ ಪದಾರ್ಥಗಳನ್ನು ಸೃಷ್ಟಿಸಿ, **ಭುಕುವು**=ಸ್ವಾಪ್ನಪದಾರ್ಥಗಳಿಗೂ ಮತ್ತು ಜೀವರುಗಳಿಗೂ ಸಂಬಂಧಪಡಿಸಿ, ತತ್ಸಂಬಂಧವಾದ ಅನುಭವವನ್ನು ಬಿಂಬ ಕ್ರಿಯಾದ್ವಾರಾ ತಾನು ಉಂಡು, ಮನೋಭಿಮಾನಿದೇವತೆಗಳ ದ್ವಾರಾ ದೇಹಗಳಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಗೆ ಉಣಿಸಿ, **ಎನಿಪ**=ಪ್ರವಿವಿಕ್ತ

ಭುಕ್ ಎಂಬ ಹೆಸರಿನಿಂದ ಕರೆಯಿಸುತ್ತಾನೆ. ಅಂದರೆ ಜೀವರುಗಳಿಗೆ ತೈಜಸನ ದ್ವಾರಾ ಸ್ವಾಪ್ನಪದಾರ್ಥಗಳ ದರ್ಶನ ಮತ್ತು ತತ್ಸಂಬಂಧವಾದ ಅನುಭವ ವಿಶೇಷಗಳನ್ನುಂಟುಮಾಡುವ ಕಾರ್ಯ ಎಂದರ್ಥ. ॥೧೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ವಪ್ನಾವಸ್ಥಾಪ್ರದನಾದ ತೈಜಸನಾಮಕ ಪರಮಾತ್ಮನ ವ್ಯಾಪಾರ ಹೇಳ ತಾರೆ. ಇನ್ನೂ ಮನೋಭಿಮಾನಿಗಳಾದ ದೇವತೆಗಳನ್ನೂ ಹೇಳತಾರೆ.

ಮನದೊಳು–ಮನೋವೃತ್ತಿಗಳು ಐದು. ಈ ಐದರೊಳು ಮನ ದೊಳಗೆ, ಚಿತ್ತಜೇಂದ್ರರು ಇಪ್ಪರು–ಮನ್ಮಥ, ಇಂದ್ರದೇವರು ಇವರಿಬ್ಬರೂ ಇದ್ದಾರೆ. ಅಹಂಕಾರದಿ ಕೃತ್ತಿವಾಸನು–ಅಹಂಕಾರ ವೃತ್ತಿಯಲಿ ರುದ್ರ ದೇವರು ಅಭಿಮಾನಿ, ಚಿತ್ತವಿಹಗೇಂದ್ರ–ಚಿತ್ತಸಾಂಕೇತವಾದ ವೃತ್ತಿಗೆ ಗರುಡ ದೇವರು, ಚೇತನ ಫಣಿಪ–ಬುದ್ಧಿಗೆ ಶೇಷದೇವರು, ಈ ಪ್ರಕಾರ, ಮಾನಿಗಳು– ಈ ಐದು ವೃತ್ತಿಗಳಿಗೆ ಐದು ಮಂದಿ ಅಭಿಮಾನಿಗಳು, ರೊಳು–ಐದು ಮಂದಿ ಅಭಿಮಾನಿಗಳಾದ ಮನೋವೃತ್ತಿಗಳಲ್ಲಿ, ತದಭಿಮಾನಿದೇವತೆಗಳಲ್ಲಿ, ಹತ್ತೊಂಭತ್ತು ಮೊಗ ತೈಜಸನು–ವಿಶ್ವನಾಮಕ ಪರಮಾತ್ಮನೋಪಾದಿಯಲ್ಲಿ ಹತ್ತೊಂಭತ್ತು ಮುಖವುಳ್ಳ ತೈಜಸಮೂರ್ತಿ ಪರಮಾತ್ಮ, ಸ್ತ್ರೀಯರಲ್ಲಿ ಸ್ತ್ರೀ ರೂಪದಿಂದಲೂ, ಪುರುಷರಲ್ಲಿ ಪುರುಷರೂಪದಿಂದಲೂ. ನಿತ್ಯದಲಿ ನೆಲೆ ಗೊಂಡು–ಸದಾ ಆಶ್ರಯನಾಗಿದ್ದು, ಸ್ವಪ್ನಾವಸ್ಥೆಯೈದಿಸಿ–ವಿಶ್ವನ ಅಧೀನದಲ್ಲಿ ಜಾಗ್ರದಾವಸ್ಥಾದಿಂದ ಇರತಕ್ಕ ಸ್ಥೂಲದೇಹಗತ ಜೀವನ ಪ್ರಕಾಶ ವಿಶ್ವನ ದ್ವಾರಾ ತೈಜಸನ ಅಧೀನಯೈದಿದ ತರುವಾಯು, ಈ ತೈಜಸನು ಮನೋವೃತ್ತಿ ಗಳಿಗೆ ಅಭಿಮಾನಿಗಳಾದ ದೇವತೆಗಳ ದ್ವಾರಾ ಸ್ವಪ್ನಾವಸ್ಥೆಯೈದಿಸಿ, ಜೀವರನ– ದಾವದಾವ ದೇಹದಲಿ ಸ್ವಪ್ನಪ್ರದನಾಗಿ ಇದ್ದಾನೋ, ಆಯಾ ಜೀವರನ ಅಂದರೆ ಪ್ರಕಾಶತೋಪ್ಯಾಪ್ತರಾದ ಜೀವರನ ಮತ್ತು ಮನೋವೃತ್ತಿಅಭಿಮಾನಿ ಗಳಾದ ದೇವತೆಗಳನ್ನು ಹಾಂಗೇ ತನ್ನ ವಶದಲ್ಲಿ ಇರುವ ಇತರ ತತ್ತ್ವಾಭಿ

ಮಾನಿಗಳಾದ ದೇವತೆಗಳನ್ನ, ಏತಾದೃಶರಾದ ಜೀವರನ, ಪ್ರವಿವಿಕ್ತ–ಸ್ವಪ್ನ ದಲಿ ಪ್ರಕರ್ಷೇಣ ಬ್ಯಾರೆ ಬ್ಯಾರೆ ಆಗಿ ಇರತಕ್ಕ ಸ್ವಪ್ನಪದಾರ್ಥಗಳ, ಭುಕು– ಸ್ವಪ್ನಾಂತ್ಯದಲ್ಲಿ ಭೋಜನ ಮಾಡತಾನೆ ಎಂದರೆ, ಉದರದಲಿ ಧರಿಸೋವನಾಗ ತಾನೆ. (ಸ್ವಪ್ನಗತ ಜಡಪದಾರ್ಥಗಳು ಮನೋಪಾದಾನದಿಂದ ನಿರ್ಮಿತ, ಅನಿರ್ಮಿತವಾದ ಘಟಪಟಾದಿಗಳ, ಘಟವನ್ನು ಘಟ ಎಂತಲೂ, ಪಟವನ್ನು ಪಟ ಎಂತಲೂ ತಿಳಿಯೋ ಜ್ಞಾನ ಜಾಗ್ರತ್ಕಾಲದ ವಾಸನಾಜ್ಞಾನ, ಸ್ವಪ್ನಗತ ಘಟಪಟಾದಿಗಳ ನಾಶಯ್ಯೆದಿಸಿ, ಉಪಾದಾನವಾದ ಮನದಲಿ ಲಯಯ್ಯೆದಿಸು ತಾನೆ. ತನ್ನ ವಶದಲ್ಲಿ ಇರುವ ದೇಹಗತ ಜೀವರನ ಪ್ರಕಾಶ ತತ್ತ್ವದೇವತೆಗಳ ಭೋಜನರೂಪದಿಂದ ತನ್ನ ಉದರದಲ್ಲಿ ಲಯಯ್ಯೆದಿಸತಾನೆ ಎಂತ ತಾತ್ಪರ್ಯ). ಎನಿಪ–ಈ ಕಾರಣದಿಂದ ಪ್ರವಿವಿಕ್ತಭುಕು ಎಂತ ನಾಮಾಂತರದಿಂದ ತೈಜಸ ಎನಿಸೋವನಾಗತಾನೆ. ಇಲ್ಲಿ ಜೀವ ವ್ಯವಹಾರ, ವ್ಯಾಪ್ತಜೀವ ಎಂತ ತಾತ್ಪರ್ಯ. ಲಿಂಗಗತ ಅಣುಸ್ವರೂಪಿಯಾದ ಜೀವನಲ್ಲವೆಂದು ತಾತ್ಪರ್ಯ॥೧೩॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಮನಸ್ಸಿನಲ್ಲಿ ಮನ್ಮಥ, ಇಂದ್ರ ಇವರಿಬ್ಬರು ಇರುವರು. ಅಹಂಕಾರ ದಲ್ಲಿ ರುದ್ರದೇವರು ಇರುವರು. ಚಿತ್ತಾಭಿಮಾನಿ ಗರುಡನು ಚಿತ್ತದಲ್ಲಿ ಇರು ವನು. ಚಿತ್ತಾಭಿಮಾನಿಗಳು ಬ್ರಹ್ಮವಾಯುಗಳೆಂದು **ಭಾಗವತವಾಕ್ಯ**ವಿದ್ದರೂ ಮುಖ್ಯಾಭಿಮಾನಿಗಳು ಬ್ರಹ್ಮವಾಯುಗಳು, ಅಮುಖ್ಯತಯಾ ಗರುಡನೆಂದು ತಿಳಿಯಬೇಕು. ಚೇತನಕ್ಕೆ ಅಭಿಮಾನಿಗಳು ಶೇಷದೇವರು. ಇವರು ಚೇತನ ದಲ್ಲಿರುವರು. ಇವರುಗಳಲ್ಲಿ ವಿಶ್ವನಾಮಕ ಪರಮಾತ್ಮನಂತೆಯೇ ಮಧ್ಯದಲ್ಲಿ ಗಜಮುಖ, ಎಡದ ಭಾಗದಲ್ಲಿ ೯ ಮನುಷ್ಯ ಮುಖಗಳು, ಬಲದ ಭಾಗದಲ್ಲಿ ೯ ಮನುಷ್ಯ ಮುಖಗಳು, ಹೀಗೆ ೧೯ ಮುಖಗಳುಳ್ಳ ತೈಜಸನಾಮಕ ಪರಮಾತ್ಮ ನಿದ್ದು, ಜೀವರಿಗೆ ಸ್ವಪ್ನಾವಸ್ಥೆಯನ್ನು ಕೊಡಿಸಿ. ಅಂದರೆ ಸ್ವಪ್ನದಲ್ಲಿ ಗಜ, ಕುದುರೆ ಮೊದಲಾದ ಪದಾರ್ಥಗಳನ್ನು ಸೃಷ್ಟಿಸಿ ಅವುಗಳಿಗೂ, ಜೀವರುಗಳಿಗೂ ಸಂಬಂಧಪಡಿಸಿ ಜೀವರೊಳಗಿದ್ದು, ತಾನೂ ಆ ಸುಖವನ್ನು ಅನುಭವಿಸಿ, ಜೀವನಿಗೆ ಉಣಿಸುವುದರಿಂದ, ಜೀವನಿಗೆ ಸ್ವಪ್ನದಲ್ಲಿ ಕಾಣುವ ಪದಾರ್ಥಗಳು

ಅವನು ಸ್ವಪ್ನದಲ್ಲಿ ಮಾತ್ರ ಕಾಣುವನೇ ಹೊರತು ಮತ್ತಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದ **ಪ್ರವಿವಿಕ್ತಭುಕ್** ಎಂದು ಹೇಳಿದರು. ಏಕಾಂತದಲ್ಲಿ ಹುಟ್ಟುವ ಪದಾರ್ಥಗಳ ಸಂಬಂಧದಿಂದ ಹುಟ್ಟುವ ಸ್ವಪ್ನಸುಖವನ್ನನುಭವಿಸುವನೆಂದರ್ಥ ॥೧೩॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

**ಚಿತ್ತ್ರೇತಿ॥**

ಚಿತ್ತ್ರಜೇಂದ್ರೌ ಚ ಮನಸೀತಿ-ಸಾರಸಂಗ್ರಹೇ ॥
ಬುದ್ಧ್ಯಾ ಉಮಾಂಹಕೃತೌ ಚ ರುದ್ರಶ್ಚಿತ್ತೇ ಖಗೇಶ್ವರಃ।
ಶೇಷೋಸ್ತಿ ಚೇತನೇ ಸರ್ವಮನೋವೃತ್ತಿಂ ಪ್ರವರ್ತಯನ್ನಿತಿ॥

ತತ್ತ್ವಕೌಸ್ತುಭೇ॥

**ನಿತ್ಯೇತಿ॥**

ಏಕೋನವಿಂಶತಿಮುಖೌ ವಿಶ್ವತೈಜಸನಾಮಕೌ।
ಸವ್ಯಾಪಸವ್ಯಗಾನ್ಯೇವ ಪುರುಷಾಸ್ಯಾನಿ ಮಧ್ಯಗೇ ॥
ಗಜಸ್ಯಂತು ತಯೋರ್ಮಧ್ಯೇ ಮುಖಾನಾಂ ಕೃತ್ಯಮಪ್ಯತೇತಿ॥

-ಪ್ರಕಾಶಸಂಹಿತೋಕ್ತೇಃ॥

ಪ್ರವಿವಿಕ್ತಂತು ತೈಜಸ ಇತ್ಯುಕ್ತೇಃ

ಮೊಗ = ಮುಖ

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಚಿತ್ತ್ರಜ ಇತಿ॥ ಕಾಮಃ। ನೆಲೆ-ಸ್ಥಳಮ್। ಸ್ವಪ್ನಸ್ಥಾನೋ ಅಂತಃಪ್ರಜ್ಞಃ ಸಪ್ತಾಂಗಃ ಏಕೋನವಿಂಶತಿಮುಖಃ ಪ್ರವಿವಿಕ್ತಭುಕ್। ತೈಜಸೋ ದ್ವಿತೀಯಃ ಪಾದಃ। ತೈಜಸಃ ಪ್ರವಿವಿಕ್ತಭುಕ್ ಜಾಗ್ರದ್ದರ್ಶನ ಸಂಸ್ಕಾರ

ರೂಪತ್ವಾತ್ ಸ್ವಪ್ನಗಂ ತು ಯತ್। ಪ್ರವಿವಿಕ್ತಂ ತು ತಜ್ಞಾನ ಕರಣೋಂತರ್ಜ್ಞ ಉಚ್ಯತೇ। ಇತಿ ವಾರಾಹೇ ॥೧೩॥

**ಕನ್ನಡಾನುವಾದ**

ಸ್ವಪ್ನಸಂಬಂಧವಾದ ವ್ಯಾಪಾರಗಳನ್ನು ತೈಜಸನಾಮಕ ಶ್ರೀಹರಿಯು ಮಾಡಿ ಮಾಡಿಸುತ್ತಾನೆ, ಆತನ ಮಹಿಮೆಗಳನ್ನು ಈ ಪದ್ಯದಿಂದ ನಿರೂಪಿಸುತ್ತಾರೆ. ಸ್ವಪ್ನಸ್ಥಾನವು ಕಂಠವು. ತೈಜಸನು ಕಂಠಪ್ರದೇಶದಲ್ಲಿರುವನು. ಮನಸ್ಸಿನ ವಾಸನಾ ಸಂಸ್ಕಾರಗಳಿಂದ ಉತ್ಪತ್ತಿಯಾಗುವ ವಸ್ತುಗಳಿಗೆ ಪ್ರವಿವಿಕ್ತ ವಸ್ತುಗಳೆನ್ನುವರು. ಸ್ವಪ್ನಾನುಭವಸಂಬಂಧವಾದ ರಸಕ್ಕೆ **ಪ್ರವಿವಿಕ್ತ ರಸವೆಂದು** ಹೆಸರು. ತೈಜಸನು ಅಂತಹ ಸ್ವಾಪ್ನವಸ್ತುಗಳನ್ನು ಸೃಜಿಸಿ, ಜೀವರಿಗೆ ದರ್ಶನ ಮಾಡಿಸಿ, ಪ್ರವಿವಿಕ್ತರಸದ ಸಾರಭಾಗವನ್ನು ಮಾತ್ರ (ಸ್ವಾಖ್ಯರಸ) ಸ್ವೀಕರಿಸುವನು. ವಿಶ್ವನಂತೆ ತೈಜಸನಿಗೂ ಸಹ ೧೯ ಮುಖಗಳಿವೆ. ಸಪ್ತಾಂಗಗಳಿವೆ. ಈ ತೈಜಸನು ದ್ವಿತೀಯಪಾದ **ಉ-ಕಾರ ವಾಚ್ಯನು.** ಜಾಗ್ರತ್ಕಾಲದ ವಸ್ತುಗಳ ಸಂಪರ್ಕದಿಂದ ಆಗಿರುವ ಸಂಸ್ಕಾರದಿಂದ ನಿರ್ಮಿತವಾಗಿ ಸ್ವಪ್ನದ್ವಾರಾ ನಾವು ನೋಡುವ ವಿಷಯಗಳು **ಪ್ರವಿವಿಕ್ತ**ವೆನಿಸುವವು. ತೈಜಸನು ಈ ಪ್ರವಿವಿಕ್ತ ರಸರೂಪವಾದ ವಿಷಯಗಳನ್ನು ಸ್ವಪ್ನದ್ವಾರಾ ತೋರಿಸಿ, ತಂದರ್ತಗತಸಾರವನ್ನು ಸ್ವೀಕರಿಸುತ್ತಾನೆ. ಈ ಪ್ರಮೇಯವು **ವರಾಹ ಪುರಾಣದಲ್ಲಿ** ನಿರೂಪಿತವಾಗಿದೆ ॥೧೩॥

**೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ**

ಮನಸ್ಸು, ಅಹಂಕಾರತತ್ತ್ವದಲ್ಲಿ ಸಹ ಅಭಿಮಾನಿಗಳನ್ನು ತನ್ನಿಯಾಮಕ ಕಂಠಸ್ಥ ತೈಜಸಮೂರ್ತಿ ಸ್ಮರಣೆ ನಿರೂಪಿಸುತ್ತಾರೆ. ಚಿತ್ರಜೇಂದ್ರರೆಂದು. ಮನಸ್ಸಿನಲ್ಲಿ ಕಾಮನು ಇಂದ್ರ ಸಹ ಇರುವರು. ಅಹಂಕಾರತತ್ತ್ವದಲ್ಲಿ ಕೃತ್ತಿವಾಸನೆಂದರೆ, ವ್ಯಾಘ್ರಚರ್ಮಧರ ರುದ್ರದೇವರು ಇರುವರು. ಇವರಿಬ್ಬರಲ್ಲೂ ನಿಯಾಮಕ ಹತ್ತೊಂಭತ್ತು ಮುಖವುಳ್ಳ **ತೈಜಸಮೂರ್ತಿಯು** ಸರ್ವಜೀವರಿಗೂ **ಪ್ರವಿವಿಕ್ತಭುಕ್** ಎಂದರೆ, ಜೀವನ **ಮನೋಗತವಾಸನೆ** ಎಂಬ

ಸಂಸ್ಕಾರದಿಂದ ಸರ್ವವನ್ನೂ ನಿರ್ಮಿಸಿ, ಸ್ಥೂಲವಿಲಕ್ಷಣ ಆ ರಹಸ್ಯವಸ್ತುಗಳಲ್ಲಿರುವ ಸ್ವರಸಭೋಕ್ತೃವಾಗಿ ಸರ್ವರಿಗೂ ಸ್ವಪ್ನಸುಖದುಃಖಗಳನ್ನು ಉಣಿಸುವನು ॥೧೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮನಸ್ತತ್ತ್ವ ಮತ್ತು ಅಹಂಕಾರ ತತ್ತ್ವಗಳ ವಿಷಯ. ಆ ತತ್ತ್ವಾಭಿಮಾನಿದೇವತೆಗಳ ದ್ವಾರಾ ತೈಜಸನಾಮಕ ಶ್ರೀಪರಮಾತ್ಮನ ಸ್ವಪ್ನಪ್ರೇರಕತ್ವಾದಿ ವಿವರಗಳನ್ನು ತಿಳಿಸುತ್ತಾರೆ ಪ್ರಸಕ್ತ ೧೩ನೆಯ ಪದ್ಯದಿಂದ.

೧. ಚಿತ್ತಜ ಎಂದರೆ ಮನಸ್ಸಿನಿಂದ ಉತ್ಪತ್ತಿಯಾದವನು ಎಂದರ್ಥ; ಅಂದರೆ ಮನಸಿಜನು. ಅವನೇ ಕಾಮ ಅಥವಾ ಮನ್ಮಥ, ಶ್ರೀಹರಿಯ ಪುತ್ರ. ಸುರಪತಿಗಳಾದ ಶ್ರೀಇಂದ್ರದೇವರು. ಕಾಮ ಮತ್ತು ಇಂದ್ರ–ಈ ಇಬ್ಬರು ದೇವತೆಗಳೂ ಮನಸ್ಸಿಗೆ ಅಭಿಮಾನಿಗಳು (ಮನದೊಳಿಪ್ಪರು, ಉಪಮನಸ್ಸಿಗೆ ಅಭಿಮಾನಿಗಳು).

೨. ಅಹಂಕಾರತತ್ತ್ವಕ್ಕೆ ಶ್ರೀಮಹರುದ್ರದೇವರು ಅಭಿಮಾನಿಗಳು. ವ್ಯಾಘ್ರಚರ್ಮವನ್ನು ಉಟ್ಟುಗೊಂಡು, ಗಜಚರ್ಮವನ್ನು ಹೊದ್ದುಕೊಂಡಿರುವ ಮಹರುದ್ರದೇವರಿಗೆ ಕೃತ್ತಿವಾಸ ಎಂದು ಹೆಸರು.

೩. ಚಿತ್ತವು ಪಂಚಮನೋವೃತ್ತಿಗಳಲ್ಲಿ ಒಂದು. ಇದು ಸಂಕಲ್ಪಶಕ್ತಿಯ ಕೇಂದ್ರವು. ಚಿತ್ತಕ್ಕೆ ಅಭಿಮಾನಿಗಳು ಪಕ್ಷಿರಾಜರಾದ ಶ್ರೀಗರುಡದೇವರು (ವಿಹಗ_ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು. ಇಂದ್ರ–ಶ್ರೇಷ್ಠರು–ಪಕ್ಷಿ ಶ್ರೇಷ್ಠರು) ಚೇತನವೇ ಸಾಕ್ಷಿಯು. ಚೇತನಾಭಿಮಾನಿಗಳಲ್ಲಿ ಸರ್ವಶ್ರೇಷ್ಠರಾದ ಶ್ರೀ ಶೇಷದೇವರು (ಫಣಿ–ಹೆಡೆಯುಳ್ಳ ಸರ್ಪಗಳು, ಪ–ಅಧಿಪತಿ. ಅಂದರೆ ಸರ್ಪರಾಜರೆಂದರ್ಥ) ಚೇತನಶಬ್ದವನ್ನು ಜೀವ ಎಂಬರ್ಥದಲ್ಲಿ ಅನ್ವಯ ಮಾಡಿದರೆ ಶೇಷದೇವರು ಜೀವಾಭಿಮಾನಿಗಳು.

೪. ಪೂರ್ವೋಕ್ತ ಮನೋಭಿಮಾನಿಗಳಾದ, ಇಂದ್ರ ಮತ್ತು ಕಾಮರಲ್ಲಿ, ಅಹಂಕಾರತತ್ತ್ವಾಧಿಪತಿಗಳಾದ ರುದ್ರದೇವರಲ್ಲಿ, ಚಿತ್ತಾಭಿಮಾನಿಗಳಾದ

ಗರುಡದೇವರಲ್ಲಿ ಮತ್ತು ಜೀವಾಭಿಮಾನಿಗಳಾದ ಶೇಷದೇವರಲ್ಲಿ ನಿರಂತರವಾಗಿ (ನಿತ್ಯದಲ್ಲಿ) ತೈಜಸನಾಮಕ ಪರಮಾತ್ಮನು ವಿದ್ಯಮಾನನಾಗಿರುವನು.

೫. ಸರ್ವಜೀವರ ಬಲಗಣ್ಣಿನ ತುದಿಯಲ್ಲಿ **ವಿಶ್ವನಾಮಕ** ಶ್ರೀಪರಮಾತ್ಮನಿದ್ದಾನೆ. ವಿಶ್ವನು ಜಾಗ್ರದವಸ್ಥೆಗೆ ಪ್ರೇರಕರು. ಜೀವರು ಎಚ್ಚರವಾಗಿರುವ ಕಾಲದಲ್ಲಿ ಅ-ಕಾರ ವಾಚ್ಯ ವಿಶ್ವನು ನೇತ್ರೇಂದ್ರಿಯದ ದ್ವಾರಾ ಸಕಲವಸ್ತುಗಳ ರೂಪ ಪರಿಚಯು ಮಾಡಿಸುವನು. ಇವು ಸ್ಥೂಲಪದಾರ್ಥಗಳು. ತೇಜೋತತ್ತ್ವದ ತನ್ಮಾತ್ರಗುಣವು ರೂಪವು. ನೇತ್ರೇಂದ್ರಿಯಕ್ಕೆ ರೂಪ ಸನ್ನಿಕರ್ಷವಾದಾಗ, ವಸ್ತುಗಳ ಪರಿಚಯಃಜ್ಞಾನವುಂಟಾಗುವುದು. ಈ ವಿಷಯಕ್ಕೆ **ಸ್ಥೂಲರಸ** ಎಂದು ಹೆಸರು. ಈ ರಸಾಂತರ್ಗತಭಗವದ್ರೂಪವೇ **ಸ್ಥೂಲಭುಕ್.** ವಿಶ್ವನು ಸ್ಥೂಲಭುಕ್ ಎಂದೆನಿಸಿ, ಸ್ಥೂಲರಸಗತ ಸ್ವಾಖ್ಯರಸವನ್ನು ಸ್ವೀಕರಿಸಿ, ಬಿಂಬಕ್ರಿಯಾದ್ವಾರಾ ನೋಡಿ ನೋಡಿಸುತ್ತಾ ಜೀವರಿಗೆ ಜಾಗ್ರದವಸ್ಥೆಯ ಅನುಭವವನ್ನು ಕೊಡುವನು.

ಅದೇ ವಿಶ್ವನು ಕಂಠಪ್ರದೇಶಕ್ಕೆ ಬಂದಾಗ **ತೈಜಸನೆನಿಸುವನು.** ಆಗ ಜೀವರಿಗೆ ಸ್ವಪ್ನಗಳುಂಟಾಗುವುವು. ತೈಜಸನು ಸ್ವಪ್ನಾವಸ್ಥೆಗೆ ಪ್ರೇರಕನು. ಮನಸ್ಸು ವಿಷಯಗಳನ್ನು ಜ್ಞಾನೇಂದ್ರಿಯಗಳ ದ್ವಾರಾ ಗ್ರಹಿಸುವ ಇಂದ್ರಿಯವು. ಕರ್ಮೇಂದ್ರಿಯಗಳ ದ್ವಾರಾ ಮನಸ್ಸು ಕರ್ಮರೂಪವಾದ ವ್ಯಾಪಾರಗಳ ಸಂದೇಶವನ್ನು ಮುಟ್ಟಿಸುವುದು. ಇದರಿಂದ ದಶೇಂದ್ರಿಯಗಳನ್ನು ನಿಯಂತ್ರಿಸುವುದರಿಂದ ಮನಸ್ಸಿಗೆ ಏಕಾದಶೇಂದ್ರಿಯವೆಂದು ಹೆಸರು. ಮನಸ್ಸಿಗೆ ಅಭಿಮಾನಿಗಳಾದ ಇಂದ್ರ-ಕಾಮರಲ್ಲಿ ತಾನಿದ್ದು, ಅಹಂಕಾರತತ್ತ್ವಾಭಿಮಾನಿಗಳಾದ ರುದ್ರದೇವರಲ್ಲಿ, ಚಿತ್ತಾಭಿಮಾನಿಗಳಾದ ಗರುಡದೇವರಲ್ಲಿ ಮತ್ತು ಚೇತನಾಭಿಮಾನಿಗಳಾದ ಶೇಷದೇವರಲ್ಲಿ ವಿದ್ಯಮಾನನಾಗಿದ್ದು, ತೈಜಸನಾಮಕ ಶ್ರೀಪರಮಾತ್ಮನು, ಸ್ವಾಪ್ನಪದಾರ್ಥಗಳನ್ನು ತತ್ಕಾಲದಲ್ಲಿ ಸೃಷ್ಟಿಸಿ, ಜೀವರಿಗೆ ಪ್ರದರ್ಶಿಸುವನು. ಇದೇ ಸ್ವಪ್ನಾವಸ್ಥೆಯು. ಈ ಅವಸ್ಥೆಯಲ್ಲಿ ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳು ಉಪರತವಾಗಿರುವುವು ಅಂದರೆ ಅವುಗಳ ಕಾರ್ಯವಿಲ್ಲ. ಆದರೆ ಮನಸ್ಸು ಮಾತ್ರ ಜಾಗ್ರತವಾಗಿದ್ದು

ಮನಸ್ಸಿನ ದ್ವಾರಾ ಸ್ವಾಪ್ನವಸ್ತುಗಳ ಪ್ರದರ್ಶನ. ಇಂತಹ ಸ್ವಪ್ನಾವಸ್ಥೆಯಲ್ಲಿ ಚಿತ್ರವಿಚಿತ್ರವಾದ ಸನ್ನಿವೇಶಗಳನ್ನು ನೋಡುತ್ತೇವೆ. ಅವುಗಳ ಸಂಬಂಧವಾದ ಸುಖ, ದುಃಖ, ಮಿಶ್ರಾದಿ ಅನುಭವಗಳು ನಮಗೆ ಉಂಟಾಗುವುವು. ಈ ಅನುಭವ ಮನಸ್ಸಿನಲ್ಲಿ ವ್ಯಾಪ್ತನಾದ ಸಾಕ್ಷೀಭೂತನಾದ ಚೇತನನಿಗೆ ಯಥಾರ್ಥವಾಗಿ ಉಂಟಾಗುವುದು. ಈ ಕಾರ್ಯಪ್ರಭಾವದಿಂದ ಅದಕ್ಕೆ ಕಾರಣಭೂತವಾದ ಸ್ವಾಪ್ನವಸ್ತುಗಳೂ ಸತ್ಯಭೂತವೇ. ಅವು ಕೇವಲ ಕಲ್ಪನೆಯಲ್ಲ, ಭ್ರಮಾತ್ಮಕವೂ ಅಲ್ಲ. ಪ್ರಸಕ್ತ ಜನ್ಮದಲ್ಲಿ ಪ್ರಾಗ್ಜನ್ಮಗಳಲ್ಲಿ ಮುಂದೆ ಬರಬಹುದಾದ ಜನ್ಮಗಳಲ್ಲಿ ಈ ವಿಷಯವು ಸಂಸ್ಕಾರರೂಪದಿಂದ ಮನಸ್ಸಿನಲ್ಲಿ ನೆಲೆಗೊಳಿಸಿರುವುವು. ಇದರಿಂದಲೇ ಮನಸ್ಸು ಪರಂಪರಾಗತವಾಗಿ ಜೀವನನ್ನು ಜನ್ಮಜನ್ಮಾಂತರಗಳಲ್ಲಿ ಅನುಸರಿಸಿಯೇ ಬರುವುದು.

ಈ ಸಂಸಾರಕ್ಕೆ **ವಾಸನಾ** ಎಂದು ಹೆಸರು. ಜೀವನ ಪಾಪ ಪುಣ್ಯ ಕರ್ಮಕ್ಕೆ ಸಂಬಂಧಿಸಿದ ಸಂಚಿತಾಗ್ರಾಮಿ ಕರ್ಮಗಳ ಪರಿಣಾಮವು ಮನಸ್ಸಿನ ಒಳಪದರಗಳಲ್ಲಿ ಅಡಕವಾಗಿರುವುದು. ಇದಕ್ಕೆ **ಸಂಸ್ಕಾರ** ಎಂದು ಹೆಸರು. ಈ ಸಂಸ್ಕಾರದ ಫಲಗಳಲ್ಲಿ ಕೆಲವನ್ನು ಜಾಗ್ರದಾವಸ್ಥೆಯಲ್ಲಿಯೂ ಇನ್ನು ಕೆಲವನ್ನು ಸ್ವಪ್ನಾವಸ್ಥೆಯಲ್ಲಿಯೂ ಶ್ರೀಹರಿಯು ಜೀವರ ಅನುಭವಕ್ಕೆ ತಂದು ಕೊಡುವನು. ಸ್ವಪ್ನಾನುಭವಗಳು ಸಂಸ್ಕಾರದ ಫಲಭೋಗ. ಇಂತಹ ವಾಸನಾಮಯವಾದ ಸಂಸ್ಕಾರದಿಂದಲೇ ಮನೋದ್ವಾರಾ ಸ್ವಾಪ್ನಪದಾರ್ಥಗಳ ದರ್ಶನ ಮತ್ತು ತತ್ಸಂಬಂಧವಾದ ಅನುಭವ ವಿಶೇಷಗಳು. ಈ ವಾಸನಾಮಯವಾದ ಸಂಸ್ಕಾರಕ್ಕೆ ವಿಷಯವಾದ ರಸಕ್ಕೆ **ಪ್ರವಿವಿಕ್ತರಸ**ವೆಂದು ಹೆಸರು. ಈ ರಸಾಂತರ್ಗತನಾಗಿ ತೈಜಸನು ಸ್ವಾಖ್ಯರಸವನ್ನು ಸ್ವೀಕರಿಸಿ, ಬಿಂಬಕ್ರಿಯಾ ದ್ವಾರಾ ಸ್ವಪ್ನಾವಸ್ಥೆಯ ಅನುಭವವನ್ನು ಚೇತನರಿಗೆ (ಸಾಕ್ಷ) ತಂದೀಯುವನು. ಇದರಿಂದ ತೈಜಸನಿಗೆ **ಪ್ರವಿವಿಕ್ತಭುಕ್** ಎಂದು ಹೆಸರು.

೬, ವಿಶ್ವನಂತೆಯೇ ತೈಜಸನಿಗೂ ಸಹ ೧೯ ಮುಖಗಳಿವೆ. ಏಳು ಅಂಗಗಳಿವೆ. ಇಂತಹ ೧೯ ಮುಖಗಳಲ್ಲಿ ಮಧ್ಯಮುಖವು **ಗಜಮುಖವು**. ಬಲಪಾರ್ಶ್ವದಲ್ಲಿ ೯ ಮುಖಗಳು ತ್ರಿವಿಧರಾದ ಪುರುಷಚೇತನರಿಗೆ ಸ್ವಪ್ನಾ

ವಸ್ಥಾ ಪ್ರೇರಕರೂಪಗಳು. ಗಜಮುಖದ ಎಡಪಾರ್ಶ್ವಕ್ಕೆ ೯ ಮುಖಗಳು ಸ್ತ್ರೀಚೇತನರಲ್ಲಿ ವಿದ್ಯಮಾನರಾದ ತ್ರಿವಿಧಚೇತನರಿಗೆ ಸ್ವಪ್ನಾವಸ್ಥಾಪ್ರೇರಕ ರೂಪಗಳು.

ಪ್ರಮಾಣ

೧. ಚಿತ್ತಜೇಂದ್ರೌ ಚ ಮನಸೀತಿ

—ಇತಿ ಸಾರಸಂಗ್ರಹೇ||

೨. ಬುದ್ಧೌ ಉಮಾಂಹಕೃತೌ ಚ ರುದ್ರಶ್ಚಿತ್ತೇ ಖಗೇಶ್ವರಃ|
ಶೇಷೋಸ್ತಿ ಚೇತನೇ ಸರ್ವಮನೋವೃತ್ತಿಂ ಪ್ರವರ್ತಯನ್ನಿತಿ||

—ಇತಿ ತತ್ತ್ವಕೌಸ್ತುಭೇ

೩. ಏಕೋನವಿಂಶತಿ ಮುಖೌ ವಿಶ್ವತೈಜಸನಾಮಕೌ|
ಸವ್ಯಾಪಸವ್ಯಗಾನ್ಯೇವ ಪುರುಷಸ್ಯಾನಿ ಮಧ್ಯಗೇ||
ಗಜಸ್ಯಂತು ತಯೋರ್ಮಧ್ಯೇ ಮುಖಾನಾಂ ಕೃತ್ಯಮುಪ್ಯತೇತಿ||

—ಇತಿ ಪ್ರಕಾಶಸಂಹಿತಾಯಾಂ ||೧೩||

## ಪದ್ಯ ೧೪

ಮೂಲ

ಜ್ಞಾನಮಯತೈಜಸನು ಹೃದಯ|
ಸ್ಥಾನಯೈದಿಸಿ ಪ್ರಾಜ್ಞನೆಂಬಭಿ|
ಧಾನದಿಂ ಕರೆಸುತ್ತ ಚಿತ್ಸುಖವ್ಯಕ್ತಿಯನೆ ಕೊಡುತ||
ಆನತೇಷ್ಟಪ್ರದನು ಅನುಸಂ|
ಧಾನವೀಯದೆ ಸುಪ್ತಿಯೈದಿಸಿ|
ತಾನೆ ಪುನರಪಿ ಸ್ವಪ್ನ ಜಾಗ್ರತೆಯೀವ ಚೇತನಕೆ|| ||೧೪||

**ಅವತರಣಿಕೆ**

ಪೂರ್ವೋಕ್ತ ಪದ್ಯಗಳಲ್ಲಿ ವಿಶ್ವ ಮತ್ತು ತೈಜಸನಾಮಕ ಭಗವದ್ರೂಪಗಳ ವ್ಯಾಪಾರ ವಿಶೇಷಗಳನ್ನು ತಿಳಿಸಿ, ಪ್ರಸಕ್ತ ಸಂಧಿಗತ **ಜ್ಞಾನಮಯ ತೈಜಸನು** ಎಂಬ ೧೪ನೆಯ ಪದ್ಯದಿಂದ ಪ್ರಾಜ್ಞನಾಮಕ ಶ್ರೀಪರಮಾತ್ಮನ ಕ್ರಿಯಾವಿಶೇಷಗಳನ್ನು ವಿವರಿಸುತ್ತಾರೆ.

ಜ್ಞಾನಾನಂದಮಯನಾದ ತೈಜಸನು ಜೀವರ ಕಂಠಪ್ರದೇಶದಿಂದ ಹೃದಯಸ್ಥಾನಕ್ಕೆ ಬಂದಾಗ **ಪ್ರಾಜ್ಞ** ಎಂಬ ಹೆಸರಿನಿಂದ ಕರೆಯಿಸುತ್ತಾನೆ. ಅಂತಹ ಪ್ರಾಜ್ಞನ ಆಲಿಂಗನದಲ್ಲಿ ಜೀವರು ಇರುವಾಗ ಜೀವರಿಗೆ ಗಾಢನಿದ್ರೆ ಎಂಬ ಅವಸ್ಥಾ ವಿಶೇಷವು ಉಂಟಾಗುವುದು. ಈ ಅವಸ್ಥೆಗೆ **ಸುಷುಪ್ತಿ** ಎಂದು ಹೆಸರು. ಇಂತಹ ಸುಷುಪ್ತ್ಯವಸ್ಥೆಯಲ್ಲಿ ಮೋಕ್ಷಸದೃಶವಾದ ಸುಖನ್ನು (ಚಿತ್ಸುಖ) ಕಿಂಚಿತ್ ಜೀವರಿಗೆ ಕೊಡುವನು. ಪುನಃ ಆ ಪ್ರಾಜ್ಞನು ಕಂಠಕ್ಕೆ ಬಂದಾಗ, ತೈಜಸನೆಂದೆನಿಸಿ ಸ್ವಪ್ನಾವಸ್ಥೆಯನ್ನೂ ನಂತರ ಬಲಗಣ್ಣಿನ ತುದಿಯ ಸ್ಥಾನವನ್ನೈದಿ ವಿಶ್ವನಾಮಕನಾಗಿ ಜಾಗ್ರದವಸ್ಥೆಯನ್ನೂ ಚೇತನರಿಗೆ ಕೊಡುವನು ॥೧೪॥

**ಪ್ರತಿಪದಾರ್ಥ**

**ಜ್ಞಾನಮಯ**＝ಜ್ಞಾನಸ್ವರೂಪನಾದ, **ತೈಜಸನು**＝ತೈಜಸನಾಮಕ ಶ್ರೀಪರಮಾತ್ಮನು, **ಹೃದಯಸ್ಥಾನಯೈದಿಸಿ**＝ಜೀವರ ಹೃದಯಸ್ಥಾನವನ್ನು ಸೇರಿ, **ಪ್ರಾಜ್ಞನೆಂಬ**＝ಪ್ರಾಜ್ಞ ಎಂತೆನ್ನುವ, **ಅಭಿಧಾನದಿಂ**＝ಹೆಸರಿನಿಂದ, **ಕರಿಸುತ್ತ**＝ಕರೆಯಲ್ಪಡುವವನಾಗಿ, **ಚಿತ್ಸುಖ**＝ಜೀವರ ಸ್ವರೂಪಗತ ಸುಖಕ್ಕೆ ಸದೃಶವಾದ ಆನಂದವನ್ನು (ಕಿಂಚಿತ್ ಸ್ವರೂಪಾನಂದ ಸುಖ), **ವ್ಯಕ್ತಿಯನೆ ಕೊಡುತ**＝ಆ ಸುಖದ ಪ್ರಕಟಣಾರೂಪವಾದ ಅನುಭವವನ್ನು (ಅಭಿವ್ಯಕ್ತಿ) ನೀಡುತ್ತಾ, **ಆನತ**＝ಶರಣಾಗತರಾದವರ **ಇಷ್ಟ**＝ಅಭಿಲಾಷೆಗಳನ್ನು, **ಪ್ರದನು**＝ಸಲ್ಲಿಸುವವನಾಗಿ (ಶರಣರಾದ ಭಕ್ತಜನರ ಇಷ್ಟಾರ್ಥಪ್ರದನಾಗಿ), **ಅನುಸಂಧಾನವೀಯುದೆ**＝ವಿಶ್ವನೇ ತೈಜಸನಾಗಿ,

ತೈಜಸನೇ ಪ್ರಾಜ್ಞನಾಮಕನಾಗಿ ಹೃದಯಸ್ಥಾನಕ್ಕೆ ಬಂದು ಗಾಢನಿದ್ರಾವಸ್ಥೆಯನ್ನು ಜೀವರಿಗೆ ಕೊಡುತ್ತಾ, ಅಂತಹ ಸುಷುಪ್ತ್ಯವಸ್ಥೆಯಲ್ಲಿ ಮೋಕ್ಷಾನಂದ ಸದೃಶವಾದ ಸುಖವನ್ನು ಕಿಂಚಿತ್ ಅಭಿವ್ಯಕ್ತಿ ಮಾಡುತ್ತಾನೆ ಎಂಬ ಈ ಉತ್ತಮ ಜ್ಞಾನವನ್ನು ಜೀವರಿಗೆ ಕೊಡದೇ(ಸುಷುಪ್ತ್ಯವಸ್ಥಾಕಾಲದಲ್ಲಿ ಅನುಭವಿಸುವ ಅಲೌಕಿಕ ಆನಂದಕ್ಕೆ ಪ್ರಾಜ್ಞನೇ ಕಾರಣ ಎಂಬುದು ಜೀವರಿಗೆ ಆ ಕಾಲ ಮತ್ತು ಅವಸ್ಥೆಗಳಲ್ಲಿ ತಿಳಿಯುವುದಿಲ್ಲ). **ಸುಷುಪ್ತಿಯನೈದಿಸಿ**=ಗಾಢ ನಿದ್ರಾವಸ್ಥೆಯನ್ನು ಕೊಟ್ಟು. **ತಾನೆ**=ಆ ತೈಜಸನಾಮಕ ಶ್ರೀಪರಮಾತ್ಮನೇ, **ಪುನರಪಿ**=ಪುನಃ, **ಸ್ವಪ್ನ**=ಪ್ರಾಜ್ಞನನ್ನು ಬಿಟ್ಟು ಜೀವನ ವ್ಯಾಪ್ತಿಸಹಿತ ಕಂಠಸ್ಥಾನಸೇರಿ ಸ್ವಪ್ನಾವಸ್ಥೆಯನ್ನೂ, **ಜಾಗ್ರತಿ**=ದಕ್ಷಿಣಾಕ್ಷಿಯಸ್ಥಾನಕ್ಕೆ ಜೀವನ ಪ್ರಕಾಶತ್ತೋವ್ಯಾಪ್ತಿಯನ್ನು ತೆಗೆದುಕೊಂಡು ಬಂದು ಜಾಗ್ರದವಸ್ಥೆಯನ್ನು, **ಚೇತನಕೆ**=ಆ ಜೀವನಿಗೆ, **ಈವ**=ತಂದುಕೊಡುವನು ॥೧೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪ್ರಾಜ್ಞನಾಮಕ ಪರಮಾತ್ಮನ ವಿಚಾರವೂ, ನಿದ್ರಾವಿಚಾರವೂ ಹೇಳತಾರೆ.

ಜ್ಞಾನಮಯ–ಸರ್ವಪ್ರಾಣಿಗಳಿಗೆ ಸ್ವಪ್ನಕಾಲದಲ್ಲಿ ಬಾಹ್ಯಇಂದ್ರಿಯ ಜ್ಞಾನದಿಂದ ಶೂನ್ಯವಾಗಿ, ಮನೋಜ್ಞಾನವೇ ಪ್ರಚುರವಾಗಿ ಇರುತ್ತದೆ. ಇಂಥಾ ಜ್ಞಾನಯುಕ್ತರಾದ ಜೀವನವ್ಯಾಪ್ತಿಯನ್ನು ದೇವತೆಗಳನ್ನು ನುಂಗಿ, ಉದರದಲ್ಲಿ ಇಟ್ಟು, ತೈಜಸನು–ರಜೋಗುಣಗತನಾದ ತೈಜಸನು, ಹೃದಯಸ್ಥಾನಯೈದಿಸಿ–ಹೃದಯಸ್ಥಾನಗತ ತಮೋಗುಣಾಂತರ್ಗತ ಪ್ರಾಜ್ಞನ್ನ ಸೇರಿ. ತಾನು ನುಂಗಿದ ಜೀವನ, ದೇವತೆಗಳ, ಪ್ರಾಜ್ಞನ ವಶದಲ್ಲಿ ಐದಿಸುತ್ತಾನೆ. ಐದಿಸಿ ತಾನು ಪ್ರಾಜ್ಞನಲ್ಲಿ ಏಕೀಭವಿಸತಾನೆ. ನಂತರ, ಆನತೇಷ್ಟಪ್ರದನು–ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಛಂಧಾಗಿ ವಂದನ ಮಾಡತಕ್ಕ ಭಕ್ತರಿಗೆ ಇಷ್ಟ

ಪ್ರದನಾದ ಪ್ರಾಜ್ಞನೆಂಬಭಿಧಾನದಿಂ ಕರೆಸುತ್ತಾ, ಪ್ರಾಜ್ಞ ಎಂತ ನಾಮ ಪಡೆದ, ಚಿತ್ಸುಖ-ಪ್ರಾಜ್ಞನಾಮಕ ಶ್ರೀಪರಮಾತ್ಮ ಜೀವನಸ್ವರೂಪಸುಖಕ್ಕೆ ಸದೃಶವಾದ ಸುಖವನ್ನು ವ್ಯಕ್ತಿಯನೆ ಕೊಡುತ-ವ್ಯಕ್ತಿಯನ್ನು ಮಾಡಿ ಕೊಡುತ್ತಾ,ಅನುಸಂಧಾನವೀಯದೆ-ಆ ನಿದ್ರಾಸುಖ ಇಂಥಾದ್ದೆಂದು ಆ ನಿದ್ರಾ ಕಾಲದಲ್ಲಿ ಅನುಸಂಧಾನವನ್ನು ಮಾಡತಕ್ಕ ಜ್ಞಾನಕೊಡದೇ, ಸುಪ್ತಿ ಐದಿಸಿ-ಇಂಥಾ ನಿದ್ರಾವನ್ನು ಐದಿಸಿ, ಚೇತನಕೆ-ಸುಷಿಪ್ತಿ ಐದಿದ ಜೀವರುಗಳಿಗೆ, ಪುನರಪಿ-ಪುನಶ್ಚ ಮತ್ತು, ತಾನೇ-ತೈಜಸ ಮೂರುತಿಯಾದ ಶ್ರೀಪರಮಾತ್ಮನೇ, ಸ್ವಪ್ನ-ಪ್ರಾಜ್ಞನ್ನ ಬಿಟ್ಟು ಜೀವನವ್ಯಾಪ್ತಿಯನ್ನು ತೆಗೆದುಕೊಂಡು, ಕಂಠ ಸ್ಥಾನಕ್ಕೆ ಐದಿಸಿ, ಸ್ವಪ್ನಕಾರ್ಯ ನಡೆಸತಾನೆ. ತೈಜಸನ ಕೂಡಿ ಸೇರಿ ಇರುವ ವಿಶ್ವ ಜೀವನವ್ಯಾಪ್ತಿಯನ್ನು ತೆಗೆದುಕೊಂಡು, ದಕ್ಷಿಣಾಕ್ಷಿಮುಖಸ್ಥಾನಕ್ಕೆ ಬಂದು, ಜೀವನವ್ಯಾಪ್ತಿ ಸ್ಥೂಲದೇಹೇಂದ್ರಿಯಾದಿಗಳಲ್ಲಿ ಸೇರಿಸತಾನೆ. ಜಾಗ್ರತಿಯ-ಜಾಗ್ರತೆಯನ್ನು, ಈವ-ಕೊಡೋವನಾಗತಾನೆ.

## ವಿಶೇಷಾರ್ಥ

ವ್ಯಕ್ತಿಮಾಡಿಕೊಡತಾನೆ-ಎಂದರೆ, ಸ್ವಪ್ನವು ಜಾಗ್ರತ್ಕಾಲದ ವಾಸನಾ, ನಿದ್ರಾ-ಎಂಬುದು ಜಾಗ್ರತ್ಕಾಲದ ವಾಸನಾ ಅಲ್ಲ. ಆದ್ದರಿಂದ ವ್ಯಕ್ತಿಶಬ್ದ ಪ್ರಯೋಗವು. ಸುಖದುಃಖಾದಿಗಳು ಇಂದ್ರಿಯ ಆಶ್ರಯಗಳು ಹ್ಯಾಂಗೋ ನಿದ್ರಾಸುಖ ಎನತಕ್ಕದ್ದು ತಮೋಗುಣವನ್ನು ಆಶ್ರಯಿಸಿ ಇದೆ. ಅದು ಜೀವನವ್ಯಾಪ್ತಿ ತಮೋಗುಣ ಸೇರಿದ ನಂತರ ಆಗ್ಗೆ ಆಗತಕ್ಕದ್ದು. ಅದು ಜೀವನದ್ವಾರಾ ಪ್ರಯತ್ನ ಮಾಡಿಸಿ ಆಗತಕ್ಕದ್ದಲ್ಲ. ಈ ಪ್ರಕಾರ ಇದ್ದದ್ದ ನನ್ನು ವ್ಯಕ್ತಮಾಡಿಕೊಡುತ್ತಾನೆ.

ಅನುಸಂಧಾನ ಮಾಡತಕ್ಕ ಜ್ಞಾನ ಕೊಡದೇ ಎಂದರೆ, ಮಧುರಪದಾರ್ಥ ಜಿಹ್ವೆಗೆ ಸ್ಪರ್ಶವಾದರೆ, ಮಧುರ ಎಂತ ಹೇಳತಾನೆ. ತಜ್ಜನಿತ ಸುಖ ಎಂಥಾ ದ್ದೆಂದರೆ-ಅನುಸಂಧಾನಕ್ಕೆ ಬರುವುದಿಲ್ಲ. ತದ್ವತ್ ನಿದ್ರಾಸುಖ. ಆಕಾಲಕ್ಕೆ ಅನುಸಂಧಾನ ಬರೋದಿಲ್ಲ. ಜಾಗ್ರತನಾದನಂತರ ತತ್ಪೂರ್ವದ ನಿದ್ರಾಸುಖ ಸಾಮಾನ್ಯವಾಗಿ ಸುಖತ್ವೇನ ಅನುಸಂಧಾನಕ್ಕೆ ಬರುತ್ತದೆ. ಆ ನಿದ್ರಾಕಾಲಕ್ಕೆ

ಮನೋವೃತ್ತಿಗಳೊಳಗೆ ಅಂತಃಕರಣ ವೃತ್ತಿ ಮಾತ್ರ ಇರುತ್ತದೆ. ಮನಸ್ಸಿನ ಕಾರ್ಯ ಸ್ವಪ್ನ, ಅಂತಃಕರಣವೃತ್ತಿಕಾರ್ಯ ಸುಖಭೋಗ ಮಾತ್ರವೇ ಎಂತ ತಾತ್ಪರ್ಯ.

ಪ್ರಮಾಣ

ಜೀವಪ್ರಕಾಶಮಾದಾಯ ತೈಜಸೋ ವಿಶ್ವಸಂಯುತಃ ।
ಪ್ರಾಜ್ಞೇನೈಕ್ಯಂ ಯದಾ ಯಾಂತಿ ಸುಷುಪ್ತಿಃ ಪ್ರಾಣಿನಾಂತದಾ।
ಗಿಳಿತ್ವಾ ಜೀವಮಾಖ್ಯೇನ ಮುಖ್ಯ ಪ್ರಾಣಮುಪಾಗತಃ॥
—ಷೋಡಶಾಖ್ಯ ಗ್ರಂಥ ಪ್ರಮಾಣ॥

ತತಃ ಪ್ರಾಜ್ಞಾ ಪರನಾಮಕಸ್ಯ ಅಗ್ರೇಶಸ್ಯ ಅತ್ಯಂತ ಸಮೀಪಸ್ಥೋ
ಜೀವಃ ತೈಜಸಾಂತರ್ಗತೋ ಭವತಿ।
ತೇನ ಚ ಭಗವತ್ಸನ್ನಿಧಾನ ವಿಶೇಷಣ ಜೀವಸ್ವರೂಪ ಸುಖಮಭಿವ್ಯಜ್ಯತೇ॥
ತಾದೃಶಸುಖಂ ಅನುಭವಸ್ತು ಜೀವೋ ಜಾಗ್ರದವಸ್ಥಾಕಾಲೀನಂ
ಶ್ರಮ ಚಿಂತನಾದಿಕಂ ವಿಸ್ಮೃತ್ಯ ಕೇವಲಂ
ಆನಂದನಿರ್ಭರೋ ಮುಕ್ತಪದವತಿಷ್ಠತೇ॥
ತದಾ ಸ್ವಾತ್ಮಾನಂ ಕಾಲಂ ಅಜ್ಞಾನಂ ಸುಪ್ತ್ಯವಸ್ಥಾಂ
ಸುಖಂ ಚೇತಿ ತದನ್ಯಂ ನ ಜಾನಾತಿ॥
ಸೇಯಂ ಸುಪ್ತ್ಯವಸ್ಥೇತ್ಯುಚ್ಯತೇ॥

೧. ಜಾಗ್ರದವಸ್ಥಾಕಾರ್ಯ ಸತ್ತ್ವಗುಣದ್ದು. ವಿಶ್ವಸತ್ತ್ವಗುಣಾಂತರ್ಗತನಾಗಿ ದಕ್ಷಿಣಾಕ್ಷಿಮುಖದಲ್ಲಿದ್ದಾನೆ.

೨. ಸ್ವಪ್ನಕಾರ್ಯ ರಜೋಗುಣದ್ದು. ತೈಜಸ ರಜೋಗುಣಾಂತರ್ಗತನಾಗಿ ಕಂಠಸ್ಥಾನದಲ್ಲಿ ಇರತಾನೆ.

೩. ಸುಷುಪ್ತಿ ತಮೋಗುಣದ್ದು. ಪ್ರಾಜ್ಞನು ತಮೋಗುಣಾಂತರ್ಗತನಾಗಿ ಹೃದಯಾಕಾಶದಲ್ಲಿ ಇರತಾನೆ ॥೧೪॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಜ್ಞಾನಸ್ವರೂಪನಾದ ತೈಜಸನಾಮಕ ಪರಮಾತ್ಮನು ಕಂಠಸ್ಥಾನದಲ್ಲಿದ್ದು ಸ್ವಪ್ನಾವಸ್ಥೆಯನ್ನು ಕೊಡಿಸುವನು. ಅಲ್ಲಿಂದ ಜೀವರನ್ನು ತನ್ನೊಳಗೆ ಇಟ್ಟು ಕೊಂಡು ಹೃದಯಸ್ಥಾನಕ್ಕೆ ಬರುವನು. ಇದೇ ತೈಜಸ ಪರಮಾತ್ಮನೇ ಪ್ರಾಜ್ಞನಾಮಕನಾಗಿ ಹೃದಯಸ್ಥಾನದಲ್ಲಿರುವನು. ಅಲ್ಲಿಗೆ ಜೀವನಿಂದ ಕೂಡಿ ತೈಜಸನು ಬಂದಕೂಡಲೇ, ಪ್ರಾಜ್ಞನು ತನ್ನ ಆಲಿಂಗನದಿಂದ ಸುಷುಪ್ತ್ಯವಸ್ಥೆಯನ್ನು (ನಿದ್ರೆಯನ್ನು) ಕೊಡಿಸಿ, ಮುಕ್ತಿಯೋಗ್ಯರಿಗೆ ಸ್ವರೂಪಾನಂದವನ್ನು ಸ್ವಲ್ಪಮಟ್ಟಿಗೆ ಅಭಿವ್ಯಕ್ತಿ ಮಾಡಿಸುವನು. ಪ್ರಾಜ್ಞನಾಮಕನಾದ ಪರಮಾತ್ಮನ ಆಲಿಂಗನವೇ ಸುಷುಪ್ತ್ಯವಸ್ಥೆ. ಆಗಿನ ಸುಖವೇ ಸ್ವರೂಪಸುಖವು. ಜೀವರಿಗೆ ಸಾಕ್ಷಾತ್ತಾಗಿ ಪರಮಾತ್ಮನ ಆಲಿಂಗವೇ ದೊರಕುವುದಿಲ್ಲ. ವಾಯುದೇವರು ಜೀವನನ್ನು ನುಂಗಿ ರಮಾದೇವಿಯರಲ್ಲಿ ಪ್ರವೇಶಮಾಡುವರು. ರಮಾಸಮೇತ ತೈಜಸನು ಪ್ರಾಜ್ಞನಲ್ಲಿ ಬರುವನು. ಅಲ್ಲಿ ಪರಂಪರಾಸಂಬಂಧದಿಂದ ಜೀವನಿಗೆ ಪ್ರಾಜ್ಞಾನಾಲಿಂಗನ ದೊರೆಯುವುದೆಂದು ಭಾವ. ತಮೋಯೋಗ್ಯರಿಗೆ ಶಾಶ್ವತಸುಖವೇ ಇಲ್ಲದ ಕಾರಣ ಅನಿತ್ಯಸುಖವನ್ನು ಕಲ್ಪಿಸುವನು. ಸುಷುಪ್ತಿಕಾಲದಲ್ಲಿ ಇತರ ವಿಷಯಜ್ಞಾನವಾವುದೂ ಇರುವುದಿಲ್ಲ. ತೈಜಸನು ಮತ್ತೂ ಜೀವಕಳಾವಿಶಿಷ್ಟನಾಗಿ ಕಂಠಕ್ಕೆ ಬಂದು ಸ್ವಪ್ನವನ್ನು ಕೊಡಿಸುವನು. ವಿಶ್ವನು ಜೀವನಕಳೆಯಿಂದ ಕೂಡಿ ತೈಜಸನನ್ನು ಬಿಟ್ಟು ನೇತ್ರಕ್ಕೆ ಬಂದಾಗ ಜಾಗ್ರದವಸ್ಥೆಯನ್ನು ಕೊಡಿಸುವನು. ಹೀಗೆ ಒಬ್ಬನೇ ಪರಮಾತ್ಮನು ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ರೂಪಗಳಿಂದ ಜಾಗ್ರತ, ಸ್ವಪ್ನ, ಸುಷುಪ್ತಿ–ಎಂಬ ಮೂರು ಅವಸ್ಥೆಗಳನ್ನು ಜೀವರಿಗೆ ಕೊಡಿಸುವನೆಂದು ತಾತ್ಪರ್ಯ.

ಈ ವಿಷಯದಲ್ಲಿ **ಪ್ರಮಾಣವಾಕ್ಯಗಳು** ಯಾವುವೆಂದರೆ–

ಮಾನಸಸ್ಮೃತಿವಾಕ್ಯ–

ಪುನಸ್ತ್ಯೈಜಸ ಸಂಯುಕ್ತೋ ವಿಷ್ಣುರ್ಜೀವಕಳಾವೃತಃ।
ಕಂಠೇ ಸಮಾಗತೋ ಸ್ವಪ್ನಃ ಪುನರ್ಭವತಿ ತತ್ರ ಹಿ॥
ವಿಹಾಯ ತೈಜಸಂ ವಿಶ್ವೇ ಪುನಶ್ಚಕ್ಷೋಃ ಸಮಾಗತೆ।
ತದಾ ಜಾಗ್ರದವಸ್ಥಾಸ್ಯಾ ದೇವಂ ವಿಜ್ಞೇಯಮಂಜಸಾ॥

ನಿದ್ರೆ ಕಳೆದಮೇಲೆ ಪುನಃ ತೈಜಸರೂಪಿಯಾದ ಪರಮಾತ್ಮನಿಂದ ಕೂಡಿ, ವಿಶ್ವನು ಜೀವಕಳಾವಿಶಿಷ್ಟನಾಗಿ ಕಂಠಕ್ಕೆ ಬರುವನು. ಆಗ ಸ್ವಪ್ನಾವಸ್ಥೆಯು ಜೀವನಿಗೆ ಮತ್ತೂ ಬರುವುದು, ತೈಜಸನನ್ನು ಬಿಟ್ಟು ವಿಶ್ವನಾಮಕ ಪರಮಾತ್ಮನು ಮತ್ತು ಚಕ್ಷುಸ್ಸಿಗೆ ಬರಲು, ಜೀವರಿಗೆ ಜಾಗ್ರದವಸ್ಥೆ (ಎಚ್ಚರಿಕೆ) ಬರುವುದು ಎಂದು ಪ್ರಮಾಣಾರ್ಥ. ಇದೇ ಅಭಿಪ್ರಾಯವನ್ನೇ ದಾಸರಾಯರು ಇಲ್ಲಿ ಹೇಳಿರುವರು ॥೧೪॥

೩. ಭಾವದರ್ಪಣಟೀಕಾ ವ್ಯಾಖ್ಯಾನ

ಸ್ವರೂಪಸುಖವ್ಯಕ್ತಿ ಹ್ಯಾಂಗೆಂದರೆ–ಸುಷುಪ್ತಿ ಅವಸ್ಥಾದಲ್ಲಿ ಪ್ರಾಣದೇವರು ಈ ಜೀವರನ್ನು ತಾವೇ ನುಂಗಿ ಶ್ರೀರಮಾದೇವಿ ಉದರಪ್ರವೇಶ ಮಾಡುತ್ತಾರೆ. ಆ ರಮಾದೇವಿಯು ಪ್ರಾಜ್ಞದೇವರ ಆಲಿಂಗನ ಮಾಡಿಕೊಂಬೋದರಿಂದ ಮುಕ್ತಿಯೋಗ್ಯರಿಗೆ ಸ್ವರೂಪಸುಖ ಯತ್ಕಿಂಚಿದ್ವ್ಯಕ್ತಿ ಆಗುತ್ತದೆಂದು ಹೇಳುತ್ತಾರೆ–

ಜ್ಞಾನೇತಿ ಚಿತ್ಸುವ್ಯಕ್ತೀತಿ॥

ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತ ಇತಿ ಶ್ರುತೇಃ॥
ಸುಪ್ತಾವಸ್ಥಾಂ ಸುಖಂ ಚಾಪಿ ವಿನಾ ನಾನ್ಯತ್ರದರ್ಶಿಯೇರಿತಿ॥

ಮತ್ತು ರಾಜಸ ತಾಮಸರಿಗೆ ಸ್ವರೂಪಸುಖವೇ ಇಲ್ಲದ ಪ್ರಯುಕ್ತ ಅನಿತ್ಯಸುಖ ಸೃಷ್ಟಿಮಾಡಿ ತೋರಿಸುತ್ತಾನೆ–ಎಂತ ಹೇಳುತ್ತದೆ.

**ಉಕ್ತಂ ಚ ಗಾರುಡೇ:**

**ಸೃಜತ್ಯನಿತ್ಯ ಸೌಖ್ಯಂತು ಸ್ವ ಸಂಗಾತ್ತ್ವಾಮುನೇಷ್ವಜಃ।**
**ಸುಪ್ತಿಕಾಲೇತು ಭಗವಾನ್ ತತ್ಸುಖಂ ಪ್ರಾಕೃತಂ ಸ್ಮೃತಮಿತಿ॥**

ಸುಷುಪ್ತ್ಯನಂತರ ಪುನಃ ಸ್ವಪ್ನ–ಅನಂತರ ಜಾಗೃತಿ ಆಗುತ್ತದೆ. ಇದೇ ನೇಮವಾದದ್ದು.

**ಪ್ರಮಾಣ**

**ಪುನಸ್ತೈಜಸ ಸಂಯುಕ್ತೋ ವಿಷ್ಣುರ್ಜೀವ ಕಲಾವೃತಃ।**
**ಕಂಠಂ ಸಮಾಗತೇ ಸ್ವಪ್ನಃ ಪುನರ್ಭವತಿ ತತ್ರಹಿ॥**
**ವಿಹಾಯ ತೈಜಸಂ ವಿಶ್ವೇ ಪುನಶ್ಚಕ್ಷೋಃ ಸಮಾಗತೇ।**
**ತದಾ ಜಾಗ್ರದವಸ್ಥಾ ಸ್ಯಾದೇವಂ ವಿಜ್ಞೇಯಮಂಜನೇತಿ॥**
**—ಇತಿ ಮಾನಸಸ್ಮೃತ್ಯುಕ್ತೇಃ ॥೧೪॥**

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಜ್ಞಾನಮಯ–ಇತಿ। ಯತ್ರ ಸುಪ್ತಃ ನ ಕಂಚಿನ ಕಾಮಂ ಕಾಮ್ಯಯತೇ ನ ಕಂಚಸಿ ಸ್ವಪ್ನಂ ಪಶ್ಯತಿ ತತ್ ಸುಷುಪ್ತಮ್॥ ಸುಷುಪ್ತಸ್ಥಾನ ಏಕೀಭೂತಃ ಪ್ರಜ್ಞಾನಘನ ಏವ ಆನಂದಮಯಃ ಹ್ಯಾನಂದಭುಕ್ ಚೇತೋಮುಖಂ ಪ್ರಾಜ್ಞಃ ತೃತೀಯಃ ಪಾದಃ॥ ಆನಂದಭೂತ್ ತಥಾ ಪ್ರಾಜ್ಞಃ ತ್ರಿಧಾ ಭೋಗಂ ನಿಬೋಧತ॥ ಸುಷುಪ್ತಂ ತು ತಮೋಜ್ಞೇಯಂ ಹರಿಂ ಪ್ರಾಪ್ಯ ತದಾವೃತಃ॥ ನ ಕಾಮಯೇತ್ ನೈವ ಪಶ್ಯೇತ್ ಜೀವಃ ಸ್ವಾತ್ಮತಮೋವಿನಾ॥ ಕಾಲಂ ಚ ತಸ್ಯ ಸ್ಥಾನಸ್ಯ ಪತಿಃ ಪ್ರಾಜ್ಞೋ ಹರಿಃ ಸ್ವಯಮ್॥ ಸ್ವಪ್ನ ಕೃತ್ವಾ ಚ್ಚಿತ್ತಗತ್ವಾತ್ ತೈಜಸಃ॥ ಬಾಹ್ಯಾಜ್ಞಾಪಕತ್ವಾತ್ ಪ್ರಾಜ್ಞಃ॥ ॥೧೪॥

## ಕನ್ನಡಾನುವಾದ

ಪ್ರಾಜ್ಞರೂಪೀ ಶ್ರೀಪರಮಾತ್ಮನ ಮಹಿಮಾವಿಚಾರವನ್ನು ತಿಳಿಸುತ್ತಾರೆ. ಜ್ಞಾನಮಯ ತೈಜಸನು ಕಂಠಪ್ರದೇಶವನ್ನು ಬಿಟ್ಟು ಹೃದಯವನ್ನು ಪ್ರವೇಶಿಸುತ್ತಾನೆ. ಆಗ ಅವನಿಗೆ ಪ್ರಾಜ್ಞನೆಂದು ನಾಮ. ಈ ಪ್ರಾಜ್ಞರೂಪವೇ ಸುಷುಪ್ತ್ಯವಸ್ಥೆಗೆ ಪ್ರೇರಕವು, ನಿದ್ರಾಕಾಲದಲ್ಲಿ ಯಾವ ಇಚ್ಛೆಯೂ ಇರುವುದಿಲ್ಲ. ಯಾವ ಸ್ವಪ್ನವನ್ನೂ ಕಾಣಲಾರ. ಇಂತಹ ಅವಸ್ಥಾವಿಶೇಷಕ್ಕೆ ಸುಷುಪ್ತಿ ಎಂದು ಹೆಸರು. ಆ ಸ್ಥಾನವು ಹೃದಯಪ್ರದೇಶವು, ಹೃದಯದಲ್ಲಿ ಪ್ರವೇಶಿಸುವ ಪ್ರಾಜ್ಞನೇ ಆನಂದಮಯನು. ಅವನು ಆನಂದವನ್ನು ಭೋಗಿಸುವನು. ಜ್ಞಾನರೂಪಿಯಾದ ಪ್ರಾಜ್ಞರೂಪವು ಪ್ರಣವಮಂತ್ರದ ಮೂರನೆಯ ಪಾದದಿಂದ ಪ್ರತಿಪಾದ್ಯವು (ಮಕಾರ ವಾಚ್ಯ ಪ್ರಾಜ್ಞ). ಇಂತು ವಿಶ್ವ, ತೈಜಸ ಮತ್ತು ಪ್ರಾಜ್ಞ–ಎಂಬ ರೂಪತ್ರಯಗಳು ಕ್ರಮವಾಗಿ ಪ್ರಣವಮಂತ್ರದ ಅ–ಉ–ಮಕಾರ ವಾಚ್ಯಗಳು. ಸುಷುಪ್ತಿವೆಂದರೆ, ಗಾಢವಾದ ತಮ (ಅಜ್ಞಾನಾಂಧಕಾರ). ಆ ಅವಸ್ಥೆಯಲ್ಲಿ ಜೀವನು ಹರಿಯಿಂದ ಆಲಂಗಿತನಾಗಿರುವನು. ಇದರಿಂದ ಕಾಲವನ್ನು ತಿಳಿಯಲಾರ. ಮನಸ್ಸಿನಲ್ಲಿದ್ದು ಸ್ವಪ್ನವನ್ನು ಉಂಟುಮಾಡುವವನು ತೈಜಸನು. ಯಾವ ಬಾಹ್ಯವ್ಯಾಪಾರವಿಲ್ಲದೆ ಏಕಾದಶೇಂದ್ರಿಯಗಳನ್ನು ಉಪರತಗೊಳಿಸಿ, ಹೃದಯಸ್ಥಾನವನ್ನು ಪ್ರವೇಶಿಸುವನು ಪ್ರಾಜ್ಞನು ॥೧೪॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ದೇಹ ಹೃದಯಸ್ಥ ಪ್ರಾಜ್ಞರೂಪ ಸ್ಮರಣೆಪ್ರಕಾರ ತಿಳಿಸುತ್ತಾರೆ, ಜ್ಞಾನ ಎಂದು. ಅಪ್ರಾಕೃತಜ್ಞಾನಸ್ವರೂಪನಾದ, ಪೂರ್ವೋಕ್ತ ತೈಜಸರೂಪನು ಜೀವರನ್ನೆಲ್ಲಾ ದೇಹ ಹೃದಯಸ್ಥಾನ ಹೊಂದಿಸಿ, ಪ್ರಾಜ್ಞಮೂರ್ತಿ ಎಂಬ ಹೆಸರುಳ್ಳವನಾಗಿ, ಮುಕ್ತಿಯೋಗ್ಯ ಜೀವರಿಗೆ ಸ್ವರೂಪಸುಖ ವ್ಯಕ್ತಿಯನ್ನೂ, ಅಯೋಗ್ಯರಿಗೆಲ್ಲಾ ಬಾಹ್ಯನಿದ್ರಾಜನ್ಯಸುಖವನ್ನೂ ಕೊಡುತ್ತಾ, ಆನತರೆಂಬ ಶರಣಾಗತ ಸಜ್ಜನರಿಗೆ ಇಷ್ಟಾರ್ಥ ಕೊಡುವಂಥಾ ಸ್ವಾಮಿಯು ಅನುಸಂಧಾನ ವೀಯದೆ, ಎಂದರೆ ಅಯೋಗ್ಯರಿಗೆ ಪೂರ್ವೋಕ್ತ ಈ ಸ್ಮರಣೆ ಕೊಡದೆ ಸುಪ್ತಿ

ಯೆಂಬ ಗಾಢನಿದ್ರೆಯನ್ನು ಕೊಟ್ಟು, ಪುನಶ್ಚ ಸ್ವಪ್ನ ಜಾಗ್ರತೆ ಸಹ ಪೂರ್ವೋಕ್ತ ವಿಶ್ವಾದಿರೂಪದಿಂದ, ಸರ್ವಜೀವರಿಗೆ ಕೊಡುತ್ತಿರುವನು ॥೧೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಹಂಕಾರ ತತ್ತ್ವಾಭಿಮಾನಿಗಳಾದ ಗರುಡ ಶೇಷ ರುದ್ರರಲ್ಲಿ ಶ್ರೀಪರಮಾತ್ಮನ ವ್ಯಾಪಾರ ವಿಶೇಷಗಳು ಮತ್ತು ಹತ್ತೊಂಭತ್ತು ಮುಖವುಳ್ಳ ತೈಜಸ ನಾಮಕನು ಜೀವರಿಗೆ ಸ್ವಪ್ನಾವಸ್ಥೆಯನ್ನು ಹೊಂದಿಸುವ ಕ್ರಮ ಇತ್ಯಾದಿ ವಿಷಯಗಳನ್ನು ಹಿಂದಿನ ಪದ್ಯದಲ್ಲಿ ತಿಳಿಸಿ, ಪ್ರಸಕ್ತ ೧೪ನೆಯ ಪದ್ಯದಿಂದ ವಿಶ್ವ, ತೈಜಸ, ಪ್ರಾಜ್ಞರ ಕಾರ್ಯ ವಿಶೇಷಗಳನ್ನು ತಿಳಿಸುತ್ತಾರೆ.

೧. ಶ್ರೀಪರಮಾತ್ಮನು ಜ್ಞಾನಾನಂದಮಯನು. ಅಪ್ರಾಕೃತ ಅಪರಿಮಿತ ಜ್ಞಾನಸ್ವರೂಪನು. ಸದಾನಂದ ಉದ್ರಿಕ್ತ ಪರಾತ್ಪರವಸ್ತುವು. ತೇಜಸ್ಸು ಎಂದರೆ ಕಾಂತಿ ಎಂದರ್ಥ. ಇಂತಹ ಜ್ಞಾನಮಯನೂ, ಸರ್ವರಿಗೂ ತೇಜೋಪ್ರದನೂ ಆದ ಶ್ರೀಪರಮಾತ್ಮನು ಜೀವರ ದಕ್ಷಿಣಾಕ್ಷಿಯ ತುದಿಯಲ್ಲಿರುವಾಗ ವಿಶ್ವನೆಂದೆನಿಸುವನು. ಇಂತಹ ವಿಶ್ವನಾಮಕ ಶ್ರೀಪರಮಾತ್ಮನು ಜೀವರಿಗೆ ಜಾಗ್ರದವಸ್ಥಾ ಪ್ರೇರಕನು. ನಾವು ಎಚ್ಚರಿಕೆಯ ಸ್ಥಿತಿಯಲ್ಲಿರುವ (ಜಾಗೃತಿ) ಜ್ಞಾನೇಂದ್ರಿಯಗಳ ದ್ವಾರಾ ವಿಷಯಸನ್ನಿಕರ್ಷದಿಂದ ವಿಷಯಭೋಗಗಳ ಅನುಭವವು ಉಂಟಾಗುವುದು. ಕರ್ಮೇಂದ್ರಿಯಗಳ ದ್ವಾರಾ ತದನುಸಾರಿ ಕ್ರಿಯಾಪ್ರವರ್ತನೆ. ಇಂತು ದೇಹಗತ ಇಂದ್ರಿಯಗಳ ದ್ವಾರಾ, ಮನಸ್ಸಿನದ್ವಾರಾ, ವಾಚನಿಕವಾಗಿ ನಡೆಯುತ್ತಿರುವ ಸಕಲ ಜಾಗ್ರದವಸ್ಥೆಯ ವ್ಯಾಪಾರಗಳೆಲ್ಲವೂ ವಿಶ್ವನಿಂದ ಪ್ರೇರಿತವಾದವು. ಇಂತಹ ವಿಶ್ವನಾಮಕ ಶ್ರೀಪರಮಾತ್ಮನು ದಕ್ಷಿಣಾಕ್ಷಿಯಿಂದ ಕಂಠಕ್ಕೆ ಪ್ರವೇಶಿಸುವನು. ಸ್ಥೂಲವಿಷಯಗಳನ್ನು ತಾನು ಬಿಂಬಕ್ರಿಯಾದ್ವಾರಾ ಉಂಡು, ಪ್ರತಿಬಿಂಬರಾದ ಜೀವರದ್ವಾರಾ ಉಣಿಸುವ ವಿಶ್ವನಿಗೆ **ಸ್ಥೂಲಭುಕ್** ಎಂದು ಹೆಸರು. ಕಂಠ ಪ್ರದೇಶದಲ್ಲಿ ತೈಜಸನಿರುವನು. ವಿಶ್ವನು ತೈಜಸನಲ್ಲಿ ಪ್ರವೇಶಿಸಿದಾಗ, ಜೀವರಿಗೆ ಸ್ವಪ್ನಾವಸ್ಥೆ ಉಂಟಾಗುವುದು. ಮನಸ್ಸು ನಾನಾಬಗೆಯ ಸಂಸ್ಕಾರಗಳ

ಕೇಂದ್ರಸ್ಥಾನವು. ಈ ಮನೋಗತಸಂಸ್ಕಾರಗಳು ವಾಸನಾರೂಪವಾಗಿ ಮನಸ್ಸಿನ ಹೃದಯಾಂತರಾಳದಲ್ಲಿ ಅವ್ಯಕ್ತವಾಗಿ ಅಡಗಿರುವುವು. ತೈಜಸನು ವಾಸನಾಮಯವಾದ ಸಂಸ್ಕಾರಗಳನ್ನು ಉಪಾದಾನಕಾರಣವನ್ನಾಗಿ ಮಾಡಿಕೊಂಡು ತತ್ಕಾಲದಲ್ಲಿ ಸ್ವಾಪ್ನಪದಾರ್ಥಗಳನ್ನು ಸೃಷ್ಟಿಸುವನು. ಈ ಸ್ವಾಪ್ನವಸ್ತುಗಳು ಸಂಸ್ಕಾರಗಳಿಗನುಗುಣವಾಗಿ ಮಾನವ, ಮೃಗ, ವೃಕ್ಷ, ಚಿತ್ರವಿಚಿತ್ರ ಪ್ರದೇಶಗಳು ಈ ರೀತಿ ನಾನಾ ಪ್ರಕಾರವಾದ ವಿವಿಧ ರೂಪಗಳಲ್ಲಿ ನಮಗೆ ಕಾಣಿಸಿಕೊಳ್ಳುವುವು, ಆಗ ದೇಹಗತ ಬಾಹ್ಯೇಂದ್ರಿಯಗಳು (ದಶೇಂದ್ರಿಯಗಳು) ಉಪರತವಾಗಿರುವುವು. ಮನಸ್ಸು ಮಾತ್ರ ಜಾಗ್ರತವಾಗಿರುವುದು. ಜ್ಞಾನಮಯ ತೈಜಸನು ಸ್ವಪ್ನಾವಸ್ಥೆಗೆ ಪ್ರೇರಕನಾಗಿ ಜೀವರ ಕಂಠಸ್ಥಾನದಲ್ಲಿದ್ದು ಸ್ವಾಪ್ನಪದಾರ್ಥಗಳನ್ನು ಮನಸ್ಸಿನದ್ವಾರಾ ಜೀವರಿಗೆ ಪ್ರದರ್ಶಿಸಿ ತತ್ಸಂಬಂಧವಾದ ಸುಖ ದುಃಖಮಿಶ್ರ ಅನುಭವಗಳನ್ನು ಕೊಡುವನು. ಇಂತಹ ಸ್ವಾಪ್ನವಸ್ತುಗಳ ಪ್ರದರ್ಶನದ ಕಾರಣವಾಗಿ ಜೀವರಿಗೆ ಆಗುವ ಅನುಭವಗಳು ಸತ್ಯ, ಇಂತಹ ಅನುಭವರೂಪವಾದ ಕಾರ್ಯಕ್ಕೆ ಕಾರಣವಾದ ಆ ಸ್ವಾಪ್ನವಸ್ತುಗಳೂ ಸತ್ಯವೇ ಆಗಿರುವುದೆಂದು **ಶ್ರೀಮದಾಚಾರ್ಯರು** ಉಪನಿಷದ್ಭಾಷ್ಯಗಳಲ್ಲಿ ಸ್ಪಷ್ಟಪಡಿಸಿರುತ್ತಾರೆ. ಅನ್ಯಮತೀಯರ ಪ್ರಕಾರ ಸ್ವಪ್ನ ಕೇವಲ ಭ್ರಮೆ. ಅದರಿಂದ ಸುಳ್ಳು ಎಂದು ಹೇಳುತ್ತಾರೆ. ಇದು ಸತ್ಯಕ್ಕೆ ದೂರವಾದ ಅಭಿಪ್ರಾಯ. ಈ ರಸಕ್ಕೆ **ಪ್ರವಿವಿಕ್ತರಸ** ಎಂದು ಹೆಸರು. ಜ್ಞಾನಮಯ ತೈಜಸನು ಪ್ರವಿವಿಕ್ತಭುಕ್ ಎಂದೆನಿಸಿ,ಸ್ವಾಪ್ನ ಪದಾರ್ಥಾಂತರ್ಗತ ಸ್ವರೂಪಗಳಲ್ಲಿ ತಾನು ಕ್ರೀಡಿಸಿ, ಬಿಂಬಕ್ರಿಯಾದ್ವಾರಾ ಜೀವರಿಗೆ ತದನುಸಾರವಾದ ಅನುಭೋಗಗಳನ್ನು ತಂದೀಯುವನು.

೨. ಅದೇ ತೈಜಸನು ಕಂಠಸ್ಥಾನವನ್ನು ಬಿಟ್ಟು, ಹೃದಯಸ್ಥಾನಕ್ಕೆ ಬರುವನು. ಹೃದಯಪ್ರದೇಶದಲ್ಲಿರುವ ಭಗವದ್ರೂಪಕ್ಕೆ **ಪ್ರಾಜ್ಞ** ಎಂದು ಹೆಸರು. ಸರ್ವಜ್ಞನಾದುದರಿಂದಲೂ ರಮಾ ಬ್ರಹ್ಮಾದಿ ಸಮಸ್ತರಿಗೂ ಜ್ಞಾನಪ್ರದನಾದುದರಿಂದಲೂ ಶ್ರೀಪರಮಾತ್ಮನಿಗೆ ಪ್ರಾಜ್ಞನೆಂದು ಹೆಸರು. ತೈಜಸನು ಹೃದಯಸ್ಥಾನಗತ ಪ್ರಾಜ್ಞನಲ್ಲಿ ಪ್ರವೇಶಿಸಿದಾಗ, ಜೀವರಿಗೆ ಗಾಢನಿದ್ರಾವಸ್ಥೆಯು ಉಂಟಾಗುವುದು. ಈ ಸ್ಥಿತಿಗೆ **ಸುಷುಪ್ತಿ** ಎಂದು ಹೆಸರು.

ಇಂತಹ ಸುಷುಪ್ತ್ಯವಸ್ಥೆಯಲ್ಲಿ ದಶೇಂದ್ರಿಯಗಳ ಜೊತೆಗೆ ಮನಸ್ಸೂ ಸಹ ಉಪರತವಾಗಿರುವುದು. ಶ್ವಾಸಕ್ರಿಯೆ, ರಕ್ತಪರಿಚಲನಾಕಾರ್ಯ, ಜೀರ್ಣ ಕ್ರಿಯೆ ಬಿಟ್ಟು ಇತರ ಇಂದ್ರಿಯಗಳ ವ್ಯಾಪಾರವಾವುದೂ ಇಲ್ಲ. ಶ್ರೀವಾಯು ದೇವರು ಈ ಸ್ಥಿತಿಯಲ್ಲಿ ಜೀವನನ್ನು ಆಲಂಗಿಸಿಕೊಂಡು ಶ್ರೀರಮಾ ಉದರ ವನ್ನು ಪ್ರವೇಶಿಸುವರು. ಅಲ್ಲಿ ಶ್ರೀರಮಾ ಪ್ರಾಜ್ಞನಾಮಕ ಶ್ರೀಪರಮಾತ್ಮ ನಿಂದ ಆಲಂಗಿತಳಾಗುವಳು. ಆಗ ಜೀವರಿಗೆ ಗಾಢನಿದ್ರಾವಸ್ಥೆಯ ಪ್ರಾಪ್ತಿ. ಇಂತಹ ಸುಷುಪ್ತ್ಯವಸ್ಥೆಯಲ್ಲಿ ಹೃದಯಸ್ಥಾನಗತ ಪ್ರಾಜ್ಞಾಭಿಧ ಶ್ರೀಪರ ಮಾತ್ಮನಿಂದ ಜೀವರಿಗೆ ಕಿಂಚಿತ್ ಸ್ವರೂಪಾನಂದದ ಸುಖವುಂಟಾಗುವುದು. ಇದನ್ನೇ ದಾಸರಾಯರು **ಚಿತ್ಸುಖವ್ಯಕ್ತಿಯನೆ ಕೊಡುತ** ಎಂದಿದ್ದಾರೆ. ಈ ಸುಖವು ಮೋಕ್ಷಾನಂದಕ್ಕೆ ಕಿಂಚಿತ್ ಸದೃಶವಾಗಿರುವುದು. ಅದೂ ಅತ್ಯಲ್ಪ ಕಾಲ. ರಾಜಸರಿಗೆ ಮತ್ತು ತಾಮಸರಿಗೆ ನಿತ್ಯಸುಖಾನಂದವಿಲ್ಲ. ಹಾಗಾದರೆ ರಾಜಸ ಹಾಗೂ ತಮೋಜೀವರಿಗೆ ಸುಷುಪ್ತಕಾಲದಲ್ಲಿ ಸುಖಾನುಭವವಾಗು ವುದು. ಇದು ಹೇಗೆ ಎಂದರೆ, ಅಘಟನಾಘಟನಶಕ್ತನಾದ ಪ್ರಾಜ್ಞನು ಆ ಜೀವರ ಅನಾದಿಕರ್ಮಪರಂಪರೆಯ ಮೂಲಕಾರಣವಾದ ಪ್ರಾಕೃತತ್ರಿಗುಣ ಗಳಲ್ಲಿ ಸತ್ತ್ವಗುಣವನ್ನು ಉಪಾದಾನ ಕಾರಣಮಾಡಿ ಕ್ಷಣಿಕವಾದ ಅನಿತ್ಯಸುಖ ವನ್ನು ಸೃಷ್ಟಿಸಿ, ಅವರಿಗೆ ಬಿಂಬಕ್ರಿಯಾದ್ವಾರಾ ಸುಖವನ್ನುಂಟುಮಾಡುವನು. ತದನಂತರ ದುಃಖಾನುಭವವೇ ಅವರಿಗೆ ಪ್ರಾಪ್ತಿ. ಅನಾದಿಲಿಂಗದೇಹಗತ ಆ ಸತ್ತ್ವಗುಣದ ಅತ್ಯಲ್ಪ ಅಂಶವು ಆ ಜೀವರಿಗೇ ಸಂಬಂಧಿಸಿದುದರಿಂದ, ಶ್ರೀಪರಮಾತ್ಮನ ವ್ಯಾಪಾರ ಕೇವಲ ಸಹಜವಾದ ಧರ್ಮವಾಗಿದೆ. ವೈಷಮ್ಯ ನೈರ್ಘೃಣ್ಯಾದಿ ದೋಷಗಳ ಸ್ಪರ್ಶ ಲವಲೇಶವೂ ಆತನಿಗಿಲ್ಲ. ಸ್ವಾಭಾವಿಕ ರೀತಿಯಲ್ಲಿಯೇ ಸಕಲ ಕ್ರಿಯಾವಿಶೇಷಗಳೂ ನಡೆಯುವುವು.

೩. ಚಿತ್ಸುಖವ್ಯಕ್ತಿಯನ್ನು ಕೊಡುವ ಪ್ರಾಜ್ಞನು **ಆನಂದರಸಭುಕ್** ಎನಿಸುವನು. ತನಗೆ ಶರಣಾಗತರಾದ ನಿಜಭಕ್ತರ ಮನೋಭೀಷ್ಟಗಳನ್ನು ಸಲ್ಲಿಸುವ ಪರಮ ಕರುಣಾಳು. ಇದರಿಂದಲೇ **ಆನತೇಷ್ಟಪ್ರದನು.** ಸುಷುಪ್ತಿ ಕಾಲದಲ್ಲಿ ಜೀವರಿಗೆ ಗಾಢನಿದ್ರಾವಸ್ಥೆ ಮಾತ್ರ. ಆಗ ಅವರಿಗೆ ಆಗುವ ಆನಂದಾನುಭವಜ್ಞಾನವಿರುವುದೇ ಹೊರತು, ಜಾಗ್ರದವಸ್ಥೆಯಲ್ಲಿ ಇರುವ

ಹಾಗೆ ನಾನೇ ಕರ್ತ ಎಂಬ ಜ್ಞಾನವಿರುವುದಿಲ್ಲ. ಆನತೇಷ್ಟಪ್ರದನಾದ ಪ್ರಾಜ್ಞನು ಇವರ ಇಂದ್ರಿಯಗಳ ದ್ವಾರಾ ನಡೆಯುವ ಕ್ರಿಯಾವಿಶೇಷ ಯಾವ ಸಂಬಂಧ ಜ್ಞಾನವನ್ನೂ ಈಯದೆ ಜೀವರಿಗೆ ಸುಷುಪ್ತಿಯನ್ನೈದಿಸುವನು. ಇಂತು ಅನುಸಂಧಾನವೀಯದೆ ಸುಷುಪ್ತಿಯನ್ನೈದಿಸುವ ಪ್ರಾಜ್ಞನು ಪುನಃ ತೈಜಸನನ್ನು ಸೇರಿದಾಗ, ಸ್ವಪ್ನಾವಸ್ಥೆ ಉಂಟಾಗುವುದು. ಆ ತೈಜಸನು ಪುನರಪಿ ದಕ್ಷಿಣಾಕ್ಷಿಯನ್ನು ಸೇರಿದಾಗ ವಿಶ್ವನೆಂದೆನಿಸಿ, ಮೊದಲಿನಂತೆ ಜೀವರಿಗೆ ಜಾಗ್ರದವಸ್ಥಾಪ್ರದನಾಗುವನು. ಇದನ್ನೇ ದಾಸರಾಯರು **ಪುನರಪಿ ಸ್ವಪ್ನಜಾಗ್ರತೆಯ ನೀವ ಚೇತನಕೆ** ಎಂದು ಪ್ರಸಕ್ತ ಪದ್ಯದಲ್ಲಿ ತಿಳಿಸಿರುತ್ತಾರೆ.

೪, ಓಂಕಾರಕ್ಕೆ ಪ್ರಣವಮಂತ್ರವೆಂದು ಹೆಸರು. ಶ್ರೀಪರಮಾತ್ಮನು ಓಂಕಾರಸ್ವರೂಪನು. ಪ್ರಣವಮಂತ್ರಪ್ರತಿಪಾದ್ಯನಾದ ಶ್ರೀಮನ್ನಾರಾಯಣನು ಅ-ಕಾರವಾಚ್ಯ ವಿಶ್ವನೆಂದೂ, ಉ-ಕಾರವಾಚ್ಯ ತೈಜಸನೆಂದೂ, ಮತ್ತು ಮ-ಕಾರವಾಚ್ಯ ಪ್ರಾಜ್ಞನೆಂದೂ ಕರೆಯಿಸುತ್ತಾನೆ. ಅ-ಕಾರವಾಚ್ಯ ವಿಶ್ವನು ದಕ್ಷಿಣಾಕ್ಷಿಯಲ್ಲಿದ್ದು, ಜೀವರಿಗೆ ಸತ್ತ್ವಗುಣ ಪ್ರವರ್ತಕನಾಗಿ ಜಾಗ್ರದವಸ್ಥೆಗೆ ಪ್ರೇರಕನಾಗಿರುವನು. ಉ-ಕಾರವಾಚ್ಯ ತೈಜಸನು ಕಂಠಪ್ರದೇಶದಲ್ಲಿದ್ದು, ರಜೋಗುಣ ಪ್ರವರ್ತನದಿಂದ ಸ್ವಪ್ನಾವಸ್ಥೆಯನ್ನುಂಟುಮಾಡುವನು. ಮ-ಕಾರವಾಚ್ಯ ಪ್ರಾಜ್ಞನು ಹೃದಯಸ್ಥಾನದಲ್ಲಿದ್ದು ತಮೋಗುಣ ಪ್ರವರ್ತಕನಾಗಿ ಸುಷುಪ್ತ್ಯವಸ್ಥಾಪ್ರೇರಕನಾಗಿರುವನು.

**ಪ್ರಮಾಣ**

ಪುನಸ್ತೈಜಸ ಸಂಯುಕ್ತೋ ವಿಷ್ಣುರ್ಜೀವ ಕಲಾವೃತಃ।
ಕಂಠಂ ಸಮಾಗತೇ ಸ್ವಪ್ನೇ ಪುನರ್ಭವತಿ ತತ್ರಹಿ॥
ವಿಹಾಯ ತೈಜಸಂ ವಿಶ್ವೇ ಪುನಶ್ಚಕ್ಷೋಃ ಸಮಾಗತೇ।
ತದಾ ಜಾಗ್ರದವಸ್ಥಾಸ್ಯಾದೇವಂ ವಿಜ್ಞೇಯಮಂಜನೇತಿ॥

—ಮಾನಸಸ್ಮೃತಿ ಪ್ರಮಾಣವಾಕ್ಯ.

| ಕ್ರ. ಸಂ. | ಭಗವದ್ರೂಪ | ವಾಚ್ಯತ್ವ | ಸ್ಥಾನ | ರಸಾನುಭವ | ಕ್ರಿಯಾವ್ಯಕ್ತಿ |
|---|---|---|---|---|---|
| ೧. | ವಿಶ್ವ | ಅ–ಕಾರವಾಚ್ಯ | ಜೀವರ ಬಲಗಣ್ಣಿನ ತುದಿ | ಸ್ಥೂಲವಿಷಯಾನುಭವ ಸ್ಥೂಲಭುಕ್ | ಜಾಗ್ರದವಸ್ಥೆ (ಎಚ್ಚರಿಕೆಯಸ್ಥಿತಿ) (ಸತ್ತ್ವಗುಣಪ್ರವರ್ತನ) |
| ೨. | ತೈಜಸ | ಉ–ಕಾರವಾಚ್ಯ | ಜೀವರ ಕಂಠಸ್ಥಾನ | ಪ್ರವಿವಿಕ್ತ ರಸಾನುಭವ ಪ್ರವಿವಿಕ್ತಭುಕ್ | ಸ್ವಪ್ನಾವಸ್ಥೆ ಮನೋವ್ಯಾಪಾರ ವಾಸನಾಮಯ ವಿಶೇಷ (ರಜೋಗುಣ ಪ್ರವರ್ತನ) |
| ೩. | ಪ್ರಾಜ್ಞ | ಮ–ಕಾರವಾಚ್ಯ | ಜೀವರ ಹೃದಯದಲ್ಲಿ | ಆನಂದರಸ ಅನುಭವ ಆನಂದಭುಕ್ | ಸುಷುಪ್ತ್ಯವಸ್ಥೆ (ಗಾಢ ನಿದ್ರಾವಸ್ಥೆ) ಸರ್ವೇಂದ್ರಿಯಗಳೂ ಉಪರತಸ್ಥಿತಿ (ತಮೋಗುಣ ಪ್ರವರ್ತನ) |

## ಪದ್ಯ ೧೫

**ಮೂಲ**

**ನಾಲಿಗೆಯೊಳಿಹ ವರುಣ ಮತ್ಸ್ಯಣು।**
**ನಾಲಿಗೆಯೊಳು ಉಪೇಂದ್ರರಿಂದ್ರರು।**
**ತಾಲು ಪರ್ಜನ್ಯಾಖ್ಯ ಸೂರ್ಯನು ಅರ್ಥಗರ್ಭನಿಹ॥**
**ಆಲಿಯೊಳು ವಾಮನ ಸುಭಾಮನ।**
**ಫಾಲದೊಳು ಶಿವಕೇಶವನು ಸುಕ।**
**ಪೋಲದೊಳಗೆ ರತೀಶಕಾಮನು ಅಲ್ಲಿ ಪ್ರದ್ಯುಮ್ನ ॥೧೫॥**

**ಅವತರಣಿಕೆ**

ಹಿಂದಿನ ಪದ್ಯದಿಂದ ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ಶ್ರೀಪರಮಾತ್ಮನ ರೂಪತ್ರಯಗಳು ಕಾರ್ಯವ್ಯಾಪ್ತಿ ಇತ್ಯಾದಿ ವಿಷಯಗಳನ್ನು ತಿಳಿಸಿ, ನಾಲಿಗೆ, ಕಿರುನಾಲಿಗೆ, ದವಡೆಗಳ ಕೀಲುಗಳು, ವಾಕ್‌ದ್ವಾರದಲ್ಲಿ, ಹಣೆ, ಕೆನ್ನೆಗಳು ಇತ್ಯಾದಿ ಇಂದ್ರಿಯಸ್ಥ ದೇವತೆಗಳು ಹಾಗೂ ಆ ದೇವತಾಂತರ್ಗತ ಭಗವದ್ರೂಪಗಳ ವಿಚಾರವನ್ನು ತಿಳಿಸುತ್ತಾರೆ–**ನಾಲಿಗೆಯೊಳಿಹ** ಎಂಬ ಪ್ರಸಕ್ತ ಸಂಧಿಗತ ೧೫ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ**

**ನಾಲಿಗೆಯೊಳು**=ನಾಲಿಗೆಯಲ್ಲಿ, **ವರುಣ**=ಜಲಾಭಿಮಾನಿಯಾದ ವರುಣದೇವರೂ, **ಮತ್ಸ್ಯ**=ವರುಣಾಂತರ್ಗತನಾಗಿ ಮತ್ಸ್ಯರೂಪೀ ಶ್ರೀಪರಮಾತ್ಮನೂ, **ಇಹ**=ಇರುವರು. **ಅಣುನಾಲಿಗೆಯೊಳು**=ಕಿರುನಾಲಿಗೆಯಲ್ಲಿ, **ಇಂದ್ರ**=ಮನೋಭಿಮಾನಿಯಾದ ಇಂದ್ರದೇವರೂ, **ಉಪೇಂದ್ರ**=ಇಂದ್ರಾಂತರ್ಗತನಾಗಿ ಉಪೇಂದ್ರನಾಮಕ ಶ್ರೀಪರಮಾತ್ಮನೂ ಇರುವರು. **ತಾಲು**=ಗಂಟಲಿನ ಒಳಪ್ರದೇಶದಲ್ಲಿ, **ಪರ್ಜನ್ಯಾಖ್ಯಸೂರ್ಯನು**=ಪರ್ಜನ್ಯನೆಂಬ ಹೆಸರಿನ ಸೂರ್ಯನೂ, **ಅರ್ಥಗರ್ಭ**=ಅವನಲ್ಲಿ ಅಂತ

ರ್ಯಾಮಿಯಾಗಿ ಅರ್ಧಗರ್ಭನಾಮಕ ಶ್ರೀಪರಮಾತ್ಮನೂ, **ಇಹ**=ಇರುವವ ರಾಗಿದ್ದಾರೆ. **ಆಲಿಯೊಳು**=ಕಣ್ಣಿನ ಒಳಭಾಗದಲ್ಲಿ, **ಸುಭಾಮುನ**= ಸುಭಾಮುನ ಎಂಬ ಹೆಸರಿನ ದೇವತೆ, **ವಾಮನ**=ಆ ದೇವತಾಂತರ್ಗತನಾಗಿ ವಾಮನನಾಮಕ ಶ್ರೀಪರಮಾತ್ಮ ಇದ್ದಾರೆ. **ಫಾಲದೊಳು**=ಹಣೆಯಲ್ಲಿ, **ಶಿವ**=ಮಹರುದ್ರದೇವರೂ, **ಕೇಶವನು**=ರುದ್ರಾಂತರ್ಗತನಾಗಿ ಕೇಶವ ನಾಮಕ ಶ್ರೀಪರಮಾತ್ಮನೂ ಇರುವರು. **ಸುಕಪೋಲದೊಳಗೆ**=ಮೃದು ವಾದ ಎರಡು ಕೆನ್ನೆಗಳಲ್ಲಿ, **ರತೀಶ**=ರತಿಪತಿಯಾದ, **ಕಾಮನು**=ಮನ್ಮ ಥನೂ **ಅಲ್ಲಿ**=ಅದೇ ಸುಕಪೋಲಗಳಲ್ಲಿ **ಪ್ರದ್ಯುಮ್ನ**=ಮನ್ಮಥನ ಅಂತ ರ್ಯಾಮಿ ರೂಪೀ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನೂ ಇದ್ದಾರೆ ॥೧೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಮತ್ತು ಜಿಹ್ವೆ ಮೊದಲಾದ ಇಂದ್ರಿಯಸ್ಥ ಭಗವದ್ರೂಪಗಳ ಹೇಳತಾರೆ.

ನಾಲಿಗೆಯೊಳು–ಬಾಯಿಯೊಳಗೆ ಇರುವಂಥ ನಾಲಿಗೆಯಲ್ಲಿ, ವರುಣ ಇಹ–ವರುಣದೇವರು ಇದ್ದಾನೆ. ಮತ್ಸ್ಯ–ಇವನ ಅಂತರ್ಗತದಲ್ಲಿ ಮತ್ಸ್ಯ ರೂಪಿ ಪರಮಾತ್ಮ ಇದ್ದಾನೆ. ಅಣುನಾಲಿಗೆಯೊಳು–ದೊಡ್ಡನಾಲಿಗೆಗೆ ಅನು ಸರಿಸಿದ ಕಂಠಗತ ಚಿಕ್ಕನಾಲಿಗೆಯಲ್ಲಿ, ಇಂದ್ರನು–ಇಂದ್ರದೇವರು ಇರೋವವ ನಾಗಿದ್ದಾನೆ. ಉಪೇಂದ್ರ–ಇವನ ಅಂತರ್ಗತನಾಗಿ ಉಪೇಂದ್ರನಾಮಕ ಶ್ರೀಪರಮಾತ್ಮ ಇದ್ದಾನೆ. ತಾಲು–ದವಡೆಗೆ ಸೇರಿದ ಕೀಲುಗಳಲ್ಲಿ, ಪರ್ಜ ನ್ಯಾಖ್ಯ ಸೂರ್ಯನು–ಪರ್ಜನ್ಯನಾಮಕ ಸೂರ್ಯದೇವನು ಇದ್ದಾನೆ. ಅರ್ಧ ಗರ್ಭನಿಹ–ಇವನ ಅಂತರ್ಗತನಾಗಿ ಅರ್ಧಗರ್ಭನಾಮಕ ಶ್ರೀಪರಮಾತ್ಮ ಇದ್ದಾನೆ. ಆಲಿಯೊಳು–ವಾಕ್ ದ್ವಾರದಲ್ಲಿ, ಸುಭಾಮುನ–ಈ ನಾಮಕ ದೇವತಾಂತರ್ಗತನಾಗಿ, ವಾಮನ–ವಾಮನದೇವರು ಇರೋವನಾಗಿ ಇದ್ದಾನೆ, ಫಾಲದೊಳು–ಹಣೆ ಒಳಗೆ, ಶಿವ ಕೇಶವನು–ರುದ್ರದೇವರು, ಇವನ ಅಂತರ್ಗತ ನಾಗಿ ಕೇಶವನಾಮಕ ಶ್ರೀಪರಮಾತ್ಮ ಇದ್ದಾನೆ, ಸುಕಪೋಲದೊಳು– ಸಮೀಚೀನವಾದ ಎರಡು ಕೆನ್ನೆಗಳಲ್ಲಿ, ರತೀಶಕಾಮನು–ರತಿದೇವೇರ ಪತಿ

ಯಾದ ಮನ್ಮಥನು ಇದ್ದಾನೆ. ಅಲ್ಲಿ ಪ್ರದ್ಯುಮ್ನ-ಇವನ ಅಂತರ್ಗತನಾಗಿ ಪ್ರದ್ಯುಮ್ನದೇವರು ಇದ್ದಾನೆ. ಭೋಜನಾದಿಗಳು, ಉಚ್ಚರಿಸತಕ್ಕ ಮಾತು ಗಳು, ಇವರ ಸಾನುಕೂಲಗಳಿಂದಲೂ ತದಂತರ್ಗತ ಪರಮಾತ್ಮನಿಂದಲೂ ನಡೀತದೆ ಎಂತ ತಾತ್ಪರ್ಯ ॥೧೫॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ನಾಲಿಗೆ ಮೊದಲಾದ ಸ್ಥಾನಗಳಲ್ಲಿ ತದಭಿಮಾನಿ ದೇವತೆಗಳಿಂದ ಸಮೇತ ನಾಗಿ ಶ್ರೀಹರಿಯು ನಾಮಾಂತರಗಳಿಂದ ವಾಸಮಾಡುವನೆಂದು ಹೇಳುತ್ತಾರೆ.

ನಾಲಿಗೆಯಲ್ಲಿ ವರುಣನು ಮತ್ಸ್ಯರೂಪಿಯಾದ ಪರಮಾತ್ಮನು ಇರು ವರು. ಕಿರುನಾಲಿಗೆಯಲ್ಲಿ ಇಂದ್ರನಿಂದ ಸಮೇತನಾಗಿ ಉಪೇಂದ್ರನಾಮಕ ಪರಮಾತ್ಮನಿರುವನು. ಗಂಟಲಿನ ಒಳಗೆ ಪರ್ಜನ್ಯನೆಂಬ ಸೂರ್ಯ ಮತ್ತು ಅರ್ಧಗರ್ಭನೆಂಬ ಪರಮಾತ್ಮನು ಇರುವರು. ಕಣ್ಣುಗಳ ಒಳಭಾಗದಲ್ಲಿ ಸುಭಾಮನ ಎಂಬ ದೇವತಾ ಸಮೇತನಾಗಿ ವಾಮನದೇವರು ಇರುವರು. ಹಣೆ ಯೊಳಗೆ ರುದ್ರದೇವರು, ಕೇಶವನಾಮಕ ಪರಮಾತ್ಮನು ಇರುವರು, ಕಪೋಲ ಗಳಲ್ಲಿ ರತಿಪತಿಯಾದ ಮನ್ಮಥನು, ಪ್ರದ್ಯುಮ್ನನಾಮಕ ಪರಮಾತ್ಮನೂ ಇರು ವರು ॥೧೫॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ನಾಲಿಗೆ ಮೊದಲು ಮಾಡಿ ಶಿಖಾಶಬ್ದಪರ್ಯಂತ ೧೧ ಅಧಿಷ್ಠಾನವಾಗು ತ್ತವೆ. ಅಲ್ಲಿ ತತ್ತನ್ನಾಮ್ನಿ ದೇವತೆಗಳ ಸಹಿತ ಶ್ರೀಹರಿಯು ನಾಮಾಂತರದಿಂದ ಇದ್ದಾನೆಂದು ಹೇಳುತ್ತಾರೆ-ನಾಲಿಗೀತಿ॥

ತಾಳು-ಅಂಗಳ. ಆಲಿ-ಬಲಗಣ್ಣಿನ ತುದಿ ॥೧೫॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಶಿಷ್ಟ ಮಾತೃಕಾನ್ಯಾಸಂ ಬ್ರೂಯತೇ- ನಾಲಿಗೆಯೊಳಿಹ-ಇತಿ॥ ಉಪೇಂದ್ರಃ ವಾಮನಃ॥ ತಾಲು-ತುಟಿ, ಆಲಿ-ಕಣ್ಣು ॥೧೫॥

ಅವಶಿಷ್ಟ ಮಾತೃಕಾನ್ಯಾಸಗತ ಅಕ್ಷರಗಳ ನ್ಯಾಸವನ್ನು ತಿಳಿಸುತ್ತಾರೆ. ನಾಲಿಗೆಯೊಳಿಹ-ಎಂಬ ಪದ್ಯದಿಂದ,

ಉಪೇಂದ್ರ-ವಾಮನ. ತಾಲು-ಕಂಠಸ್ಥಾನ. ಆಲಿ-ಕಣ್ಣು ॥೧೫॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ನಾಲಿಗೆ, ಕಿರುನಾಲಿಗೆ, ಅಡಿಗಂಟಲು, ಕಣ್ಣು, ಹಣೆ ಕೆನ್ನೆಗಳಲ್ಲಿ ಸಹ ಅಭಿಮಾನಿದೇವತೆಗಳನ್ನು ತನ್ನಿಯಾಮಕ ದೇವರ ರೂಪಗಳನ್ನೂ ಸಹ ಸ್ಮರಣಾರ್ಥ ನಿರೂಪಿಸುತ್ತಾರೆ-ನಾಲಿಗೆ ಎಂದು.

ನಾಲಿಗೆಯಲ್ಲಿ ವರುಣದೇವರು-ಅಲ್ಲಿ ಮತ್ಸ್ಯರೂಪ. ಕಿರುನಾಲಿಗೆಯಲ್ಲಿ ಇಂದ್ರ. ಅಲ್ಲಿ ಉಪೇಂದ್ರರೂಪ. ತಾಲು ಎಂಬ ಅಡಿಗಂಟಿನಲ್ಲಿ ಪರ್ಜನ್ಯ ನೆಂಬ ಸೂರ್ಯ. ಅಲ್ಲಿ ಅರ್ಧಗರ್ಭನೆಂಬ ದೇವರರೂಪ. ಆಲಿ ಎಂಬ ಕಣ್ಣಿನಲ್ಲಿ ಸೂರ್ಯ. ಅಲ್ಲಿ ವಾಮನ ಭಾಮನನೆಂಬ ದೇವರರೂಪಗಳು. ಫಾಲ ವೆಂಬ ಹಣೆಯಲ್ಲಿ ಶಿವನು. ಅಲ್ಲಿ ಕೇಶವರೂಪ. ಕಪೋಲ ಎಂಬ ಕೆನ್ನೆಯಲ್ಲಿ ರತಿಪತಿ ಕಾಮನು. ಅಲ್ಲಿ ಪ್ರದ್ಯುಮ್ನ ದೇವರನ್ನು ಈ ರೀತಿ ಚಿಂತಿಸಂದರ್ಥ ॥೧೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಾಜ್ಞನಾಮಕ ಶ್ರೀಪರಮಾತ್ಮನ ವ್ಯಾಪಾರ ವಿಶೇಷಗಳನ್ನು ಪೂರ್ವ ಪದ್ಯದಲ್ಲಿ ವಿವರಿಸಿದರು. ಪ್ರಸಕ್ತ ಸಂಧಿಗತ **ನಾಲಿಗೆಯೊಳಿಹ** ಎಂಬ ೧೫ನೆಯ ಈ ಪದ್ಯದಿಂದ, ವದನಭಾಗದಲ್ಲಿರುವ ನಾಲಿಗೆ ಇತ್ಯಾದಿ ಅಂಗಗಳಲ್ಲಿ ವಿದ್ಯಮಾನರಾಗಿರುವ ಅಭಿಮಾನಿ ದೇವತೆಗಳು, ಅವರವರ ಅಂತರ್ಯಾಮಿ ಭಗವದ್ರೂಪಗಳನ್ನು ತಿಳಿಸುತ್ತಾರೆ.

೧. ನಾಲಿಗೆಯು ಜ್ಞಾನೇಂದ್ರಿಯವು. ರಸಃಸ್ವಾದನದ್ವಾರಾ ರುಚಿಯನ್ನು ತಿಳಿಸುವುದರಿಂದ ನಾಲಿಗೆಗೆ ರಸನೇಂದ್ರಿಯವೆಂದು ಹೆಸರು. ನಾಲಿಗೆಯಲ್ಲಿ **ವರುಣನು** ಅಭಿಮಾನಿ ದೇವತೆ. ವರುಣನು ಜಲಾಭಿಮಾನಿಯು.

ರಸವು ಅಪ್‌ತತ್ತ್ವದ ತನ್ಮಾತ್ರಗುಣವು. ಉದಕದ್ವಾರಾ ರಸಾನುಭವ. ವರುಣನಲ್ಲಿ ಅಂತರ್ಯಾಮಿ ಭಗವದ್ರೂಪವು **ಮತ್ಸ್ಯನು**. ಮತ್ಸ್ಯರೂಪೀ ಶ್ರೀಪರಮಾತ್ಮನು ವರುಣಾಂತರ್ಗತನಾಗಿದ್ದು ಅಪ್‌ತತ್ತ್ವದಲ್ಲಿ ರಸಶಬ್ದವಾಚ್ಯನಾಗಿ ನಾಲಿಗೆಯದ್ವಾರಾ ಜೀವರಿಗೆ ರುಚಿಯ ಅನುಭವವನ್ನು ತಂದೀಯುವನು.

೨. ಕಿರುನಾಲಿಗೆ ಎಂಬುದು ಮುಖ್ಯಾಂಗವು. ಶಬ್ದೋಚ್ಚಾರಣೆಯು ಇದರ ಕಂಪನದಿಂದಲೇ ಉಂಟಾಗುವುದು. ಈ ಅಂಗದಲ್ಲಿ ಸುರಪತಿಯಾದ **ಇಂದ್ರದೇವರು** ಅಭಿಮಾನಿಗಳಾಗಿದ್ದಾರೆ. ಇಂದ್ರನಲ್ಲಿ **ಉಪೇಂದ್ರ**ನಾಮಕ ಶ್ರೀಪರಮಾತ್ಮನು ನಿಯಾಮಕನಾಗಿದ್ದಾನೆ. ಇಂದ್ರದೇವರು ಉಪಮನಸ್ಸಿಗೆ ಅಭಿಮಾನಿಗಳು. ಮನಸ್ಸಿನ ದ್ವಾರಾ, ತದನುಸಾರಿಯಾದ ಅಭಿಪ್ರಾಯಗಳನ್ನು ತಿಳಿಸಲು ಶಬ್ದೋಚ್ಚಾರಣೆ. ಇದು ವಾಗಿಂದ್ರಿಯದ ವ್ಯಾಪಾರವು. ಉಪೇಂದ್ರನಾಮಕನು ಇಂದ್ರದೇವರಲ್ಲಿ ನಿಯಮಕನಾಗಿದ್ದು ಕಿರುನಾಲಿಗೆಯ ವ್ಯಾಪಾರಗಳನ್ನು ಮಾಡಿ ಮಾಡಿಸಿ, ಕ್ರಿಯಾಪ್ರವರ್ತಕನಾಗಿದ್ದಾನೆ.

೩. ಗಂಟಲಿನ ಅಡಿಭಾಗಕ್ಕೆ **ತಾಲು** ಎಂದು ಹೆಸರು. ಈ ಅಂಗದಲ್ಲಿ **ಪರ್ಜನ್ಯ** ಎಂಬ ಹೆಸರಿನ ಸೂರ್ಯನಿರುವನು. ಇವನಲ್ಲಿ ಅಂತರ್ಯಾಮಿಯಾಗಿ **ಅರ್ಧಗರ್ಭ**ನಾಮಕ ಶ್ರೀಪರಮಾತ್ಮನು ಪ್ರವರ್ತಕನಾಗಿದ್ದಾನೆ. ಗಂಟಲು ಆಹಾರ ಹಾಗೂ ಶ್ವಾಸನಾಳಗಳಿಗೆ ಪ್ರವೇಶದ್ವಾರವು. ಅರ್ಧಗರ್ಭನಾಮಕ ಶ್ರೀಪರಮಾತ್ಮನು ಪರ್ಜನಾಖ್ಯ ಸೂರ್ಯಾಂತರ್ಗತನಾಗಿದ್ದು, ಈ ಅಂಗದ ಕ್ರಿಯಾವಿಶೇಷಗಳನ್ನು ಮಾಡಿ ಮಾಡಿಸುತ್ತಿರುವನು.

೪. ಕಣ್ಣಿನ ತುದಿಗೆ ಆಲಿ ಎನ್ನುವರು. ಆಲಿ ಎಂಬ ನೇತ್ರಾಗ್ರದಲ್ಲಿ **ಸುಭಾಮನ** ಎಂಬ ದೇವತೆ (ಸೂರ್ಯಗಣ) ವಿದ್ಯಮಾನನಾಗಿದ್ದಾನೆ. ಇವನಲ್ಲಿ **ವಾಮನ**ನಾಮಕ ಶ್ರೀಪರಮಾತ್ಮನು ಅಂತರ್ಗತನಾಗಿದ್ದಾನೆ. ನೇತ್ರವು ಸೌಂದರ್ಯದ ಸಾಧನಗಳಲ್ಲಿ ಒಂದು. ಬಲಿವಂಚಕನಾದ ಶ್ರೀಪರಮಾತ್ಮನ **ವಾಮನರೂಪವು** ಅತ್ಯಂತ ಸುಂದರರೂಪವು. ಸೌಂದರ್ಯ ಕಾಂತಿಯಿಂದ

ಪರಿಶೋಭಿಸುತ್ತಾ ಮಾಣವಕನಾಗಿ ವಟುವೇಷದಿಂದ ವಾಮನನು ಬಲಿಯ ಯಾಗಮಂಟಪವನ್ನು ಪ್ರವೇಶಿಸಿದನು. ವಾಮನದೇವರ ಸಾನ್ನಿಧ್ಯವಿಶೇಷ ದಿಂದಲೇ ಕಣ್ಣಿನಿಂದ ಮುಖದ ಸೌಂದರ್ಯವುಂಟಾಗುವುದು.

೫. ಹಣೆಯಲ್ಲಿ (ಫಾಲದಲಿ) ಮಹರುದ್ರದೇವರಿದ್ದಾರೆ. ರುದ್ರಾಂತ ರ್ಗತನಾಗಿ **ಕೇಶವನಾಮಕ** ಶ್ರೀಪರಮಾತ್ಮನಿರುವನು. ಫಾಲನೇತ್ರರಾದ ರುದ್ರದೇವರಲ್ಲಿ ಕೇಶವನು ವಿದ್ಯಮಾನನಾಗಿದ್ದು, ನಿಯಾಮಕನಾಗಿದ್ದಾನೆ.

೬. ಎರಡು ಕೆನ್ನೆಗಳಲ್ಲಿ (ಕಪೋಲದೊಳಗೆ) ರತಿಪತಿಯಾದ **ಮನ್ಮಥನು** ಅಭಿಮಾನಿಯಾಗಿದ್ದಾನೆ. ಕಪೋಲಗಳು ಮೃದುವಾಗಿದ್ದು, ಸೌಂದರ್ಯ ವರ್ಧಕವಾಗಿವೆ. ರತಿಪತಿ ಮನ್ಮಥನು ಅತ್ಯಂತ ರೂಪವಂತನು. ಮನ್ಮ ಥಾಂತರ್ಗತನಾಗಿರುವ ಭಗವಂತನ ರೂಪವು **ಪ್ರದ್ಯುಮ್ನ**. ಪ್ರದ್ಯುಮ್ನ ನಾಮಕ ಶ್ರೀಪರಮಾತ್ಮನು ರತಿಪತಿಯಲ್ಲಿದ್ದು, ಆ ಅಂಗದ ಕ್ರಿಯೆಗಳನ್ನು ನಿಯಮಿಸುವನು ॥೧೫॥

| ಕ.ಸಂ. | ಅಂಗ | ಅಭಿಮಾನಿದೇವತೆ | ಭಗವದ್ರೂಪ | ಕ್ರಿಯೆ |
|---|---|---|---|---|
| ೧. | ನಾಲಿಗೆ | ವರುಣ | ಮತ್ಸ್ಯ | ರಸಾನುಭವ. |
| ೨. | ಕಿರುನಾಲಿಗೆ | ಇಂದ್ರ | ಉಪೇಂದ್ರ | ವಾಕ್‌ವ್ಯಾಪಾರ. |
| ೩. | ಗಂಟಲು (ತಾಲು) | ಪರ್ಜನ್ಯಾಖ್ಯ ಸೂರ್ಯ | ಅರ್ಧಗರ್ಭ | ಆಹಾರಸೇವನೆ, ಶ್ವಾಸಗಳ ಕ್ರಿಯೆ |
| ೪. | ಕಣ್ಣಿನತುದಿ (ಅಲಿ) | ಸುಭಾಮನ | ವಾಮನ | ನೇತ್ರೇಂದ್ರಿಯವ್ಯಾಪಾರ ರೂಪವರ್ಧಕ |
| ೫. | ಹಣೆ (ಫಾಲ) | ರುದ್ರದೇವರು | ಕೇಶವ | ಆ ಅಂಗದ ಕ್ರಿಯೆ |
| ೬. | ಕಪೋಲ | ರತಿಪತಿ ಮನ್ಮಥ | ಪ್ರದ್ಯುಮ್ನ | ಕಪೋಲಗಳ ಕ್ರಿಯೆ |

## ಪದ್ಯ ೧೬

ಮೂಲ

ರೋಮಗಳಲಿ ವಸಂತ ತ್ರಿಕಕು ।
ದ್ಧಾಮ ಮುಖದೊಳಗಗ್ನಿ ಭಾರ್ಗವ ।
ತಾಮರಸಭವ ವಾಸುದೇವರು ಮಸ್ತಕದೊಳಿಹರು ॥
ಈ ಮನದೊಳಿಹ ವಿಷ್ಣು ಶಿಖದೊಳು ।
ಮಾಮಹೇಶ್ವರ ನಾರಸಿಂಹ।
ಸ್ವಾಮಿ ತನ್ನನುದಿನದಿ ನೆನೆವರಪಮೃತ್ಯುಪರಿಹರಿಪ ॥ ॥೧೬॥

ಅವತರಣಿಕೆ

ಇನ್ನು ಕೂದಲು, ಮುಖ, ಶಿರಸ್ಸು, ಮನಸ್ಸು, ಶಿಖಾದಲ್ಲಿ ಇರುವ ದೇವತೆಗಳು, ಅವರ ಅಂತರ್ಯಾಮಿ ಭಗವದ್ರೂಪಗಳ ವಿಚಾರ ತಿಳಿಸುತ್ತಾರೆ– ರೋಮಗಳಲಿ ಎಂಬ ಪ್ರಸಕ್ತ ಸಂಧಿಗತ ೧೬ನೆಯ ಈ ಪದ್ಯದಿಂದ ॥೧೬॥

ಪ್ರತಿಪದಾರ್ಥ

**ರೋಮಗಳಲಿ**=ಕೂದಲಿನ ಎಳೆಗಳಲ್ಲಿ, **ವಸಂತ**=ವಸಂತ ಋತು ವಿಗೆ ಅಭಿಮಾನಿಯಾದ ವಸಂತನಾಮಕನಾದ ದೇವತೆಯು, **ತ್ರಿ**=ಮೂರು ಸಂಖ್ಯಾಕವಾದ, **ಕಕುತ್**=ವೃಷಭಸ್ಕಂಧದಂತೆ ಶ್ರೇಷ್ಠವಾದ (ಗೂಳಿಯ ಉಬ್ಬಾದ ಹೆಗಲು), **ಧಾಮ**=ಶ್ವೇತದ್ವೀಪ, ಅನಂತಾಸನ ಮತ್ತು ವೈಕುಂಠ ಎಂಬ ಮನೆಗಳುಳ್ಳ ತ್ರಿಕಕುದ್ಧಾಮನಾಮಕನಾದ ಶ್ರೀಪರಮಾತ್ಮನು ಇರು ವನು. **ಮುಖದೊಳು**=ಬಾಯಿಯಲ್ಲಿ, **ಅಗ್ನಿ**=ಅಗ್ನಿದೇವರು, **ಭಾರ್ಗವ** =ಅಗ್ನ್ಯಂತರ್ಗತನಾಗಿ ಶ್ರೀಪರಶುರಾಮದೇವರು ಇರುವರು. **ಮಸ್ತಕ ದೊಳು**=ಶಿರಸ್ಸಿನಲ್ಲಿ, **ತಾಮರಸಭವ**=ಕಮಲೋದ್ಭವರಾದ ಬ್ರಹ್ಮ ದೇವರು, **ವಾಸುದೇವನು**=ಬ್ರಹ್ಮಾಂತರ್ಯಾಮಿಯಾಗಿ ವಾಸುದೇವ ನಾಮಕ ಶ್ರೀಪರಮಾತ್ಮನೂ, **ಇಹರು**=ಇರುವರು. **ಈ ಮನದೊಳು**

=ಮನಸ್ಸಿನಲ್ಲಿ, **ವಿಷ್ಣು**=ವಿಷ್ಣುನಾಮಕ ಶ್ರೀಪರಮಾತ್ಮನಿದ್ದಾನೆ. **ಶಿಖದೊಳು**=ಶಿಖೆಯಲ್ಲಿ, **ಉಮಾಮಹೇಶ್ವರ**=ಪಾರ್ವತೀಸಹಿತನಾಗಿ ಶ್ರೀರುದ್ರದೇವರೂ, **ನಾರಸಿಂಹ**=ಉಮಾಮಹೇಶ್ವರಾಂತರ್ಗತನಾಗಿ ಶ್ರೀನರಸಿಂಹದೇವರು ಇರುವರು. **ಸ್ವಾಮಿ**=ಅಂತಹ ಪ್ರಭುವಾದ ನರಸಿಂಹದೇವರು, **ತನ್ನ**=ತನ್ನನ್ನು, **ಅನುದಿನದಿ**=ಪ್ರತಿದಿವಸದಲ್ಲಿಯೂ, **ನೆನೆವರ**=ಭಕ್ತಿಪೂರ್ವಕ ಧ್ಯಾನಿಸುವವರ **ಅಪಮೃತ್ಯುಪರಿಹರಿಪ**=ಅಪಮೃತ್ಯುಗಳನ್ನು ಪರಿಹಾರ ಮಾಡುವನು ॥೧೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ದೇಹಗತಭಗವದ್ರೂಪಗಳನ್ನು ಹೇಳುತಾರೆ.

ರೋಮಗಳಲಿ–ದೇಹಗತ ರೋಮಗಳಲ್ಲಿ, ವಸಂತ–ವಸಂತ ಋತುವಿಗೆ ಅಭಿಮಾನಿಯಾದ ವಸಂತನಾಮಕದೇವತೆ, ಇವನ ಅಂತರ್ಗತನಾಗಿ, ತ್ರಿಕಕುದ್ಧಾಮ–ವೃಷಭಸ್ಕಂಧದೋಪಾದಿಯಲ್ಲಿ ಶ್ರೇಷ್ಠವಾದ ಮೂರಾದಂಥ ಶ್ವೇತದ್ವೀಪಾದಿ ಮನೆಗಳು ಉಳ್ಳಂಥಾದೇವರು ತ್ರಿಕಕುದ್ಧಾಮ ಎಂತ ನಾಮವುಳ್ಳವನಾಗಿ ಇರೋವನಾಗಿದ್ದಾನೆ. ಮುಖದೊಳಗಗ್ನಿ–ಎರಡು ತುಟಿಗಳ ಮಧ್ಯಪ್ರದೇಶವಾದ ಮುಖಸಾಂಕೇತವಾದ ಈ ಸ್ಥಾನದಲ್ಲಿ ಅಗ್ನಿದೇವರು ಇದ್ದಾರೆ. ಇವನಂತರ್ಗತದಲ್ಲಿ, ಭಾರ್ಗವ–ಭೃಗುಕುಲೋತ್ಪನ್ನನಾದ ಶ್ರೀಪರಶುರಾಮದೇವರು ಇದ್ದಾರೆ, ಮಸ್ತಕದೊಳು–ಶಿರಸ್ಸಿನಲ್ಲಿ, ತಾಮರಸಭವ–ಕಮಲೋದ್ಭವನಾದ ಬ್ರಹ್ಮದೇವರು ಇದ್ದಾರೆ. ವಾಸುದೇವರು ಇಹರು–ಇವನಂತರ್ಗತನಾಗಿ ವಾಸುದೇವರು ಇದ್ದಾರೆ, ಈ ಮನದೊಳು–ಈ ದೇಹದೊಳು ಅಹಂಕಾರಿಕಪ್ರಾಣನು ಇದ್ದಾನೆ, ವಿಷ್ಣು–ಇವನಂತರ್ಗತನಾಗಿ ವಿಷ್ಣುನಾಮಕ ಪರಮಾತ್ಮ ಇದ್ದಾನೆ. ಶಿಖದೊಳು ಉಮಾಮಹೇಶ್ವರ–ಶಿರಗತ ಕೂದಲುಗಳಲ್ಲಿ ಪಾರ್ವತೀಸಹಿತನಾದ ರುದ್ರದೇವರು ಇದ್ದಾರೆ. ನಾರಸಿಂಹಸ್ವಾಮಿ–ಇವನಂತರ್ಗತನಾಗಿ ನಾರಸಿಂಹದೇವರು ಇದ್ದಾರೆ. ಈ ಪ್ರಕಾರ ತನ್ನ ದೇಹ

ದಲ್ಲೂನೂ, ತಾನು ಪೂಜಾ ಮಾಡತಕ್ಕ ಪ್ರತಿಮೆಯಲ್ಲೇನೂ ಅನುಸಂಧಾನ ಮಾಡಬೇಕು. ಈ ನೃಸಿಂಹದೇವರು, ತನ್ನನುದಿನದಿ ನೆನೆವರ–ತನ್ನ ಪ್ರತಿದಿನ ದಲ್ಲೂ ಭಕ್ತಿಪೂರ್ವಕಸ್ಮರಣೆ ಮಾಡತಕ್ಕವರ, ಅಪಮೃತ್ಯುಪರಿಹರಿಪ–ಮೃತಿ ಚಿನ್ಹೆಗಳಾದ ಅಪಮೃತ್ಯುಗಳನ್ನು ಪರಿಹಾರ ಮಾಡತಾನೆ. ಸರ್ವಾನಿಷ್ಟ ಪರಿ ಹಾರ ಮಾಡತಾನೆಂತಲೂ ತಾತ್ಪರ್ಯ ॥೧೬॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ರೋಮಗಳಲ್ಲಿ ವಸಂತನು, ತ್ರಿಕಕ್ಕುದ್ಧಾಮನಾಮಕ ಪರಮಾತ್ಮನು ಇರುವರು. ಮುಖದೊಳಗೆ ಅಗ್ನಿ, ಪರಶುರಾಮರು ಇರುವರು. ಶಿರಸ್ಸಿನಲ್ಲಿ ಬ್ರಹ್ಮದೇವರು ವಾಸುದೇವಮೂರ್ತಿ ಇರುವರು. ಮನಸ್ಸಿನಲ್ಲಿ ಲಕ್ಷ್ಮೀ–ವಿಷ್ಣು ಇರುವರು. ಚಂಡಿಕೆಯಲ್ಲಿ ಪಾರ್ವತೀಪರಮೇಶ್ವರರು, ಶ್ರೀನೃಸಿಂಹ ರೂಪೀ ಪರಮಾತ್ಮನು ಇರುವರು.

ಉಗ್ರಂ ವೀರಂ ಮಹಾವಿಷ್ಣುಮ್–ಇತ್ಯಾದಿ ನೃಸಿಂಹ ಮಂತ್ರ ಗಳನ್ನು ಪ್ರತಿನಿತ್ಯವೂ ಜಪಿಸುತ್ತಾ, ಶ್ರೀನರಸಿಂಹನ ಸ್ಮರಣೆಯನ್ನು ಮಾಡು ತ್ತಿರುವವರಿಗೆ ಆಯಾ ಕಾಲದಲ್ಲಿ ಪ್ರಾಪ್ತವಾಗುವ ಅಪಮೃತ್ಯುಗಳನ್ನು ದೂರ ಮಾಡುವನು ॥೧೬॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ರೋಮೇತಿ॥ ಮೃತ್ಯುಪರಿಹರಿಪ ಎಂದರೆ, ಲಿಂಗದೇಹಾಖ್ಯ ಮೃತ್ಯು ಎಂತ ಭಾವ ॥೧೬॥

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ರೋಮ–ಇತಿ॥ ವಸಂತಮಾನೀ॥ ತಾಮರಸ–ಪದ್ಮ। ವಸಂತೇ ತ್ರಿಕಕು

ದ್ಧಾಮಾ ವಾಸುದೇವೋಽಜನೋ ಹರಿಃ॥ ಮಸ್ತೇ ಶಿಖಾಯಾಂ ಶಿವನಃ ನೃಹರಿಃ ವೀರಪುಂಗವಃ॥ ಇತಿ **ಪ್ರಭಂಜನೇ** ॥೧೬॥

**ಕನ್ನಡಾರ್ಥ**

ಈ ಪದ್ಯದಿಂದ ರೋಮಾಭಿಮಾನಿ ಇತ್ಯಾದಿ ದೇವತಾಂತರ್ಗತಭಗವದ್ರೂಪಗಳನ್ನು ತಿಳಿಸುತ್ತಾರೆ. ವಸಂತ ಎಂಬ ಕಲಾಭಿಮಾನಿ ದೇವತೆಯಲ್ಲಿ ತ್ರಿಕಕುದ್ಧಾಮ ಶಬ್ದವಾಚ್ಯನಾದ ಹರಿಯು ಇರುತ್ತಾನೆ. ಅಜನಲ್ಲಿ–ಚತುರ್ಮುಖ ಬ್ರಹ್ಮದೇವರಲ್ಲಿ ವಾಸುದೇವನಾಮಕ ಶ್ರೀಪರಮಾತ್ಮನಿರುತ್ತಾನೆ. ತಲೆಯ ಶಿಖೆಯಲ್ಲಿ ರುದ್ರನಿರುವನು. ಅವನಲ್ಲಿ ನಿಯಾಮಕನಾಗಿ ವೀರ್ಯನಿಧಿಯಾದ ಮೃತ್ಯುವಿಗೆ ಮೃತ್ಯುವೆನಿಸುವ ಶ್ರೀನರಸಿಂಹನಿರುವನು. ಈ ರೀತಿಯಲ್ಲಿ **ಪ್ರಭಂಜನ** ಎಂಬ ಗ್ರಂಥದಲ್ಲಿ ಹೇಳಿದೆ. ವಾಯುಪುರಾಣ ಅಥವಾ ವಾಯುಪ್ರೋಕ್ತವು ಪ್ರಭಂಜನ ಎಂಬ ಗ್ರಂಥದ ಹೆಸರಾಗಿರಬಹುದೆಂದು ತೋರುತ್ತದೆ ॥೧೬॥

**೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ**

ಮುಖ, ಶಿರಸ್ಸು ಚಂಡಿಕೆ ರೋಮಗಳಲ್ಲಿರುವ ಅಭಿಮಾನಿದೇವತೆಗಳನ್ನು ತನ್ನಿಯಾಮಕ ದೇವರ ರೂಪಗಳನ್ನು ಸಹ ಸ್ಮರಣಾರ್ಥ ತಿಳಿಸುತ್ತಾರೆ, ರೋಮ ಎಂದು. ರೋಮ ಎಂಬ ಮೈಮೇಲಿನ ಕೂದಲುಗಳಲ್ಲಿ ವಸಂತನೆಂಬ ಕಲಾಭಿಮಾನಿದೇವತೆ ಅಭಿಮಾನಿಯಾಗಿರುವನು. ಅಲ್ಲಿ ತ್ರಿಕಕುದ್ಧಾಮಯೆಂಬ ಮೂರು ಉತ್ಕೃಷ್ಟವಾದ ಶ್ವೇತದ್ವೀಪ. ಅನಂತಾಸನ, ವೈಕುಂಠವೆಂಬ ಮೂರರಮನೆಗಳುಳ್ಳ ದೇವರು ಇರುವನು. ಮುಖದಲ್ಲಿ ಅಗ್ನಿದೇವರು, ಅಲ್ಲಿ ಪರಶುರಾಮ. ಮಸ್ತಕವೆಂಬ ಶಿರಸ್ಸಿನಲ್ಲಿ ತಾಮರಸಭವವೆಂಬ ಬ್ರಹ್ಮದೇವರು, ಅಲ್ಲಿ ವಾಸುದೇವರೂಪನು. ಮನಸ್ಸಿನಲ್ಲಿ ವಿಷ್ಣು ಶಿಖಾ ಎಂಬ ಚಂಡಿಕೆಯಲ್ಲಿ ಉಮಾಮನೋಹರ ಶಿವನು, ಅಲ್ಲಿ ನರಸಿಂಹಮೂರ್ತಿಯು ತನ್ನ ನಿರಂತರ ಸ್ಮರಿಸುವವರ ಮೃತ್ಯು ಪರಿಹರಿಸುವನೆಂದು ಸ್ಮರಿಸಬೇಕೆಂದರ್ಥ ॥೧೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ವದನಗತ ನಾಲಿಗೆ, ಕಿರುನಾಲಿಗೆ ಇತ್ಯಾದಿ ಅಂಗಗಳಲ್ಲಿ ವಿದ್ಯಮಾನರಾಗಿರುವ ದೇವತಾವರ್ಗ. ಅವರಿಗೆ ನಿಯಾಮಕ ಭಗವದ್ರೂಪಗಳ ವಿಚಾರವನ್ನು ಹಿಂದಿನ ಪದ್ಯದಲ್ಲಿ ತಿಳಿಸಿದರೆ, ಈಗ ಪ್ರಸಕ್ತ ೧೬ನೆಯ ಪದ್ಯದಿಂದ ರೋಮ, ಬಾಯಿ ಇತ್ಯಾದಿ ಅವಯವ ವಿಶೇಷಗಳಲ್ಲಿರುವ ದೇವತೆಗಳು ತದಂತಯಾಮಿ ಭಗವದ್ರೂಪೋಪಾಸನಾಕ್ರಮ ಇತ್ಯಾದಿ ವಿಷಯಗಳನ್ನು ತಿಳಿಸುತ್ತಾರೆ.

೧. ರೋಮಗಳು ಚರ್ಮದ ಮೃದುತ್ವವನ್ನು ಕಾಪಾಡಿ ಚರ್ಮವನ್ನು ಸಂರಕ್ಷಿಸುವುವು. ಇಂತಹ ರೋಮರಾಶಿಗಳಲ್ಲಿ **ವಸಂತನಾಮಕ** ದೇವತೆಯು ಇರುವನು. ರೋಮಾಭಿಮಾನಿ ವಸಂತನು ವಸಂತಋತುವಿನ ಅಭಿಮಾನಿ ಹಾಗೂ ಕಲಾಭಿಮಾನಿಯು. ವಸಂತಋತುವಿನಲ್ಲಿ ವೃಕ್ಷಗಳು ಚಿಗುರೊಡೆದು, ಹೂವರಳಿ, ಪ್ರಕೃತಿಯು ನವಚೈತನ್ಯದಿಂದ ಮೈದುಂಬಿ ಮನೋಹರವಾಗಿರುವುದು. ಅಂತಹ ಸುಂದರ ಋತುವಿನ ಅಭಿಮಾನಿ ವಸಂತನು ಹೃನ್ಮನಗಳನ್ನು ಆಕರ್ಷಿಸುವ ಉತ್ತಮ ಕಲೆಗಳಿಗೂ ಸಹ ಅಭಿಮಾನಿಯು. ಇಂತಹ ವಸಂತನಲ್ಲಿ **ತ್ರಿಕಕುದ್ಧಾಮ** ನಾಮಕನಾದ ಶ್ರೀಪರಮಾತ್ಮನಿರುವನು. ಕಕುತ್– ಎಂದರೆ ವೃಷಭದ ಹೆಗಲಿಗೆ ಹೆಸರು. ಅದು ಉಬ್ಬಿಕೊಂಡು ಉನ್ನತವಾಗಿರುವುದು. ಅಂತೆಯೇ ವೈಕುಂಠ, ಶ್ವೇತದ್ವೀಪ ಅನಂತಾಸಗಳು ತ್ರಿಧಾಮಗಳು ಮೋಕ್ಷಸ್ಥಾನಗಳು. ಲಕ್ಷ್ಯಾತ್ಮಕವಾದ ಈ ತ್ರಿಧಾಮಗಳಲ್ಲಿ ಮುಕ್ತಯೋಗ್ಯ ಚೇತನರಿಗೆ ಮೋಕ್ಷಾನಂದವನ್ನಿತ್ತು, ಅವರನ್ನು ನಿತ್ಯಸುಖಸ್ಥಿತಿಯಲ್ಲಿ ಇಡುವುದರಿಂದ ವೈಕುಂಠಪತಿಯಾದ ಶ್ರೀಮನ್ನಾರಾಯನಿಗೆ **ತ್ರಿಕಕುದ್ಧಾಮ**ನೆಂದು ಹೆಸರು, ಈ ತ್ರಿಧಾಮಗಳು ವೃಷಭದ ಸ್ಕಂಧದಂತೆ ಉನ್ನತವಾಗಿದ್ದು ಪರಮಪದಗಳಾಗಿವೆ.

೨. ನಮ್ಮ ಬಾಯಿಯಲ್ಲಿ (ಮುಖ) ಅಗ್ನಿ ದೇವರಿದ್ದಾರೆ. ಆಹಾರದ ಪಚನಕ್ರಿಯೆ, ವಾಗ್ರೂಪವಾದ ಮಾತುಕತೆ, ಶಬ್ದೋಚ್ಚಾರಣೆ ಇತ್ಯಾದಿ

ವ್ಯಾಪಾರಗಳು ಅಗ್ನಿ ದೇವರಿಗೆ ಸೇರಿದ್ದು. ವಾಗಾಭಿಮಾನಿಯಾದ ಅಗ್ನಿಯಲ್ಲಿ ಅಂತರ್ಗತನಾಗಿ **ಶ್ರೀಪರಶುರಾಮದೇವರು** ಇದ್ದಾರೆ. ಅಗ್ನ್ಯಂತರ್ಗತ ಭೃಗುಕುಲೋತ್ಪನ್ನರಾದ ಭಾರ್ಗವನಾಮಕ ಶ್ರೀಪರಶುರಾಮನು ತನ್ನ ಪತ್ನೀ ಹರಿಣೀಸಮೇತನಾಗಿ ಬಾಯಿಯಲ್ಲಿದ್ದು, ವಾಗ್ವ್ಯಾಪಾರ, ಆಹುತಿರೂಪದಲ್ಲಿ ಆಹಾರ ಸ್ವೀಕಾರ ಇತ್ಯಾದಿ ಕಾರ್ಯಗಳನ್ನು ಅಗ್ನಿಯದ್ವಾರಾ ಮಾಡಿ ಮಾಡಿಸುವನು.

೩. ಶಿರಸ್ಸಿನಲ್ಲಿ ಬ್ರಹ್ಮರಂಧ್ರವಿದೆ. ಈ ಸ್ಥಾನದಲ್ಲಿ ಸಹಸ್ರದಳ ಯುಕ್ತವಾದ ಕಮಲವಿದೆ. ಈ ಪದ್ಮದಲ್ಲಿ ತುರ್ಯನಾಮಕ ಶ್ರೀಪರಮಾತ್ಮನಿದ್ದಾನೆ. ಈ ತುರ್ಯನೇ ಪುರುಷನಾಮಕ **ವಾಸುದೇವನು.** ಶಿರಸ್ಸಿನಲ್ಲಿ **ಚತುರ್ಮುಖಬ್ರಹ್ಮದೇವರು** ಇದ್ದಾರೆ. ಇವರನ್ನು **ತಾಮರಸಭವ** ಎಂದಿದ್ದಾರೆ ದಾಸವರ್ಯರು. ತಾಮರಸ–ಎಂದರೆ ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭಿಯಿಂದ ಉತ್ಪನ್ನವಾದ ಕಮಲವು. ಅದರಲ್ಲಿ ಉದ್ಭವರಾದವರೇ ತಾಮರಸಭವರಾದ (ಕಮಲೋದ್ಭವ) ಚತುರ್ಮುಖ ಬ್ರಹ್ಮದೇವರು. ಬ್ರಹ್ಮನಾಡಿಯು ಸುವರ್ಣಪರ್ವತವೆನಿಸಿದ ಮೇರುಪರ್ವತದ ಅಗ್ರಭಾಗ. ಇದು ಸುವರ್ಣಮಯವಾದ ಸತ್ಯಲೋಕವೆಂಬ ಬ್ರಹ್ಮದೇವರ ಸ್ಥಾನವು. ಶಿರಸ್ಸಿನಲ್ಲಿ ಸಹಸ್ರದಳಯುಕ್ತ ಕಂಜದಲ್ಲಿ ಬ್ರಹ್ಮದೇವರ ಅಂತರ್ಯಾಮಿಯಾಗಿ ಪುರುಷನಾಮಕ ವಾಸುದೇವಮೂರ್ತಿ ವಿದ್ಯಮಾನನಾಗಿದ್ದಾನೆ.

೪. ಮನಸ್ಸಿನಲ್ಲಿ **ವಿಷ್ಣು**ನಾಮಕ ಶ್ರೀಪರಮಾತ್ಮನಿದ್ದಾನೆ. ಅಹಂಕಾರ ತತ್ತ್ವದ ವೈಕಾರಿಕ ಭಾಗದಿಂದ ಮನಸ್ಸು ಉತ್ಪತ್ತಿಯಾಗಿದೆ. ಅಹಂಕಾರ ತತ್ತ್ವಾಭಿಮಾನಿಗಳಿಗೆ ನಿಯಾಮಕನಾದ ಶ್ರೀಲಕ್ಷ್ಮಿ ಮನಸ್ಸಿನಲ್ಲಿದ್ದಾಳೆ.

**ಚಿತ್ತದಲಿ ಆನಂದಸುಖವನೀವಳು ರಮಾ**–ಎಂದು ಜ್ಞಾನಿಶ್ರೇಷ್ಠರಾದ **ಶ್ರೀಪುರಂದರದಾಸವರ್ಯರು** ತಮ್ಮ ಉಗಾಭೋಗ ಒಂದರಲ್ಲಿ ತಿಳಿಸುತ್ತಾರೆ. ಪಂಚಜ್ಞಾನೇಂದ್ರಿಯಗಳ ದ್ವಾರಾ ವಿಷಯಗಳನ್ನು ಸ್ವೀಕರಿಸಿ, ಕರ್ಮೇಂದ್ರಿಯಗಳ ದ್ವಾರಾ ವ್ಯಾಪಾರಗಳನ್ನು ನಡೆಯಿಸುವ ಏಕಾದಶೇಂದ್ರಿ

ಯುವ **ಮನಸ್ಸು.** ಮನಸ್ಸಿನಿಂದ ಸ್ವೀಕೃತ ವಿಷಯಗಳು **ಚಿತ್ತ**ದಲ್ಲಿ ಸ್ಥಿರೀಕರಣಗೊಂಡು, **ಬುದ್ಧಿತತ್ತ್ವ**ದಿಂದ ಆ ವಿಷಯಸಂಬಂಧ ಜ್ಞಾನೋತ್ಪತ್ತಿಯಾಗುವುದು. ಇವೆಲ್ಲವೂ ಮನೋಗತ ಕ್ರಿಯಾವಿಶೇಷಗಳು. ಇದನ್ನು ಸರ್ವಗುಣಗಣಪರಿಪೂರ್ಣನಾದ ವಿಷ್ಣುವು ಮನಸ್ಸಂತರ್ಗತನಾಗಿದ್ದು ಮಾಡಿ ಮಾಡಿಸುವನು.

೫. ಶಿಖೆಯಲ್ಲಿ (ಚಂಡಿಕೆ) **ಉಮಾಮಹೇಶ್ವರರಿದ್ದಾರೆ.** ಪಾರ್ವತೀ ಸಹಿತನಾದ ಮಹರುದ್ರದೇವರಲ್ಲಿ ಅಂತರ್ಯಾಮಿರೂಪದಿಂದ **ನರಸಿಂಹ** ನಾಮಕ ಶ್ರೀಪರಮಾತ್ಮನಿದ್ದಾನೆ.

೬. ಇಂತಹ ರುದ್ರಾಂತರ್ಗತ ಭಾರತೀರಮಣಾಂತರ್ಗತ ನರಸಿಂಹ ದೇವರು ಮೃತ್ಯುವಿಗೆ ಮೃತ್ಯುರೂಪದಲ್ಲಿದ್ದು, ತನ್ನನ್ನು ಸದಾ ಧ್ಯಾನಿಸುವ ನಿಜಭಕ್ತರ ಅಪಮೃತ್ಯುವನ್ನು ಪರಿಹರಿಸಿ, ಕಾಪಾಡುವ **ಉಗ್ರಂ ವೀರಂ ಮಹಾವಿಷ್ಣುಮ್** ಎಂಬುದು ಶ್ರೀನರಸಿಂಹ ತಾರಕಮಂತ್ರವು ॥೧೬॥

## ಪದ್ಯ ೧೭

**ಮೂಲ**

ಮೌಳಿಯಲ್ಲಿಹ ವಾಸುದೇವನು ।
ಏಳಧಿಕನವಜಾದಿರೂಪವ ।
ತಾಳಿ ಮುಖದೊಳು ನಯನ ಶ್ರವಣಾದ್ಯವಯವಗಳಲ್ಲಿ॥
ಆಳರಸು ತಾನಾಗಿ ಸತತ ಸು ।
ಲೀಲೆಗೈಯುತಲಿಪ್ಪ ಸುಖಮಯ ।
ಕೇಳಿ ಕೇಳಿಸಿ ನೋಡಿ ನೋಡಿಸಿ ನುಡಿದು ನುಡಿಸುವನು ॥೧೭॥

**ಅವತರಣಿಕೆ**

ದೇಹಗತ ರೋಮಾದಿಗಳಲ್ಲಿ, ವದನಗತ ವಿವಿಧ ಅವಯವಗಳಲ್ಲಿ ತದಭಿ

ಮಾನಿ ದೇವತಾವರ್ಗ ತನ್ನಿಯಾಮಕ ಭಗವದ್ರೂಪಗಳನ್ನು ಹಿಂದಿನ ಪದ್ಯದಲ್ಲಿ ತಿಳಿಸಿ, ಶಿರಸ್ಸಿನಲ್ಲಿ ವಿದ್ಯಮಾನನಾಗಿರುವ ವಾಸುದೇವರೂಪೀ ಶ್ರೀಪರಮಾತ್ಮನು ಅಜಾದಿ ಅರ್ಧಗರ್ಭಪರ್ಯಂತ ಅಕಾರಾದಿ ಅಃ ವರ್ಣಪರ್ಯಂತ ಹದಿನಾರುರೂಪಗಳಿಂದ (ಏಳಧಿಕನವ) ವದನಗತ ನೇತ್ರ ಕರ್ಣಾದಿ ಅವಯವಗಳಲ್ಲಿ ತಾನೇ ಸ್ಥಿತನಾಗಿದ್ದು, ತದಾಭಿಮಾನಿ ದೇವತೆಗಳ ದ್ವಾರಾ ಜ್ಞಾನಾನಂದಮಯನಾದ ಶ್ರೀಪರಮಾತ್ಮನು ಶ್ರವಣೇಂದ್ರಿಯ ದ್ವಾರಾ ಕೇಳಿ ಕೇಳಿಸಿ, ನೇತ್ರೇಂದ್ರಿಯದ ದ್ವಾರಾ ನೋಡಿ ನೋಡಿಸಿ, ವಾಗೀಂದ್ರಿಯ ದ್ವಾರಾ ನುಡಿದು ನುಡಿಸಿ, ಬಿಂಬಕ್ರಿಯಾರೂಪವಾದ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು ಎಂದು ತಿಳಿಸುತ್ತಾರೆ **ಮೌಳಿಯಲಿಹ** ಎಂಬ ಪ್ರಸಕ್ತ ಸಂಧಿಗತ ೧೭ನೆಯ ಈ ಪದ್ಯದಿಂದ ॥೧೭॥

## ಪ್ರತಿಪದಾರ್ಥ

**ಮೌಳಿಯಲ್ಲಿ**= ಶಿರದಲ್ಲಿ(ನೆತ್ತಿಯಭಾಗ) **ಇಹ**= ವಿದ್ಯಮಾನನಾಗಿರತಕ್ಕ **ವಾಸುದೇವನು**= ವಾಸುದೇವನಾಮಕ ಶ್ರೀಪರಮಾತ್ಮನು **ಏಳಧಿಕನವ**= ಹದಿನಾರು ಸಂಖ್ಯಾಕವಾದ (ಏಳಧಿಕ–ಏಳು ಹೆಚ್ಚಾದ, ನವ–ಒಂಭತ್ತು ಅಂದರೆ ೯+೭=೧೬) **ಅಜಾದಿ**= ಅಜ ಪ್ರಾರಂಭಮಾಡಿ (ಅಂ–ಅಜಾಯನಮಃ) ಅರ್ಧಗರ್ಭ ಪರ್ಯಂತ (ಅಃ–ಅರ್ಧಗರ್ಭಾಯನಮಃ) **ರೂಪವತಾಳಿ**= ಭಗವದ್ರೂಪಗಳನ್ನು ಧರಿಸಿ, **ಮುಖದೊಳು**= ವದನಕ್ಕೆ ಸಂಬಂಧಿಸಿದ **ನಯನ**= ಎರಡು ಕಣ್ಣುಗಳು **ಶ್ರವಣ**= ಎರಡು ಕಿವಿಗಳು **ಆದಿ** ಇವೇ ಮೊದಲಾದ **ಅವಯವಗಳಲ್ಲಿ**= ಹದಿನಾರು ಅಂಗಭಾಗಗಳಲ್ಲಿ **ಆಳು**= ಆಯಾಯಾ ಅವಯವಗತ ದೇವತೆಗಳಲ್ಲಿ ಅಂತಸ್ಥಿತನಾಗಿದ್ದು ಭೃತ್ಯನಂತೆಯೂ, **ಅರಸು**= ಪ್ರಭುವಿನಂತೆ ನಿಯಾಮಕನಾಗಿಯೂ **ತಾನಾಗಿ** = ಬಿಂಬನಾದ ಶ್ರೀಪರಮಾತ್ಮನೇ ತಾನು ಸರ್ವತಂತ್ರಸ್ವತಂತ್ರನಾಗಿದ್ದುಕೊಂಡು **ಸತತ**= ಸರ್ವಕಾಲಗಳಲ್ಲಿ **ಸುಲೀಲೆ**= ಬಿಂಬಕ್ರಿಯಾದ್ವಾರಾ ಸಮೀಚೀನವಾದ ಲೀಲಾವಿನೋದಗಳನ್ನು **ಗೈಯುತಲಿಪ್ಪ**= ಮಾಡಿ ಮಾಡಿಸುತ್ತಲಿರುವನು. **ಸುಖಮಯ**= ಆನಂದಪೂರ್ಣನಾದ ಅಂತಹ

ಶ್ರೀಪರಮಾತ್ಮನು ಕೇಳಿ=ಶ್ರವಣೇಂದ್ರಿಯಗಳಿದ್ದು ತಾನೇ ಬಿಂಬರೂಪ ದಿಂದ ಶ್ರವಣಕಾರ್ಯ ಮಾಡಿ, ಕೇಳಿಸಿ=ಶ್ರವಣೇಂದ್ರಿಯಾಭಿಮಾನಿ ದೇವತೆ ಗಳಲ್ಲಿದ್ದು ಬಿಂಬಕ್ರಿಯಾದ್ವಾರಾ ಕೇಳುವಂತೆ ಮಾಡಿ, ನೋಡಿ=ನೇತ್ರೇಂದ್ರಿ ಯಗಳಲ್ಲಿದ್ದು ತಾನೇ ನೋಡಿ. ನೋಡಿಸಿ=ಚಕ್ಷುರಿಂದ್ರಿಯಾಭಿಮಾನಿ ದೇವತೆಗಳ ದ್ವಾರಾ ನೋಡಿಸಿ, ನುಡಿದು=ವಾಗಿಂದ್ರಿಯ ಸ್ಥಿತನಾಗಿ ತಾನೇ ಬಿಂಬರೂಪದಿಂದ ನುಡಿದು, ನುಡಿಸುವವನು=ವಾಗಿಂದ್ರಿಯಾಭಿಮಾನಿ ದೇವತೆಗಳಲ್ಲಿ (ಪ್ರತಿಬಿಂಬ) ಬಿಂಬಕ್ರಿಯಾದ್ವಾರಾ ಪ್ರತಿಬಿಂಬದಲ್ಲಿದ್ದು ನುಡಿಸು ವವನು ॥೧೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಈ ದೇಹದಲ್ಲಿ ಆಗತಕ್ಕ ಕ್ರಿಯಾದಿ ಕರ್ಮಗಳ ಹೇಳತಾರೆ.

ಮೌಳಿಯಲ್ಲಿಹ–ಶಿರದಲ್ಲಿ ಇರತಕ್ಕ, - ವಾಸುದೇವನು–ಹದಿನಾರನೇ ಶ್ಲೋಕದಲ್ಲಿ ಹೇಳಿದ ವಾಸುದೇವನು, ಏಳಧಿಕನವ–ಒಂಭತ್ತು ಏಳು ಎರಡು ಸೇರಿಸಿದರೆ ತೊಂಭತ್ತೇಳು ಆಗತದೆ. ಇಲ್ಲದಿದ್ದರೆ ಅಧಿಕ ಶಬ್ದ ಕೊಡೋ ದಿಲ್ಲ. ತೊಂಭತ್ತೇಳು ಎಂತಲೇ ಮಾಡಬೇಕು. ಜಾತಿರೂಪವತಾಳಿ– ತೊಂಭತ್ತೇಳು ವಾಸುದೇವರೂಪಗಳು ಅಂಶರೂಪಗಳೆಂದು ತಾತ್ಪರ್ಯ. ಅಜಾದಿ ಐವತ್ತೊಂದು ರೂಪಗಳು ಮಾತೃಕಾನ್ಯಾಸ ರೀತ್ಯಾ ದೇಹದಲ್ಲಿ ಇದ್ದಾವೆ. ಇಪ್ಪತ್ನಾಲ್ಕು ಚತುರ್ವಿಂಶತಿ ತತ್ತ್ವಗತ ಕೇಶವಾದಿ ರೂಪಗಳು, ಹನ್ನೆರಡು ಶಕ್ತ್ಯಾದಿ ಭಗವತ್‌ರೂಪಗಳು ಇಂದ್ರಿಯಗಳಲ್ಲಿ, ಮತ್ಸ್ಯಾದಿ ದಶ ರೂಪಗಳು ಇಂದ್ರಿಯಗಳಲ್ಲಿ, ಒಟ್ಟು ತೊಂಭತ್ತೇಳು ರೂಪಗಳು. ಇಂದ್ರಿಯ ಗಳಲ್ಲಿ ಮೂರುಪ್ರಕಾರ ರೂಪಗಳು ಹಿಂದೇ ಹೇಳಿ ಅದೆ. ಅದರದರ ಕಾರ್ಯ ಗಳು ಬ್ಯಾರೆ ಬ್ಯಾರೆ. ಈ ಅಜಾದಿ ರೂಪಗಳು ಹಿಂದೆ ಹೇಳಿದ್ದಾರೆ. ದಾವ ರೂಪದ ಅಂಶಗಳೋ ಅದರನ್ನ ಹಿಂದೆ ಹೇಳಲಿಲ್ಲ. ಅದರನ್ನ ಹೇಳೋ ನಿಮಿತ್ತ ಪುನರುಕ್ತಿಯು. ಏತಾದೃವಾದ ತೊಂಭತ್ತೇಳು ಪ್ರಭೇದರೂಪಗಳು

ಅಂಶವಿಶೇಷದಿಂದ ಧರಿಸಿ, ಮುಖದೊಳು–ಮುಖ ಶಬ್ದದಿಂದ ಅಜಾದಿರೂಪ ರೂಪಗಳು ಶಿರಮುಖಾದಿ ಮಾತೃಕಾನ್ಯಾಸ ರೀತ್ಯಾ ಸ್ಥಾನಗಳಾದ, ಅವಯುವ ಗಳಲ್ಲಿ–ದೇಹಗತ ಅವಯುವಗಳಲ್ಲಿ, ನಯನ ಶ್ರವಣಾದಿ–ನೇತ್ರಗಳು ಕಿವಿಗಳು ಮೊದಲಾದ ಇಂದ್ರಿಯಗಳಲ್ಲಿ ಪೂರ್ವೋಕ್ತ ಪ್ರಕಾರ ಮತ್ಸ್ಯಾದಿ ರೂಪಗಳಿಂದ ಇದ್ದಾನೆ. ಇದ್ದು, ಅರಸು–ಹೃದಯಾಕಾಶದಲ್ಲಿ ಬಿಂಬನಾಗಿ ಬಿಂಬರೂಪ ದಿಂದ ಪ್ರಭು ಎಂತ ಕರೆಸಿದವನಾಗಿನ್ನೂ, ಆಳು–ಇಂದ್ರಿಯಾದಿಗಳಲ್ಲಿದ್ದು ಕಾರ್ಯ ಮಾಡತಕ್ಕ ಭೃತ್ಯನಾಗಿನ್ನು, ತಾನಾಗಿ–ತಾನೇ ಆಗಿ, ಸತತ–ನಿರಂತರದಲ್ಲೂ, ಸುಲೀಲೆಗೈಯುತಲಿಪ್ಪ–ಸಮೀಚಿನವಾದ ಲೀಲಾ ಮಾಡುತ, ಇರೋವನಾಗಿ ಇದ್ದಾನೆ. ಎಂದರೇ ಬಿಂಬರೂಪದಿಂದ ಪ್ರಭು ಎನಿಸಿದ ತಾನು ತನ್ನ ಭೃತ್ಯ ರೂಪವಾದ ಇಂದ್ರಿಯಸ್ಥರೂಪಗಳಿಗೆ ಆಜ್ಞಾ ಮಾಡತಾ ಬಿಂಬಕ್ರಿಯಾ ಪ್ರತಿ ಬಿಂಬಕ್ರಿಯಾ ತಾನೇ ಮಾಡತ, ಕ್ರಿಯಾ ಎಂಬ ಸಮೀಚೀನವಾದ ಆಟಗಳು ಅಡುತ್ತಾ, ಸ್ವಾಮಿ–ಭೃತ್ಯರೂಪದಿಂದ ತಾನೇ ಇರೋವನಾಗಿದ್ದಾನೆ. ಸುಖ ಮಯ–ಆನಂದಪೂರ್ಣವಾದ ಶ್ರೀಪರಮಾತ್ಮ, ಕೇಳಿ ಕೇಳಿಸಿ–ಶ್ರವಣತಾಡಿತ ವಾದ ಶಬ್ದಗಳಲ್ಲಿ ವಿದ್ಯಮಾನವಾದ ತನ್ನ ಸ್ವಾಖ್ಯಶಬ್ದಗಳ, ಶ್ರವಣೇಂದ್ರಿಯ ಗತ ತನ್ನ ಸ್ವಾಖ್ಯಶ್ರವಣೇಂದ್ರಿಯಗಳಿಂದ ಕೇಳಿ, ಜಡಶಬ್ದವನ್ನು ಜಡಕರ್ಣ ದ್ವಾರಾ ಜೀವಗತ ತತ್ತ್ವೇಶರ ದ್ವಾರಾ ಕೇಳಿಸಿ, ನೋಡಿ ನೋಡಿಸಿ–ಈ ಪ್ರಕಾರ ನೋಡಿ ನೋಡಿಸಿ, ನುಡಿದು ನುಡಿಸುವನು–ಈ ಪ್ರಕಾರವೇ ತಾನು ಪ್ರಥ ಮತಃ ನುಡಿದು, ತತ್ತ್ವದೇವತೆಗಳಿಂದ ನುಡಿಸಿ, ನಂತರ ಸ್ಥೂಲದೇಹಸ್ಥ ಜೀವನ ಕಡಿಯಿಂದ ನುಡಿಸತಾನೆ. ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾಕ್ಕೆ ಪುರುಷ, ಆ ಪುರುಷನ ಛಾಯಾದಂತೆ ತಿಳಿಯಬೇಕು. ಇದೇ ಪ್ರಕಾರ ಸರ್ವೇಂದ್ರಿಯ ವ್ಯಾಪಾರಗಳು ನಡೀತದೆ ಎಂತ ತಾತ್ಪರ್ಯ ॥೧೬॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ತಲೆಯ ಮಧ್ಯಪ್ರದೇಶವ್ವಾದ ಬ್ರಹ್ಮರಂಧ್ರಪ್ರದೇಶದಲ್ಲಿ ವಾಸುದೇವ ರೂಪಿಯಾದ ಪರಮಾತ್ಮನು ಅ–ಕಾರ ಪ್ರಾರಂಭ ಮಾಡಿಕೊಂಡು ಅಃ ವರೆಗೆ ಆಗುವ ೧೬ ಅಕ್ಷರಗಳ ಪ್ರತಿಪಾದ್ಯನಾಗಿ ಅಜ, ಆನಂದ, ಇಂದ್ರ ಇತ್ಯಾದಿ

ಅರ್ಧಗರ್ಭಪರ್ಯಂತ ೧೬ ರೂಪಗಳನ್ನು ಧರಿಸಿ, ಕಣ್ಣು, ಕಿವಿ ಮೊದಲಾದ ಮಾತೃಕಾನ್ಯಾಸದಲ್ಲಿ ಹೇಳಿದ ಪ್ರಕಾರ ಆಯಾಯಾ ಸ್ಥಾನಗಳಲ್ಲಿ ಪ್ರಭು ವಾಗಿಯೂ, ಭೃತ್ಯನಾಗಿಯೂ ಇದ್ದು ವಿಹಾರ ಮಾಡುವನು. ತಾನು ಸುಖ ಸ್ವರೂಪನಾದರೂ, ನಿರ್ಲಿಪ್ತನಾಗಿ ಸರ್ವರ ಕಿವಿಯಲ್ಲಿದ್ದು ತಾನು ಕೇಳುತ್ತಾ, ಜೀವರನ್ನು ಕೇಳುವಂತೆ ಮಾಡುವನು. ನೋಡಿ ನೋಡಿಸುವನು, ತಾನೇ ಮಾತನಾಡಿ, ಜೀವರಿಂದಲೂ ಮಾತನಾಡಿಸುವನು ॥೧೭॥

## ೩. ಭಾವದರ್ಪಣಟೀಕಾ ವ್ಯಾಖ್ಯಾನ

ಬ್ರಹ್ಮರಂಧ್ರದಲ್ಲಿದ್ದ ವಾಸುದೇವಮೂರ್ತಿ ಅಜ, ಆನಂದ ಇತ್ಯಾದಿ ೧೬ ರೂಪಧಾರಣಮಾಡಿ, ಮುಖದಲ್ಲಿ ೧೬ ಸ್ಥಾನದಲ್ಲಿದ್ದು ನೋಡೋಣ ಮೊದ ಲಾದ ಸಕಲ ಕಾರ್ಯ ಮಾಡಿ ಮಾಡಿಸುತ್ತಾನೆಂದು ಹೇಳುತ್ತಾರೆ ॥ಮೌಳೀತಿ॥

## ೪. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

ಏಳಧಿಕನವ-ಷೋಡಶ.ಮೌಳಿ=ಕಿರೀಟ. ತಲೆಯಮೇಲಿನ ಶಿಖಾ॥೧೭॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಶಿರಸ್ಸಹಿತ ಮುಖದಲ್ಲಿ ಅಜಾದಿ ಅರ್ಧಗರ್ಭಾಂತ ಹದಿನಾರುರೂಪ ಚಿಂತನಾಪ್ರಕಾರ ತಿಳಿಸುತ್ತಾರೆ, ಮೌಳಿಯೆಂದು. ಮೌಳಿಯೆಂಬ ಶಿರಸ್ಸು ಸಹಿತ ಮುಖದಲ್ಲಿ ವಾಸುದೇವರೂಪನೇ, ಅಂ–ಅಜ ಎಂಬುದು ಮೊದಲು ಮಾಡಿ, ಅಃ ಅರ್ಧಗರ್ಭ ಎಂಬ ರೂಪ ಪರ್ಯಂತ ಹದಿನಾರುರೂಪ ಧರಿಸಿ, ನಯನವೆಂಬ ಕಣ್ಣಿನಲ್ಲಿ ಶ್ರವಣವೆಂಬ ಕಿವಿ, ಮೂಗು ಮುಂತಾದ ಹದಿನಾರು ಸ್ಥಾನದಲ್ಲಿ, ತನಗೆ ತಾನೇ ಸ್ವಾಮಿ ಭೃತ್ಯನಾಗಿದ್ದು. ಸದಾ ಸೇವ್ಯ–ಸೇವಕ ಕ್ರೀಡೆಯಾಡುತ್ತ ನಿತ್ಯಸುಖಸ್ವರೂಪನು ಸ್ವಾತಂತ್ರ್ಯೇಣ ತಾನೇ ಕೇಳಿ, ಪರಾ ಧೀನ ಜೀವರಿಗೆ ಕೇಳಿಸಿ, ಹೀಗೆ ನೋಡಿ ನೋಡಿಸುವ ಮೊದಲಾದ ಕಾರ್ಯ ಪ್ರವರ್ತಕನಾಗಿರುವನು ॥೧೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ರೋಮಾದಿ ಮನಸ್ಸಿನ ಪರ್ಯಂತ ವಿವಿಧ ಸ್ಥಾನಗತ ಭಗವದ್ರೂಪೋಪಾಸನಾಕ್ರಮವನ್ನು ಪೂರ್ವಪದ್ಯದಲ್ಲಿ ತಿಳಿಸಿ, **ಮೌಳಿಯುಲಿಹ** ಎಂಬ ಪ್ರಸಕ್ತ ೧೭ನೆಯ ಪದ್ಯದಿಂದ ಮುಖದಲ್ಲಿರುವ ೧೬ ಸ್ಥಾನಗಳಲ್ಲಿ ಅಜಾದಿ ಅರ್ಧಗರ್ಭ ಪರ್ಯಂತ ವರ್ಣವಾಚ್ಯ ಭಗವದ್ರೂಪಗಳನ್ನು ವಿವರಿಸುತ್ತಾರೆ.

೧. **ಮೌಳಿಯುಲಿಹ**-ಎಂದರೆ ನೆತ್ತಿಯ ಭಾಗ, ಆ ಸ್ಥಾನದಲ್ಲಿ ಬ್ರಹ್ಮರಂಧ್ರವಿದೆ. ಅಲ್ಲಿ ಸಹಸ್ರದಳಯುಕ್ತವಾದ ಕಮಲವಿದೆ. ಆ ಪದ್ಮದಲ್ಲಿ ತುರ್ಯನಾಮಕ ಶ್ರೀಪರಮಾತ್ಮನು ವಿಶ್ವಾದಿ ಸಹಸ್ರರೂಪಗಳಿಂದ ವಿದ್ಯಮಾನನಾಗಿದ್ದಾನೆ. ಆ ತುರ್ಯನಾಮಕನೇ **ವಾಸುದೇವರೂಪೀ** ಪರಮಾತ್ಮನು. ಪುರುಷನಾಮಕನಾದ ಆ ವಾಸುದೇವನು ತುರ್ಯರೂಪದಿಂದ ಬ್ರಹ್ಮರಂಧ್ರಗತ ಸಹಸ್ರದಳಯುಕ್ತ ಕಮಲದಲ್ಲಿದ್ದಾನೆ.

೨. ಮೌಳಿಯಲ್ಲಿರುವ ವಾಸುದೇವನಾಮಕ ಶ್ರೀಪರಮಾತ್ಮನು ೧೬ ರೂಪಗಳಿಂದ ಮುಖದಲ್ಲಿರುವ ೧೬ ಸ್ಥಾನಗಳಲ್ಲಿ ವಿದ್ಯಮಾನನಾಗಿದ್ದಾನೆ. ಈ ಸಂಖ್ಯೆಯನ್ನು ದಾಸರಾಯರು **ಏಳಧಿಕನವ** ಎಂದಿದ್ದಾರೆ. ಅಂದರೆ ನವ-ಒಂಭತಕ್ಕೆ ಏಳಧಿಕ-ಏಳು ಅಧಿಕವಾದ. ಅಂದರೆ ೯+೭=೧೬ ಎಂದಾಗುವುದು.

ಅ-ಕಾರ ಪ್ರಾರಂಭಮಾಡಿಕೊಂಡು ಅಃ ವರೆಗೆ ೧೬ ಸ್ವರಾಕ್ಷರಗಳಾಗುವುವು. **ಮಾತೃಕಾನ್ಯಾಸರೀತ್ಯಾ** ಅಕಾರ ವರ್ಣಪ್ರತಿಪಾದ್ಯ ಅಜ ಎಂಬ ಹೆಸರಿನಿಂದ ಪ್ರಾರಂಭವಾಗಿ ಅಃಕಾರ ವರ್ಣವಾಚ್ಯ **ಅರ್ಧಗರ್ಭ**ನಾಮ ಪರ್ಯಂತ ೧೬ ವರ್ಣವಾಚ್ಯ ಭಗವದ್ರೂಪಗಳಾಗುವುವು. ಈ ಭಗವದ್ರೂಪಗಳ ಸ್ಥಾನ, ಉಪಾಸನಾಕ್ರಮ, ಶಬ್ದಾರ್ಥವಿವರಣೆ ಇತ್ಯಾದಿ ವಿಷಯಗಳನ್ನು ಈ ಕೆಳಗಿನ ಪದಕದಲ್ಲಿ ಕೊಟ್ಟಿದೆ.

| ಕ್ರಮ ಸಂಖ್ಯೆ | ವರ್ಣ ವಾಚ್ಯ | ಭಗವದ್ರೂಪ | ಚಿಂತಿಸಬೇಕಾದ ಸ್ಥಾನ | ಅರ್ಥವಿವರಣೆ |
|---|---|---|---|---|
| ೧. | ಅ | ಅಜ | ಶಿರಸ್ಸು | ಜನನರಹಿತನು. |
| ೨. | ಆ | ಆನಂದ | ಮುಖ | ಆನಂದಸ್ವರೂಪಿಯು. |
| ೩. | ಇ | ಇಂದ್ರ | ಬಲಗಣ್ಣು | ಪರಮೈಶ್ವರ್ಯಸಂಪನ್ನ. |
| ೪. | ಈ | ಈಶ | ಎಡಗಣ್ಣು | ಮಹಾಲಕ್ಷ್ಮಿಗೂ ಮುಖ್ಯನಿಯಾಮಕನು. |
| ೫. | ಉ | ಉಗ್ರ | ಬಲಗಿವಿ | ರುದ್ರಸಂಹಾರಕ. ಪಾಪಿಗಳಿಗೆ ಕ್ರೂರನು. |
| ೬. | ಊ | ಊರ್ಜ | ಎಡಗಿವಿ | ನಿಸ್ಸೀಮನಾದ ಬಲಕ್ರಿಯಾವಂತನು. |
| ೭. | ಋ | ಋತಂಭರ | ಬಲಮೂಗಿನ ಹೊಳ್ಳೆ | ಸತ್ಯಜಗದಾಧಾರ ಹಾಗೂ ಪೋಷಕ. |
| ೮. | ೠ | ೠಘ | ಎಡಮೂಗಿನ ಹೊಳ್ಳೆ | ದಾನವರಿಗೆ ಕ್ಲೇಶದಾಯಕ. |

| | | | | |
|---|---|---|---|---|
| ೯. | ಌ | ಌಶ | ಬಲಗೆನ್ನೆ | ದೇವಮಾತೆಯಾದ ಅದಿತಿಗೆ ಸುಖಪ್ರದನು. |
| ೧೦. | ೡ | ೡಶ | ಎಡಗೆನ್ನೆ | ದಿತಿದೇವಿಗೆ ವಿಷಾದಕ. |
| ೧೧. | ಏ | ಏಕಾತ್ಮ | ಮೇಲ್ತುಟಿ | ಮುಖ್ಯಪ್ರಭುವು. |
| ೧೨. | ಐ | ಐರ | ಕೆಳತುಟಿ | ರುದ್ರನಿಗೆ ಸುಖಪ್ರದನು. |
| ೧೩. | ಓ | ಓಜೋಭೃತ್ | ಮೇಲಿನ ದಂತಪಂಕ್ತಿ | ನಿರತಿಶಯವಾದ ಸಾಮರ್ಥ್ಯವಂತ. |
| ೧೪. | ಔ | ಔರಸ | ಕೆಳಗಿನ ದಂತಪಂಕ್ತಿ | ಬ್ರಹ್ಮನನ್ನೇ ಜ್ಯೇಷ್ಠಪುತ್ರನಾಗಿ ಉಳ್ಳವನು. |
| ೧೫. | ಅಂ | ಅಂತ | ತಲೆಯಮೇಲ್ಭಾಗ | ಪ್ರಳಯಕಾಲದಲ್ಲಿ ಸರ್ವಜಗದ್ಭಕ್. |
| ೧೬. | ಅಃ | ಅರ್ಧಗರ್ಭ | ಕಿರುನಾಲಿಗೆ | ಬ್ರಹ್ಮಾಂಡಗಳನ್ನು ಉದರದಲ್ಲಿ ಧರಿಸಿರುವವನು. |

ಹೀಗೆ ಮೌಳಿಗತ ವಾಸುದೇವನು ಏಳಧಿಕನವ(೧೬) ಅಜಾದಿ ರೂಪವ ತಾಳಿ, ಮುಖದೊಳು ನಯನ, ಶ್ರವಣ ಇತ್ಯಾದಿ ಅವಯವಗಳಲ್ಲಿ ವಿದ್ಯಮಾನನಾಗಿದ್ದಾನೆ. ಮುಖದಲ್ಲಿ ಅ–ವರ್ಣ ಪ್ರತಿಪಾದ್ಯನಾದ ಆನಂದ ನಾಮಕನಿದ್ದಾನೆ. ನಯನ ಎಂದರೆ ಬಲಗಣ್ಣಿನ ಇ–ಕಾರವಾಚ್ಯ ಇಂದ್ರ ನಾಮಕ ವಿದ್ಯಮಾನನಾಗಿದ್ದಾನೆ. ಎಡಗಣ್ಣಿನಲ್ಲಿ ಈ–ವರ್ಣವಾಚ್ಯ ಈಶ ನಾಮಕ ಪರಮಾತ್ಮನಿದ್ದಾನೆ. ಶ್ರವಣ ಎಂದರೆ, ಬಲಗಿವಿಯಲ್ಲಿ ಉ–ಕಾರ ಪ್ರತಿಪಾದ್ಯ ಉಗ್ರನಾಮಕ ವಾಸುದೇವನಿದ್ದಾನೆ. ಅದೇ ವಾಸುದೇವ ರೂಪಿಯು ಎಡಗಿವಿಯಲ್ಲಿ ಊರ್ಜ ಎಂಬಭಿಧಾನದಿಂದ ಊ–ವರ್ಣವಾಚ್ಯನಾಗಿದ್ದಾನೆ. ಹೀಗೆ ವದನಗತ ೧೬ ಸ್ಥಾನಗಳಲ್ಲಿ ಅ–ಕಾರಾದಿ ಅಃಪರ್ಯಂತ ಅಜಾದಿ ಅರ್ಧಗರ್ಭಪರ್ಯಂತ ೧೬ ಭಗವದ್ರೂಪಗಳ ಚಿಂತನೆ.

೩. ಅಂತಹ ಷೋಡಶ ಸಂಖ್ಯಾಕವಾದ ಸ್ವರಾಕ್ಷರಗಳಲ್ಲಿ ವರ್ಣಪ್ರತಿಪಾದ್ಯನಾದ ಶ್ರೀಪರಮಾತ್ಮನು ಆಳರಸುತಾನಾಗಿದ್ದಾನೆ ಎಂದು ಹೇಳಿರುತ್ತಾರೆ. ಆಳು ಎಂದರೆ ಕಿಂಕರ ಅಥವಾ ಸೇವಕನೆಂದರ್ಥ. ಪೂರ್ವೋಕ್ತ ೧೬ ಅವಯವಗಳು ಕೇವಲ ಜಡ. ಅವುಗಳಿಗೆ ಸ್ವತಃ ಕಾರ್ಯಪ್ರವೃತ್ತಿಸಾಮರ್ಥ್ಯವಿಲ್ಲ. ಅದಕ್ಕಾಗಿ ಆ ಅವಯವಗಳಿಗೆ ಅವುಗಳ ನಿಯಮಿತ ಕಾರ್ಯನಿರ್ವಹಣೆಗಾಗಿ ದೇವತೆಗಳನ್ನು ನಿಯಮಿಸಿದ್ದಾನೆ. ಅವಯವಗತ ಈ ದೇವತೆಗಳಿಗೆ ಇಂದ್ರಿಯಾಭಿಮಾನಿಗಳೆಂದು ಹೆಸರು. ಅವರೂ ಸಹ ಸ್ವತಂತ್ರರಲ್ಲ. ಅವರಲ್ಲಿ ಬಿಂಬನಾದ ಈಶನು ಅಜಾದಿರೂಪಗಳಿಂದ ಅಂತಸ್ಥಿತನಾಗಿದ್ದು ಅವರ ದ್ವಾರಾ ತಾನೇ ಆ ಅವಯವಗಳ ಕಾರ್ಯಗಳನ್ನು ಮಾಡಿಸುವನು. ಇಂತಹ ಅಭಿಮಾನಿಗಳು ಪರಮಾತ್ಮನ ಆಳುಗಳು (ಕಿಂಕರರು) ಅವರಲ್ಲಿ ಆಳು ಎಂಬ ಹೆಸರಿನಿಂದ ತನ್ನಾಮಕನಾಗಿದ್ದು ದೇವತೆಗಳ ದ್ವಾರಾ ಕಾರ್ಯನಿರ್ವಹಿಸುವುದರಿಂದ ಶ್ರೀಪರಮಾತ್ಮನು ತಾನೇ ಆಳು ಎಂದೆನಿಸುವನು.

ಆ ದೇವತೆಗಳಲ್ಲಿದ್ದು ನಿಯಾಮಕನಾಗಿ ವ್ಯಾಪಾರ ನಿಯಮನ ಮಾಡುವುದರಿಂದ ಅರಸು ಎಂದೆನಿಸುವನು. ತಾನೇ ನಿಯಾಮಕನಾಗಿರುವುದರಿಂದ

ಅರಸನಾಗುತ್ತಾನೆ. ಕಿಂಕರರಾದ ದೇವತೆಗಳ ದ್ವಾರಾ ಬಿಂಬರೂಪದಿಂದ ಆ ಇಂದ್ರಿಯಗಳ ವ್ಯಾಪಾರ ಮಾಡಿಸುವುದರಿಂದ ಆಳು ಎಂದೆನಿಸುವನು.

೪. ಇಂತಹ ಆಳರಸು ತಾನೇಆಗಿ ಕ್ರಿಯೆಗಳನ್ನು ಬಿಂಬಕ್ರಿಯಾದ್ವಾರಾ ನಿರ್ವಹಿಸುತ್ತಿರುವ ಆ ಜಗತ್ಸ್ವಾಮಿಯು ನಿರಂತರದಲ್ಲಿ ಆ ದೇವತೆಗಳಲ್ಲಿದ್ದು, ಆ ಇಂದ್ರಿಯಗೋಳಕಗಳಲ್ಲಿ ವ್ಯಾಪ್ತರೂಪದಿಂದ ಇದ್ದು, ಜಗದ್ವ್ಯಾಪಾರ ರೂಪವಾದ ಲೀಲೆಯನ್ನು ಮಾಡುತ್ತಿರುವನು. ಇಂತು ಜಗನ್ನಾಟಕಸೂತ್ರ ಧಾರನಾದ ಆ ಲೀಲಾವಿನೋದಿಗೆ ಈ ಜಗತ್ತು ಒಂದು ಕ್ರೀಡಾರಂಗ. ಸಮಸ್ತ ಚೇತನರೂ ಪಾತ್ರಧಾರಿಗಳು. ತಾನು ಪ್ರಧಾನಸೂತ್ರಧಾರ.

೫. ಇಂತಹ ಲೀಲೆಗೈಯುತಲಿಪ್ಪ ಶ್ರೀಪರಮಾತ್ಮನು **ಸುಖ ಮಯನು.** ಅವನು ಅಪ್ರಾಕೃತ ಜ್ಞಾನಾನಂದಪೂರ್ಣನು. ಆನಂದಸ್ವರೂಪಿಯು. ಆನಂದಪೂರ್ಣನಾಗಿ ಸಮಸ್ತ ಚರಾಚರಾತ್ಮಕ ಜಗತ್ತಿನಿಂದ ಪರಮ ವಿಲಕ್ಷಣನು. ಇದರಿಂದ ತತ್ಸಂಬಂಧವಾದ ದೋಷಗಳ ಲೇಪವಿಲ್ಲ. ಪೂರ್ಣಾನಂದ ಜ್ಞಾನಮಯನಾದ ಶ್ರೀಪರಮಾತ್ಮನು ಜಗತ್ತಿನ ಸೃಷ್ಟ್ಯಾದಿ ವ್ಯಾಪಾರ ವಿಶೇಷಗಳನ್ನು ಮಾಡಿ ಮಾಡಿಸುತ್ತಿದ್ದರೂ ಅವನಿಗೆ ಆ ಜಗತ್ಕಾರ್ಯವು ಒಂದು ಲೀಲೆ. ನಿರಾಯಸವಾಗಿ ನಿರ್ವಹಿಸುತ್ತಿರುವನು. ಆದರಿಂದ ನಿರ್ಲಿಪ್ತನು.

೬. ಶ್ರವಣೇಂದ್ರಿಯದಲ್ಲಿದ್ದು, ಶ್ರೋತ್ರಾಭಿಮಾನಿ ದಿಗ್ದೇವತೆಗಳ ದ್ವಾರಾ, ಶಬ್ದಗಳನ್ನು ಕೇಳಿ ಕೇಳಿಸಿ, ಜೀವರ ಅನುಭೋಗಕ್ಕೆ ಆ ವಿಷಯವನ್ನು ತಂದೀಯುವನು.

ನೇತ್ರೇಂದ್ರಿಯಗಳ ದ್ವಾರಾ ಚಕ್ಷುರಭಿಮಾನಿ ಸೂರ್ಯ ಚಂದ್ರರ ದ್ವಾರಾ ನೋಡಿ ನೋಡಿಸುವನು.

ವಾಗೀಂದ್ರಿಯದಲ್ಲಿದ್ದು ವಾಗಿಂದ್ರಿಯಾಭಿಮಾನಿ ಅಗ್ನ್ಯಂತರ್ಗತನಾಗಿ ಬಿಂಬಕ್ರಿಯಾದ್ವಾರಾ ನುಡಿದು ನುಡಿಸುವನು. ' ಇದಲ್ಲವೇ ನಮ್ಮಪ್ಪನ ಮಹಾಮಹಿಮೆ ॥೧೭॥

# ಪದ್ಯ ೧೮

## ಮೂಲ

ಎರಡಧಿಕ ಎಪ್ಪತ್ತೆನಿಪ ಸಾ ।
ವಿರದ ನಾಡಿಗೆ ಮುಖ್ಯವೇಕೋ ।
ತ್ತರ ಶತಗಳಲ್ಲಿಹವು ನೂರಾ ಒಂದು ಮೂರ್ತಿಗಳು ॥
ಅರಿತು ದೇಹದಿ ಕಲಶನಾಮಕ ।
ಹರಿಗೆ ಕಳೆಗಳಿವೆಂದು ನೈರಂ ।
ತರದಿ ಪೂಜಿಸುತಿಹರು ಪರಮಾದರದಿ ಭೂಸುರರು ॥೧೮॥

## ಅವತರಣಿಕೆ

ಸ್ಥೂಲದೇಹದಲ್ಲಿ ಓತಪ್ರೋತವಾಗಿ ದೇಹಾದ್ಯಂತ ವ್ಯಾಪ್ತವಾಗಿರುವ ೭೨.೦೦೦ ನಾಡಿವ್ಯೂಹದ ವಿಚಾರ. ಅವುಗಳಲ್ಲಿ ಪ್ರಧಾನ ನಾಡಿಗಳಾದ ೧೦೧ ನಾಡೀಗತ ಭಗವದ್ರೂಪಗಳು. ದೇಹಸ್ಥಿತ ಕಲಶನಾಮಕ ಶ್ರೀಪರಮಾತ್ಮನನ್ನು ಬ್ರಹ್ಮಜ್ಞಾನಿಗಳು ಸದಾ ಸರ್ವಕಾಲಗಳಲ್ಲಿ ಪೂಜಿಸುತ್ತಿರುವ ಕ್ರಮ ಇತ್ಯಾದಿ ಪ್ರಮೇಯ ವಿಚಾರಗಳನ್ನು ತಿಳಿಸುತ್ತಾರೆ **ಎರಡಧಿಕ ಎಪ್ಪತ್ತೆನಿಪ** ಎಂಬ ಪ್ರಸಕ್ತಸಂಧಿಗತ ೧೮ನೆಯ ಈ ಪದ್ಯದಿಂದ.

## ಪ್ರತಿಪದಾರ್ಥ

**ಎರಡಧಿಕ ಎಪ್ಪತ್ತೆನಿಪ**= ಎರಡು ಅಧಿಕವಾದ ಎಪ್ಪತ್ತು ಎಂದೆನಿಸುವ ಅಂದರೆ ೭೦+೨=೭೨ (ಎಪ್ಪತ್ತೆರಡು,) **ಸಾವಿರದ**=೭೨×೧೦೦೦= ೭೨,೦೦೦ ಸಂಖ್ಯಾಕವಾದ. **ನಾಡಿಗೆ**=ನಾಡೀಸಮೂಹದಲ್ಲಿ, **ಮುಖ್ಯವು** =ಪ್ರಧಾನವಾಗಿರುವ, **ಏಕೋತ್ತರಶತಗಳಲ್ಲಿ**=೧೦೧ನಾಡಿಗಳಲ್ಲಿ (ಶತ= ಒಂದು ನೂರು. ಏಕೋತ್ತರ=ಅದಕ್ಕೆ ಒಂದು ಅಧಿಕವಾದ, ಅಂದರೆ ೧೦೦+೧ ೧೦೧ ನಾಡಿಗಳು) **ನೂರಾ ಒಂದು ಮೂರ್ತಿಗಳು**=೧೦೧ ಭಗವದ್ರೂಪ

ಗಳು (ಪ್ರಧಾನನಾಡೀಗತ ಭಗವದ್ರೂಪಗಳ ಸಂಖ್ಯೆ=೧೦೧) **ಇಹವು**= ವಿದ್ಯಮಾನವಾಗಿ ಇರುವುವು. **ಅರಿತು**= ಹೀಗೆ ಜ್ಞಾನಾನುಸಂಧಾನದಿಂದ ತಿಳಿದು, **ದೇಹದಿ**= ಸಾಧನ ಶರೀರವೆಂದೆನಿಸುವ ಈ ಸ್ಥೂಲದೇಹದಲ್ಲಿ **ಕಲಶನಾಮಕ**= ಭಗವತ್ಪೂಜಾಕಾಲದಲ್ಲಿ ಕಲಶದಲ್ಲಿ ಆವಾಹನೆಮಾಡಿರುವ ಕಲಶನಾಮಕನಾದ, **ಹರಿಗೆ**= ಬಿಂಬರೂಪಿಯಾದ ಶ್ರೀಪರಮಾತ್ಮನಿಗೆ **ಕಳೆಗಳು ಇವೆಂದು**= ೧೦೧ ನಾಡೀಗತ ಭಗವದ್ರೂಪಗಳೇ ಕಲಾವಿಶೇಷ ಗಳೆಂದು ತಿಳಿದು, **ನೈರಂತರದಿ**= ಸದಾ ಸರ್ವಕಾಲದಲ್ಲಿ, **ಭೂಸುರರು**= ಬ್ರಹ್ಮಜ್ಞಾನಿಗಳು **ಪರಮಾದರದಿ**= ಅತ್ಯಂತ ಭಕ್ತಿಯಿಂದ, **ಪೂಜಿಸು ತಿಹರು**= ಪೂಜೆ ಮಾಡುತ್ತಾರೆ॥೧೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಸ್ಥೂಲದೇಹಗತ ಮುಖ್ಯಾಮುಖ್ಯ ನಾಡೀ ವಿಚಾರ ಹೇಳತಾರೆ.

ಎರಡಧಿಕವೆಪ್ಪತ್ತೆನಿಪ ಸಾವಿರದ ನಾಡಿಗೆ–ಈ ಸ್ಥೂಲ ದೇಹಗತ ಎಪ್ಪ ತ್ತೆರಡು ಸಾವಿರ ನಾಡಿಗಳಿಗೆ, ಮುಖ್ಯ–ಮುಖ್ಯವಾಗಿ ಪ್ರಧಾನ ನಾಡಿಗಳಾದ, ಏಕೋತ್ತರಶತಗಳಲಿ–ನೂರಾಒಂದು ನಾಡಿಗಳಲ್ಲಿ, ನೂರಾಒಂದು ಮೂರ್ತಿ ಗಳು–ನೂರೊಂದು ಮೂರ್ತಿಗಳು, ಇಹವು–ಇರೋದಾಗಿ ಅವೆ. ಈ ನೂರಾ ಒಂದು ರೂಪಗಳು ದಾವವೆಂದರೆ, ಕಲಶ–ದೇವರ ಪೂಜಾಕ್ಕೆ ಉಪಯೋಗ ವಾಗಿ ಇರತಕ್ಕ ಕಲಶದಲ್ಲಿ, ಆ ಕಲಶಾವಾಹನಕ್ರಮ ಹ್ಯಾಗಂದರೆ, **'ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ'** ಎಂತ ತಂತ್ರಸಾರೋಕ್ತ ಕ್ರಮ. ಈ ಕಲಶನಾಮಕ–ಕಲಶನಾಮಕ ಎಂತ ಅಧಿಷ್ಠಾನದಲ್ಲಿ ಆವಾಹನ ಮಾಡತಕ್ಕ ಕಲಶದಲ್ಲಿ ರೂಪಗಳ ವಿವರ–

೫೧ ಅಕ್ಷರವಾಚ್ಯ ಅಜಾದಿ ಭಗವದ್ರೂಪಗಳು.
೨೪ ಕೇಶವಾದಿ ಭಗವನ್ಮೂರ್ತಿಗಳು
೪ ಆತ್ಮಾದಿ ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ರೂಪಗಳು.

೪ ವಾಸುದೇವಾದಿ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ರೂಪಗಳು.
೪ ವಿಶ್ವಾದಿ ತೈಜಸ, ಪ್ರಾಜ್ಞ, ತುರ್ಯ ರೂಪಗಳು.
೧೦ ದಶಾವತಾರ ರೂಪಗಳು.
೧ ವೇದವ್ಯಾಸದೇವರು.
೧ ದತ್ತಾತ್ರೇಯದೇವರು.
೧ ಶಿಂಶುಮಾರಮೂರ್ತಿ
೧ ಮೂಲರೂಪ ಲಕ್ಷ್ಮೀನಾರಾಯಣದೇವರು
೧೦೧ ಅಂತು ಒಟ್ಟು ನೂರೊಂದು ಭಗವನ್ಮೂರ್ತಿಗಳು

ದೇಹದಿ–ದೇಹಗತ ಪೂರ್ವೋಕ್ತ ನೂರಾಒಂದು ನಾಡಿಗಳಲ್ಲಿ, ಅರಿತು–ಒಂದೊಂದು ರೂಪದ ವ್ಯಾರಿಗೆ ಒಂದೊಂದು ನಾಡಿಯಲ್ಲಿ ನೂರೊಂದು ರೂಪದ ವ್ಯಾರಿಗೆ ತಿಳಿಯಬೇಕು. ಹರಿಗೆ ಕಳೆಗಳಿವೆಂದು–ಹೃದಯಾಂತರ್ಗತ ಸುಷುಮ್ನಾಮಧ್ಯಗತ ಅಷ್ಟದಳಕಮಲಸ್ಥ ಸ್ಥೂಲದೇಹಗತ ಬಿಂಬಮೂರ್ತಿಗೆ ಕಳಾ ಎಂದರೆ. ಭಿನ್ನಭಿನ್ನಗಳಾದ ಭಾಗವಿಶೇಷಗಳ ನೂರಾಒಂದು ನಾಡಿಗಳು ಆವಾಸಕ್ಕೆ ಯೋಗ್ಯವಾದ ಮುಖ್ಯಾಧಿಷ್ಠಾನವೆಂದು ಅರ್ಥ. ಈ ಪ್ರಕಾರ ಕಳಾವಿಶೇಷಗಳ ತಿಳಿದು. ಭೂಸುರರು, ನೈರಂತರದಿ-ನಿರಂತರದಿ ಬ್ರಹ್ಮಜ್ಞಾನಿಗಳು, ಪರಮಾದರದಿ–ಅತ್ಯಂತ ಭಕ್ತಿ ವಿಶೇಷದಿಂದ, ಪೂಜಿಸುತಿಹರು–ಪೂಜಾ ಮಾಡತಾ ಇರತಾರೆ ಎಂತ ತಾತ್ಪರ್ಯ.

## ವಿಶೇಷಾರ್ಥ

ದೇವರ ಅಭಿಷೇಕಕ್ಕೆ ಉದಕಪೂರ್ಣವಾದ ಬಾಹ್ಯಕಲಶದಲ್ಲಿ ಪೂರ್ವೋಕ್ತ ಪ್ರಕಾರ ಭಗವನ್ಮೂರ್ತಿಗಳನ್ನು ಆವಾಹನ ಮಾಡಿ ಇನ್ನೂ,

**ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಃ ಸಮಾಶ್ರಿತಃ ।**
**ಮೂಲೇ ತತ್ರಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃ ಸ್ಮೃತಾಃ ।**

**ಕುಕ್ಷೌ ತು ಸಾಗರಾಸ್ಸರ್ವೇ ಸಪ್ತದ್ವೀಪಾ ವಸುಂಧರಾ |**
**ಋಗ್ವೇದೋಽಥ ಯಜುರ್ವೇದಃ ಸಾಮವೇದೋಽಹ್ಯಥರ್ವಣಃ|**
**ಅಂಗೈಶ್ಚ ಸಹಿತಾಸ್ಸರ್ವೇ ಕಲಶಂತು (ಕಲಶಾಂಬು) ಸಮಾಶ್ರಿತಾಃ |**

ಇತ್ಯಾದಿ ಅನುಸಂಧಾನದಿಂದಲೂ ಕಲಶಾವಾಹನ ಮಾಡಿನ್ನು. ಈ ಬಾಹ್ಯಕಲಶವತ್ ದೇಹಗತ ನೂರೊಂದು ನಾಡಿಗಳು ಕಲಶಸಾಂಕೇತವೂ, ತದಾಕಾರ ಕಲಶಸಾಂಕೇತ ಭಗವನ್ಮೂರ್ತಿಗಳು ನೂರೊಂದು ಇರೋದಾಗಿ ಅವೆ. ಇದರಲ್ಲಿ ನೂರೊಂದು ನದಿಗಳಿವೆ. ಏತಾದೃಶ ನೂರೊಂದು ಕಲಶಗಳಲ್ಲಿ ಕಲಶಪೂಜಾವಿಧಾನದಿಂದ ಪೂಜಾದಿಗಳು ಮಾಡಿ, ಆಯಾ ನದಿ ಅಂತರ್ಗತ ಭಗವದ್ರೂಪಗಳಿಗೂ, ಬಿಂಬರೂಪಕ್ಕೂ ಐಕ್ಯಚಿಂತನಾರೂಪವಾದ ಅಭಿಷೇಕಾಖ್ಯ ಪೂಜಾ ಮಾಡಬೇಕು ಎಂಬ ತಾತ್ಪರ್ಯ ||೧೮||

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಎರಡಧಿಕ ಎಂಬ ಪದ್ಯದಿಂದ ಪರಮಾತ್ಮನ ಅಭಿಷೇಕಾದಿಗಳನ್ನು ಮಾಡುವಾಗ, ನಾವು ಮಾಡುವ ಕಲಶಪೂಜೆಯ ಸಮಯದಲ್ಲಿ ಕಲಶದಲ್ಲಿ ಆವಾಹನೆ ಮಾಡಬೇಕಾದ ೧೦೧ ಮೂರ್ತಿಗಳನ್ನು ನಮ್ಮ ದೇಹಗತ ೧೦೧ ಮುಖ್ಯನಾಡಿಗಳಲ್ಲಿ ಪೂಜಿಸಬೇಕೆಂದು ಹೇಳುತ್ತಾರೆ.

ಒಟ್ಟು ನಮ್ಮ ದೇಹಗತ ಪ್ರಧಾನನಾಡಿಗಳು ೭೨,೦೦೦. ಅದರಲ್ಲಿ ಮುಖ್ಯವಾದುವು ೧೦೧ ನಾಡಿಗಳು. ಆ ನಾಡಿಗಳಲ್ಲಿ **ಕಲಶಸ್ಯ ಮುಖೇ ವಿಷ್ಣುಃ**–ಇತ್ಯಾದಿ ಶ್ಲೋಕಗಳಿಂದ ಕಲಶದಲ್ಲಿ ಕಳಶನಾಮಕ ಪರಮಾತ್ಮನನ್ನು ಚಿಂತಿಸಿ, ೧೦೧ ಮೂರ್ತಿಗಳನ್ನು ಆವಾಹನ ಮಾಡುವ ಸಂಪ್ರದಾಯವು ತಂತ್ರಸಾರರೀತ್ಯಾ ದೇವತಾರ್ಚನ ಮಂತ್ರದಲ್ಲಿ ಉಕ್ತವಾಗಿದೆ.

**ಏಕಪಂಚಾಶದ್ವರ್ಣಾನಾಂ ಚತುರ್ವಿಂಶತಿ ಮೂರ್ತಯಃ|**
**ಆತ್ಮಾದ್ಯಾ ವಾಸುದೇವಾದಶ್ಚ ವಿಶ್ವಾದ್ಯಾ ಮತ್ಸ್ಯಕಚ್ಛಪೌ||**
**ಕೋಡೋ ನೃಸಿಂಹಃ ಸವಟುರ್ಜಾಮದಗ್ನಿ ರಘೂದ್ವಹೌ||**

ವಾಸಿಷ್ಠ ಯಾದವೌ ಕೃಷ್ಣಾನಾತ್ರೇಯೋ ಬುದ್ಧ ಕಲ್ಕಿನೌ॥
ಶಿಂಶುಮಾರಶ್ಚೇತಿ ಶತಂ ಕಲಾಃ ಕಳಶದೇವತಾಃ॥
—ತಂತ್ರಸಾರೋಕ್ತ ಶ್ಲೋಕಗಳು

ಅಜಾದಿ ೫೧, ಕೇಶವಾದಿ ೨೪, ಆತ್ಮಾದಿ ೪, ವಾಸುದೇವಾದಿ ೪, ವಿಶ್ವಾದಿ ೪, ಮತ್ಸ್ಯಾದಿ ೧೦, ವೇದವ್ಯಾಸ, ದತ್ತಾತ್ರೇಯ, ಶಿಂಶುಮಾರ, ಶ್ರೀಲಕ್ಷ್ಮೀನಾರಾಯಣ ಈ ೪. ಒಟ್ಟು ೧೦೧ ಮೂರ್ತಿಗಳು. ಇವು ಕಲಶ ಮೂರ್ತಿಯ ಕಲಾಭೂತವೆಂದು ತಂತ್ರಸಾರದಲ್ಲಿ ಹೇಳಿರುವರು. ಈ ಮೂರ್ತಿಗಳೇ ನಮ್ಮ ದೇಹಗತ ೧೦೧ ಮುಖ್ಯನಾಡಿಗಳಲ್ಲಿ ಇರುವುವು. ಇವುಗಳೂ ಕಳಶನಾಮಕ ಪರಮಾತ್ಮನ ಕಳೆಗಳೆಂದು ತಿಳಿದು, ಪರಮಾದರದಿಂದ ಜ್ಞಾನಿಗಳಾದ ಬ್ರಾಹ್ಮಣರು ಪೂಜಿಸುತ್ತಿರುವರು. ಬ್ರಾಹ್ಮಣರು ಎಂಬ ಮಾತಿನಿಂದ ಬ್ರಹ್ಮಜ್ಞಾನಿಗಳೆಂದರ್ಥ. ಬರೇ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರೆಲ್ಲರೂ ಹೀಗೆ ಪೂಜೆಮಾಡುತ್ತಾರೆಂದು ಅರ್ಥವಲ್ಲ. ಮಾಡುತ್ತಾರೆ–ಎಂಬ ವಾಕ್ಯದಿಂದ ಶಿಷ್ಟಾಚಾರವನ್ನು ತೋರಿಸುತ್ತಾರೆ. ಇದರಿಂದ ಅಧಿಕಾರಿಗಳೆಲ್ಲರೂ ಹೀಗೆ ಮಾಡುವರೆಂಬ ತಾತ್ಪರ್ಯ ॥೧೮॥

೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಎರಡಧಿಕ ಇತಿ। ಶತಂ ಚೈಕಾ ಚ ಹೃದಯಸ್ಯ ನಾಡ್ಯಃ–ಇತಿ ಶ್ರುತೇಃ। ಕಲಶ–ಕಲಾಃ ಕಲಶನಾಮಕಾಃ–ಇತಿ ತಂತ್ರಸಾರೇ। ಕಲಾ ಅಂಶಃ ॥೧೮॥

ಕನ್ನಡಾನುವಾದ

ದೇಹದಲ್ಲಿ ೭೨,೦೦೦ ನಾಡಿಗಳಿವೆ. ಈ ನಾಡಿಗಳಲ್ಲಿ ಹೃದಯದಲ್ಲಿರುವ ೧೦೧ ನಾಡಿಗಳು ಮುಖ್ಯವಾದುವು. ಈ ವಿಷಯವು ಶ್ರುತ್ಯುಕ್ತವು. ಇದರಿಂದ ನೂರೊಂದು ನಾಡಿಗಳು ಎಂದು ದಾಸರಾಯರು ಹೇಳಿರುತ್ತಾರೆ.

ಮಾತೃಕಾಧಿಕಪಂಚಾಶತ್–ಎಂದು ಶ್ರೀಮದಾಚಾರ್ಯರು ತಂತ್ರಸಾರದಲ್ಲಿ ಪ್ರಾರಂಭಿಸಿ, ಕಲಾಃ ಕಲಶದೇವತಾಃ–ಎಂದು ನೂರಾ ಒಂದು

ಕಲಶಗತ ಭಗವದ್ರೂಪಗಳನ್ನು ಹೇಳಿರುತ್ತಾರೆ: ಕಲಾಃ ಎಂದರೆ, ಅಂಶ ಎಂದರ್ಥ ॥೧೮॥

## ೫. ಶ್ರೀಗುರುಹೃದಯ ಪ್ರಕಾಶಿಕೆ

ನೂರೊಂದು ನಾಡಿಗತ ಕಲಾಃ ಕಲಶನಾಮಕಾಃ ಎಂಬ ಕಳಶಕಳಾರೂಪಗಳ ಸ್ಮರಣೆ ಪ್ರಕಾರ ತಿಳಿಸುತ್ತಾರೆ, ಎರಡಧಿಕ ಎಂದು. ಎಪ್ಪತ್ತೆರಡುಸಾವಿರ ನಾಡಿಗಳು ಈ ದೇಹದೆರಡು ಪಾರ್ಶ್ವದಲ್ಲೂ ಇರುವುದರೊಳಗೆ, ಮುಖ್ಯ ನೂರೊಂದು ನಾಡಿಗಳು ಇರುವವು. ಅಲ್ಲಿ ಅಂ ಅಜಾದಿ ೫೧ ಮಾತೃಕಾ ಮಂತ್ರರೂಪಗಳು, ಕೇಶವಾದಿ ೨೪ ರೂಪಗಳು, ವಾಸುದೇವಾದಿ ರೂಪ ೪, ಆತ್ಮಾದಿರೂಪ ೪, ವಿಶ್ವಾದಿರೂಪ ೪, ಮತ್ಸ್ಯಾದಿ ೧೦, ವೇದವ್ಯಾಸ ದತ್ತಾತ್ರೇಯ ಶಿಂಶುಮಾರ ಸಹ ೩, ಮೂಲನಾರಾಯಣರೂಪ ೧ ಸಹ. ೧೦೧ ರೂಪಗಳು ಕಲಶಪೂಜೆಯಲ್ಲಿ ಚಿಂತನೆ ಮಾಡತಕ್ಕವೆಂದರಿತು, ದೇಹಗತ ಪೂರ್ವೋಕ್ತ ೧೦೧ ನಾಡಿಗಳಲ್ಲಿ ಮೇಲೆ ಹೇಳಿದ ೧೦೧ ರೂಪಗಳನ್ನು ಸದಾ ಪರಮಾದರದಿಂದ ಭೂಸುರರೆಂಬ ಬ್ರಾಹ್ಮಣರು ಪೂಜಿಸುವರು ಎಂಬುದಾಗಿ ಕಳಶಪೂಜಾಂತರ್ಗತ ಭಗವದ್ರೂಪಗಳನ್ನು ತಿಳಿಸುತ್ತಾರೆ ॥೧೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ವದನಗತ ಅವಯವಗಳಲ್ಲಿ ವಿದ್ಯಮಾನನಾಗಿದ್ದು, ೧೬ ಅಜಾದಿ ಅರ್ಧಗರ್ಭ ಪರ್ಯಂತ ೧೬ ಸ್ವರವರ್ಣವಾಚ್ಯನಾದ ಶ್ರೀವಾಸುದೇವನಾಮಕ ಪರಮಾತ್ಮನ ವ್ಯಾಪಾರವಿಶೇಷಗಳನ್ನು ಹಿಂದಿನ ಪದ್ಯದಲ್ಲಿ ತಿಳಿಸಿದರು. ಅಂತಹ ಪರಮ ಕರುಣಾಮಯನಾದ ಭಗವಂತನು ಹೃದಯಸ್ಥಾನಗತ ೧೦೧ ಪ್ರಧಾನ ನಾಡಿಗಳಲ್ಲಿದ್ದು, ೧೦೧ ಭಗದ್ರೂಪಗಳಿಂದ ವಿರಾಜಮಾನನಾಗಿ, ದೇವಮಂದಿರವೆಂಬ ಈ ದೇಹ ಮಂಟಪದಲ್ಲಿ ಕಲಶನಾಮಕನಾಗಿದ್ದು, ಬ್ರಹ್ಮಜ್ಞಾನಿಗಳಿಂದ ಸಂಪೂಜ್ಯನಾಗಿರುವನೆಂದು ತಿಳಿಸುತ್ತಾರೆ ಎರಡಧಿಕ–ಎಂಬ ಪ್ರಸಕ್ತ ೧೮ನೆಯ ಪದ್ಯದಿಂದ.

೧. ಈ ದೇಹದಲ್ಲಿ ೭೨,೦೦೦ ನಾಡಿಗಳು ಓತಪ್ರೋತವಾಗಿ ಹಬ್ಬಿ ಹರಡಿವೆ. ಇಂತು ವ್ಯಾಪಕವಾಗಿರುವ ನಾಡೀವ್ಯೂಹದ ಸಂಖ್ಯೆಯನ್ನು ದಾಸರಾಯರು **ಎರಡಧಿಕ ಎಪ್ಪತ್ತೆನಿಪ**–ಎಂದು ತಿಳಿಸಿದ್ದಾರೆ. ಅಂದರೆ ಎಪ್ಪತ್ತರ ಮೇಲೆ ಎರಡು ಹೆಚ್ಚಾದ, ೭೦+೨=೭೨ ಎಂಬ ಸಂಖ್ಯೆಯಾಗುವುದು. ಎರಡಧಿಕ ಎಪ್ಪತ್ತುಎನಿಪ ಸಾವಿರದ ಅಂದರೆ ೭೨×೧೦೦೦=೭೨,೦೦೦ ಸಂಖ್ಯಾಕವಾದ ನಾಡಿಗಳೆಂದರ್ಥ. ಈ ನಾಡಿಗಳಲ್ಲಿ ದೇಹದ ಬಲಭಾಗದಲ್ಲಿರುವುದು ೩೬,೦೦೦ ಪುಂನಾಡಿಗಳು. ಎಡಭಾಗದಲ್ಲಿ ೩೬,೦೦೦ ಸ್ತ್ರೀ ನಾಡಿಗಳಿವೆ.

೨. ಇಂತಹ ೭೨,೦೦೦ ನಾಡಿಗಳಲ್ಲಿ ಪ್ರಧಾನ ನಾಡಿಗಳು ೧೦೧. ಈ ಸಂಖ್ಯೆಯನ್ನು ದಾಸರಾಯರು **ಏಕೋತ್ತರಶತಗಳಲಿಹವು** ಎಂದಿದ್ದಾರೆ. ಅಂದರೆ ಶತ=೧೦೦. ಏಕೋತ್ತರ=ಅದರಮೇಲೆ ಒಂದು ಅಧಿಕ. ಅಲ್ಲಿಗೆ ೧೦೦+೧=೧೦೧ ಮುಖ್ಯನಾಡಿಗಳು. ಈ ನಾಡಿಗಳು ಹೃದಯಸ್ಥಾನದಲ್ಲಿವೆ.

೩. ಈ ಏಕೋತ್ತರಶತನಾಡಿಗಳಲ್ಲಿ **ಇಹವು ನೂರಾಒಂದು ಮೂರ್ತಿಗಳು** ಎಂದು ತಿಳಿಸುತ್ತಾರೆ.

**ಪ್ರಮಾಣ**

**ಶತಂ ಚ ಏಕಾಚ ಹೃದಯಸ್ಯನಾಡ್ಯಃ—ಶ್ರುತಿವಾಕ್ಯ ಪ್ರಮಾಣ.**

ಈ ನೂರಾ ಒಂದು ನಾಡಿಗಳಲ್ಲಿ ಶ್ರೀಪರಮಾತ್ಮನು ೧೦೧ ಭಗವದ್ರೂಪಗಳಿಂದ ನಾಡೀಗತನಾಗಿ, ನಾಡಿಗಳ ದ್ವಾರಾ ಶರೀರದ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನು.

## ೧೦೧ ಭಗವದ್ರೂಪಗಳ ವಿವರ

| | | |
|---|---|---|
| ೧. | ಅಜಾದಿ ನರಸಿಂಹಪರ್ಯಂತ ವರ್ಣವಾಚ್ಯರೂಪಗಳು | ೫೧ |
| ೨. | ಕೇಶವಾದಿ ಕೃಷ್ಣಪರ್ಯಂತ ಚತುರ್ವಿಂಶತಿಮೂರ್ತಿಗಳು | ೨೪ |
| ೩. | ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮರೂಪಗಳು | ೪ |
| ೪. | ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ | ೪ |
| ೫. | ವಿಶ್ವ, ತೈಜಸ, ಪ್ರಾಜ್ಞ, ತುರ್ಯ | ೪ |
| ೬. | ಮತ್ಸ್ಯಾದಿ ಕಲ್ಕಿಪರ್ಯಂತ ದಶರೂಪಗಳು | ೧೦ |
| ೭. | ವೇದವ್ಯಾಸ, ದತ್ತಾತ್ರೇಯ. ಶಿಂಶುಮಾರ ಮತ್ತು ಮೂಲನಾರಾಯಣರೂಪ | ೪ |
| | ಒಟ್ಟು | ೧೦೧ |

**ಪ್ರಮಾಣ**

**ಏಕಪಂಚಾಶದ್ವರ್ಣಾನಾಂ ಚತುರ್ವಿಂಶತಿಮೂರ್ತಯಃ।**
**ಆತ್ಮಾದ್ಯಾ ವಾಸುದೇವಾದ್ಯಾ ವಿಶ್ವಾದ್ಯಾ ಮತ್ಸ್ಯ ಕಚ್ಛಪೌ॥**
**ಕೋಲೋ ನೃಸಿಂಹ ವಟುರ್ಜಾಮದಗ್ನ್ಯೋರಘೂದ್ವಹೌ।**
**ವಾಸಿಷ್ಠ ಯಾದವೌ ಕೃಷ್ಣಾತ್ರೇಯೌ ಬುದ್ಧ ಕಲ್ಕಿನೌ।**
**ಶಿಂಶುಮಾರಶ್ಚೇತಿ ಶತಂ ಕಲಾಃ ಕಲಶದೇವತಾಃ ॥**

೪. ೧೦೧ ಭಗವದ್ರೂಪಗಳಿಂದ ೧೦೧ ಪ್ರಧಾನನಾಡಿಗಳಲ್ಲಿ ಪ್ರಕಾಶಮಾನನಾಗಿ ಬೆಳಸುತ್ತಿರುವ ನಾಡೀಗತ ಶ್ರೀಮೂಲನಾರಾಯಣರೂಪೀ ಪರಮಾತ್ಮನಿಗೆ ಕಲಶ ಎಂದು ಹೆಸರು.

**ಕಲಾಃ ಕಲಶ ದೇವತಾಃ** ಎಂಬ ವಾಕ್ಯದಂತೆ ಕಲಾಃ ಎಂದರೆ ಅಂಶ ಎಂದರ್ಥ. ದೇವಪೂಜಾಕಾಲದಲ್ಲಿ ಕಳಸದಲ್ಲಿ ಆವಾಹನಾ ಕ್ರಮದಿಂದ **ಕಳಸಾರಾಧನೆ** ಮಾಡುತ್ತೇವೆ. ಇಂತಹ ಕಳಶದಲ್ಲಿ ಪೂರ್ವೋಕ್ತ ಮಂತ್ರಗಳಿಂದ ೧೦೧ ಭಗವನ್ಮೂರ್ತಿಗಳನ್ನು ಆವಾಹನೆ ಮಾಡುತ್ತೇವೆ. ಕಲಶಗತ ಶ್ರೀಪರಮಾತ್ಮನ ಒಂದೊಂದು ರೂಪಕ್ಕೂ ಕಲಾ ಎಂದು ಹೆಸರು. ಸ್ವಗತ

ಬೇಧವಿವರ್ಜಿತನಾದ ಶ್ರೀಪರಮಾತ್ಮನು ೧೦೧ ಸ್ವಾಭಿನ್ನಾಂಶಗಳಿಂದ (ಕಲಾ= ಅಂಶ) ವಿರಾಜಮಾನನಾಗಿ ಕಲಶಪೂಜಾದ್ವಾರಾ ಸೇವೆಯನ್ನು ಕೈಗೊಳ್ಳುವನು.

**ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರಸ್ಸಮಾಶ್ರಿತಃ|**
**ಮೂಲೇ ತತ್ರಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾಃಸ್ಥಿತಾಃ||**

ಎಂದು ಕಲಶಪೂಜಾ ಮಂತ್ರ.

ನಮ್ಮ ಹೃದಯವು ಕಲಶದ ಆಕಾರದಲ್ಲಿದೆ. ಈ ಹೃದಯಸ್ಥಾನ ದಿಂದಲೇ ೧೦೧ ಪ್ರಧಾನ ನಾಡಿಗಳು ಹೊರಡುವುವು. ಈ ೧೦೧ ನಾಡೀಗತ ಏಕೋತ್ತರ ಶತರೂಪಗಳನ್ನೇ ನಮ್ಮ ಶರೀರದಲ್ಲಿರುವ ಹೃದಯವೆಂಬ ಕಲಶ ದಲ್ಲಿ ಆವಾಹನೆಗೈದು ಪೂಜಿಸಿದರೆ ಅದೇ ಕಳಶಪೂಜಾಕ್ರಮವು. ಬಾಹ್ಯದಲ್ಲಿ ಕಲಶಸ್ಥಾಪನೆ ಮಾಡಿ, ಭಗವದ್ರೂಪಗಳ ಆವಾಹನಾ ಕ್ರಮವು ಔಪಚಾರಿಕವು. ನೈಜವಾದ ಆಧ್ಯಾತ್ಮಿಕ ಅನುಸಂಧಾನವೆಂದರೆ, ಆ ಕಲಶಗತ ಭಗವನ್ಮೂರ್ತಿ ಗಳನ್ನು ನಮ್ಮ ಹೃದಯಗತ ೧೦೧ ನಾಡಿಗಳಲ್ಲಿ ಚಿಂತಿಸಿ, ತದ್ವಾರಾ ಸ್ವಬಿಂಬ ನಲ್ಲಿ ಐಕ್ಯಚಿಂತನೆ ಮಾಡುವುದೇ ನಿಜವಾದ ದೇವರಪೂಜಾ ಎಂದೆನಿಸುವುದು.

ಈ ಅಭಿಪ್ರಾಯವನ್ನೇ ದಾಸರಾಯರು **ಅರಿತು ದೇಹದಿ ಕಲಶ ನಾಮಕ ಹರಿಗೆ ಕಳೆಗಳೆಂದು ನೈರಂತರದಿ ಪೂಜಿಸುತಿಹರು ಪರಮಾ ದರದಿ ಭೂಸುರರು**–ಎಂದು ಉದ್ಘೋಷಿಸಿರುತ್ತಾರೆ.

ಭೂಸುರರು ಎಂದರೆ ವಿಪ್ರರು ಎಂದರ್ಥ. ಈ ರೀತಿ ದೇಹಗತ ಭಗವ ನ್ಮೂರ್ತಿಗಳನ್ನು ಜ್ಞಾನಾನುಸಂಧಾನಕ್ರಮದಿಂದ ಅರಿತು ಪೂಜಿಸುವವರೇ ಬ್ರಹ್ಮಜ್ಞಾನಿಗಳು. ಇಂತಹ ಬ್ರಹ್ಮಜ್ಞಾನಿಗಳು ಭೂಸುರರೇ ಹೊರತು ಕೇವಲ ಜನ್ಮತಃ ಬ್ರಾಹ್ಮಣನಾದವನಲ್ಲ. ಬ್ರಾಹ್ಮಣ್ಯ ಜ್ಞಾನವಿಶೇಷದಿಂದ ಪ್ರಾಪ್ತಿಯೇ ಹೊರತು ಕೇವಲ ಜನ್ಮತಃ ಅಲ್ಲ. **ಅಹೊಯು ಪೂಜಯೇ ದೇತಾಃ ಸಾನ್ನಿಯು ಕಲಶೇ ಬುಧಃ** ||೧೮||

## ಪದ್ಯ ೧೯

**ಮೂಲ**

ಇದಕೆ ಕಾರಣವೆನಿಸುವುವು ಎರ ।
ಡಧಿಕ ದಶನಾಡಿಗಳೊಳಗೆ ಸುರ ।
ನದಿಯು ಮೊದಲಾದಮಲತೀರ್ಥಗಳಿಹವು ಕರಣದಲಿ॥
ಪದುಮನಾಭನು ಕೇಶವಾದಿ ।
ದ್ವಿದಶರೂಪದಲ್ಲಿಪ್ಪನಲ್ಲತಿ।
ಮೃದುಳವಾದ ಸುಷುಮ್ನದೊಳಗೇಕಾತ್ಮನೆನಿಸುವನು ॥೧೯॥

**ಅವತರಣಿಕೆ**

ಹಿಂದಿನ ಪದ್ಯದಲ್ಲಿ ೧೦೧ ಪ್ರಧಾನ ನಾಡಿಗಳ ವಿವರ ತಿಳಿಸಿ, ಆ ನಾಡೀಗತ ಕಳಸನಾಮಕನಾದ ಶ್ರೀಪರಮಾತ್ಮನ ೧೦೧ ಭಗವದ್ರೂಪೋಪಾಸನಾ ಕ್ರಮತಿಳಿಸಿ, ಅಂತಹ ೧೦೧ ನಾಡಿಗಳಲ್ಲಿ ಮುಖ್ಯಕಾರಣವಾದ ೧೨ ನಾಡಿಗಳಲ್ಲಿ (ಎರಡಧಿಕಶತ) ಗಂಗಾದಿ ತೀರ್ಥಗಳು ಹಾಗೂ ಆ ನದ್ಯಭಿಮಾನಿದೇವತೆಗಳು ಇದ್ದಾರೆಂತಲೂ ಆ ನಾಡ್ಯಂತರ್ಗತ ಕೇಶವಾದಿ ದಾಮೋದರ ಪರ್ಯಂತ ವಿದ್ಯಮಾನನಾಗಿರುವ ಶ್ರೀಪರಮಾತ್ಮನ ದ್ವಾದಶ ಭಗವನ್ಮೂರ್ತಿಗಳನ್ನೂ ಪ್ರಧಾನ ನಾಡಿಯಾದ ಸುಷುಮ್ನಾದಲ್ಲಿ ಏಕಾತ್ಮನಾಮಕನಾಗಿರುವ ಶ್ರೀಪರಮಾತ್ಮನ ವಿಷಯವನ್ನು ತಿಳಿಸುತ್ತಾರೆ **ಇದಕೆ ಕಾರಣವೆನಿಸುವುದು**-ಎಂಬ ಪ್ರಸಕ್ತ ಸಂಧಿಗತ ೧೯ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ**

**ಇದಕೆ**=ಪೂರ್ವೋಕ್ತ ೧೦೧ ನಾಡಿಗಳಿಗೆ, **ಕಾರಣವೆನಿಸುವುವು**= ಮೂಲಕಾರಣವೆಂದು ಕರೆಯಿಸಲ್ಪಡುವ, **ಎರಡಧಿಕದಶನಾಡಿಗಳೊಳಗೆ**= ೧೨ ನಾಡಿಗಳಲ್ಲಿ (ದಶ=೧೦. ಎರಡಧಿಕ=ಅದರಮೇಲೆ ೨ ಹೆಚ್ಚಾದ ಅಂದರೆ

೧೦+೨=೧೨ ಎಂದರ್ಥ), **ಸುರನದಿಯು**=ದೇವಗಂಗೆ ಎಂದು ಪ್ರಖ್ಯಾತವಾದ ಗಂಗಾನದಿಯೇ, **ಮೊದಲಾದ**=ಮುಂತಾದ, **ಅಮಲತೀರ್ಥಗಳು**=ಪರಿಶುದ್ಧವಾದ ಪುಣ್ಯತೀರ್ಥಗಳು, **ಇಹವು**=ಇರುವುವು, **ಕರಣದಲಿ**=೧೨ ಇಂದ್ರಿಯಗಳಲ್ಲಿ ಆ ೧೨ ನಾಡಿಗಳೂ ಮತ್ತು ನಾಡ್ಯಂತರ್ಗತ ಪುಣ್ಯತೀರ್ಥಗಳೂ ಇವೆ. **ಪದುಮನಾಭನು**=ಪದ್ಮನಾಭರೂಪೀ ಶ್ರೀಪರಮಾತ್ಮನು, **ಕೇಶವಾದಿ**=ಕೇಶವರೂಪದಿಂದ ಪ್ರಾರಂಭಿಸಿ, **ದ್ವಿದಶರೂಪದಲಿ**=ದಾಮೋದರರೂಪ ಪರ್ಯಂತ ೧೨ ರೂಪಗಳಿಂದ, **ಇಪ್ಪ**=ವಿದ್ಯಮಾನನಾಗಿದ್ದಾನೆ. **ಅಲ್ಲಿ**=ಆ ದ್ವಾದಶನಾಡಿಗಳ ಒಳಗೆ, **ಅತಿಮೃದುಳನಾದ**=ಅತ್ಯಂತ ಮೃದುವಾದ, **ಸುಷುಮ್ನದೊಳು**=ಸುಷುಮ್ನಾನಾಡಿಯಲ್ಲಿ, **ಏಕಾತ್ಮನೆನಿಸುವನು**=ಏಕಾತ್ಮ ಎಂಬ ಹೆಸರಿನಿಂದ ಪ್ರಖ್ಯಾತನಾಗಿದ್ದಾನೆ ॥೧೯॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಎಪ್ಪತ್ತೆರಡುಸಾವಿರ ನಾಡಿಗಳಿಗೆ ನೂರಾಒಂದು ನಾಡಿಗಳು ಕಾರಣಗಳು ಈ ನಾಡಿಗಳಿಗೆ ಕಾರಣಭೂತನಾಡಿಗಳನ್ನು ಹೇಳತಾರೆ.

ಇದಕೆ ಕಾರಣವೆನಿಸುವುವು–ಈ ಪೂರ್ವೋಕ್ತ ನೂರಾಒಂದು ನಾಡಿಗಳಿಗೆ ಕಾರಣನಾಡಿಗಳು, ಎರಡಧಿಕದಶನಾಡಿಗಳ ಒಳಗೆ–ಈ ಹನ್ನೆರಡು ನಾಡಿಗಳಲ್ಲಿ ಸುರನದಿಯು ಮೊದಲಾದ–ಭಾಗೀರಥ್ಯಾದಿ ನದಿಗಳೇ ಆರಂಭಮಾಡಿ, ಅಖಿಲ ತೀರ್ಥಗಳಿಹವು–ಸಮಸ್ತತೀರ್ಥಗಳೂ ಇರೋದಾಗಿ ಅದೆ. (ಅಖಿಳಶಬ್ದ ಸಂಕೋಚಾರ್ಥವು) ಪ್ರಕೃತ ದ್ವಾದಶತೀರ್ಥಗಳು ಅವೆ. ಕರಣದಲಿ–ದ್ವಾದಶ ನಾಡಿಗಳು ಇರೋದಾಗಿ ಅದೆ. ತದ್ದ್ವಾರಾ ನದಿಗಳನೂ ಇರೋದಾಗಿ ಅದೆ. ಅಲ್ಲಿ ಭಗವದ್ರೂಪಗಳು, ಕೇಶವಾದಿ ಪದುಮನಾಭನು–ಕಮಲನಾಭನಾದ ಶ್ರೀ ಪದ್ಮನಾಭನಾಮಕನಾದ ಶ್ರೀಪರಮಾತ್ಮನು ಕೇಶವಾದಿ ದಾಮೋದರ ಪರಿಯುಂತರವರಿಗೂ, ದ್ವಿದಶರೂಪದಲಿಪ್ಪ–ಹನ್ನೆರಡು ರೂಪದಿಂದ ಇದ್ದಾನೆ.

ಅಲ್ಲಿ–ಆ ದ್ವಾದಶನಾಡಿಗಳ ಒಳಗೆ, ಆತ್ಮನೆನಿಸುವನು–ಆತ್ಮ ಎಂತ ನಾಮವುಳ್ಳ ಶ್ರೀಪರಮಾತ್ಮ, ಅತಿ ಮೃದುಳವಾದ–ಅತ್ಯಂತ ಮೃದುತರವಾದ, ಸುಷುಮ್ನ ದೊಳಗೆ–ಸುಷುಮ್ನಾನಾಡೀ ಒಳಗೆ, ಏಕ-ಇರುವ ಮುಖ್ಯನಾದ ಶ್ರೀಪರ ಮಾತ್ಮ ಮುಖ್ಯನಾದವನು ಎಂತ ಕರೆಸೋವನಾಗತಾನೆ ಎಂತ ತಾತ್ಪರ್ಯ.

| | ನಾಡಿಗಳ ಹೆಸರು | ನದಿಗಳ ಹೆಸರು | ಭಗವದ್ರೂಪ ಗಳು | ಇಂದ್ರಿಯ ಗಳು |
|---|---|---|---|---|
| ೧. | ಇಡಾ | ಮಂದಾಕಿನೀ | ಮಾಧವ | ವಾಮನಾಸಾಪುಟ |
| ೨. | ಪಿಂಗಳಾ | ಯಮುನ | ಹರಿ–ಕೃಷ್ಣ | ದಕ್ಷಿಣನಾಸಾಪುಟ |
| ೩. | ಮಧ್ಯನಾಡೀ | ಗೋಮತಿ | ನಾರಾಯಣ–ಗೋವಿಂದ | ಬ್ರಹ್ಮರಂದ್ರ |
| ೪. | ಶಂಖಿನಿ | ತಪತೀ | ಜಾನಕೀಪತಿ ರಾಮ | ಲಿಂಗ |
| ೫. | ಗಾಂಧಾರೀ | ಕಾವೇರೀ | ಕಪಿಲದೇವರು | ದಕ್ಷಿಣಕರ್ಣ |
| ೬. | ಹಸ್ತಿನೀ | ಸಿಂಧು | ನಾರಾಯಣ | ವಾಮಕರ್ಣ |
| ೭. | ಲಂಬುಸೀ | ತಾಮ್ರಪರ್ಣೆ | ಅನಂತ | ದಕ್ಷಿಣ ಚಕ್ಷು |
| ೮. | ಸರಸ್ವತೀ | ಗಂಡಕೀ | ನಾರಾಯಣ | ಜಿಹ್ವೆ |
| ೯. | ನಂದಾ | ಕೃಷ್ಣವೇಣೀ | ಕೃಷ್ಣ | ಲಿಂಗಮೂಲ |
| ೧೦. | ಕುಹು | ಸೋಮ ನಂದಿನಿ | ದಧಿವಾಮನ | ಗುದ |
| ೧೧. | ಪೂರ್ಣಾ | ಪಯಸ್ವಿನಿ | ವರಾಹ | ವಾಮಚಕ್ಷು |
| ೧೨. | ವಾರುಣೀ | ಗೋದಾವರೀ | ಹರಿ | ಶಿರಸೋಪರಿ |

ಕ್ರಮಾಲಂಕಾರದಿಂದ ಕೇಶವಾದಿ ಹನ್ನೆರಡು ಮೂರ್ತಿಗಳು ಇರೋದಾಗಿ ಆದೆ. ಆಯಾ ತೀರ್ಥಗಳಿಗೆ ದಾವ ನಾಮವೋ, ಅದೇ ನಾಮವಾಚ್ಯ ಪರಮಾತ್ಮ ತದ್ವಾಚ್ಯನಾಗಿದ್ದಾನೆ. ಎರಡು ಪ್ರಕಾರ ಭಗವದ್ರೂಪಗಳಿಗೆ ಕೃತ್ಯವೇನೆಂದರೆ ಅಧಿರೂಪವೊಂದು, ಅಧಿದೈವದೇವತೆಗಳ ಅಂತರ್ಗತ ಅಧ್ಯಾತ್ಮರೂಪ ಒಂದು ಎಂತ ತಾತ್ಪರ್ಯ. ಈ ಪ್ರಕಾರ ಅನುಸಂಧಾನವು ಎಂತ ಅರ್ಥ ॥೧೯॥

## ೨. ಭಾವಪ್ರಕಾಶಿಕೆ ವ್ಯಾಖ್ಯಾನ

ಮೇಲೆ ಹೇಳಿದ ೧೦೧ ನಾಡಿಗಳಿಗೆ ಕಾರಣಭೂತಗಳಾದ ೧೨ ನಾಡಿಗಳಲ್ಲಿ ಚಿಂತಿಸಬೇಕಾದ ಮೂರ್ತಿಗಳನ್ನು ಹೇಳುತ್ತಾರೆ.

ಈ ಮೇಲೆ ಹೇಳಿದ ನಾಡಿಗಳಿಗೆ ಕಾರಣಭೂತವಾದ ನಾಡಿಗಳು ೧೨ ಪ್ರಧಾನವಾದುವು, ಇವುಗಳಲ್ಲಿ ಗಂಗಾ ಮೊದಲಾದ ೧೨ ನದಿಗಳು ಅಂದರೆ, ಆ ನದಿಗಳ ಅಭಿಮಾನಿ ದೇವತೆಗಳು ವಾಸಮಾಡುವರು. ಆ ನಾಡಿಗಳ ಮತ್ತು ನದಿಗಳ ಹೆಸರುಗಳನ್ನು ಶ್ರೀವಿಜಯದಾಸವರ್ಯರು ತಮ್ಮ ಸುಳಾದಿಯಲ್ಲಿ ಹೇಳಿರುವರು.

### ಸುಳಾದಿ

ಒಂದೊಂದು ನಾಡಿಯಲ್ಲಿ ಒಂದೊಂದು ನದಿಗಳು
ಕುಂದಾದೆ ಹನ್ನೆರಡಾರಲ್ಲಿಹವು
ಮಂದಾಕಿನೀ ಇಡಾನಾಡಿಯಲ್ಲಿ ಭಾನು
ನಂದನೆ ಪಿಂಗಳಾನಾಡಿಯಲ್ಲಿ ಗಾಂಧಾರಿನಾಡಿಯಲ್ಲಿ
ಉಂಟು ಕಾವೇರಿ, ಹಸ್ತನೀಗೆ ಸಿಂಧುನದಿಯೆನ್ನಿ
ತಾಮ್ರಪರ್ಣಿ ಸಂದಿದೆ ನೋಡಿ ಲಂಬುನಾಡಿಯಲ್ಲಿ
ಚೆಂದುಳ್ಳ ಗೋಮತಿ ಮಧ್ಯನಾಡಿಯಲ್ಲಿ
ಪುನ್ನಾಡಿ ಗಂಡಿಕೆ ನೋಡಿ, ಸರಸ್ವತೀ ನಾಡಿಯಲ್ಲಿ

ನಂದಾ, ಕೃಷ್ಣವೇಣಿ ಕುಹದಿ ಸೋಮು
ನಂದಿನಿ, ತಾಪತೀ ಶಂಕಿಣೀನಾಡಿಯಲ್ಲಿ ವಾಸ
ನೆಂದು ತಿಳಿ, ಗೋದೆ ವಾರುಣಿನಾಡಿಯಲ್ಲಿ
ಅಂದವಾದ ಪೂಷಾ ಪಯಸ್ವಿನೀಯಿಂದ ಪುಟ್ಟಿಸಾದು
ಅಲ್ಲಿಗಲ್ಲಿ ಪಡಕೊಂಬೋರು
ಬೃಂದಾರಕವಂದ್ಯ ವಿಜಯವಿಠ್ಠಲರೇಯ
ಸಂದರ್ಶನ ಮಾಳ್ಪ ಮಹಾತ್ಮರು ಬಲ್ಲರು

ಈ ಸುಳಾದಿಯ ವಿವರಣೆಯ ಪ್ರಕಾರ :

೧. ಇಡಾನಾಡಿಯಲ್ಲಿ–ಮಂದಾಕಿನೀ ನದಿ (ಸುರಗಂಗೆ)
೨. ಪಿಂಗಳಾನಾಡಿಯಲ್ಲಿ–ಯಮುನೆ (ಸೂರ್ಯನಂದನೆ)
೩. ಗಾಂಧಾರೀನಾಡಿಯಲ್ಲಿ ಕಾವೇರಿ.
೪. ಹಸ್ತಿನೀನಾಡಿಯಲ್ಲಿ–ಸಿಂಧು
೫. ಅಲಂಬುನಾಡಿಯಲ್ಲಿ–ತಾಮ್ರಪರ್ಣೀ
೬. ಮಧ್ಯನಾಡಿಯಲ್ಲಿ–ಗೋಮತೀ
೭. ಪುಂನಾಡಿಯಲ್ಲಿ–ಗಂಡಕೀ
೮. ಸರಸ್ವತೀನಾಡಿಯಲ್ಲಿ–ನಂದಾ, ಕೃಷ್ಣವೇಣೀ
೯. ಕುಹುನಾಡಿಯಲ್ಲಿ–ಕಾಳಿಂದೀ
೧೦. ಶಂಕಿಣೀನಾಡಿಯಲ್ಲಿ–ತಪತೀ
೧೧. ವಾರುಣೀನಾಡಿಯಲ್ಲಿ–ಗೋದಾವರಿ
೧೨. ಪೂಷಾನಾಡಿಯಲ್ಲಿ–ಪಯಸ್ವಿನೀ

ಹೀಗೆ ೧೨ ನಾಡಿಗಳಲ್ಲಿ ೧೨ ನದಿಗಳನ್ನು ತಿಳಿದು ಜ್ಞಾನತೀರ್ಥದಲ್ಲಿ ಸ್ನಾನ ಮಾಡಿರೆಂದು ಶ್ರೀವಿಜಯದಾಸರ ಸುಳಾದಿಯಿಂದ ವ್ಯಕ್ತವಾಗುವುದು.

ಇದೇ ರೀತಿಯಾಗಿ ಬ್ರಾಹ್ಮಣರ ಬಲಗಿವಿಯಲ್ಲಿಯೂ ಸಹ ಇರುವುವು. ಶ್ರೀಪರಮಾತ್ಮನು ಕೇಶವ ಮೊದಲು ದಾಮೋದರನವರೆಗೂ ಆಗುವ ದ್ವಾದಶ ರೂಪಗಳಿಂದ ಆ ನಾಡಿಗಳಲ್ಲಿರುವನು. ಎಲ್ಲ ನಾಡಿಗಳಿಗೂ ಮೂಲಾಧಾರ ವಾದ ಮಧ್ಯದಲ್ಲಿರುವ ಸುಷುಮ್ನಾನಾಡಿಯಲ್ಲಿ ಶ್ರೀಪರಮಾತ್ಮನು ಏಕಾತ್ಮ ನೆಂಬ ಹೆಸರಿನಿಂದ ವಾಸಮಾಡುವನು. ಹೀಗೆ ತಿಳಿದು ಚಿಂತಿಸುವುದರಿಂದ, ಆಯಾ ನದಿಗಳಲ್ಲಿ ಸ್ನಾನಮಾಡಿದ ಫಲವು ಪ್ರಾಪ್ತವಾಗುವುದೆಂಬ ತಾತ್ಪರ್ಯ.

## ೪. ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಇದಕೆ ಇತಿ ॥ ಕರಣೇತಿ॥ ಮನೋ ಬುದ್ಧೀತಿ ದ್ವಾದಶ–ಇತ್ಯುಕ್ತೇಃ॥

**ಕನ್ನಡಾರ್ಥ**

ಪೂರ್ವೋಕ್ತ ೧೦೧ ನಾಡಿಗಳಿಗೆ ಕಾರಣನಾಡಿಗಳ ಸಂಖ್ಯಾ ೧೨. ಈ ದ್ವಾದಶನಾಡಿಗಳು ಕರಣಗತವಾಗಿವೆ. ದಶೇಂದ್ರಿಯಗಳು=೧೦. ಮನಸ್ಸು ಮತ್ತು ಬುದ್ಧಿ ಎರಡೂ ಸೇರಿದರೆ ೧೨ ಕರಣಗಳಾವುವು. ಈ ೧೨ ಇಂದ್ರಿಯ ಗಳಲ್ಲಿ ೧೨ ನಾಡಿಗಳು ಅವುಗಳ ಅಂತರ್ಗತ ಕೇಶವಾದಿ ದಾಮೋದರ ಪರ್ಯಂತ ದ್ವಾದಶ ಭಗವದ್ರೂಪಗಳ ಚಿಂತನೆ ಎಂತ ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು ॥೧೯॥

## ೫. ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಉಕ್ತ ನೂರೊಂದುನಾಡಿಗಳೊಳಗೆ ಮುಖ್ಯ ೧೨, ಅದರಲ್ಲೂ ಮುಖ್ಯ ಸುಷುಮ್ನಾದಲ್ಲೂ ಸಹ ದೇವರ ರೂಪ ಮುಂತಾದ್ದು ತಿಳಿಸುತ್ತಾರೆ, ಇದಕೆ ಎಂದು. ಮೇಲೆ ಹೇಳಿದ ನೂರೊಂದು ನಾಡಿಗೆ ಕಾರಣನಾಡಿಗಳು ೧೨ ಇರು ವುವು. ಅವುಗಳನ್ನಾಶ್ರೈಸಿ ಕಿವಿಯಲ್ಲಿ ಗಂಗಾದಿ ನದಿಗಳು, ಸಕಲ ತೀರ್ಥಾಭಿ ಮಾನಿಗಳು ಸಹ ಇರುವರು. ಅಲ್ಲಿ ಪದ್ಮನಾಭನು ಕೇಶವಾದಿ ದಾಮೋದ ರಾಂತ ೧೨ ರೂಪಗಳಿಂದ ಹನ್ನೆರಡು ನಾಡಿಗಳಲ್ಲಿ ಇರುವನು. ಅಲ್ಲಿ ಅತಿ

ಮೃದುವಾದ, ಎಲ್ಲಕ್ಕೂ ಕಾರಣವಾದ ಸೂಕ್ಷ್ಮ ಸುಷುಮ್ನಾನಾಡಿಯಲ್ಲಿ ಏಕಾತ್ಮರೂಪನೆಂಬ ದೇವರರೂಪ ಇರುವುದು. ಇಲ್ಲಿ ದ್ವಾದಶ ಮುಖ್ಯನಾಡಿಗಳಲ್ಲಿ ಗಂಗಾದಿ ೧೨ ನದಿಗಳು ಬಲಗಿವಿಯಲ್ಲಿರುವವೆಂದು ಅನುಸಂಧಾನವನ್ನು ತಿಳಿಸಿರುತ್ತೆ ॥೧೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯದಲ್ಲಿ ಹೃದಯಗತ ೧೦೧ ಮುಖ್ಯ ನಾಡಿಗಳ ವಿವರ, ಆ ನಾಡ್ಯಂತರ್ಗತ ಕಳಶನಾಮಕ ೧೦೧ ಭಗವನ್ಮೂರ್ತಿಗಳ ಆವಾಹನೆ ಮತ್ತು ಚಿಂತನಾಕ್ರಮವನ್ನು ತಿಳಿಸಿ, **ಇದಕೆ ಕಾರಣವೆನಿಸುವುವು**–ಎಂಬ ಪ್ರಸಕ್ತ ೧೯ನೆಯ ಪದ್ಯದಿಂದ, ೧೦೧ ನಾಡಿಗಳಿಗೆ ಕಾರಣಭೂತಗಳಾದ ದ್ವಾದಶನಾಡಿಗಳು, ೧೨ ಕರಣಗಳು, ಅನಾಡ್ಯಭಿಮಾನೀ ದೇವತೆಗಳು. ನಾಡಿಗಳಲ್ಲಿ ವಿದ್ಯಮಾನವಾಗಿರುವ ೧೨ ಪುಣ್ಯನದಿಗಳು ಹಾಗೂ ಅನದ್ಯಭಿಮಾನೀ ದೇವತೆಗಳು ಮಧ್ಯನಾಡಿ ಎಂದೆನಿಪ ಸುಷುಮ್ನಾನಾಡಿಗತ ಭಗವದ್ರೂಪಗಳ ವಿಚಾರಗಳನ್ನು ತಿಳಿಸುತ್ತಾರೆ.

೧. ಹೃದಯದಿಂದ ಹೊರಡುವ ಮುಖ್ಯನಾಡಿಗಳ ಸಂಖ್ಯೆ ೧೦೧. ಈ ೧೦೧ ಪ್ರಧಾನ ನಾಡಿಗಳಿಗೆ ಕಾರಣಭೂತವಾದ ನಾಡಿಗಳು ೧೨. ಈ ಅಭಿಪ್ರಾಯವನ್ನೇ ದಾಸರಾಯರು **ಇದಕೆ ಕಾರಣವೆನಿಸುವುವು ಎರಡಧಿಕ ದಶನಾಡಿಗಳು** ಎಂದು ನಿರೂಪಿಸಿರುತ್ತಾರೆ. ಎರಡಧಿಕ ದಶವೆಂದರೆ–ದಶ ಎಂದರೆ ಹತ್ತು. ಎರಡಧಿಕವೆಂದರೆ ೧೦ರ ಮೇಲೆ ೨. ಅಲ್ಲಿಗೆ ೧೦+೨= ೧೨ ಎಂದಾಗುವುದು.

೨. ಇಂತಹ ಎರಡಧಿಕ ದಶನಾಡಿಗಳಲ್ಲಿ ಗಂಗಾದಿ ಪುಣ್ಯನದಿಗಳು ಸೂಕ್ಷ್ಮರೂಪದಲ್ಲಿವೆ. ಈ ನಾಡಿಗಳೇ ಪುಣ್ಯನದಿಗಳ ಸ್ಥಾನ ನಮ್ಮೀ ಸ್ಥೂಲ ಶರೀರದಲ್ಲಿ, ತ್ರಿವಿಕ್ರಮನ ಎಡಪಾದಾಂಗುಷ್ಟದ ನಖಾಗ್ರದಿಂದ ಬ್ರಹ್ಮಾಂಡ

ಖರ್ಪರ ಸೀಳಿದ ಕಾಲದಲ್ಲಿ ಗಂಗಾನದಿಯ ಉತ್ಪತ್ತಿ. ತ್ರಿವಿಕ್ರಮನ ಪಾದೋದ್ಭವೆಯಾದ ಪವಿತ್ರ ಗಂಗಾ ದೇವಲೋಕದಲ್ಲಿ ಹರಿದುದರಿಂದ ಸುರಗಂಗೆ ಎಂದೆನಿಸಿದಳು. ದ್ವಾದಶನಾಡಿಗಳು, ಅವುಗಳಿಗೆ ಸಂಬಂಧಿಸಿದ ದ್ವಾದಶ ಕರಣಗಳು, ಆ ನಾಡಿಗಳಲ್ಲಿರುವ ದ್ವಾದಶ ನದಿಗಳು ಹಾಗೂ ನದ್ಯಭಿಮಾನಿದೇವತೆಗಳು, ನಾಡ್ಯಂತರ್ಗತ ನದ್ಯಭಿಮಾನಿ ದೇವತಾಂತರ್ಗತ ಕೇಶವಾದಿ ದಾಮೋದರ ಪರ್ಯಂತ ವಿದ್ಯಮಾನನಾಗಿರುವ ಶ್ರೀಪರಮಾತ್ಮನ ದ್ವಾದಶ ಭಗವದ್ರೂಪಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ. ಇದರ ಅವಲೋಕನದ್ವಾರ ಅಧ್ಯಯನ ಮತ್ತು ಚಿಂತನೆಯಿಂದ ಭಗವದ್ರೂಪೋಪಾಸನೆಯನ್ನು ಗುರೂಪದೇಶ ದ್ವಾರಾ ಅರಿಯಬೇಕು.

| ಕ್ರಮ ಸಂಖ್ಯೆ | ದ್ವಾದಶ ನಾಡಿಗಳು | ದ್ವಾದಶ ನದಿಗಳು | ದ್ವಾದಶ ಭಗವದ್ರೂಪಗಳು | ದ್ವಾದಶ ಕರಣಗಳು |
|---|---|---|---|---|
| ೧. | ಇಡಾ | ಗಂಗಾ | ಕೇಶವ | ವಾಮನಾಸಾಪುಟ |
| ೨. | ಪಿಂಗಳ | ಯಮುನೆ | ನಾರಾಯಣ | ದಕ್ಷಿಣನಾಸಾಪುಟ |
| ೩. | ಗಾಂಧಾರೀ | ಕಾವೇರಿ | ಮಾಧವ | ದಕ್ಷಿಣಕರ್ಣ |
| ೪. | ಹಸ್ತಿನೀ | ಸಿಂಧು | ಗೋವಿಂದ | ವಾಮಕರ್ಣ |
| ೫, | ಲಂಬುಸೀ | ತಾಮ್ರಪರ್ಣೀ | ವಿಷ್ಣು | ದಕ್ಷಿಣಚಕ್ಷು |
| ೬. | ಮಧ್ಯನಾಡಿ | ಗೋಮತೀ | ಮಧುಸೂದನ | ಬ್ರಹ್ಮರಂಧ್ರ |
| ೭. | ಸರಸ್ವತಿ | ಗಂಡಕೀ | ತ್ರಿವಿಕ್ರಮ | ಜಿಹ್ವೆ |
| ೮, | ನಂದಾ | ಕೃಷ್ಣವೇಣಿ | ವಾಮನ | ಲಿಂಗಮೂಲ |
| ೯. | ಕುಹು | ಕಾಳಿಂದೀ | ಶ್ರೀಧರ | ಗುದ |
| ೧೦. | ಶಂಖಿಣೀ | ತಪತೀ | ಹೃಷಿಕೇಶ | ಲಿಂಗ |
| ೧೧. | ವಾರುಣೀ | ಗೋದಾವರೀ | ಪದ್ಮನಾಭ | ಶಿರಸೋಪರಿ |
| ೧೨. | ಪೂರ್ಣಾ | ಪಯಸ್ವಿನೀ | ದಾಮೋದರ | ವಾಮಚಕ್ಷು |

**ವಿಶೇಷ ವಿವರಗಳು:**

(೧) ಮೇಲಿನ ಪಟ್ಟಿಯಲ್ಲಿ ದ್ವಾದಶ ನಾಡಿಗಳು ಮತ್ತು ದ್ವಾದಶ ನದಿಗಳನ್ನೂ ಕ್ರಮವಾಗಿ **ಶ್ರೀ ವಿಜಯದಾಸರಾಯರ ಸುಳಾದಿಯಪ್ರಕಾರ** ಕೊಟ್ಟಿದೆ.

(೨) ೪ನೇ ಕಾಲಮ್ಮಿನಲ್ಲಿ ಕೊಟ್ಟಿರುವ ಭಗವದ್ರೂಪಗಳು ಕೇಶವಾದಿ ದಾಮೋದರ ಪರ್ಯಂತ ಪದ್ಯದಲ್ಲಿ ನಿರೂಪಿತವಾಗಿರುವಂತೆ ಕೊಟ್ಟಿದೆ,

ಆದರೆ **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ** ಈ ಕ್ರಮದಲ್ಲಿ ಕೊಟ್ಟಿಲ್ಲ.

(೩) ೫ನೆಯ ಕಾಲಮ್ಮಿನಲ್ಲಿ ದ್ವಾದಶ ಕರಣಗಳಿವೆ. ಇದನ್ನ **ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನದಂತೆ** ಹಾಕಲಾಗಿದೆ. ಜ್ಞಾನೇಂದ್ರಿಯ ಗಳು=೫. ಕರ್ಮೇಂದ್ರಿಯಗಳು=೫ ಮನಸ್ಸು=೧ ಮತ್ತು ಬುದ್ಧಿ=೧ ಇವೆಲ್ಲಾ ಸೇರಿದರೆ ೫+೫+೧+೧=೧೨ ಸರಿಯಾಗಿ ಆಗುವುದು. ಈ ಕರಣಗಳ ಪ್ರಕಾರ ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿಲ್ಲ. ಜ್ಞಾನೇಂದ್ರಿಯಗಳ ಪೈಕಿ ತ್ವಗಿಂದ್ರಿಯವನ್ನೂ ಕರ್ಮೇಂದ್ರಿಯಗಳ ಪೈಕಿ ಪಾಣಿ. ಪಾದ. ವಾಕ್ಕು ಈ ಮೂರು ಕರಣಗಳನ್ನು ಮನಸ್ಸು ಮತ್ತು ಬುದ್ಧಿ ಇವರ ಡನ್ನು ಸೇರಿಸಿಲ್ಲ. ಈ ಇಂದ್ರಿಯಗಳನ್ನು ಬ್ರಹ್ಮರಂದ್ರ, ಲಿಂಗಮೂಲ ಮತ್ತು ಶಿರಸೋಪರಿ ಎಂಬ ಸ್ಥಾನಗಳಲ್ಲಿ ಸಮನ್ವಯ ಮಾಡಿಕೊಳ್ಳಬೇಕು. ಕರ್ಣ ದಿಂದ ಆರಂಭಿಸಿ. ಗುದೇಂದ್ರಿಯದವರೆಗೂ ೧೦ ಕರಣಗಳು. ಮನಸ್ಸು ಮತ್ತು ಬುದ್ಧಿಗಳನ್ನು ಮಧ್ಯನಾಡೀ ಮತ್ತು ಸರಸ್ವತೀ ನಾಡಿಗಳಲ್ಲಿ ಮಧ್ಯ ಮತ್ತು ೭ನೆಯ ಸ್ಥಾನಗಳಲ್ಲಿ ತೆಗೆದುಕೊಂಡಾಗ, ಕ್ರಮವು ಸರಿಹೊಂದುವುದು. ಗುರೂಪದೇಶದ್ವಾರಾ ಅರಿಯಬೇಕು ಇದು ಗಮನಾರ್ಹ ವಿಚಾರವಾಗಿದೆ.

೩. ಪದ್ಮನಾಭ ರೂಪೀ ಶ್ರೀ ಪರಮಾತ್ಮನು ಕೇಶವನಾಮದಿಂದ

ಪ್ರಾರಂಭಿಸಿ, ದಾಮೋದರ ನಾಮ ಪರ್ಯಂತ. ೧೨ ಭಗವದ್ರೂಪಗಳಿಂದ ವಿದ್ಯಮಾನನಾಗಿದ್ದಾನೆ, **ದ್ವಿದಶರೂಪದಲ್ಲಿಪ್ಪನು** ಅಲ್ಲಿ - ಎಂದಿದ್ದಾರೆ.

೪ ಮಧ್ಯನಾಡಿಯು **ಸುಷುಮ್ನಾನಾಡಿಯು.** ಇದು ಕೂದಲೆಳೆಯಂತೆ ಅತ್ಯಂತ ಸೂಕ್ಷ್ಮವಾದದು. ತೇಜೋಮಯ ಹಾಗೂ ಅತೀಂದ್ರಿಯ. ಅತ್ಯಂತ ಮೃದು ನಾಡಿಯು. ಇಂತಹ **ಮೃದುಳವಾದ ಸುಷುಮ್ನಾದೊಳಗೆ** ಬಿಂಬರೂಪೀ ಶ್ರೀ ಪರಮಾತ್ಮನು **ಏಕಾತ್ಮ** ನೆಂಬ ಹೆಸರಿನಿಂದ ಇದ್ದಾನೆ. ಪ್ರತೀಕರೂಪನಾದ ಜೀವನಿಗೆ ಬಿಂಬನಾಗಿರುವವನೇ **ಆತ್ಮ**ನಾಮಕನಾದ ಶ್ರೀಹರಿಯು. ಅವನು ಏಕನೇವ **ಹಾಗೂ ಅದ್ವಿತೀಯ.** ಅವನೊಬ್ಬನೇ ಪರಮ ಪುರುಷನು, ಸರ್ವೋತ್ತಮನು, ಅವನಿಗಿಂತ ಅಭಿನ್ನನಾದ ಎರಡನೆಯವರಿಲ್ಲ. ಇದರಿಂದ ಅದ್ವಿತೀಯನು, ಜಡಚೇತನ ವರ್ಗಗಳೆಲ್ಲವೂ ಅವನಿಂದ ಭಿನ್ನರು, ಅವನ ಅಧೀನರು, ಇದರಿಂದ ಸುಷುಮ್ನಾ ನಾಡೀಗತ ಭಗವದ್ರೂಪಕ್ಕೆ **ಏಕಾತ್ಮ** ನೆಂಬಭಿದಾನ. ॥೧೯॥

## ಪದ್ಯ (೨೦)

**ಮೂಲ:**

**ಆಮ್ನಾಯಪ್ರತಿಪಾದ್ಯ ಶ್ರೀ ಪ್ರ ।**
**ದ್ಯುಮ್ನ ದೇವನು ದೇಹದೊಳಗೆ ಸು।**
**ಷುಮ್ನದೀಡಾ ಪಿಂಗಳದಿ ವಿಶ್ವಾದಿ ರೂಪದಲಿ ॥**
**ನಿರ್ಮಲಾತ್ಮನು ವಾಣಿ ವಾಯು ಚ ।**
**ತುರ್ಮುಖರೊಳಿದ್ದಖಿಳ ಜೀವರ ।**
**ಕರ್ಮಗುಣನನುಸರಿಸಿ ನಡೆವನು ವಿಶ್ವವ್ಯಾಪಕನು ॥ ॥೨೦॥**

**ಅವತರಣಿಕೆ:—**

ಹಿಂದಿನ ಪದ್ಯದಲ್ಲಿ ದ್ವಾದಶ ನಾಡೀಗತ ನದ್ಯಭಿಮಾನಿ ದೇವತೆಗಳು, ಆ ದೇವಾಂತರ್ಗತ ದ್ವಾದಶ ಭಗವದ್ರೂಪಗಳನ್ನು ತಿಳಿಸಿ **ಆಮ್ನಾಯ ಪ್ರತಿಪಾದ್ಯ** ಎಂಬ ಪ್ರಸಕ್ತ ಸಂಧಿಗತ ೨೦ನೇ ಈ ಪದ್ಯದಿಂದ. ವೇದಪ್ರತಿಪಾದ್ಯ ಶ್ರೀ ಪ್ರದ್ಯುಮ್ನ ನಾಮಕ ಶ್ರೀ ಹರಿಯು ಈ ಸ್ಥೂಲದೇಹಗತ ಸುಷುಮ್ನಾ, ಇಡಾ ಮತ್ತು ಪಿಂಗಳ ನಾಡಿಗಳಲ್ಲಿ ವಿಶ್ವ, ತೈಜಸ, ಪ್ರಾಜ್ಞ ಎಂಬ ರೂಪತ್ರಯಗಳಿಂದ ಚತುರ್ಮುಖ ಬ್ರಹ್ಮದೇವರು, ವಾಯು ಮತ್ತು ಸರಸ್ವತೀ ದೇವಿಯರಲಿದ್ದು, ಸಮಸ್ತ ಜೀವರ ಅನಾದಿಕರ್ಮ ಮತ್ತು ತ್ರಿಗುಣಗಳಿಗನುಸಾರವಾಗಿ ವಿಶ್ವ ವ್ಯಾಪಕನು ದೇಹಗತ ವ್ಯಾಪಾರಗಳನ್ನು ನಡೆಸಿ ನಡೆಯಿಸುತ್ತಾನೆ-ಎಂದು ಹೇಳುತ್ತಾರೆ. ॥೨೦॥

**ಪ್ರತಿಪದಾರ್ಥ:—**

**ಆಮ್ನಾಯ**-ವೇದ ಸಮೂಹಗಳಿಂದ, **ಪ್ರತಿಪಾದ್ಯ**- ಪ್ರತಿಪಾದಿತನಾದ ಅಂದರೆ ಸದಾಗಮ ಪ್ರತಿಪಾದ್ಯನಾದ **ಶ್ರೀ ಪ್ರದ್ಯುಮ್ನ ದೇವನು**=ಕ್ರೀಡಾದಿ ಗುಣ ಪರಿಪೂರ್ಣನಾದ ಶ್ರೀ ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನು **ದೇಹದೊಳಗೆ**= ಈ ಸ್ಥೂಲ ದೇಹದಲ್ಲಿ **ಸುಷುಮ್ನಾದಿ**=ಬ್ರಹ್ಮನಾಡಿ ಎಂದೆನಿಸುವ ಸುಷುಮ್ನಾ ನಾಡಿಯಲ್ಲ, **ಇಡಾ**=ಎಡಪಾರ್ಶ್ವಗತ ಇಡಾನಾಡಿಯಲ್ಲಿ, **ಪಿಂಗಳದಿ**=ಬಲಪಾರ್ಶ್ವಗತ ಪಿಂಗಳಾ ನಾಡಿಯಲ್ಲಿ **ನಿರ್ಮಲಾತ್ಮನು**= ಸಮಸ್ತದೋಷವಿದೂರನಾದ, ಅನಂತ ಕಲ್ಯಾಣ ಗುಣಗಣಭರಿತನಾನ ಶ್ರೀಪರಮಾತ್ಮನು. **ವಿಶ್ವಾದಿ ರೂಪದಲಿ**= ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ರೂಪತ್ರಯಗಳಿಂದ, **ಚತುರ್ಮುಖ**= ಚತುರ್ಮುಖ ಬ್ರಹ್ಮ ದೇವರಲ್ಲಿ ವಿಶ್ವರೂಪದಿಂದಲೂ, **ವಾಯು**=ಶ್ರೀ ವಾಯು ದೇವರಲ್ಲಿ ತೈಜಸ ರೂಪದಿಂದಲೂ, **ವಾಣಿ**= ಶ್ರೀ ಸರಸ್ವತಿ ದೇವಿಯರಲ್ಲಿ ಪ್ರಾಜ್ಞರೂಪದಿಂದಲೂ **ಇದ್ದು**= ಅಂತರ್ಗತನಾಗಿದ್ದು ನಿಯಾಮಕನಾಗಿ, **ಅಖಿಳಜೀವರ**= ಸಮಸ್ತ ತ್ರಿವಿಧ ಜೀವರುಗಳ., **ಕರ್ಮ**=ಅನಾದಿ ಕರ್ಮ ಅದನ್ನನುಸರಿಸಿದ **ಸಂಚಿ**ತಾಗಾಮಿ ಕರ್ಮಪರಂಪರೆಗಳು, **ಗುಣ**—ಸ್ವರೂಪ ಗುಣ, **ಅನುಸರಿಸಿ** =

ಜೀವರ ಗುಣಕರ್ಮಗಳಿಗನುಸಾರವಾಗಿ **ವಿಶ್ವವ್ಯಾಪಕನು** = ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತನಾಗಿರುವ ಶ್ರೀ ಪರಮಾತ್ಮನು. **ನಡೆವನು** = ದೇಹದ್ವಾರಾ ಸಮಸ್ತ ಗುಣಕರ್ಮಗಳ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ॥೨೦॥

# ವ್ಯಾಖ್ಯಾನಗಳು

## (೧) ಸಂಕರ್ಷಣಒಡೆಯರ ವ್ಯಾಖ್ಯಾನ

ಸುಷಮ್ನತ್ರಯಗತ ಭಗವದ್ರೂಪಗಳ ವ್ಯಾಪಾರ ಹೇಳತಾರೆ. ಆಮ್ನಾಯ ಪ್ರತಿಪಾದ್ಯ-ವೇದಪ್ರತಿಪಾದ್ಯನಾದ. ಶ್ರೀ ಪ್ರದ್ಯುಮ್ನ ದೇವನು ಕ್ರೀಡಾದಿ ಗುಣವಿಶಿಷ್ಟನಾದ ಶ್ರೀ ಪ್ರದ್ಯುಮ್ನನು, ದೇಹದೊಳಗೆ- ಈ ಸ್ಥೂಲ ದೇಹದೊಳಗೆ ವಿದ್ಯಮಾನಗಳಾದ. ಸುಷಮ್ನ-ಸುಷಮ್ನಾನಾಡೀ ಒಳಗೆ, ಚತುರ್ಮುಖ-ನಾಲ್ಕುಮುಖವುಳ್ಳ ಶ್ರೀ ಬ್ರಹ್ಮದೇವರು, ವಿಶ್ವ-ಅಂತರ್ಗತ ವಿಶ್ವರೂಪೀ ಪರಮಾತ್ಮ ಸತ್ವಗುಣ ಪ್ರಾಚುರ್ಯ, ಇಡಾ-ಇಡಾನಾಡಿಯಲ್ಲಿ (ಈ ನಾಡಿ ಬಲಭಾಗದ್ದು), ಇಲ್ಲಿ ವಾಯು-ವಾಯು ದೇವರು(ಇವರಂತರ್ಗತ ತೈಜಸನು) ರಜೋಗುಣ ಪ್ರಾಚುರ್ಯ. ಪಿಂಗಳದಿ-(ಎಡಭಾಗದ್ದು, ಪಿಂಗಳಾ ನಾಡಿಯಲ್ಲಿ ತಮೋಗುಣ ಪ್ರಾಚುರ್ಯ. ಇದರಲ್ಲಿ ವಾಣಿ-ಸರಸ್ವತಿ ದೇವರು ಅಂತರ್ಗತ ಪ್ರಾಜ್ಞನಾಮಕನು, ಆದಿ ರೂಪದಲ್ಲಿ - ಈ ಪೂರ್ವೋಕ್ತ ವಿಶ್ವಾದಿ ರೂಪದಿಂದ, ನಿರ್ಮಲಾತ್ಮನು- ನಿರ್ದೋಷವಾದ ಶರೀರವುಳ್ಳ ಆತ್ಮರೂಪಿಯಾದ ಬಿಂಬನು, ಒಳಿದ್ದು-ದೇವತೆಗಳ ಅಂತರ್ಗತನಾಗಿದ್ದು, ಅಖಿಳ ಜೀವರ-ಸಮಸ್ತವಾದ ತ್ರಿವಿಧಜೀವರ,ಗುಣವನನುಸರಿಸಿ-ಸ್ವರೂಪಸ್ವಭಾವಗುಣವೇನು ಅದನ್ನು ಅನುಸರಿಸಿದ ಬಾಹ್ಯಲಿಂಗಗಳ ಗುಣವೇನು; ಈ ಎರಡರನ್ನು ಅನುಸರಿಸಿ ಇರತಕ್ಕ, ಕರ್ಮ- ಅನಾದಿ ಕರ್ಮವನ್ನು ಅನುಸರಿಸಿದ ಆಗಾಮಿ ಸಂಚಿತ ಕರ್ಮ, ಅದನನುಸ್ಸರಿಸಿದ ಜನ್ಮಾಂತರೀಯ ಕರ್ಮ, ಅದನನುಸರಿಸಿ ನಡೆವನು ವರ್ತಮಾನ ಜನ್ಮದಲ್ಲೇನು, ಉತ್ತರೋತ್ತರ ಬರತಕ್ಕ ಜನ್ಮದಲ್ಲೇನು, ಈ

ನಾಡಿಸ್ಥ ವಿಶ್ವಾದಿರೂಪಗಳಿಂದ, ಸತ್ವಾದಿ ಗುಣಗಳ ಕರ್ಮವನ್ನು ಇಂದ್ರಿಯ ಗಳಲ್ಲಿದ್ದು ಪ್ರೇರೇಪಿಸುತ್ತ, ಆಯಾ ಕರ್ಮಗಳಿಗೆ ಬಿಂಬನಾದ ದೇವರು ಸಂಚಾರ ಮಾಡುವನು, ಅದರಂತೇ ಜೀವರು ದೇಹದ್ವಾರಾ ಕರ್ಮ ಮಾಡು ತ್ತಾರೆ, ವಿಶ್ವ ವ್ಯಾಪಕನು- ಈ ಪ್ರಕಾರ ಜಗತ್ತಿನಲ್ಲಿ ಪ್ರತಿಜೀವರಲ್ಲಿ ವಿಶ್ವಾದಿ ರೂಪಗಳಿಂದ ವ್ಯಾಪ್ತನಾಗಿ ಪ್ರದ್ಯುಮ್ನ ಇದ್ದಾನೆ ಎಂತ ತಾತ್ಪರ್ಯ. ॥೨೦॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ

ಸುಷುಮ್ನಾದಿನಾಡಿಗಳಲ್ಲಿ ರೂಪಾಂತರಗಳಿಂದಲೂ ವಾಸಮಾಡುವ ನೆಂದು ಹೇಳುತ್ತಾರೆ. ವೇದಪ್ರತಿಪಾದ್ಯನಾಗಿಯೂ, ನಿರ್ದೋಷ ಸ್ವರೂಪಿ ಯಾಗಿಯೂ, ಸಕಲಲೋಕವನ್ನೂ ಏಕಕಾರವಾಗಿ ವ್ಯಾಪಿಸಿಕೊಂಡಿರುವ ಶ್ರೀ ಪರಮಾತ್ಮನು ಪ್ರದ್ಯುಮ್ನನಾಮಕನಾಗಿ ಅಖಂಡನಾಗಿ ಸುಷುಮ್ನಾ ಇಡಾ, ಪಿಂಗಳಾ ಎಂಬ ಮೂರುನಾಡಿಗಳಲ್ಲಿ ವ್ಯಾಪ್ತನಾಗಿರುವನು. ಈ ನಾಡಿಗಳಿಗೆ ಅಭಿಮಾನಿಗಳಾಗಿ ಸರಸ್ವತೀ, ವಾಯುದೇವರು, ಬ್ರಹ್ಮದೇವರು ಇರುವರು. ಇವರಲ್ಲಿ ಖಂಡರೂಪಿಯಾಗಿ ಪ್ರದ್ಯುಮ್ನನೇ ವಿಶ್ವ ತೈಜಸ ಮತ್ತು ಪ್ರಾಜ್ಞ ಎಂಬ ಮೂರು ರೂಪಗಳಿಂದ ಇದ್ದು, ಸಕಲಜೀವರ ಯೋಗ್ಯತಾನುಸಾರವಾಗಿ ಅವರವರ ಪ್ರಾರಬ್ಧಾದಿ ಕರ್ಮಗಳನ್ನೂ ಸತ್ವಾದಿ ಅನುಸರಿಸಿ ಕರ್ಮಗಳನ್ನು ಮಾಡಿ ಮಾಡಿಸುವನು ॥೨೦॥

## (೩) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ

"ಆಮ್ನಾಯೇತಿ"॥ ॥೨೦॥

ಸುಷುಮ್ನಾ ಇತ್ಯಾದಿ ಮೂರು ನಾಡಿಗಳಲ್ಲಿ ವಿದ್ಯಮಾನವಾಗಿರುವ ಭಗವದ್ರೂಪಗಳನ್ನು ನಿರೂಪಿಸುತ್ತಾರೆ. **ಅಮ್ನಾಯ ಪ್ರತಿಪಾದ್ಯ** ಎಂಬ ಪ್ರಸಕ್ತ ಪದ್ಯದಿಂದ. ॥೨೦॥

## (೪) ಶ್ರೀ ಗುರುಹೃದಯ ಪ್ರಕಾಶಿಕೆ

ಸುಷುಮ್ನ ನಾಡಿಯಲ್ಲು ಅದಕ್ಕೆ ಆಶ್ರಯವಾದ ನಾಲ್ಕು ನಾಡಿಗಳಲ್ಲೂ

ದೇವರ ಸ್ಮರಣೆ ಮುಂತಾದ್ದು ತಿಳಿಸುತ್ತಾರೆ, ಆಮ್ನಾಯಯೆಂದು. ವೇದ ಪ್ರತಿಪಾದ್ಯ ಶ್ರೀಪ್ರದ್ಯುಮ್ನ ಸ್ವರೂಪದೇವರು ಸುಷುಮ್ನಾನಾಡಿಯಲ್ಲೂ, ಅದರ ಸುತ್ತಲೂ ಇರುವ ಇಡಾ, ಪಿಂಗಳಾ, ವಜ್ರಿಕಾ ಆರ್ಯವೆಂಬ ನಾಲ್ಕು ನಾಡಿಗಳಲ್ಲೂ ಸರಸ್ವತೀ, ಭಾರತೀ, ವಾಯು-ಬ್ರಹ್ಮರು ಇರುವರು, ಅವರಲ್ಲಿ ವಿಶ್ವ, ತೈಜಸ, ಪ್ರಾಜ್ಞ,ತುರ್ಯವೆಂಬ ನಾಲ್ಕು ರೂಪದೇವರು ವಿಶ್ವ ವ್ಯಾಪಕನಾಗಿ, ಅಖಿಳ ಜೀವರ ಗುಣ ಕರ್ಮಾನುಸಾರ ಕಾರ್ಯಪ್ರವರ್ತಕನಾಗಿರುವನು. ॥೨೦॥

(ಆ) "ಭಾವದರ್ಪಣ ಟೀಕಾ"-ವ್ಯಾಖ್ಯಾನ

ಅಬ್ದ-ಸಂವತ್ಸರ-೧, ಇದಕ್ಕೆ ಅಯನ-೨, ಋತು-೬, ಮಾಸ-೧೨ ಪಕ್ಷ-೨೪, ಅಹತ್ಯ ೪೫ ರೂಪದಿಂದ ತನ್ನಾಮ ತದಾಕಾರನಾಗಿ ಶ್ರೀಹರಿಯು ಇದ್ದಾನೆಂದು ಚಿಂತಿಸತಕ್ಕವರಿಗೆ ಲಬ್ದನಾಗುವನೆಂದು ಹೇಳುತ್ತಾರೆ-ಅಬ್ದೇತಿ ॥೨೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವಪದ್ಯದಲ್ಲಿ ೧೦೧ ನಾಡಿಗಳಿಗೆ ಕಾರಣನಾಡಿಗಳೆಂದೆನಿಪ ದ್ವಾದಶ ನಾಡಿಗಳಲ್ಲಿ ವಿದ್ಯಮಾನವಾಗಿರುವ ಗಂಗಾದಿ ತೀರ್ಥಗಳು, ತದಭಿಮಾನಿ ದೇವತೆಗಳು, ಆದೇವತಾಂತರ್ಗತ ಕೇಶವಾದಿ ದಾಮೋದರ ಪರ್ಯಂತ ದ್ವಾದಶ ಭಗವದ್ರೂಪಗಳ ಚಿಂತನಾಕ್ರಮವನ್ನು ತಿಳಿಸಿ, ವೇದಪ್ರತಿಪಾದ್ಯನಾದ ಶ್ರೀ ಪ್ರದ್ಯುಮ್ನನಾಮಕ ಶ್ರೀಪರಮಾತ್ಮನು ಸುಷುಮ್ನಾದಿ ಮೂರು ನಾಡಿಗಳಲ್ಲಿ ವಿಶ್ವಾದಿ ರೂಪತ್ರಯಗಳಿಂದ ಬ್ರಹ್ಮಾದಿ ದೇವತಾತ್ರಯದಲ್ಲಿ ಅಂತರ್ಗತನಾಗಿದ್ದು, ಅಖಿಳಜೀವರ ಕರ್ಮಗಳನ್ನು ಮಾಡಿ ಮಾಡಿಸುತ್ತಾನೆಂದು ತಿಳಿಸುತ್ತಾರೆ— **ಆಮ್ನಾಯ ಪ್ರತಿಪಾದ್ಯ**-ಎಂಬ ಪ್ರಸಕ್ತ ೨೦ನೆಯ ಪದ್ಯದಿಂದ.

೧. ಆಮ್ನಾಯ-ಎಂದರೆ ವೇದಗಳೆಂದರ್ಥ. ಇಂತಹ ವೇದರಾಶಿಗಳು ಅನಂತಾನಂತ. ಇಂತಹ ಸದಾಗಮಗಳಿಂದ ಶ್ರೀಪರಮಾತ್ಮನು ಪ್ರತಿಪಾದ್ಯನು. ಶ್ರೀ ಪರಮಾತ್ಮನ ಗುಣಾವಳಿಗಳನ್ನು ಅವನ ಅಪರಿಮಿತ ಮಹಿಮಾತಿಶಯಗಳನ್ನು ಜಗತ್ತಿಗೆ ಪರಿಚಯಿಸುವ ಶಬ್ದಸಾಗರವೇ ವೇದಸಮೂಹಗಳು. ಇಂತಹ ವೇದಗತ ಪ್ರತಿ ವರ್ಣ, ಸ್ವರ, ಶಬ್ದವಾಚ್ಯನಾಗಿದ್ದಾನೆ **ಆಮ್ನಾಯ ಪ್ರತಿಪಾದ್ಯ** ಶ್ರೀಮನ್ನಾರಾಯಣನು. ವೇದವೇದ್ಯವಾದರೂ ನಿಗಮಾತೀತನು. ವೇದಗಳಾಗಲೀ ವೇದಾಭಿಮಾನಿಗಳಾದ ಲಕ್ಷ್ಮ್ಯಾದಿ ದೇವತೆಗಳಾಗಲೀ ಆತನ ಅಪಾರಗುಣಸ್ತೋಮರೂಪವಾದ ಮಹಾಮಹಿಮೆಗಳನ್ನು ಸಾಕಲ್ಯೇನ ಅರಿಯರು.

೨. ಇಂತಹ **ಆಮ್ನಾಯಪ್ರತಿಪಾದ್ಯನಾದ** ಶ್ರೀ ಪರಮಾತ್ಮನು **ಪ್ರದ್ಯುಮ್ನ** ನಾಮಕನಾಗಿ ನಮ್ಮ ಸ್ಥೂಲದೇಹಗತ ನಾಡಿಗಳಲ್ಲಿ ವಿದ್ಯಮಾನನಾಗಿದ್ದಾನೆ, ಕೃತಿಪತಿಯಾದ ಪ್ರದ್ಯುಮ್ನನೇ ಸುಷುಮ್ನಾ, ಇಡಾ, ಪಿಂಗಳ ಎಂಬ ಮೂರು ನಾಡಿಗಳಲ್ಲಿ ಇದ್ದು ದೇಹಗತ ವ್ಯಾಪಾರಗಳನ್ನು ನಾಡಿ ದ್ವಾರಾ ನಡೆಸಿ, ನಡೆಯಿಸುವನು.

೩. ಮಧ್ಯನಾಡಿಯೇ ಬ್ರಹ್ಮನಾಡಿಯು. ಇದೇ **ಸುಷುಮ್ನಾ** ಎಂಬ ಪ್ರಧಾನನಾಡಿಯು ಅತ್ಯಂತ ಮೃದುಳವಾಗಿದ್ದು ಸೂಕ್ಷ್ಮವಾಗಿ ತುಂದಿಯಿಂದ ಹೊರಟು ನೇರವಾಗಿ ಬ್ರಹ್ಮರಂಧ್ರ ಪರ್ಯಂತ ವ್ಯಾಪಿಸಿದೆ. ಅತೀಂದ್ರಿಯ ಹಾಗೂ ತೇಜೋಮಯ ನಾಡಿಯು. ಇದು ಚತುರ್ಮುಖ ಬ್ರಹ್ಮದೇವರಿಗೆ ನಿವಾಸಸ್ಥಾನವು. ಇಂತಹ ಸುಷುಮ್ನಾನಾಡಿಯಲ್ಲಿ ಶ್ರೀ ಪ್ರದ್ಯುಮ್ನನಾಮಕ ಪರಮಾತ್ಮನು **ವಿಶ್ವ** ಎಂಬ ಹೆಸರಿನಿಂದ ವಿದ್ಯಮಾನನಾಗಿದ್ದಾನೆ. ವಿಶ್ವನಾಮಕ ಹರಿಯು **ಸತ್ವಗುಣ** ಪ್ರಾಚುರ್ಯಕನಾಗಿ ವ್ಯಾಪಾರಮಾಡುವನು.

೪. ದೇಹದ ಬಲ ಪಾರ್ಶ್ವದಲ್ಲಿರುವುದೇ **ಪಿಂಗಳಾನಾಡಿಯು.** ಇದು ೩೬,೦೦೦ ಕವಲುಗಳಾಗಿ ಒಡೆದು ಸ್ಥೂಲದೇಹದ ಬಲಪಾರ್ಶ್ವಾದ್ಯಂತ ವ್ಯಾಪಿಸಿರುವುದು, ಈ ನಾಡಿಯಲ್ಲಿ ಶ್ರೀವಾಯುದೇವರು ವಿದ್ಯಮಾನರಾಗಿದ್ದು, ದಿವಾನಾಡಿಗಳಿಗೆ ಅಭಿಮಾನಿಗಳಾಗಿದ್ದಾರೆ. ಶ್ರೀ

ಪ್ರದ್ಯುಮ್ನನೇ ಆ ವಾಯುದೇವರಲ್ಲಿದ್ದು ತೈಜಸ ರೂಪದಿಂದ ರಜೋಗುಣ ಪ್ರವರ್ತಕನಾಗಿದ್ದಾನೆ.

೫. **ಇಡಾನಾಡಿಯು** ದೇಹದ ಎಡಪಾರ್ಶ್ವದಲ್ಲಿ ೩೬,೦೦೦ ಸ್ತ್ರೀನಾಡಿಗಳಾಗಿ ವಿಭಾಗವಾಗಿ ವ್ಯಾಪಕವಾಗಿದೆ. ಈ ಇಡಾನಾಡಿಯಲ್ಲಿ **ಸರಸ್ವತಿ (ವಾಣಿ)** ದೇವಿಯರು ಇದ್ದು. ರಾತ್ರಿನಾಡಿಗಳಾದ ಈ ಸ್ತ್ರೀನಾಡಿಗಳಿಗೆ ಅಭಿಮಾನಿಗಳಾಗಿದ್ದಾರೆ. (ಭಾರತೀದೇವಿಯರು **ರಯೀ** ಎಂಬ ಹೆಸರಿನಿಂದ ಇದ್ದಾರೆ). ವಾಣಿಯರಲ್ಲಿ ಶ್ರೀಪ್ರದ್ಯುಮ್ನನೇ **ಪ್ರಾಜ್ಞ** ನಾಮಕನಾಗಿ ತಮೋಗುಣ ಪ್ರವರ್ತಕನಾಗಿದ್ದಾನೆ.

೬. ಇಂತಹ ಶುಭಗುಣಗಣನಿಧಿಯೂ, ಅತಏವ ಸಮಸ್ತದೋಷ ವಿದೂರನೂ (**ನಿರ್ಮಲಾತ್ಮನು**) ಆದ ಶ್ರೀಹರಿಯು ಪ್ರದ್ಯುಮ್ನ ಎಂಬ ಅಭಿಧಾನದಿಂದ ನಾಡಿತ್ರಯಗಳಲ್ಲಿ, ದೇವತಾತ್ರಯದಲ್ಲಿ ವೈಶ್ವ, ತೈಜಸ, ಪ್ರಾಜ್ಞ ಎಂಬ ರೂಪತ್ರಯಂಗಳಿಂದ ಇದ್ದಾನೆ. ಸಮಸ್ತ ಜೀವರಾಶಿಗಳಲ್ಲಿ ತ್ರಿವಿಧ ವರ್ಗಗಳಿವೆ. ಅವರ ಸ್ವರೂಪದೇಹಕ್ಕೆ ಆವರ್ಕರೂಪದಲ್ಲರುವ ಲಿಂಗದೇಹವು ತ್ರಿಗುಣಾತ್ಮಕವಾದದ್ದು. ಅದರಂತೆ ಅನಾದಿ ಕರ್ಮರೂಪದಲ್ಲಿರುವ ಲಿಂಗದೇಹವು ತ್ರಿಗುಣಾತ್ಮಕವಾದದ್ದು. ಅದರಂತೆ ಅನಾದಿ ಕರ್ಮಪರಂಪರೆ ಹೀಗೆ ಜೀವರ ಅನಾದಿ ಸ್ವಭಾವ (ಸ್ವರೂಪಯೋಗ್ಯತೆ) ಸತ್ವಾದಿ ಲಿಂಗದೇಹಗತ ಪ್ರಾಕೃತ ತ್ರಿಗುಣಗಳು ಮತ್ತು ತದನುಸಾರಿ ಕರ್ಮಪರಂಪರೆಗಳು, ಇವುಗಳಲ್ಲಿ ವಿಶ್ವ, ತೈಜಸ, ಪ್ರಾಜ್ಞ ನಾಮಕನಾಗಿ ಚತುರ್ಮುಖ ಬ್ರಹ್ಮದೇವರು ಶ್ರೀವಾಯುದೇವರು ಮತ್ತು ಶ್ರೀ ಸರಸ್ವತೀ (ಭಾರತಿಯರೂ ಗ್ರಾಹ್ಯ) ಇವರಲ್ಲಿ ಅಂತರ್ಗತನಾಗಿದ್ದುಕೊಂಡು ಜೀವರ ಗುಣಕರ್ಮಗಳನ್ನು ತಾನೇ ಪ್ರೇರಕನಾಗಿ ಪ್ರಾಚುರ್ಯರೂಪದಿಂದ ಪ್ರಕಟಮಾಡಿ, ದೇವತೆಗಳ ದ್ವಾರಾ ಮಾಡಿಸಿ, ವೇಹಗತವ್ಯಾಪಾರಕೆಳನ್ನು ನಡೆಸಿ ನಡೆಯಿಸುತ್ತಾ, ವೇಹಾದ್ಯಂತ ಪ್ರಕಾಶತೋ ವ್ಯಾಪ್ತನಾದ ಜೀವನ ಅನುಭವಕ್ಕೆ ತಂದೀಯುದನು. ಬಿಂಬಕ್ರಿಯಾದ್ವಾರಾ ಜೀರ್ವೋಽಪಿ ಕರ್ತಾನಾಗುತ್ತಾನೆಯೇ ಹೊರತು ಸ್ವತಂತ್ರನಾಗಿ ಅಲ್ಲ. ॥೨೦॥

# ಪದ್ಯ (೨೧)

**ಮೂಲ**

**ಅಬ್ದ ಯನ ಋತು ಮಾಸ ಪಕ್ಷ ಸು ।**
**ಶಬ್ದ ದಿಂದಲಿ ಕರಿಸುತಲಿ ನೀ ।**
**ಲಾಬ್ದ ವರ್ಣಾನಿರುದ್ಧ ನೊದಲಾದೈದು ರೂಪದಲಿ ॥**
**ಹಬ್ಬಿಹನು ಸರ್ತತ್ರ್ರದಲಿ ಕರು ।**
**ಣಾಬ್ಧಿ ನಾಲ್ಪತ್ತೈದು ರೂಪದಿ ।**
**ಲಭ್ಯನಾಗುವನೀ ಪರಿಯು ಧೇನಿಸುವ ಭಕುತರಿಗೆ ॥** ॥೨೧॥

**ಅವತರಣಿಕೆ–**

ಪೂರ್ವಪದ್ಯದಲ್ಲಿ ವೇದಪ್ರತಿಪಾದ್ಯನಾದ ಸಮಸ್ತ ದೋಷ ವಿವರ್ಜಿತನಾದ ಶ್ರೀಪ್ರದ್ಯುಮ್ನನಾಮಕ ಹರಿಯು ಸುಷುಮ್ನಾ ಪಿಂಗಳ ಮತ್ತು ಇಡಾ ನಾಡಿಗಳಲ್ಲಿ ಬ್ರಹ್ಮವಾಯು ಸರಸ್ವತೀ ದೇವಿಯರುದಲ್ಲಿ ತಾನು ವಿಶ್ವಾದಿ ತ್ರಿರೂಪಗಳಿಂದ ಎದ್ಯಮಾನನಾಗಿದ್ದು. ಜೀವರ ಸ್ವಭಾವ ಗುಣಕರ್ಮಗಳಿಗನುಸಾರವಾಗಿ ದೇಹಗತ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು ಎಂದು ತಿಳಿಸಿದರು. **ಅಬ್ದ ಯನ** ಎಂಬ ಪ್ರಸಕ್ತ ಸಂಧಿಗತ ೨೧ನೆಯ ಈ ಪದ್ಯದಿಂದ ವರ್ಷ, ಅಯ್ಯನ, ಋತು, ಮಾಸ, ಪಕ್ಷ, ದಿನ ಇತ್ಯಾದಿ ಕಾಲಪ್ರಬೇಧಗಳಲ್ಲಿ ಕಾಲಾಂತರ್ಗತವಾಗಿದ್ದು. ಕಾಲನಿಯಾಮಕನಾಗಿ ಕಾಲ ಪ್ರವರ್ತಕನಾಗಿದ್ದಾನೆ. ಇಂತು ಕಾಲಾಂತರ್ಗತ ಶ್ರೀ ಪರಮಾತ್ಮನ ಭಗವದ್ರೂಪಗಳನ್ನು ಸದಾಚಿಂತಿಸುವ ಭಕ್ತರಿಗೆ ಲಭ್ಯನಾಗುವೆನೆಂದು ತಿಳಿಸುತ್ತಾರೆ,

**ಪ್ರತಿಪದಾರ್ಥ**

**ಅಬ್ದ** = ಒಂದು ವರ್ಷದ ಕಾಲಮಾನದಲ್ಲಿ ಅನಿರುದ್ಧನು, **ಅಯನ**

ಉತ್ತರಾಯಣ ಮತ್ತು ದಕ್ಷಿಣಾಯನ ಎಂಬ ೨ ಅಯನಗಳಲ್ಲಿ ಪ್ರದ್ಯುಮ್ನ ರೂಪದಿಂದ **ಋತು**=ವಸಂತಾದಿ ಶಿಶಿರಪರ್ಯಂತ ೬ ಋತುಗಳಲ್ಲಿ ಸಂಕರ್ಷಣನಾಮಕನಾಗಿ. **ಮಾಸ**=ವರ್ಷದ ೧೨ತಿಂಗಳಿನಲ್ಲಿ (ಚೈತ್ರಾದಿ ಫಾಲ್ಗುಣ ಪರ್ಯಂತ) ವಾಸುದೇವರೂಪದಿಂದ, **ಪಕ್ಷ**=ಮಾಸಕ್ಕೆ ೨ ಪಕ್ಷಗಳಂತೆ ವರ್ಷದಲ್ಲಿ ೨೪ ಪಕ್ಷಗಳಲ್ಲಿ ನಾರಾಯಣರೂಪದಿಂದ **ಸುಶಬ್ದದಿಂದಲಿ**=ವರ್ಷ, ಅಯನ, ಋತು, ಮಾಸ, ಪಕ್ಷ ಎಂಬ ಹೆಸರುಗಳಿಂದಲೇ ಶಬ್ದವಾಚ್ಯನಾಗಿ **ಕರಿಸುತಲಿ**=ತನ್ನಾಮಕನಾಗಿ ಕರೆಯಿಸಿಕೊಳ್ಳುತ್ತಾ, **ನೀಲಾಬ್ಧವರ್ಣ**=ನೀಲಮೇಘಶ್ಯಾಮನಾದ (ನೀಲ-ನೀಲಿ ಬಣ್ಣ ಅಬ್ಧ=ನೀರನ್ನು ಹೊಂದಿರುವ ಮೇಘಗಳು, ಅಂದರೆ ಮೇಘದಂತೆ ನೀಲಿಬಣ್ಣದಿಂದ ಕೂಡಿದ ಶರೀರವುಳ್ಳ) **ಅನಿರುದ್ಧ ಮೊದಲಾದ**=ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ **ಐದುರೂಪದಲಿ**=ಪಂಚರೂಪಾತ್ಮಕನಾಗಿ, **ಕರುಣಾಬ್ಧಿ**=ಕರುಣಾ ಸಮುದ್ರನಾದ ಶ್ರೀ ಪರಮಾತ್ಮನು **ನಾಲ್ವತ್ತೈದು ರೂಪದಿ**=ಮಾಸ ೧+ಅಯನ೨+ಋತುಗಳು ೬+ ಮಾಸಗಳು ೧೨+ ಪಕ್ಷಗಳು ೨೪=೪೫ರೂಪಗಳಿಂದ, **ಸರ್ವತ್ರದಲಿ**=ವರ್ಷಾದಿ ಸಮಸ್ತ ಕಾಲ ಪ್ರಭೇಧಗಳಲ್ಲಿ (ದೇಶ, ಕಾಲಗಳೂ ಗ್ರಾಹ್ಯ) **ಹಬ್ಬಿಹನು**=ವ್ಯಾಪ್ತನಾಗಿದ್ದಾನೆ. **ಈ ಪರಿಯು**=ಈ ಪ್ರಕಾರವಾಗಿ, **ಧೇನಿಸುವ**=ಕಾಲಾಂತರ್ಗತ ಪರಮಾತ್ಮನ ಭಗವದ್ರೂಪಗಳನ್ನು ಮನಸಾ ಧ್ಯಾನಮಾಡುತ್ತಿರುವ, **ಭಕುತರಿಗೆ**=ಭಕ್ತಜನರಿಗೆ, **ಲಭ್ಯನಾಗುವನು**=ಧ್ಯಾನಗೋಚರನಾಗಿ ತನ್ನ ದರ್ಶನ ಭಾಗ್ಯವನ್ನು ಕರುಣಿಸುವನು ॥೨೦॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಕಾಲಾಂತರ್ಗತ ಭಗವದ್ರೂಪೋಪಾಸನ ಹೇಳುತ್ತಾರೆ.

ಅಬ್ದ–ಒಂದು ವರುಷ, ಇದಕ್ಕೆ **ಅನಿರುದ್ಧನು.**

ಅಯನ– ಎರಡು, ಉತ್ತರಾಯಣ, ಅಕ್ಷಿಣಾಯನ, ಇದಕ್ಕೆ **ಪ್ರದ್ಯುಮ್ನ** ರೂಪಗಳು ಎರಡು.

ಋತು–ಆರು. ಎರಡು ತಿಂಗಳಿಗೆ ಒಂದು ಋತು. ಇದಕ್ಕೆ **ಸಂಕರ್ಷಣ** ರೂಪಗಳು ಆರು.

ಮಾಸ–ಹನ್ನೆರಡು. ವರುಷಕ್ಕೆ ತಿಂಗಳುಗಳು ಹನ್ನೆರಡು. ಮೂವತ್ತು ದಿನ ಹಗಲು–ರಾತ್ರಿಗಳು ಸೇರಿಸಿದರೆ ಒಂದು/ತಿಂಗಳು. ಇದಕ್ಕೆ **ವಾಸುದೇವ** ರೂಪಗಳು ಹನ್ನೆರಡು.

ಪಕ್ಷ–ಇಪ್ಪತ್ತನಾಲ್ಕು. ಒಂದು ವರುಷಕ್ಕೆ ಇಪ್ಪತ್ತನಾಲ್ಕು ಪಕ್ಷಗಳು. ಹದಿನೈದು ದಿನಕ್ಕೆ ಒಂದು ಪಕ್ಷ. ಇದಕ್ಕೆ **ನಾರಾಯಣರೂಪಗಳು** ಇಪ್ಪತ್ತನಾಲ್ಕು. ಅಂತು ನಲವತ್ತೈದು.

ನೀಲಾಬ್ದವರ್ಣ–ನೀರುಂಡ ಮೇಘವರ್ಣದೋಪಾದಿಯಲ್ಲಿ ವರ್ಣವುಳ್ಳ, ಅನಿರುದ್ಧ ಮೊದಲಾದ-ಅನಿರುದ್ಧ ಮೊದಲು ಮಾಡಿ ನಾರಾಯಣಾಂತ, ಐದುರೂಪದಲಿ–ಪಂಚರೂಪಗಳಿಂದ, ಸುಶಬ್ದದಿಂದಲಿ ಕರೆಸುತ–ಸಮೀಚೀನವಾದ ಅಯನಾದಿ ಶಬ್ದಗಳಿಂದ ಕರಿಸುತ, ಸರ್ವತ್ರದಲಿ ಅಯನಾದಿ ಕಾಲಗಳಲ್ಲಿ, ಹಬ್ಬಿಹನು–ವ್ಯಾಪ್ತನಾಗಿ ಇದ್ದಾನೆ. ಈ ಪರಿಯ ಈ ಪ್ರಕಾರ ಇರತಕ್ಕ ಶ್ರೀ ಪರಮಾತ್ಮನ. ಧೇನಿಸುವ ಭಕುತರಿಗೆ—ಧ್ಯಾನ ಮಾಡತಕ್ಕ ಭಕ್ತರಿಕ, ನಾಲ್ವತ್ತೈದು ರೂಪದಿ—ನಲವತ್ತೈದು ರೂಪಗಳಿಂದ ಲಭ್ಯನಾಗುವನು-ಪ್ರತ್ಯಕ್ಷನಾಗತಾನೆ.

**ತಾತ್ಪರ್ಯ**

ಕಾಲಾಂತರ್ಗತ ನಲವತ್ತೈದು ರೂಪಗಳಿಂದ ಇರತಕ್ಕ ಭಗವದ್ರೂಪಗಳ ಬಿಂಬನಲಿ ಐಕ್ಯಚಿಂತನಿ ಸದಾ ಮರಿಯದೇ ಮಾಡುತ ಬಿಂಬೋಪಾಸನೆ

ಮಾಡತಕ್ಕ ಭಕ್ತರಿಗೆ ದೇವರು ಲಭ್ಯನಾಗತಾನೆ. ಇದರಿಂದ ಆಯುಸ್ಸು ಸಾರ್ಥಕವಾಗುತ್ತದೆ. ಕರ್ಮವೂ ಸಾರ್ಥಕವಾಗುತ್ತದೆ. ಆದಕಡಿಯಿಂದ ಈ ರೀತ್ಯಾ ತಿಳಿಯಬೇಕಂತ ತಾತ್ಪರ್ಯ ॥೨೦॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ-

ಅಬ್ದಾದಿಗತ ಭಗವದ್ರೂಪಗಳ ಚಿಂತನಾಪ್ರಕಾರವನ್ನು ಹೇಳುತ್ತಾರೆ. ವರ್ಷ-೧, ಅಯನಗಳು-೨, ಋತುಗಳು-೬, ಮಾಸಗಳು-೧೨ ಮತ್ತು ಪಕ್ಷಗಳು-೨೪. ಅಂತು ೪೫ರೂಪಗಳು. ಕರುಣಾಸಮುದ್ರನಾದ ಶ್ರೀಹರಿಯು ೪೫ರೂಪಗಳಿಂದ ಮೇಲೆ ಹೇಳಿದ ಸಂವತ್ಸರಾದಿಗಳಲ್ಲಿ ಸಂವತ್ಸರಾದಿ ಶಬ್ದ ವಾಚ್ಯನಾಗಿ ವ್ಯಾಪ್ತನಾಗಿರುವನು. ಇಂತಹ ೪೫ ರೂಪಗಳನ್ನು ತಿಳಿದು, ಯಾರು ಪರಮಾತ್ಮನನ್ನು ಧೇನಿಸುವರೋ, ಅಂತಹ ಭಕ್ತರಿಗೆ ಆದರಂತೆ ಧ್ಯಾನಗೋಚರನಾಗುವನು. ॥೨೦॥

## (೩) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ(ಸಂಸ್ಕೃತ ಮೂಲ) :

"ಅಬ್ದಯನ- ಇತಿ॥ ವತ್ಸರಃ॥ ಅಬ್ದಃ ಮೇಘಃ। ಉಭಯತ್ರ ಮಾಸಂ ತು "ಮೇಘಸ್ಥೋ ಜಲದಾತೃತ್ವಾತ್ ಅಬ್ದಃ ॥ (ವಾಯುಗಃ) ॥ ಸರ್ವಾಶ್ರಯತ್ವಾತ್ ಅಯನಮ್ ॥ ಋತುಗತತ್ವಾತ್ ಋತುಃ ॥ಮಾಂ ಸುಶ್ರಿಯಂ ಯೋಗ್ಯೇಭ್ಯಃ ತನೋತಿ ಇತಿ ಮಾಸಃ ॥ ಪಾತಿ ಇತಿ ಪಃ ॥ ಕ್ಷಿಣೋತಿ ಪಾಪಂ ಪಕ್ಷಃ ॥ ಋತು ಸಂಸ್ಥೋ ಜನಾರ್ದನಃ । ಮೋಕ್ಷಾದೀನ್ ಕಲ್ಪತೇ। ಆಮುಷ್ಯ ಹಿ। ಋತುನಾಮಾನಂ ಋತುಗಂ ಋತುತ್ವಾತ್ ಋತು ನಾಮಕಮ್ ॥ ಇತ್ಯುಪಾಸೀತ ಯೋ ವಿಷ್ಣುಂ ಪಂಚಾತ್ಮಾನಂ"—ಇತ್ಯನಂತರಂ- "ವಾಸಸ್ಯ ಸುಖಕಾರಿತ್ವಾತ್ ಪುರುಷೋತ್ತಮಃ। ನೀರಾದೇಃ ಗಿರಿಣಾತ್ ಭೀಷ್ಮಃ ವರ್ಷಣಾತ್ ವರ್ಷ ಉಚ್ಯತೇ। ಶಂ ರಾತೀತಿ ಶರತ್ಪ್ರೋಕ್ತಃ ಹೇಮಂತಃ ಹಿಮಕಾರಣಾತ್। ಇತಿ ಚ। ನಿಲೇತ್ಯತ್ರ ಶುಕ್ಲಂ ತು ವಾಸುದೇವಾಖ್ಯಂ ಅನಿರುದ್ಧಂ ತು ನೀಲಕಮ್ । ಸಂಕರ್ಷಣಂ ಪಿಂಗಲಂ ಚ

ಪ್ರದ್ಯುಮ್ನಂ ಹರಿತರ ಸ್ಮೃತಮ್ । ನಾರಾಯಣಂ ಲೋಹಿತಂ ಸ್ಯಾತ್ ಪಂಚರೂಪಾಣ್ಯಜೇ ಹಕಾ" ಇತಿ **ಛಾಂದೋಗ್ಯ ಬೃಹದ್ಭಾಷ್ಯೇ** ||೨೧||

**ಕನ್ನಡಾರ್ಥ :-**

"ಅಬ್ದ"-ಎಂಬ ಶಬ್ದಕ್ಕೆ "ಸಂವತ್ಸರ"ವೆಂದು ಒಂದರ್ಥ. "ಮೇಘ"ವೆಂದು ಇನ್ನೊಂದರ್ಥ. ಎರಡರಲ್ಲಿಯೂ ಶ್ರೀಪರಮಾತ್ಮ ಇರುವುದರಿಂದ ಅಬ್ದಶಬ್ದವಾಚ್ಯನು ಮೇಘಗತನಾಗಿ ಮಳೆಯನ್ನು ಕೊಡುವನು. ಅದರಿಂದ ಅಬ್ದನಾಮಕನು. ಸರ್ವವನ್ನು ತನ್ನಲ್ಲಿ ಇಟ್ಟುಕೊಂಡಿರುವುದರಿಂದ "ಅಯನ" ಶಬ್ದವಾಚ್ಯನು. ಋತುಗಳಲ್ಲಿರುವುದರಿಂದ "ಋತು" ವೆನಿಸುವನು. ಯೋಗ್ಯರಾದ ಭಕ್ತರಿಗೆ ಮಂಗಳಪ್ರದನಾದುದರಿಂದ "ಮಾಸ"ನಾಮಕನು. ಪಾಪಗಳನ್ನು ಪರಿಹರಿಸಿ ಸಂರಕ್ಷಿಸುವುದರಿಂದ ಶ್ರೀಹರಿಗೆ "ಪಕ್ಷ"-ಎಂದು ಹೆಸರು, ಋತುಧರ್ಮಪ್ರವರ್ತಕನು ಹಾಗೂ ಋತುಧರ್ಮಪ್ರದನು. ಋತುಶಬ್ದ ವಾಚ್ಯನಾದ ಪಂಚರೂಪೀ ಹರಿಯನ್ನು "ಪಂಚಋತು" ಎಂದು ಉಪಾಸಿಸಿದರೆ ಮೋಕ್ಷಾದಿ ಪರಮಪುರುಷಾರ್ಥಪ್ರದನಾಗುತ್ತಾನೆ, ವಾಸಕ್ಕೆ ಸುಖಪ್ರದನಾದುದರಿಂದ "ವಸಂತ"ನೆಂದು ಪುರುಷೋತ್ತಮನಿಗೆ ಹೆಸರು. ಜಲಾದಿಗಳನ್ನು ನುಂಗುವುದರಿಂದ "ಗ್ರೀಷ್ಮ" ನಾಮಕನು. ಮಳೆಯನ್ನು ಸುರಿಸುವುದರಿಂದ "ವರ್ಷ" ಶಬ್ದವಾಚ್ಯನು ಸುಖ (ಶಂ) ಪ್ರದನಾದಂದರಿಂದ "ಶರತ್" ನಾಮಕನು, ಹಿಮವನ್ನುಂಟುಮಾಡುವುದರಿಂದ "ಹೇಮಂತ" ನೆಂದು ಹೆಸರು. **ಛಾಂದೋಗ್ಯ ಭಾಷ್ಯದಲ್ಲಿ**- "ನೀಲಾಬ್ದ ವರ್ಣ" ನೆಂದು ಹೇಳಿರುತ್ತಾರೆ. ವಾಸುದೇವರೂಪವು ಶುಕ್ಲವರ್ಣವುಳ್ಳದ್ದು ಅನಿರುದ್ಧರೂಪವು ನೀಲವರ್ಣವು. ಸಂಕರ್ಷಣರೂಪವು ಪಿಂಗಲವರ್ಣಯುಕ್ತವು, ಪ್ರದ್ಯುಮ್ನ ರೂಪವು ಹರಿತ್ (ಹಳದಿ) ವರ್ಣವು. ನಾರಾಯಣ ರೂಪವು ಲೋಹಿತ (ಅಚ್ಚಗೆಂಪು) ವರ್ಣವಿಶಿಷ್ಟವೆಂದು **ಭಾಷೋಕ್ತಿ** ಇದೆ ||೨೧||

**(ಐ) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ**

(೧)

ಕಾಲನಿಯಾಮಕರೂಪೋಪಾಸನೇ ತಿಳಿಸುತ್ತಾರೆ, ಅಬ್ದ ಎಂದು,

ಅಬ್ದವೆಂಬ ಸಂವತ್ಸರ, ಅಯನವೆಂಬ ಉತ್ತರ-ದಕ್ಷಿಣಾಯನ ಕಾಲ, ಋತು ವೆಂಬ ಎರಡು ತಿಂಗಳಕಾಲ, ಮಾಸವೆಂಬ ತಿಂಗಳು, ಪಕ್ಷವೆಂಬ ಹದಿನೈದು ದಿನಕಾಲ ಈ ವಿಧ ಐದು ಬಗೆ ಕಾಲಲ್ಲಿ ನೀಲಮೇಘದಂತೆ ಅಪ್ರಾಕೃತವರ್ಣ ಅನಿರುದ್ಧಾದಿ ನಾರಾಯಣಾಂತ ಐದು ರೂಪದಿಂದ ವ್ಯಾಪಿಸಿರುವ ಕರುಣಾ ಸಮುದ್ರದೇವರು, ಸೂರ್ಯಾದಿ ಒಂಭತ್ತು ಗ್ರಹಗಳಲ್ಲಿದ್ದು ಕಾಲಪ್ರವಾಹದಲ್ಲಿ ಚರಿಸುವುದರಿಂದ, ಒಂದರಲ್ಲಿ ಐದರ ಪ್ರಕಾರ ಒಂಭತ್ತೈದಲು ನಲವತ್ತೈದು ರೂಪದಿಂದ ಅಥವ ಅಬ್ದ ೧, ಅಯನ ೨, ಋತು ೬, ಪಕ್ಷ ೨೪, ಮಾಸ ೧೨, ಅಂತು ನಲವತ್ತೈದು ರೂಪನಾಗಿ ಸರ್ವತ್ರ ವ್ಯಾಪಿಸಿರುವ ನೆಂದು ಚಿಂತಿಸುವವರಿಗೆ ಲಭ್ಯನಾಗುವನು, ಅಂದರೆ ಗನುಗ್ರಹಿಸಿ ಕಾಪಾಡು ವನು. ||೨೦||

### (೫) ಭಾವದರ್ಪಣ ವ್ಯಾಖ್ಯಾನ

ಅಬ್ದ, ಅಯನ, ಋತು, ಮಾಸ, ಪಕ್ಷ ಈ ಐದರಲ್ಲಿ ಅನಿರು ದ್ಧಾದಿ ೧೬ ರೂಪದಿಂದ ಇದ್ದಾನೆಂತಲೂ, ೧೫ ತಿಥಿಯೊಳಗೆ ೨೪ ಪಕ್ಷದಿಂದ ಹೆಚ್ಚು ಗುಣಿಸಿದರೆ, ೩೬೦ ದಿವಸವಾಯಿತು. ಇದೇ ಸಂಖ್ಯಾಕವಾದ ಭಗವದ್ರೂಪ ಸ್ಮರಿಸೆಂದು ಹೇಳುತ್ತಾರೆ. ||೨೦||

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಕಾಲವು ಪ್ರವಾಹತೋಽನಿತ್ಯವಾದದ್ದು. ಆದ್ಯಂತರಹಿತವಾದದ್ದು ಕಾಲಪ್ರವಾಹ. ಇಂತಹ ಕಾಲವು ಭಗವದಧೀನವಾಗಿದೆ. ಕಾಲಮಾನದಲ್ಲಿ ಮುಖ್ಯ ಪ್ರಭೇಧಗಳು ಐದು ಈ ಪಂಚ ಕಾಲಭೇಧಗಳಾವುವೆಂದರೆ,

**(೧) ಅಬ್ದ (ವರ್ಷ) (೨) ಅಯನ (೩) ಋತು (೪) ಮಾಸ ಮತ್ತು (೫) ಪಕ್ಷ ಎಂದು ೫ ಪ್ರಕಾರ.**

೨. **ಅಬ್ದ** – ೩೬೦ ದಿನಗಳ ಮಾನಕ್ಕೆ ಒಂದು ಸಂವತ್ಸರ ಅಥವಾ ವರ್ಷವೆಂಡು ಹೆಸರು. ಈ ಕಾಲಮಾನವೇ **ಅಬ್ದವು.** ಒಂದು ಸಂವತ್ಸರದ ಎಣಿಕೆ (೧) ಎಂದು ತೆಗೆದು ಕೊಳ್ಳಬೇಕು. ಇಂತಹ ಸಂವತ್ಸರದಲ್ಲಿ ಅಬ್ದನಾಮಕನಾಗಿ **ಅನಿರುದ್ಧ**ರೂಪೀ ಪರಮಾತ್ಮನಿದ್ದು ಕಾಲಪ್ರವರ್ತಕನಾಗಿರುವನು. ಅನಿರುದ್ಧರೂಪವು ನೀಲವರ್ಣವಿಶಿಷ್ಟವಾದದ್ದು. ಮೇಘಗಳ ದ್ವಾರಾ ಮಳೆಯನ್ನು ಸುರಿಸುವುದರಿಂದ ಶ್ರೀ ಪರಮಾತ್ಮನಿಗೆ ಅಬ್ದನೆಂದು ಕರೆಯುವರು. (ಅಪ–ನೀರನ್ನು ದ–ಕೊಡುವುದು. ಅಂದರೆ ಮೇಘಗಳು ಎಂದರ್ಥ) ಮೇಘವರ್ಣವೂ ನೀಲಿ ಬಣ್ಣವು ಆದ್ದರಿಂದ ನೀಲಮೇಘ ಶ್ಯಾಮನು.

2. **ಅಯನ**—ವರ್ಷದಲ್ಲಿ ಎರಡು ಅಯನಗಳಿವೆ. (೧) ಉತ್ತರಾಯಣ ಮತ್ತು (೨) ದಕ್ಷಿಣಾಯನ. ಪೂರ್ವಕ್ಕೆ ಅಭಿಮುಖವಾಗಿ ನಿಂತಾಗ ನಮ್ಮ ಎಡಕ್ಕೆ ಇರುವುದು ಉತ್ತರ ದಿಕ್ಕು. ಬಲಕ್ಕೆ ದಕ್ಷಿಣ ದಿಕ್ಕು. ಇದರಿಂದ ದೇಹದ ಎಡಪಾರ್ಶ್ವದಲ್ಲಿ ಹಬ್ಬಿರುವ **ಇಡಾನಾಡಿಯಲ್ಲಿ** ಅಂತರ್ಗತನಾಗಿ ಉತ್ತರಾಯಣಕ್ಕೆ ಪ್ರವರ್ತಕನಾಗಿದ್ದಾನೆ. ದೇಹದ ಬಲಪಾರ್ಶ್ವಗತ **ಪಿಂಗಳಾನಾಡಿಯಲ್ಲಿ** ಅಂತರ್ಗತನಾಗಿ ದಕ್ಷಿಣಾನಯ ಪ್ರವರ್ತಕನಾಗಿದ್ದಾನೆ. ಸರ್ವರಿಗೂ ಆಶ್ಚರ್ಯದಾತನಾಗಿರುವುದರಿಂದ ಶ್ರೀಹರಿಯು **ಅಯನಶಬ್ದವಾಚ್ಯನು.** ಅಯನಗಳನ್ನು ೨ ಎಂದು ಎಣಿಸಬೇಕು. ಇವುಗಳಲ್ಲಿ **ಪ್ರದ್ಯುಮ್ನ**ನನ್ನು ಚಿಂತಿಸಬೇಕು.

೪. **ಋತು**-ವರ್ಷಕಾಲಮಾನದಲ್ಲಿ ವಸಂತಾದಿ ಶಿಶಿರ ಪರ್ಯಂತ ೬ ಋತುಗಳಿವೆ. ಈ ಷಡ್ರುತುಗಳಲ್ಲಿ **ಸಂಕರ್ಷಣರೂಪದಿಂದ ಪಿಂಗಳ** ವರ್ದ ವಿಶಿಷ್ಟನಾಗಿ ಶ್ರೀ ಪರಮಾತ್ಮನು ಕಾಲಪ್ರವರ್ತಕನಾಗಿಧುವನು.

೫. **ಮಾಸ**

**ಒಂದು ವರ್ಷದ ಕಾಲಮಾನದಲ್ಲಿ ೧೨ ಮಾಸಗಳು ಬರುವುವು.**

ಚೈತ್ರಾದಿ ಫಲ್ಗುಣಮಾಸಪರ್ಯಂತ ಇರುವ ೧೨ ಮಾಸಗಳಲ್ಲಿ ಮಾಸ ನಿಯಾಮಕನಾಗಿ ಮಾಸಶಬ್ದವಾಚ್ಯನಾಗಿ ಶ್ರೀ ಪರಮಾತ್ಮನು ಕಾಲಪ್ರವರ್ತಕ ನಾಗಿದ್ದಾನೆ. ಮಾಸಾಂತರ್ಗತ ಭಗವದ್ರೂಪವು **ವಾಸುದೇವನಾಮಕನಾದ ಶ್ರೀ**ಪರಮಾತ್ಮನು, ಶುಕ್ಲವರ್ಣ ವಿಶಿಷ್ಟನಾಗಿದ್ದಾನೆ. ಯೋಗ್ಯರಾದ ಸ್ವಭಕ್ತರಿಗೆ ಮಂಗಳಪ್ರದನಾದುದರಿಂದ ಮಾಸ ಶಬ್ದವಾಚ್ಯನು,

೬. **ಪಕ್ಷ**—

ಹಿಂದು ಪಕ್ಷಕ್ಕೆ ೧೫ ದಿವಸಗಳು. ಒಂದು ಮಾಸಕ್ಕೆ 2 ಪಕ್ಷಗಳು. (1) ಶುಕ್ಲಪಕ್ಷ ಮತ್ತು (2) ಕೃಷ್ಣಪಕ್ಷ, ಭಕ್ತರ ಪಾಪಗಳನ್ನು ಪರಿಹರಿಸಿ ಅವರಿಗೆ ಸದಾ ಸಂರಕ್ಷಕನಾಗಿರುವುದರಿಂದ, ಶ್ರೀಹರಿಗೆ **ಪಕ್ಷ** ನೆಂದು ಅಭಿಧಾನವು. ಪಕ್ಷಾಂತರ್ಗತನಾಗಿ ಆ ಕಾಲನಿಯಾಮಕನಾಗಿರುವ ಶ್ರೀ ಪರಮಾತ್ಮನ ಭಗವದ್ರೂಪವು **ಶ್ರೀಮನ್ನಾರಾಯಣನು** (ಕೆಂಪು) ವರ್ಣದಿಂದ ಯುಕ್ತನಾಗಿದ್ದಾನೆ.

೭. ಇಂತು ನೀಲಮೇಘಶ್ಯಾಮನಾದ ಪರಮಾತ್ಮನು, ಅನಿರುದ್ಧಾದಿ ಪಂಚರೂಪಗಳಿಂದ ಅಬ್ಧಿ ಅಯನ, ಋತು, ಮಾಸ ಮತ್ತು ಪಕ್ಷಗಳೆಂಬ ಕಾಮಾನದ ಪಂಚಪ್ರಬೇದಗಳಲ್ಲಿ ಅಂತರ್ಗತನಾಗಿ ಕಾಲಪ್ರವರ್ತಕನಾಗಿದ್ದಾನೆ. ಇಂತಹ ಶ್ರೀಹರಿಯನ್ನು **ನೀಲಾಬ್ದವರ್ಣ**ನೆಂದು ತಿಳಿಸಿರುತ್ತಾರೆ ಪ್ರಸಕ್ತ ಪದ್ಯದಲ್ಲಿ, ನೀಲ-ಎಂದರೆ ನೀಲಿ ಬಣ್ಣದ ಅಬ್ದ-ಎಂದರೆ ಮೇಘಗಳು ಎಂದರ್ಥ (ಅಪ್-ನೀರನ್ನು ದ-ಕೊಡುವುದರಿಂದ ಮೇಘಗಳಿಗೆ "ಅಬ್ದ" —ಎಂದು ಹೆಸರು) ಅಂತಹ ನೀಲಮೇಘದಂತೆ ಶ್ಯಾಮಲವರ್ಣ ಯುಕ್ತ ಶರೀರನು, ಅದರಿಂದಲೇ ನೀಲಾಬ್ದವರ್ಣನು.

೮, ನೀಲಮೇಘ ಶ್ಯಾಮನಾದ ಅನಿರುದ್ಧಾದಿ ಪಂಚರೂಪಾತ್ಮಕ ಹರಿಯು ಸರ್ವ ದೇಶ, ಕಾಲ, ಅವಸ್ಥೆಗಳಲ್ಲಿ ವ್ಯಾಪ್ತನಾಗಿ ಹರಡಿಕೊಂಡಿರುವನು. ಹೀಗೆ ಸರ್ವತ್ರ ವ್ಯಾಪ್ತನಾದ ಪಂಚರೂಪಾತ್ಮಕನ ೪೫ ಭಗವ

ದ್ರೂಪಗಳನ್ನು ನಿರಂತರದಲ್ಲಿ ಮನಸಾ ಚಿಂತಿಸಿ, ಧ್ಯಾನ ಮಾಡುತ್ತಿರುವ ಭಕ್ತವೃಂದಕ್ಕೆ ಧ್ಯಾನಗೋಚರನಾಗಿ ತನ್ನ ದರ್ಶನಭಾಗ್ಯವನ್ನೀಯುವನು,

## ೪೫ ಭಗವದ್ರೂಪಗಳ ವಿವರ

| | | | |
|---|---|---|---|
| (1) | **ಅಬ್ದ**— ಸಂವತ್ಸರ-ಒಂದು ಕಾಲಮಾನ | = | 1 |
| (2) | **ಅಯನ**—ಉತ್ತರಾಯಣ ಮತ್ತು ದಕ್ಷಿಣಾಯನ | = | 2 |
| (3) | **ಋತು**—ವಸಂತಾದಿ ಷಡೃತುಗಳು | = | 6 |
| (4) | **ಮಾಸ**—ಚೈತ್ರಾದಿ ದ್ವಾದಶ ಮಾಸಗಳು | = | 12 |
| (5) | **ಪಕ್ಷ**—ಮಾಸಕ್ಕೆ 2 ಪಕ್ಷಗಳಂತೆ ಸಂವತ್ಸರಕ್ಕೆ | = | 24 |
| | ಒಟ್ಟು ಸಂಖ್ಯೆ | = | 45 |

ಇವುಗಳ ಸಮಗ್ರ ವಿವರಣೆಯ ಪಟ್ಟಿನೋಟ :

| ಕ್ರಮ ಸಂಖ್ಯೆ | ಕಾಲ ಪ್ರಭೇದ | ಭಗವದ್ರೂಪ | ವರ್ಣ | ವಾಚ್ಯತ್ವ | ಅರ್ಥವಿವರಣೆ | ರೂಪಗಳ ಸಂಖ್ಯೆ |
|---|---|---|---|---|---|---|
| ೧ | ಅಬ್ದ | **ಅನಿರುದ್ಧ** | ನೀಲವರ್ಣ | ಅಬ್ದನಾಮಕ | ನೀಲಮೇಘ ಶ್ಯಾಮ | ೧ |
| ೨ | ಅಯನ | **ಪ್ರದ್ಯುಮ್ನ** | ಹರಿದ್ವರ್ಣ (ಹಳದಿ) | ಅಯನಶಬ್ದವಾಚ್ಯನು | ಸರ್ವಾಧಾರಪ್ರದನು | ೨ |
| ೩ | ಋತು | **ಸಂಕರ್ಷಣ** | ಪಿಂಗಲವರ್ಣ | ಋತುನಾಮಕನು | ಋತುಧರ್ಮಪ್ರವರ್ತಕನು | ೬ |
| ೪ | ಮಾಸ | **ವಾಸುದೇವ** | ಶುಕ್ಲವರ್ಣ | ಮಾಸಶಬ್ದವಾಚ್ಯನು | ಸ್ವಭಕ್ತರಿಗೆ ಮಂಗಳಪ್ರದನು | ೧೨ |
| ೫ | ಪಕ್ಷ | **ನಾರಾಯಣ** | ಲೋಹಿತವರ್ಣ | ಪಕ್ಷನಾಮಕನು | ಪಾಪಪ್ರಕ್ಷಾಳನ ಕಾರ್ಯ ಸಂರಕ್ಷಣೆ ಕಾರ್ಯ | ೨೪ |

**ಕಾಲಪ್ರವರ್ತಕ ಒಟ್ಟು ರೂಪಗಳ ಸಂಖ್ಯೆ = ನಲವತ್ತೈದು** = ೪೫

# ಪದ್ಯ (೨೨)

## ಮೂಲ

ಐದು ರೂಪಾತ್ಮಕನು ಇಪ್ಪ ।
ತ್ತೈದು ರೂಪದಲಿಪ್ಪ ಮತ್ತ್ರಿಂದಿ ।
ನೈದು ತಿಥಿಯಿಪ್ಪತ್ತು ನಾಲಕರಿಂದ ಪೆಚ್ಚಿಸಲು ॥
ಐದುವುದು ಅರವತ್ತಧಿಕ ಅ ।
ರೈದು ದಿವಸಾಹ್ವಯದೊಳಗೆ ಮನ ।
ತೋಯ್ದವಗೆ ತಾಪತ್ರಯದ ಮಹದೋಷವೆಲ್ಲಿಹವು ॥ ॥೨೨॥

## ಅವತರಣಿಕೆ :

ಪೂರ್ವಪದ್ಯದಲ್ಲಿ ಸಂವತ್ಸರಾದಿ ಪಕ್ಷಾಂತ ಪಂಚ ಕಾಲಪ್ರಭೇದಗಳಲ್ಲಿ ಕಾಲಪ್ರವರ್ತಕನಾಗಿರುವ ಶ್ರೀಪರಮಾತ್ಮನ ಅನಿರುದ್ಧಾದಿ ನಾರಾಯಣ ಪರ್ಯಂತ ಪಂಚರೂಪೋಪಾಸನಾಕ್ರಮ ತಿಳಿಸಿ. ಅದೇ ಅನಿರುದ್ಧಾದಿ ಪಂಚರೂಪಾತ್ಮಕನು ೨೫ ರೂಪಗಳಿಂದ ಇದ್ದು. ೩೬೦ ದಿವಸಗಳಲ್ಲಿ ಅಂತರ್ಗತನಾಗಿದ್ದು ದಿವಸನಾಮಕನಾದ ಶ್ರೀಹರಿಯ ಭಗವದ್ರೂಪಗಳನ್ನು ಮನಸಾ ಧ್ಯಾನಿಸುವ ಉಪಾಸಕರಿಗೆ ತಾಪತ್ರಯಗಳ ಬಾಧೆ ಇಲ್ಲವೆಂದು ತಿಳಿಸುತ್ತಾರೆ- **ಐದುರೂಪಾತ್ಮಕನು** ಎಂಬ ಪ್ರಸಕ್ತ ಸಂಧಿಗತ ೨೨ ನೆಯ ಈ ಪದ್ಯದಿಂದ, ॥೨೨॥

## ಪ್ರತಿಪದಾರ್ಥ

**ಐದುರೂಪಾತ್ಮಕನು** = ಪೂರ್ವೋಕ್ತ ಅನಿರುದ್ಧಾದಿ ನಾರಾಯಣ ಪರ್ಯಂತ ವಿದ್ಯಮಾನನಾಗಿರುವ ಪಂಚರೂಪಾತ್ಮಕನಾದ ಶ್ರೀ ಪರಮಾತ್ಮನು **ಇಪ್ಪತ್ತೈದು ರೂಪದಲಿ** = ಒಂದೊಂದರಲಿಯೂ ೫ ರೂಪಗಳಂತೆ ೫ ಕಾಲಾ

ಧಿಷ್ಠಾನಗಳಲ್ಲಿ ೫ × ೫ = ೨೫ ರೂಪಗಳಿಂದ **ಇಷ್ಟ** = ಕಾಲಾಂತರ್ಗತನಾಗಿ ಕಾಲಪ್ರವರ್ತಕನಾಗಿ ಇದ್ದಾನೆ. **ಮತ್ತೆ** = ಪುನಃ **ಹದಿನೈದು ತಿಥಿ** = ಒಂದು ಪಕ್ಷಕ್ಕೆ ಪ್ರತಿಪದದಿಂದ ಪೂರ್ಣಿಮಾ (ಅಮಾವಾಸ್ಯೆ) ಪರ್ಯಂತ ಇರುವ ದಿನಗಳು = ೧೫ ಅಂದರೆ ಒಂದು ಪಕ್ಷಕ್ಕೆ ೧೫ ತಿಥಿಗಳು **ಇಪ್ಪತ್ತು ನಾಲಕರಿಂದ ಪೆಚ್ಚಿಸಲು** = ಒಂದು ಮಾಸಕ್ಕೆ ೨ ಪಕ್ಷಗಳು ಒಂದು ಸಂವತ್ಸರಕ್ಕೆ ೧೨ ಮಾಸಗಳಂತೆ ಒಂದು ಸಂವತ್ಸರಕ್ಕೆ ೧೨ × ೨ = ೨೪ ಪಕ್ಷಗಳು. ಈ ೨೪ ಪಕ್ಷಗಳನ್ನು ಪಕ್ಷಕ್ಕೆ ೧೫ ತಿಥಿಗಳಂತೆ ಗುಣಿಸಿದರೆ ೨೪ × ೧೫ = ೩೬೦ ದಿವಸಗಳಾಗವುವು. **ಅರವತ್ತಧಿಕ ಅರ್ರೈದು ದಿವಸ** = ಆರೈದು ಎಂದರೆ ೬ × ೫ = ೩೦ ಆರವತ್ತಧಿಕ ಆರು = ೬೦ + ೬ = ೬೬. ಇಲ್ಲಿ ಗಣನೆ ಹೀಗೆ ಮಾಡಬೇಕು. ಆರೈದು ಎಂಬ ಸಂಖ್ಯೆಯಲ್ಲಿ ೫ನ್ನು ಸಾಮಾನ್ಯ ಗುಣಕವಾಗಿ ಇಟ್ಟುಕೊಂಡು, ೬ನ್ನು ೬೦ಕ್ಕೆ ಸೇರಿಸಿ ೬೬ ಎಂದು ಎಣಿಸಿ (೬೬ + ೬) × ೫ = ೭೨ × ೫ = ೩೬೦ ಎಂದು ಗಣನೆಮಾಡಬೇಕು. ಅಥವಾ ೬೦ + ೬ = ೬೬ ೬೬ × ೫ = ೩೩೦ ೬ × ೫ = ೩೦ (ಆರೈದು) ಕೂಡಿದರೆ ೩೩೦ + ೩೦ = ೩೬೦ ದಿನಗಳಾಗುವುವು. ಇದೇ ಸರಿಮಾದ ಎಣಿಕೆಯ ಕ್ರಮ. ಇಲ್ಲದಿದ್ದರೆ ಅರವತ್ತಧಿಕಆರೈದು = ೬೦ + ೬ × ೫ = ೬೦ + ೩೦ = ೯೦ಎಂದಾಗುವುದು. ಇದು ಲೆಕ್ಕಕ್ಕೆ ಸರಿಹೊಂದುವುದಿಲ್ಲ. **ಆಹ್ವಯನೊಳಗೆ** = ದಿವಸ ಶಬ್ದವಾಚ್ಯನಾದ ಶ್ರೀಪರಮಾತ್ಮನಲ್ಲಿ **ಮನ ತೋಯ್ದವಗೆ** = ಮನಸ್ಸನ್ನು ಅದ್ದಿ ಅದರಲ್ಲೇ ನಿರತನಾಗಿರುವವನಿಗೆ. ಅಂದರೆ ೩೬೦ ಸಂಖ್ಯಾಕವಾದ ದಿವಸಗಳೆಂಬ ಹೆಸರಿನಿಂದ ದಿವಸಶಬ್ದವಾಚ್ಯನಾದ ಶ್ರೀಹರಿಯನ್ನು ಧ್ಯಾನಕ್ಕೆ ವಿಷಯುವನ್ನಾಗಿಸಿ, ಅಂತಹ ೩೬೦ ಖಂಡರೂಪಗಳಿಂದ ವಿದ್ಯಮಾನನಾದ ಅಖಂಡರೂಪೀ ಸಂವತ್ಸರಾತ್ಮಕ ಶ್ರೀಪರಮಾತ್ಮನಲ್ಲಿ ಮನಸ್ಸನ್ನು ಆಸಕ್ತಗೊಳಿಸಿದವನಿಗೆ **ತಾಪತ್ರಯದ** = ಆಧ್ಯಾತ್ಮ, ಆಧಿಭೌತಿಕ ಮತ್ತು ಆದಿದೈವಿಕವೆಂಬ ಮೂರುಪ್ರಕಾರವಾದ ಬಾಧೆಗಳು (ದಾರಿದ್ರ್ಯದೋಷ ದೇಹರೋಗ, ಮನೋರೋಗ ಎಂಬ ಮೂರುವಿಧವಾದ ಉಪಟಳಗಳು) **ಮಹದೋಷವೆಲ್ಲಹವು** = ತಾಪತ್ರಯಾದಿಗಳಿಂದ ಉಂಟಾಗುವ ಫಲರೂಪವಾದ ದೋಷಗಳು ಎಂದೆಂದಿಗೂ ತಟ್ಟುವುದಿಲ್ಲ. ಅಂದರೆ ಅಂತಹ ಧ್ಯಾನೋಪಾಸಕನು ತಾಪತ್ರಯಗಳಿಂದ ದೂರನಾಗಿರುವನು ಎಂದು ತಾತ್ಪರ್ಯ. ॥೨೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ-

ಪೂರ್ವೋಕ್ತ ಕಾಲಾಂತರ್ಗತ ಭಗವದುಪಾಸನಾಕ್ರಮ ಹೇಳಿ ತದನುಷ್ಠಿತನಾದವಗೆ ತಾಪತ್ರಯಾದಿಗಳು ಇಲ್ಲವಂತ ಹೇಳಿಥಾರೆ.

ಐದು ರೂಪಾತ್ಮಕನು- ಪೂರ್ವೋಕ್ತ ಅನಿರುದ್ಧಾದಿ ಐದು ರೂಪಗಳು, ಇಪ್ಪತ್ತೈದು ರೂಪದಲಿ-ಒಂದೊಂದು ರೂಪಕ್ಕೆ ಮೂಲರೂಪ ಒಂದು, ಅದರಿಂದ ಹೊರಟ ಅನಿರುದ್ಧಾದಿರೂಪಗಳು ಐದು, ಅಂತು ಆರು, ಪ್ರತಿ ರೂಪಕ್ಕೂ ಈ ಪ್ರಕಾರ ಲೆಕ್ಕ ಮಾಡಿದರೆ ಇಪ್ಪತ್ತೈದು, ಒಂದೊಂದಕ್ಕೆ ಐದು ರೂಪಗಳವ್ಯಾರಿಗೆ ಐದು ಐದುಗಳು ಇಪ್ಪತ್ತೈದು, ಮೂಲರೂಪಗಳು ಐದು, ಅಂತು ಮೂವತ್ತು ಇಪ್ಪ-ಪ್ರತಿ ತಿಥಿಯಲ್ಲಿನೂ ಒಂದೊಂದುರೂಪದ ವ್ಯಾರಿಗೆ ಮೂವತ್ತು ದಿನಗಳಲ್ಲಿ ಮೂವತ್ತು ರೂಪಗಳಲ್ಲಿದ್ದಾನೆ. ಹದಿನೈದು ತಿಥಿ ಸೇರಿ ಒಂದು ಪಕ್ಷ. ಉಭಯ ಪಕ್ಷಗಳಿಗೆ ನಾರಾಯಣ ಅಂತ ಹೇಳಿರೋಣದರಿಂದ, ಒಂದೊಂದು ಪಕ್ಷಕ್ಕೂ ನಾರಾಯಣನೇ ಆಚ. ಇಂಥ ಪಕ್ಷ ಸಾಂಕೇತವಾದ ಹದಿನೈದು ತಿಥಿಗಳು.

ಇಪ್ಪತ್ತುನಾಲ್ಕರಿಂದ ಹೆಚ್ಚಿಸಲು-ಒಂದು ವರುಷಕ್ಕೆ ಆಗತಕ್ಕ ಪಕ್ಷಗಳು ಇಪ್ಪತ್ತನಾಲ್ಕು, ಇದರಿಂದ ಹದಿನೈದು ತಿಥಿಗಳ ಹೆಚ್ಚುಮಾಡಿ ಗುಣಿಸಿ ಅರೈದು -ಮೂವತ್ತು ಆಗತದೆ, ಈ ತ್ರಿಂಶತಿ ಶಬ್ದ ತ್ರಿಶತಿವಾಚಕವಾಗಿ ಅರ್ಥ ಮಾಡಬೇಕು. ಶಾಸ್ತ್ರ ಮರ್ಯಾದಾವೇನೆಂದರೆ; ದಶಕ್ಕೆ ಹತ್ತು ಎಂತಲೂ, ನೂರು ಎಂತಲೂ, ಸಹಸ್ರ ಎಂತಲೂ. ಪೂರ್ಣ ಎಂತೆಲೂ. ಈ ಪ್ರಕಾರ ಇರುತ್ತದೆ; ಆದ್ದರಿಂದ ಮೂವತ್ತರನ್ನು ಮುನ್ನೂರಾಗಿ ತಿಳಿದು, ಅರವತ್ತಧಿಕ-ಅರವತ್ತು ಅಧಿಕ. ಅಂತು ಮುನ್ನೂರಅರವತ್ತು, ಒದುವುದ- ಒಂದು ವರುಷಕ್ಕೆ ಮುನ್ನೂರ ಅರವತ್ತು ದಿನಗಳು ಆಗತದೆ, ಪಕ್ಷಕ್ಕೆ ನಾರಾಯಣ ಆದ್ದರಿಂದ ಇದೇ ನಾರಾಯಣನೆ ಮತ್ತು ಪ್ರತಿತಿಥಿಗಳಲ್ಲಿ ಒಂದೊಂದು ರೂಪದ ವ್ಯಾರಿಗೆ ಮುನ್ನೂರ ಅರವತ್ತು ರೂಪಗಳ ತಿಳಿಯಬೇಕು, ಅಂತು

ಪ್ರತಿ ಮಾಸಗತ ಮೂವತ್ತು ತಿಥಿಗಳಿಗೆ ಪೂರ್ವೋಕ್ತ ರೂಪಗಳು ಒಂದು. ಹಾಂಗೆ ನಾರಾಯಣ ರೂಪ ಒಂದು. ಉಭಯರೂಪಗಳ ತಿಳಿಯಬೇಕಂತ ಅರ್ಥ. ದಿವಸಾಹ್ವದೊಳಗೆ–ಇಂಥಾ ದಿನ ಸಾಂಕೇತನಾದ ಕಾಲಾಂತರ್ಗತ ಶ್ರೀ ಪರಮಾತ್ಮನೆಂಬೋ ಉದಕದೊಳಗೆ, ಮನ ತೋಯ್ದವಗೆ ಮನಸ್ಸನ್ನು ಛಂದಾಗಿ ಇಟ್ಟವಗೆ, ತಾಪತ್ರಯ-ದಾರಿದ್ರದೋಷ, ರೋಗಾದ್ಯುಪದ್ರವ, ಮನೋರೋಗ ಇವು ತಾಪತ್ರಯಗಳು. ಮಹದೋಷ–ಎಂದರೆ ಪೂರ್ವಜನ್ಮ ದಲ್ಲಿ ಮಾಡಿದ ಮಹಾದೋಷಗಳ ಲೇಪ ಎಂಬುದು, ಎಲ್ಲಿಹವು- ಆಗೋದಿಲ್ಲ ಎಂತ ಅರ್ಥ. ಅಂಥ ಅಧಿಕಾರಿಗೆ ಸುಖಾಪೇಕ್ಷೆ ಇರೋದಿಲ್ಲವಾದ್ದರಿಂದ ದಾರಿದ್ರ್ಯ ದುಃಖವಿಲ್ಲ. ನಿಸ್ಸಂಗನಾಗಿ ಇರುತ್ತಾನಾದಕಡಿಯಿಂದ ಮನೋ ವ್ಯಾಕುಲವಿಲ್ಲ. ಪಾಪಗಳಿಂದ ರೋಗಪ್ರಾಪ್ತಿ ಮಾಡತಕ್ಕ ಕರ್ಮಗಳು ಭಗವ ದರ್ಪಿತ ಮಾಡತಾನೆ ಆದರಿಂದ ಪಾಪಲೋಪವಿಲ್ಲದೆ ಇರುತ್ತಾನೆ ಎಂತ ತಾತ್ಪರ್ಯ ॥೨೨॥

(೨) ಭಾವ ಪ್ರಕಾಶಿಕೆ-ವ್ಯಾಖ್ಯಾನ:-

ಅನಿರುದ್ಧಾದಿ ಪಂಚ ರೂಪಾತ್ಮಕನಾದ ಶ್ರೀ ಹರಿಯು, ಸಂವತ್ಸರ, ಆಯನ, ಋತು, ಮಾಸ, ಪಕ್ಷಗಳೆಂಬ ಐದರಲ್ಲಿ ಒಂದೊಂದರಲ್ಲಿಯೂ ಅನಿ ರುದ್ಧ, ಪ್ರದ್ಯುಮ್ನ, ಸಂಕರ್ಷಣ, ನಾರಾಯಣ ಎಂಬೈದು ರೂಪಗಳಿಂದ ಇರುವನು. ಹೀಗೆ ಅನಿರುದ್ಧಾದಿ ಐದು ರೂಪಗಳನ್ನು, ಸಂವತ್ಸರಾದಿ ಐದ ರಿಂದ ಗುಣಾಕಾರ ಮಾಡಿದರೆ, ೨೫ ರೂಪಗಳಾಗುವವು, ಈ ೨೫ ರೂಪ ಗಳಿಂದ ಪರಮಾತ್ಮನು ಸಂವತ್ಸರಾದಿಗಳಲ್ಲಿ ಇರುವನು, ೧ ಪಕ್ಷದ ೧೫ ದಿವಸಗಳು, ತಿಂಗಳಿಗೆ ಶುಕ್ಲ, ಕೃಷ್ಣವೆಂಬ ೨ ಪಕ್ಷಗಳು, ೧೨ ತಿಂಗಳಿಗೆ ೨೪ ಪಕ್ಷಗಳಾಗುವುವು, ೨೪ × ೧೫ ಹೀಗೆ ಗುಣಾಕಾರ ಮಾಡಿದರೆ, ೩೬೦ ದಿವಸ ಗಳಾಗುವುವು. ಶ್ರೀ ಪರಮಾತ್ಮನು ೩೬೦ ರೂಪಗಳಿಂದ ಆ ದಿನಸಗಳಲ್ಲಿ ದಿವಸ ನಾಮಧ್ಯೇಯದಿಂದಿರುವನು, ಇಂತಹ ಪರಮಾತ್ಮನಲ್ಲಿ ಮನಸ್ಸಿಟ್ಟು ದೃಢವಾಗಿ ಸೇವಿಸುವವರಿಗೆ ತಾಪತ್ರಯ ದೋಷವೆಂಬುದು ಎಂದಿಗೂ ಬರು ವುದಿಲ್ಲವೆಂಬುದು ತಾತ್ಪರ್ಯ ॥೨೨॥

## (೩) ಭಾವದರ್ಪಣ ಟೀಕಾ-ವ್ಯಾಖ್ಯಾನ:

ಅಬ್ದ, ಅಯನ, ಋತು, ಮಾಸ, ಪಕ್ಷ ಈ ಐದರಲ್ಲಿ ಅನಿರುದ್ಧಾದಿ ೨೫ ರೂಪದಿಂದ ಇದ್ದಾನೆಂತಲೂ, ೧೫ ತಿಥಿಯೊಳಗೆ ೨೪ ಪಕ್ಷದಿಂದ ಹೆಚ್ಚು ಗುಣಿಸಿದರೆ ೩೬೦ ದಿವಸವಾಯಿತು. ಇದೇ ಸಂಖ್ಯಾಕವಾದ ಭಗವದ್ರೂಪ ಸ್ಮರಿಸೆಂದು ಹೇಳುತ್ತಾರೆ- ಐದು ರೂಪಾತ್ಮಕೇ-ತಿ ॥೨೯॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದಿ "ಐದು" ಇತಿ॥

ಸಂವತ್ಸರ, ಅಯನ. ಋತು, ಮಾಸ ಮತ್ತು ಪಕ್ಷಗಳೆಂದು ಪಂಚ ವಿಧ ಕಾಲಮಾನೆಗಳು, ಈ ಕಾಲಾಂತರ್ಗತನಾದ ಭಗವದ್ರೂಪಗಳನ್ನೇ ತಿಳಿ ಸುತ್ತಾರೆ, ಇದೇ ಕಾಲನಿಯಾಮಕ ಪರಮಾತ್ಮನು ತಿಥಿಗಳಿಂದಾರಂಭಿಸಿ ೩೬೦ ದಿವಸಗಳಲ್ಲಿರುವ ಒಂದು ಸಂವತ್ಸರಗತ ಭಗವದ್ರೂಪಗಳಿಂದ ವಿದ್ಯಮಾನನಾಗಿ ದ್ದಾನೆಂದು ಪ್ರಸಕ್ತ ಪದ್ಯದಿಂದ ನಿರೂಪಿಸುತ್ತಾರೆ, ॥೨೨॥

**ಶ್ರೀಗುರು ಹೃದಯ ಪ್ರಕಾಶಿಕೆ:-** ಇದೇ ಕಾಲರೂಪವನ್ನು ಮುನ್ನೂರೈವತ್ತು ದಿವಸದಲ್ಲಿ ಸ್ಮರಿಸುವ ರೀತಿ ತಿಳಿಸುತ್ತಾರೆ, ಐದೆಂದು, ಮೇಲೆ ಹೇಳಿದ ಸಂವತ್ಸರಾದಿ ಐದುವಿಧ ಕಾಲಗತ ಅನಿರುದ್ಧಾದಿ ನಾರಾಯ ಣಾಂತ ರೂಪವನ್ನು ಒಂದೊಂದು ಭಾಗ ಕಾಲದಲ್ಲಿ ಹೆಚ್ಚು ಗುಣಿಸಿದರೆ ಇಪ್ಪತ್ತೈದಾಗುವುದು. ಇದರಲ್ಲಿ ಮೂಲನಾರಾಯಣ ರೂಪ ಬಿಟ್ಟು, ಇಪ್ಪತ್ತನಾಲ್ಕು ರೂಪವನ್ನು ಪಾಡ್ಯ ಮೊದಲು ಪೂರ್ಣಿಮಾಂತ ಹದಿನೈದು ದಿವಸದಿಂದೆ ಹೆಚ್ಚು ಗುಣಿಸಿದರೆ; ಮುನ್ನೂರಅರವತ್ತು ದಿವಸಾಂತರ್ಗತ ರೂಪ ಗಳಾಗುವುವು, ಈ ಮುನ್ನೂರರವತ್ತು ದಿವಸ ನಾಮಕ ದೇವರ ರೂಪಗಳನ್ನು ಸದಾ ಸ್ಮರಣ ರೂಪ ಮನಸಾತ್ಮಕ ಉಪಾಸನೆ ಮಾಡುವವರಿಗೆ ಮಾನಸಿಕ ವ್ಯಸನ, ದೈಹಿಕ ವ್ಯಸನ, ಛಳಿ ಮುಂತಾದ ಕಾಲವ್ಯಸನವೆಂಬ ತಾಪತ್ರಯ ಮಹಾದೋಷ ದುಃಖ ಎಲ್ಲಿರುವುದೋ ಎಂದರೆ. ನಿದ್ದೆ ಹೋಗುವವನಿಗೆ ಅಣುಕಿಸಿದರೆ ವ್ಯಸನ ತಗಲದಂತೆ ಈ ವಿಧ ಧ್ಯಾಸನಶೀಲರಿಗೆ ಯಾವ ದುಃಖವೂ ತಗಲದಾರದೆಂದರ್ಥ ॥೨೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅಬ್ದಾದಿ ಪಕ್ಷಪರ್ಯಂತ ಪಂಚ ಕಾಲಾಧಿಷ್ಠಾನಗಳಲ್ಲಿ ಕಾಲಪ್ರವರ್ತಕನಾಗಿರುವ ಅನಿರುದ್ಧಾದಿ ಪಂಚರೂಪಾತ್ಮಕನ ೨೫ ಭಗವದ್ರೂಪೋಪಾಸನಾಕ್ರಮ, ಹಾಗೂ ಒಂದು ಸಂವತ್ಸರಗತ ೩೬೦ ದಿವಸಗಳಲ್ಲಿ ದಿವಸಾಹ್ವಯನಾಗಿರುವ ಭಗವದ್ರೂಪಗಳ ವಿಚಾರ ತಿಳಿಸುತ್ತಾರೆ- **ಐದುರೂಪಾತ್ಮಕನು** ಎಂಬ ಪ್ರಸಕ್ತ ೨೨ ನೆಯ ಪದ್ಯದಿಂದ.

೧. ಅಬ್ದ (ಒಂದು ಸಂವತ್ಸರ), ಅಯನಗಳು (೨) ಋತುಗಳು (೬) ಮಾಸಗಳು (೧೨) ಮತ್ತು ಪಕ್ಷ (೨೪) ಎಂಬ ಪಂಚ ವಿಧವಾದ ಕಾಲ ಪ್ರಭೇದಗಳಲ್ಲಿ ಒಂದೊಂದರಲ್ಲಿಯೂ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ವಾಸುದೇವ ಮತ್ತು ನಾರಾಯಣ ಎಂಬ ೫ ರೂಪಗಳಿಂದ ೫ ಕಾಲ ಪ್ರಭೇಧಗಳು × ಪಂಚರೂಪಗಳು = ೨೫ ರೂಪಗಳಿಂದ ಅಖಂಡರೂಪಾತ್ಮಕನಾಗಿ ಶ್ರೀಪರಮಾತ್ಮನು ಕಾಲನಾಮಕನಾಗಿ, ಕಾಲಾಂತರ್ಗತನಾಗಿ, ಕಾಲಪ್ರವರ್ತಕನಾಗಿದ್ದಾನೆ.

೨. ಒಂದು ಪಕ್ಷಕ್ಕೆ ೧೫ ದಿವಸಗಳು ಒಂದು ಸಂವತ್ಸರದಲ್ಲಿ ೨೪ಪಕ್ಷಗಳು ಬರುವುವು. ಒಂದು ಪಕ್ಷಕ್ಕೆ ೧೫ ದಿವಸಗಳಂತೆ ೨೪ ಪಕ್ಷಗಳಿಗೆ, ೧೫ × ೨೪ = ೩೬೦ ದಿವಸಗಳಾಗುವುವು. ಈ ಗಣನೆಯ ವಿಧಾನವನ್ನು ದಾಸರಾಯರು **ಮತ್ತೆ ಹದಿನೈದು ತಿಥಿ ಇಪ್ಪತ್ತನಾಲ್ಕರಿಂದ ಪೆಚ್ಚಿಸಲು** ಎಂದು ತಿಳಿಸುತ್ತಾರೆ.

೩. ಒಂದು ಸಂವತ್ಸರಗತ ಅಂತಹ ಮುನ್ನೂರ ಅರವತ್ತುದಿನಗಳಲ್ಲಿ ದಿವಸಶಬ್ದವಾಚ್ಯನಾಗಿ ಅದೇ ದಿನದಿಂದ ಕರೆಯಲ್ಪಡುತ್ತಾ, ದಿವಸಾಂತರ್ಗನಾಗಿ ಕಾಲಚಕ್ರ ನಿರ್ವಾಹಕನಾಗಿದ್ದಾನೆ. ಈಸಂಖ್ಯೆಯನ್ನು ದಾಸರಾಯರು ಪ್ರಯೋಗಿಸಿರುವ ಪ್ರಸಂಗದಲ್ಲಿ ಎರಡು ಪಾಠಾಂತರಗಳಿವೆ.

**(1) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ, ಪಂಚರತ್ನ ಪ್ರಕಾಶಿಕಾ ಮತ್ತು ಗುರು ಹೃದಯ ಪ್ರಕಾಶಿಕೆ ವ್ಯಾಖ್ಯಾನಗಳ ಪ್ರಕಾರ –**

**"ಅರವತ್ತಧಿಕ ಆರೈದಂದಿವಸಾಹ್ವಯನೊಳಗೆ"** ಎಂಬ ಪಾಠವಿದೆ, ಇದನ್ನು ಅರವತ್ತಧಿಕ = ೬೦ ಹೆಚ್ಚಾದ, ಆರೈದು = ೬ × ೫ = ೩೦ ಎಂದು ತೆಗೆದುಕೊಂಡರೆ ೬೦ + ೩೦ = ೯೦ ಎಂದಾಗುವುದು, ಇದು ೩೬೦ ಎಂಬ ಸಂಖ್ಯೆಗೆ ಸರಿಹೊಂದುವುದಿಲ್ಲ, ಸಂಖ್ಯಾಶಾಸ್ತ್ರದ ಗಣತಿಯಂತೆ, ಇಲ್ಲಿ 'ಆರೈದು' ಎಂಬ ಶಬ್ದದಲ್ಲಿ "ಐದು" ಎಂಬ ಸಂಖ್ಯೆಯನ್ನು ಸಾಮಾನ್ಯ ಗುಣಕವಾಗಿ ತೆಗೆದುಕೊಳ್ಳಬೇಕು, ಆಗ (೬೦ + ೬) × ೫ ಮತ್ತು ೬ × ೫ ಎಂದು ಗುಣಿಸಿದಾಗ. (೬೦ + ೬) × ೫ = ೬೬ + ೫ = ೩೩೦ ಆಗುತ್ತದೆ ಮತ್ತು ೬ × ೫ = ೩೦ ಆಗುತ್ತದೆ. ಇವೆರಡನ್ನು ಕೂಡಿಸಲಾಗಿ ೩೩೦ + ೩೦ = ೩೬೦ ಸರಿಹೋಗುತ್ತದೆ, ಅಂದರೆ **ಅರವತ್ತಧಿಕ ಆರೈದು = (೬೬ × ೫) + (೬ × ೬)** ಎಂದು ೫ ನ್ನು ೬೬ಕ್ಕೂ ಮತ್ತು ೬ಕ್ಕೂ ಸಾಮಾನ್ಯ ಗುಣಕವಾಗಿ ತೆಗೆದುಕೊಳ್ಳಬೇಕು.

ಆದರೆ **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ,** "ದಶ" ಕ್ಕೆ ಹತ್ತು, ನೂರು, ಸಹಸ್ರ, ಪೂರ್ಣವೆಂತಲೂ ನಾನಾ ಅರ್ಥಗಳು ಶಾಸ್ತ್ರಮರ್ಯಾದೆಯ ಪ್ರಕಾರ ಇರುವುದರಿಂದ, **ಮೂವತ್ತನ್ನು ಮೂನ್ನೂರಾಗಿ** ತಿಳಿಯಬೇಕೆಂದು ಅರ್ಥಮಾಡಿರುತ್ತಾರೆ. ಎಂದರೆ **ಆದ್ಧದನ್ನು** ಅಂದರೆ ೬ × ೫ = ೩೦ನ್ನು ೩೦೦ ಎಂದು ಪರಿಗಣಿಸಬೇಕು. ಅರವತ್ತಧಿಕ ಎಂರರೆ ೬೦ + ೩೦೦ = ೩೬೦ ಆಗುವುದು ಎಂದು ಆ ವ್ಯಾಖ್ಯಾನಕಾರರ ಅಭಿಪ್ರಾಯ, ಈ ಗಣನೆಯೂ ಶಾಸ್ತ್ರಮರ್ಯಾದಾ ವಿವಕ್ಷಾ ಗ್ರಾಹ್ಯವೇ.

(೩) ಆದರೆ **ಭಾವದರ್ಪಣ ಟೀಕಾ, ಭಾವಪ್ರಕಾಶಿಕೆ ವ್ಯಾಖ್ಯಾನ** ಕಾರರು ಈ ಸಂಖ್ಯಾಕ್ರಮವನ್ನು **ಅರವಧಿಕ ಮುನ್ನೂರಾದ ದಿವಸಾಹ್ವಯನೊಳಗೆ** ಎಂದು ಪದ್ಯದಲ್ಲಿ ಪಾಠ ಕೊಟ್ಟಿರುತ್ತಾರೆ, ಇದು ನೇರ

ಹಾಗೂ ಸರಳವಾದ ಗಣನೆ ಅರವತ್ತಧಿಕ=೬೦ ಹೆಚ್ಚಾದ ಮುನ್ನೂರು=೩೦೦ ಅಂದರೆ ೬೦+೩೦೦=೩೬೦ ಎಂದಾಗುವುದು.

ಪದ್ಯದಲ್ಲಿ ಪಾಠಭೇದಗಳಿದ್ದ ಕಡೆ ಪ್ರಮಾಣಕ್ಕೆ ವಿರೋಧಬಾರದಂತೆ ಅನ್ವಯಿಸಬೇಕು.

೪. ಇಂತು ಒಂದು ಸಂವತ್ಸರ ಕಾಲಮಾನದಲ್ಲಿ ಘಟಕವಾಗಿರುವ ೩೬೦ ದಿವಸಗಳಲ್ಲಿ ಕಾಲಾಂತರ್ಗತ ಭಗವದ್ರೂಪೋಪಾಸನೆ ಮಾಡುತ್ತಾ, ಆ ಭಗವಧ್ಧ್ಯಾನದಲ್ಲಿ ಆಸಕ್ತರಾಗಿ ತಮ್ಮ ಮನಸ್ಸಿನಲ್ಲಿ ಚಿಂತನೆ ಮಾಡುತಿರುವ ಉಪಾಸಕರಿಗೆ ತಾಪತ್ರಯಗಳ ಬಾಧೆಯಾಗಲೀ ತಜ್ಜನಿತ ದೋಷಗಳಾಗಲೀ ಇಲ್ಲವೆಂದು ತಿಳಿಸುತ್ತಾರೆ. ಆಧ್ಯಾತ್ಮಿಕ ಆದಿಭೌತಿಕ, ಆದಿದೈವಿಕ, ವೆಂಬ ತಾಪತ್ರಯಗಳ ಪರಿಣಾಮವೇ ದೈಹಿಕ ರೋಗಾದುಪ್ಯದ್ರವಗಳು, ಮಾನಸಿಕ ವ್ಯಾಧಿಗಳು ಇತ್ಯಾದಿ ಈತಿ ಬಾಧೆಗಳು ಅವನನ್ನು ಪೀಡಿಸಲಾರವು ಎಂದು ತಾತ್ಪರ್ಯ. ॥೨೨॥

## ಪದ್ಯ (೨೩)

ಮೂಲ

ದಿವಸಯಾಮ ಮುಹೂರ್ತ ಘಟಿಕಾ ।
ದ್ಯವಯವಂಗಳೊಳಗಿದ್ದು ಗಂಗಾ ।
ಪ್ರವಹದಂದದಿ ಕಾಲನಾಮಕ ಪ್ರವಹಿಸುತಲಿಪ್ಪ ॥
ಇವನ ಗುಣರೂಪ ಕ್ರಿಯಂಗಳ ।
ನಿವಹದೊಳು ಮುಳುಗಾಡುತಲಿ ಭಾ ।
ಗವಿ ಸದಾನಂದಾತ್ಮಳಾಗಿಹಳೆಲ್ಲಕಾಲದಿ ॥ ॥ ೨೩ ॥

**ಅವತರಣಿಕೆ**

ಪೂರ್ವಪದ್ಯದಲ್ಲಿ ಒಂದು ಸಂವತ್ಸರಗತ ೩೬೦ ದಿವಸಗಳಲ್ಲಿ ದಿವಸ ನಾಮಕನಾಗಿರುವ ಕಾಲರೂಪೀ ಶ್ರೀ ಪರಮಾತ್ಮನ ವಿಷಯ ತಿಳಿಸಿ, ಒಂದು ದಿವಸ ಮತ್ತು ಅದರ ಅಂಗಭಾಗಗಳಾದ ಯಾಮ, ಮುಹೂರ್ತ, ಘಟಕಾ, ಕ್ಷಣ ಇತ್ಯಾದಿ ಕಾಲಗಳಲ್ಲಿ ಪ್ರವಾಹವೋನಿತ್ಯವಾಗಿರುವ ನದಿಯ, ಉದಕದಂತೆ ಕಾಲಪ್ರವರ್ತಕನಾದ ಶ್ರೀಪರಮಾತ್ಮನ ಅಗಣಿತ ಗುಣರಾಶಿಗಳ ಮಹಾರ್ಣವದಲ್ಲಿ ಲೋಕಮಾತೆ ಲಕುಮೀ ಮುಳುಗಿ. ನಿತ್ಯಾನಂದದಲ್ಲಿ ಲೋಲಾಡುತ್ತಿರುವಳು ಎಂದು **ದಿವಸಯಾಮ** ಎಂಬ ಪ್ರಸಕ್ತ ಸಂಧಿಗತ ೨೩ ನೆಯ ಈ ಪದ್ಯದಿಂದ ತಿಳಿಸುತ್ತಾರೆ. ॥ ೨೩ ॥

**ಪ್ರತಿಪದಾರ್ಥ**

**ದಿವಸ** = ಹಗಲು ರಾತ್ರಿ ಸೇರಿದ ೨೪ ತಾಸುಗಳ ಒಂದು ದಿನ, **ಯಾಮ** = ೩ ತಾಸುಗಳ ಕಾಲಾವಧಿ (ದಿವಸಕ್ಕೆ ೮ ಯಾಮಗಳು), **ಮುಹೂರ್ತ** = ೨ ಘಳಿಗೆಯಕಾಲ (೨೪ಕ್ಷಣಗಳು) **ಘಟಿಕಾ** = ಘಳಿಗೆ (೧೨ ಕ್ಷಣಗಳು) **ಆದಿ** = ಇವೇ ಮೊದಲಾದ, ಆದಿ ಶಬ್ದದಿಂದ ಕ್ಷಣ, ತೃಟಿ, ಲವ ಇತ್ಯಾದಿ ಸೂಕ್ಷ್ಮಕಾಲಾಂಶಗಳು ಗ್ರಾಹ್ಯ. **ಅವಯವಗಳೊಳು** = ಕಾಲದ ಅಂಗಗಳಲ್ಲಿ **ಇದ್ದು** = ಕಾಲಾಂತರ್ಗತನಾಗಿ ವಿದ್ಯಮಾನನಾಗಿದ್ದು, **ಕಾಲನಾಮಕ** = ಕಾಲಶಬ್ದವಾಚ್ಯನಾದ ಕಾಲರೂಪೀ ಶ್ರೀ ಪರಮಾತ್ಮನು **ಗಂಗಾಪ್ರವಹದಂದದಿ** = ಗಂಗಾನದಿಯಲ್ಲಿ ನಿರಂತರ ಹರಿಯುತ್ತಿರುವ ಉದಕ ಪ್ರವಾಹದಂತೆ (ಕಾಲವು ಪ್ರವಾಹವೋನಿತ್ಯವಾದ್ದರಿಂದ ಈ ಸಾದೃಶ) **ಪ್ರವಹಿಸುತಲಿಪ್ಪ** = ಹರಿಯುತ್ತಿದ್ದಾನೆ. ಅಂದರೆ ಕಾಲನಿಯಾಮಕನಾಗಿ ಕಾಲ ಚಕ್ರವನ್ನೂ ಪ್ರವರ್ತಿಸುತ್ತಿದ್ದಾನೆ. **ಇವನ** = ಕಾಲಪ್ರವರ್ತಕನಾದ ಇಂತಹ ಶ್ರೀ ಪರಮಾತ್ಮನ **ಗುಣ** = ಅನಂತಾನಂತ ಗುಣರಾಶಿಗಳೇನು, (ದೇಶ ಕಾಲಾತೀತ) **ರೂಪ** = ಅನಂತಾನಂತ ರೂಪ ವಿಶೇಷಗಳೇನು, **ಕ್ರಿಯೆಂಗಳ** = ಕ್ರಿಯಾವಿಶೇಷಗಳೇನು(ಶ್ರೀ ಪರಮಾತ್ಮನ ಗುಣ, ರೂಪ, ಕ್ರಿಯಾದಿಗಳೆಲ್ಲವೂ ಯಾವತ್ತೂ ಅಪರಿಚ್ಛಿನ್ನಗಳೇ) **ನಿವಹದೊಳು** = ಸಮೂಹದಲ್ಲಿ (ಅಗಾಧ

ಜಲರಾಶಿಯಲ್ಲಿ) **ಭಾರ್ಗವಿ** = ಶ್ರೀ ಲಕ್ಷ್ಮಿದೇವಿಯರು, **ಮುಳುಗಾಡುತಲಿ** = ಮುಳುಗಿ ಆದ್ಯಂತ ಕಾಣದೆ ಸಂಚರಿಸುತ್ತಾ, **ಎಲ್ಲಕಾಲದಲಿ** = ಸರ್ವಕಾಲಗಳಲ್ಲಿ **ಸದಾನಂದಾತ್ಮಕಳಾಗಿಹಳು** = ಕಾಲತಃ ದೇಶತಃ ಸಮಳಾಗಿ ಗುಣತಃ ಅಸಮಳಾಗಿ ಆನಂದಸ್ವರೂಪಳಾಗಿದ್ದಾಳೆ. ॥ ೨೩ ॥

# ವ್ಯಾಖ್ಯಾನಗಳು

## (೪) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಕ್ಷಣಕಾಲವಾದಿ ಕಾಲಗತ ಭಗವದ್ರೂಪಗಳ ಹೇಳತಾರೆ.

ರಾತ್ರಿ-ಹಗಲು ಸೇರಿದ್ದು ಒಂದು ದಿವಸ, ಆವಯವ-ಈ ಒಂದು ದಿವಸಕ್ಕೆ ಅವಯುವಭೂತನಾದ, ಯಾಮ ಮುಹೂರ್ತ ಘಟಕಾದಿ-ಒಂದು ದಿವಸಕ್ಕೆ ಯಾಮಗಳು ಎಂಟು, ಮುಹೂರ್ತಗಳು ಎಂದರೆ, ಎರಡು ಘಳಿಗೆ ಒಂದು ಮುಹೂರ್ತ, ಘಟಿಕಾ ಎಂದರೆ, ಒಂದು ದಿನಕ್ಕೆ ಅರವತ್ತು ಘಳಿಗೆ, ಒಂದು ಘಳಿಗೆಗೆ ಅರವತ್ತು ವಿಘಳಿಗೆ, ಆದಿ ಶಬ್ದದಿಂದ ಕ್ಷಣ ನಿಮಿಷಗಳು ಗ್ರಾಹ್ಯಗಳೊಳಗೆ-ಪೂರ್ವೋಕ್ತ ಯಾಮಾದಿ ಕಾಲಗಳೊಳಗೆ, ಕಾಲನಾಮಕ-ಪೂರ್ವೋಕ್ತ ಪರಮಾತ್ಮ ಆಯಾ ಕಾಲನಾಮಕನಾಗಿ, ಇದ್ದು-ಕಾಲಾಂತರ್ಗತನಾಗಿ ಕಾಲಾಕಾರದಿಂದ ಇದ್ದು, ಗಂಗಾಪ್ರವಾಹದಂದದಿ-ಗಂಗಾ ನದಿಯಲ್ಲಿ ಉದಕ ಪ್ರವಹಿಸುತಲಿಪ್ಪ-ಪ್ರವಹಿಸತಾ ಇರತಾನೆ. ಇವನ ಗುಣರೂಪ ಕ್ರಿಯಂಗಳ-ಈ ಕಾಲನಾಮಕ ಪರಮಾತ್ಮನ, ರಮಾದೇವೇರು ಗುಣತಃ ಅಸಮಳಾದ ಪ್ರಯುಕ್ತ, ದೇಶಕಾಲಾತೀತನಾದ ಪರಮಾತ್ಮನ, ಗುಣಗಳೇನು, ರೂಪಗಳೇನು, ಕ್ರಿಯೆಗಳೇನು ಇವು ಯಾವತ್ತೂ ಅಪರಿಚ್ಛಿನ್ನಗಳು, ಅಂತ ಇಲ್ಲದೇ ಇರತಕ್ಕದ್ದು, ನಿವಹದೊಳು-ಇಂಥಾ ಸಮೂಹದೊಳು, ಭಾರ್ಗವಿ-ಲಕ್ಷ್ಮೀದೇವಿಯರು ಮುಳಿಗಾಡುತಲಿ-ಮುಳುಗಿ ಅಂತ ಕಾಣದೆ ಸಂಚಾರ ಮಾಡತ, ಮನೋಇಂದ್ರಿಯದಿಂದ ಸಂಚಾರಮಾಡತ, ಸದಾನಂದಾತ್ಮಳಾಗಿ-ಸದಾ ಸರ್ವಕಾಲದಲ್ಲಿ ಪ್ರಚುರಾನಂದದಿಂದ ಯುಕ್ತಳಾಗಿ, ಎಲ್ಲ ಕಾಲದಲಿ-ಸದಾ ಸರ್ವ

ಕಾಲದಲ್ಲಿ ಅವಿಯೋಗಳಾಗಿನ್ನು, ಗುಣತಃಅ ಸಮಳಾಗಿನ್ನು, ಇಹಳು-ಅನಾದ್ಯ ನಂತಕಾಲಕ್ಕೂ ಶ್ರೀ ಪರಮಾತ್ಮನೋಪಾದಿಯಲ್ಲಿ ಒಬ್ಬಳಾಗಿ, ಶ್ರೀ ಪರಮಾತ್ಮನ ಅಧೀನಳಾಗಿ ಇರೋವಳಾಗಿದ್ದಾಳೆ ಎಂತ ತಾತ್ಪರ್ಯ.

ವಿಶೇಷಾರ್ಥ—

ಪ್ರವಹಿಸತಾನೆ ಎಂದರೆ, ನದಿ ಪ್ರವಹಿಸೋದಿಲ್ಲ. ನದಿ ಯಥಾಸ್ಥಾನದಲ್ಲಿ ದಾವಾಗ್ಯೂ ಒಂದೇ ಸ್ಥಳದಲ್ಲಿ ಇರುತ್ತದೆ. ತದ್ಗತ ಉದಕಕ್ಕೆ ಗಮನಾಗಮನ ಪ್ರವಾಹ ಉಂಟು, ಹ್ಯಾಂಗೋ, ನದೀಸಾಮ್ಯ ಜಡಕಾಲಿಕ, ತದ್ಗತ ಉದಕಸಾಮ್ಯ ಶ್ರೀ ಪರಮಾತ್ಮ. ಈ ಪರಮಾತ್ಮನ ಗಮನ ನದೀ ಉದಕ ಎಂಬುದು, ಹಿಂದಿನ ಪ್ರದೇಶ ಬಿಟ್ಟು ಮಂದೆ ಮುಂದಕ್ಕೆ ಹ್ಯಾಂಗೆ ಪ್ರವಹಿಸುತ್ತಾ ಅಂತ್ಯಕ್ಕೆ ಸಮುದ್ರ ಸೇರತದೋ, ತದ್ವತ್ ಪರಮಾತ್ಮ ಪ್ರವಹಿಸತಾ ಹೋಗಿ ದಾವಾಗಾದರೆ ತನ್ನ ಮೂಲರೂಪ ಸೇರತಾನೋ ಆಗ್ಗೆ ಮಹಾಪ್ರಳಯ, ಜಡಕಾಲ ನಾಶವಾಗಿ ತನ್ನ ಉಪಾದಾನಭೂತವಾದ ಪ್ರಕೃತಿಯಲ್ಲಿ ಸೇರತದೆ. ತದ್ವತ್ ಪ್ರಳಯ ಕಾಲದ ರಾತ್ರಿಯಲ್ಲಿ ಲಕ್ಷ್ಮ್ಯಾತ್ಮಕ ಕಾಲದಲ್ಲಿ ಸಂಚಾರ ಮಾಡತಾ ಬಂದು, ದಾವಾಗಾದರೇ ತನ್ನ ಮೂಲ ರೂಪದಲ್ಲಿ ಸೇರತಾನೋ ಆಗ ಸೃಷ್ಟಿಕಾಲ ದಾವಕಾಲದಲಿ ಇರತಾನೋ ಆದು ವರ್ತಮಾನಕಾಲ, ಹಿಂದೆ ಪ್ರವಹಿಸಿ ಮುಂದಕ್ಕೆ ಬರೋಣವೇ ಹಿಂದಿನ ಕಾಲ, ಭೂತಕಾಲ, ಮುಂದೆ ಪ್ರವಾಹದಿಂದ ಸೃ(ಹರಿಯುವುದು) ಪ್ರವೇಶಮಾಡುವುದು ಅಂದರೆ, ಪ್ರವೇಶಮಾಡಬೇಕಾದ ಕಾಲ ಅಂದರೆ ಭವಿಷ್ಯತ್ಕಾಲ, ಸೂರ್ಯಗತಿಯು ಇದೇ ಪ್ರಕಾರವೇ ಎಂತ ತಾತ್ಪರ್ಯ.

ಪ್ರಮಾಣ-

ಕಾಲನಾಮಕ ಎಂದರೇ, **ಭಾಗವತೇ ತೃತಿಯೇ ಏಕೋನ ತ್ರಿಶತ್ ಅಧ್ಯಾಯೇ ಅಂತ್ಯಶ್ಲೋಕೇ–**

**ಸೋಽನಂತೋಽಂತಕರಃ ಕಾಲೋ ನಾದಿರಾದಿಕೃದವ್ಯಯಃ ।**
**ಜನಂ ಜನೇನ ಜನಯನ್ಮಾರಯನ್ಮೃತ್ಯುನಾಂತಕಮ್ ॥ ॥೨೩॥**

(೨) ಭಾವಪ್ರಕಾಶಿಕೆ ವ್ಯಾಖ್ಯಾನ–

ಕಾಲನಾಮಕ ಪರಮಾತ್ಮನು ಲವನಿಮೇಷಾದ್ಯವಯವಗಳಲ್ಲಿ ಪ್ರವಾಹ ರೂಪನಾಗಿರುವನೆಂದು ಹೇಳುತ್ತಾರೆ.

ದಿವಸಗಳು ಝಾಮ, ಮುಹೂರ್ತ, ಘಳಿಗೆ ಮೊದಲಾದವು ದಿವಸ ಗಳ ಅಂಗಗಳು. ಇವುಗಳಲ್ಲಿ ಗಂಗಾಪ್ರವಾಹದಂತೆ ನಿತ್ಯವಾಗಿ ಕಾಲ ನಾಮಕ ಪರಮಾತ್ಮನು ಇರುವನು, ಗಂಗಾ ಪ್ರವಾಹವು ಹೇಗೆ ನೀರು ಮುಂದ ಹೋಗುತ್ತಾ, ಹಿಂದೆ ಬರುತ್ತಲೇ ಇರುವುದೋ, ಹೋದ ನೀರು ಹೇಗೆ ಹಿಂದಿರುಗದೋ, ಹಾಗೆಯೇ ದಿವಸದಲ್ಲಾದರೂ ಘಳಿಗೆಯ ಮೇಲೆ ಘಳಿಗೆ, ಮುಹೂರ್ತದ ಮೇಲೆ ಮತ್ತೊಂದು ಮುಹೂರ್ತ, ಹಗಲಾದ ಮೇಲೆ ರಾತ್ರಿ. ಪುನಃ ಹಗಲು ಹೀಗೆ ಬರುತ್ತಿರುವುದರಿಂದ ಪ್ರವಾಹೋಪ ಮಾನ ಕೊಟ್ಟರು. ಸಾಮಾನ್ಯ ನದಿಯ ಪ್ರವಾಹದಲ್ಲಿಯೂ ಈಗುಣವಿದ್ದೇ ಇರ್ರು ವುದು. ಗಂಗಾ ಪ್ರವಾಹೋಪಮಾನವೇಕೆಂದರೆ. ಮಿಗಿಲಾದ ನದಿಗಳಲ್ಲಿ ಕೆಲವು ಕಾಲ ನೀರಿಲ್ಲದೆ ಇರುವುದೂ ಉಂಟು. ಆದ್ದರಿಂದ ಗಂಗಾ ಪ್ರವಾಹೋಪಮಾನ ಕೊಟ್ಟರೆಂದು ತಿಳಿಯಬೇಕು, ಇಂತಹ ಭಗವಂತನ ಆನಂದಾದಿ ಗುಣಗಳು ಅಪ್ರಾ ಅನಂತಾನಂತ್ಯರೂಪಗಳು, ಸೃಷ್ಟ್ಯಾದಿ ಅನಂತಕ್ರಿಯೆಗಳು, ಇವೇ ಮೊದಲಾದ ಭಗವನ್ಮಹಿಮೆಗಳೆಂಬ ದೊಡ್ಡ ಮಡುವಿನಲ್ಲಿ ರಮಾ ದೇವಿಯರು ಮುಳುಗಿ ಆಡುತ್ತಾ, ಅಂದರೆ, ಅವುಗಳ ಪಾರಗಾಣದೆ, ಪಾರಗಾಣುವ ಪ್ರಯತ್ನ ದಲ್ಲಿ ನಿರತರಾಗಿರುವುದೆಂದು ಅರ್ಥ. ಯಾರಾದರೂ ಒಂದು ಕಾರ್ಯ ವನ್ನು ಪ್ರಯತ್ನಿಸಿ. ಆ ಕಾರ್ಯವಾಗದಿದ್ದರೆ ಮನಃಕ್ಲೇಶ ವಾಗುವುದು. ಹಾಗೇ ರಮಾದೇವಿಯರು ಕ್ಲೇಶಪಡುವರೋ, ಅಂದರೆ, ಇಲ್ಲ. ಸದಾ ಆನಂದಸ್ವರೂಪ ರಾಗಿಯೇ ಕುತೂಹಲದಿಂದ ನಿತ್ಯದಲ್ಲಿಯೂ ಹೊಸ ಹೊಸ ಮಹಿಮೆಗಳನ್ನು ಹುಡುಕುತ್ತಿರುವರು. ॥೨೩॥

## (೩) ನ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

" ದಿವಸೀತಿ"॥ ಕಾಲನಾಮಕ "ಓಂ ನಸ್ಯ ಇತ್ ಸನ್ಯ ಆದರ್ದಿರಚ್ಛ್ರತಾ ಸಹಸ್ರಾಜ್ಯ ವೃತಃ ಇಂದ್ರೋಯೋ ಯಜ್ವನೋ ವೃಧಃ ವಿಷೂಚರಃ ಸ್ವಧಾ ಅನು ಓಂ॥ ಅಭಿಕ್ತಾಶ್ವಾದಿ ಸಂಪದಂ ಛಿತ್ವಾ, ಭಕ್ತೇಭ್ಯಃ ದದಾತಿ ಇತಿ ಕಾಲಃ॥ ಗೀತಾ ತಾತ್ಪರ್ಯೆಚ – "ಕಾಲ ಕಲಿತ ಸಂಪೂರ್ಣ ಸದ್ಗುಣತ್ವಾತ್ ಜನಾರ್ದನಃ ॥ ಸಂಹಾರಾತ್ ಸರ್ವ ವಿತ್ವಾದ್ವಾ ಸರ್ವ ವಿದ್ರಾವಣೇನ ಚ॥ ಇತಿ ಮಹಾವರಾಹೇ ॥ಭಾರ್ಗವೀ – ರಮಾ ॥೨೩॥

**ಕನ್ನಡಾರ್ಥ:**

ಶ್ರೀ ಪರಮಾತ್ಮನು "ಕಾಲ"ನಾಮಕನು, ಇದು **ಬೃಹತೀಮಂತ್ರದಲ್ಲಿ** ವರ್ಣಿತ ವಾಗಿದೆ. ಆ ಅಭಕ್ತರ ಅಶ್ವ ಧನ ಕನಕ ಇತ್ಯಾದಿ ಸಮಸ್ತ ಸಂಪತ್ತನ್ನೂ ಕಸಿದು, ತನ್ನ ಭಕ್ತರುಗಳಿಗೆ ಕೊಡುವುದರಿಂದ. ಶ್ರೀ ಪರಮಾತ್ಮನಿಗೆ ಕಾಲ ಎಂದು ಹೆಸರು, "ಸಂಪೂರ್ಣಗುಣಗಳು ಶ್ರೀಪರಮಾತ್ಮನಲ್ಲಿ ನಿತ್ಯವಾಗಿ ಸಂಕಲಿಸುವುದರಿಂದ **ಕಾಲನಾಮಕನು** ಸರ್ವವನ್ನೂ ಸಂಹರಿಸುತ್ತಾನೆ ಸರ್ವಜ್ಞನು. ಸರ್ವವನ್ನೂ ಅಧ್ಯಯನಕ್ಕೆ ವಿಷಯುವನ್ನಾಗಿಸುವವನು," ಇದರಿಂದ ಕಾಲ ನೆಂದು ನಾಮ, ಇದನ್ನು **ಶ್ರೀ ಮದಾಚಾರ್ಯರು ಗೀತಾ ತಾತ್ಪರ್ಯದಲ್ಲಿ** ಹೇಳಿರುತ್ತಾರೆ. ॥೨೩॥

## (೪) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಈ ಕಾಲಾದಿರೂಪೋಪಾಸಕಳು ಮುಖ್ಯರಮಾದೇವಿ. ಆಕೆ ಈ ಸ್ವಾಮಿಯಗುಣಗಳ ಅಂತ್ಯವನ್ನು ಕಾಣಳೆಂಬ ಬಗ್ಗೆ ಸದೃಷ್ಟಾಂತವಾಗಿ ದಿವಸವೆಂದು ಮೊದಲು ಮುಂದಲ ಮೂರು ಪದ್ಯದಿಂದ ತಿಳಿಸುತ್ತಾರೆ. ದಿವಸವೆಂಬ ೬೦ ಘಳಿಗೆ ಕಾಲ, ಯಾಮವೆಂಬ ೭ ೧/½ ಘಳಿಗೆ ಕಾಲ, ಮುಹೂರ್ತವೆಂಬ ೨೨/½ ಘಳಿಗೆ ಕಾಲ, ೧ಘಳಿಗೆ ಎಂಬ ೬೪ ವಿಘಳಿಗೆ ಕಾಲ ಈ ಬಗೆಯಾದ ಅಖಂಡ ಗಂಗಾಪ್ರವಾಹದಲ್ಲಿ ಅವಯುವರೂಪ ಜಲಸಂಚಾರ

ಪ್ರತ್ಯೇಕ ಪ್ರತ್ಯೇಕ ಕಾಣಬರುವಂತೆ, ಕಾಲರೂಪದೇವರ ಘಟಿಕಾದಿ ಅವಯವ ರೂಪಗಳು ಅನಂತಾನಂತ ಸಂಚರಿಸುತ್ತಿರುವವು. ಈ ಕಾಲರೂಪ ದೇವರ ಗುಣ-ರೂಪ-ಕ್ರಿಯಾಸಮೂಹಗಳೊಳಗೆ ಭೃಗುಪುತ್ರಿ ಭಾರ್ಗವಿಯಾದ ಲಕ್ಷ್ಮೀ ಮುಳಿಗ್ಯಾಡುತಲಿ ಅಂದರೆ, ನಿರಂತರ ಚಿಂತನೆಯಿಂದ ಮುಳಗಿದಂತೆ ಅತ್ಯಂತ ನಿಮಗ್ನಳಾಗಿ ಸದಾ ಆನಂದಸ್ವರೂಪಳೂ ಆಗಿರುವಳು ॥೨೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಒಂದು ದಿವಸಕ್ಕೆ ೨೪ ತಾಸುಗಳು. ಯಾಮ, ಮುಹೂರ್ತ, ಘಳಿಗೆ ಇತ್ಯಾದಿ ಒಂದು ದಿವಸದ ಅಂಗಭಾಗಗಳು, ಇಂತಹ ಕಾಲದ ಅಂಶಗಳಲ್ಲಿ ಶ್ರೀ ಪರಮಾತ್ಮನು ಪ್ರವಾಹತೋ ನಿತ್ಯವಾದ ನದಿಯ ಉದಕದಂತೆ ಪ್ರವಹಿಸುತ್ತಾ ಕಾಲಪ್ರವರ್ತಕನಾಗಿದ್ದಾನೆ. ಎಂದು ತಿಳಿಸುತ್ತಾರೆ ಪ್ರಸಕ್ತ ೨೩ನೆಯ ಪದ್ಯದಿಂದ.

### ೧. ಒಂದು ದಿವಸ

ಹಗಲು ರಾತ್ರಿಗಳು ಸೇರಿದ ೨೪ ತಾಸುಗಳ ಕಾಲಮಾನಕ್ಕೆ ಒಂದು ದಿವಸ ಎಂದು ಹೆಸರು. ೬೦ ಘಳಿಗೆಗಳು = ಒಂದುದಿನ.

### ೨. ಯಾಮ

3 ತಾಸುಗಳ ಕಾಲಾವಧಿಗೆ **ಯಾಮ** ಎಂದು ಹೆಸರು. ಇದಕ್ಕೆ ಒಂದು **ಪ್ರ**ಹರ ಎಂತಲೂ ಹೆಸರು. ಒಂದು ಯಾಮ (ಪ್ರಹರ) = 3 ತಾಸುಗಳು.

### ೩. ಮುಹೂರ್ತ

೨ ಘಳಿಗೆಗಳ ಕಾಲಕ್ಕೆ ಒಂದು **ಮುಹೂರ್ತವೆಂದು ಹೆಸರು**

೪. ಘಟಿಕಾ

ಒಂದು ಘಳಿಗೆಯ ಕಾಲಕ್ಕೆ ಒಂದು ಘಟಿಕಾ ಎಂದು ಹೆಸರು.

ಈಗಿನ ಕಾಲಮಾನದ ಪ್ರಕಾರ:

(೧) 3 ತಾಸುಗಳು = ಒಂದು ಯಾಮ.
(೨) 8 ಯಾಮಗಳು = ಒಂದು ದಿವಸ.
(೩) ೬೦ ಘಳಿಗೆಗಳು = ಒಂದು ದಿವಸ
(೪) ೩೦ ಮುಹೂರ್ತಗಳು = ಒಂದು ದಿವಸ
(೫) ಒಂದು ಮುಹೂರ್ತ = 48 ನಿಮಿಷಗಳು
(೬) ಒಂದು ಘಳಿಗೆ = ೨೪ ನಿಮಿಷಗಳು.

ಇದರಂತೆ ದಿನ, ಯಾಮ. ಮುಹೂರ್ತ, ಘಟಿಕಾದಿಗಳ ಕಾಲಗಣನೆ ಮಾಡಬೇಕು.

೫. ಒಂದು ದಿವಸದ ಅವಯವಗಳಾದ ಮುಹೂರ್ತ, ಘಟಿಕಾ, ಯಾಮಾದಿಗಳಲ್ಲಿ ಕಾಲನಾಮಕನಾದ ಶ್ರೀಪರಮಾತ್ಮನು ನದಿಯ ಉದಕದಂತೆ ಪ್ರವಾಹರೂಪಿಯಗಿದ್ದಾನೆ. ಗಂಗಾನದಿಯು ಜೀವನದಿ. ಎಂದೂ ಬತ್ತುವುದಿಲ್ಲ. ಆದರ ಪ್ರವಾಹ ನಿತ್ಯ, ಈ ಕಾರಣದಿಂದ ಗಂಗಾನದಿಯ ಉಪಮಾನ ತೆಗೆದು ಕೊಳ್ಳಲಾಗಿದೆ. ನದಿಯ ಪ್ರವಾಹವು ಪ್ರವಾಹತೋನಿತ್ಯ. ಅಂದರೆ ಹರಿಯುತ್ತಿರುವ ನೀರು ಒಂದು ಪ್ರವಾಹದನಂತರ ಹಿಂದೆ ಇನ್ನೊಂದು ಪ್ರವಾಹವು ನಿರಂತರವಾಗಿ ಬರುತ್ತಲೇ ಇರುವುದು. ನಾವು ಸದ್ಯಕ್ಕೆ ಕಾಣುತ್ತಿರುವ ಪ್ರವಾಹವು ಹರಿದು ಮುಂದೆ ಹೋಗುವುದು. ಆ ಜಾಗದಲ್ಲಿ ಹಿಂದಿನಿಂದ ಇನ್ನೊಂದು ಪ್ರವಾಹವು ಹರಿಯುತ್ತಲೇ ಬರುತ್ತಿರುವುದು. ಇದರಿಂದ ನದಿಯ ನೀರಿನ ಪ್ರವಾಹವು ನಿರಂತರ. ಇದಕ್ಕೆ **ಪ್ರವಾಹತೋನಿತ್ಯತ್ವ**ವನ್ನು

ಹೇಳುತ್ತೇವೆ. ಅದರಂತೆ ಕಾಲವೂ ಸಹ ಪ್ರಾವಹತೋನಿತ್ಯವಾದುದು. ಈ ಸೆಕೆಂಡುಕಳೆಯಿತು. ಪುನಃ ಮುಂದಿನ ಸೆಕೆಂಡು ಪ್ರಾಪ್ತವಾಗುವುದು. ಹೀಗೆ ಕ್ಷಣ ವಾದ ಮೇಲೆ ಕ್ಷಣ, ಘಂಟೆ ಕಳೆದಮೇಲೆ ಘಂಟೆ, ದಿವಸ ಕಳೆದನಂತ ದಿವಸ ಹೀಗೆ ನಿತ್ಯಪ್ರವಾಹ ರೂಪವಾಗಿದೆ ಆದ್ಯಂತರಹಿತ ಕಾಲ. ಇಂತಹ ಪ್ರವಾಹ ತೋನಿತ್ಯವಾದ ಕಾಲದಲ್ಲಿ ಶ್ರೀಪರಮಾತ್ಮನು ದಿವಸ, ಯಾಮ, ಮುಹೂರ್ತ, ಘಳಿಗೆ ಇತ್ಯಾದಿ ಕಾಲಾಂಶಗಳಿಂದ ಕಾಲರೂಪಿಯಾಗಿ, ಕಾಲನಿಯಾಮಕ ನಾಗಿದ್ದು ಗಂಗಾನದಿಯ ಉದಕದಂತೆ ನಿತ್ಯನಾಗಿ ಕಾಲಪ್ರವರ್ತಕನಾಗಿರು ವನು.

೬. ಇಂತಹ ಕಾಲರೂಪಿ ಶ್ರೀಪರಮಾತ್ಮನ ಅನಂತಾನಂತ ಕಲ್ಯಾಣಗುಣಸಮೂಹಗಳಲ್ಲಿ ಅನಂತ ರೂಪಗಳಲ್ಲಿ, ಕ್ರಿಯಾವಿಶೇಷ ಗಳಲ್ಲಿ ಶ್ರೀಲಕ್ಷ್ಮೀದೇವಿಯುರು ನಿತ್ಯಾಸಕ್ತರಾಗಿ, ಆತನ ಗುಣರೂಪಕ್ರಿಯೆ ಗಳೆಂಬ ಮಹಾಸಮುದ್ರರಾಶಿಯಲ್ಲಿ ಮುಳುಗಿ ಕ್ಷಣಕ್ಷಣಕ್ಕೂ ನಿತ್ಯನೂತನ ಗೋಚರಿಸುತ್ತಿರುವ ಆ ಅಪಾರಮಹಿಮನ ರೂಪಗುಣಕ್ರಿಯಾವಿಶೇಷಗಳನ್ನು ಧ್ಯಾನಿಸುತ್ತಾ ನಿತ್ಯಾನಂದಳಾಗಿ ಸರ್ವಕಾಲ ದೇಶಗಳಲ್ಲಿ ಶ್ರೀಹರಿಗೆ ಸಮಳೆಂದೆ ನಿಸಿ ಗುಣತಃ ಅಸಮಳೆಂದೆನಿಸಿ ಶ್ರೀಹರಿಗೆ ನಿತ್ಯಾನಂದಳೂ ನಿತ್ಯಮುಕ್ತಳೂ, ನಿರ್ವಿಕಾರಳೂ ಆಗಿ ಆ ಭಾರ್ಗವಿ **ಸಮಾಸಮಳೆನಿಸಿದ್ಧಾಳೆ** ||೨೩||

## ಪದ್ಯ (೨೪)

**ಮೂಲ:**

**ವೇದತತಿಗಳಭಿಮಾನಿ ಲಕ್ಷ್ಮೀ ಧ ।**
**ರಾಧರನ ಗುಣರೂಪಕ್ರಿಯುಗ ।**
**ಳಾದಿ ಮಧ್ಯಾಂತವನು ಕಾಣದೆ ಮನದಿ ಯೋಚಿಸುತ ॥**
**ಆದಪೆನೆ ಈತನಿಗೆ ಪತ್ನಿ ಕೃ ।**
**ಪೋದಧಿಯು ಸ್ವೀಕರಿಸಿದನು ಲೋ ।**
**ಕಾಧಿಪನು ಭಿಕ್ಷುಕನ ಮನೆಯಾತಣವ ಕೊಂಬಂತೆ ॥೨೪॥**

**ಅವತರಣಿಕೆ:**

ಹಿಂದಿನ ಪದ್ಯದಲ್ಲಿ ಪ್ರತಿ ಪ್ರತಿ ಕಾಲಾಂಶಗಳಲ್ಲಿ ಪ್ರವಾಹತೋ ನಿತ್ಯವಾಗಿರುವ ನದಿಯ ಉದಕದಂತೆ ಕಾಲಪ್ರವರ್ತಕನಾಗಿರುವ ಶ್ರೀಪರಮಾತ್ಮನ ಮಹಾ ಮಹಿಮೆಗಳನ್ನು ತಿಳಿಸಿ. **ವೇದತತಿಗಳಭಿಮಾನಿ**-ಎಂಬ ಪ್ರಸಕ್ತಸಂಧಿಗತ ಈ ೨೪ನೆಯ ಪದ್ಯದಿಂದ ಅಂತಹ ಅಗಮ್ಯ ಮಹಿಮನಾದ ಸದ್ಗುಣಗಣಾಂಭೋಧಿ ಶ್ರೀ ಪರಮಾತ್ಮನ ರೂಪ, ಗುಣ, ಕ್ರಿಯಾದಿಗಳ ಅಗಾಧ ಸಾಗರದಲ್ಲಿ ಮುಳುಗಿ ಅವನ ಅದಿ ಮಧ್ಯಾಂತಗಳನ್ನು ಸಾಕಲ್ಯೇನ ಕಾಣದೆ, ಅಂತಹ ಅಪರಿಮಿತ ಮಹಿಮೋಪೇತನಾದ ಶ್ರೀಹರಿಗೆ ತಾನು ಪತ್ನಿಯಾದನೆಂದು ಪರಮ ಸಂಭ್ರಮದಿಂದ ನಿತ್ಯಾನಂದಳಾಗಿರುವ ಲಕ್ಷ್ಮೀದೇವಿಯವರ ವಿಷಯ ತಿಳಿಸುತ್ತಾರೆ. ॥೨೪॥

**ಪ್ರತಿಪದಾರ್ಥ:—**

**ವೇದತತಿಗಳ** = ಅನಂತಸಂಖ್ಯಾಕವಾದ ವೇದಗಳ ಸಮೂಹಕ್ಕೆ, **ಮಾನಿ** = ಅಭಿಮಾನಿಯೂದ, **ಲಕ್ಷ್ಮೀ** = ಲೋಕಮಾತೆಯಾದ ಶ್ರೀ ಲಕ್ಷ್ಮೀ ದೇವಿಯು, **ಧರಾಧರನ** = ಭೂದೇವಿಯನ್ನು ತನ್ನ ಕೋರೆದಾಡಿಗಳಿಂದೆತ್ತಿ ಉದ್ಧರಿಸಿದ ವರಾಹರೂಪೀ ಶ್ರೀ ಪರಮಾತ್ಮನ, **ಗುಣ, ರೂಪ ಕ್ರಿಯೆಗಳ** = ಅನಂತಾನಂತ ಕಲ್ಯಾಣ ಗುಣಗಳು. ಅನಂತಾನಂತ ಅವತಾರ ರೂಪಗಳು, ಕ್ರಿಯಾ ವಿಶೇಷಗಳ **ಆದಿಮಧ್ಯಾಂತವನು** = ಪ್ರಾರಂಭ, ಮಧ್ಯ ಮತ್ತು ಕೊನೆಗಳನ್ನು **ಕಾಣದೆ** = ಸಾಕಲ್ಯೇನ ಆಲೋಚನೆಗೆ ಎಟುಗದೆ, **ಮನದಿ** = ತನ್ನ ಮನಸ್ಸಿನಲ್ಲಿ, **ಯೋಚಿಸುತ** = ಆ ಅಪಾರಮಹಿಮಾ ಸಂಪನ್ನನ ಗುಣ ರೂಪ ಕ್ರಿಯಾದಿಗಳನ್ನು ಆಲೋಚಿಸುತ್ತಾ, **ಈತನಿಗೆ** = ಆದಿಮಧ್ಯಾಂತರಹಿತನಾದ ಸುಗುಣೋಪೇತನಾದ ಅಪರಿಚ್ಛಿನ್ನಮಹಿಮಾಯುಕ್ತನಾದ ಇಂತಹ ಪರಮಾತ್ಮನಿಗೆ, **ಪತ್ನಿ** = ಹೆಂಡತಿಯು, **ಆದಪೆನೆ** = ಎಂದೆಂದಿಗಾದರೂ ಆಗುತ್ತೇನೆಯೇ ಎಂದು ಮನಸಾ ಯೋಚಿಸುತ್ತಿರುವಳು **ಕೃಪೋದಧಿಯು** = ಪರಮ ಕರುಣಾಸಮುದ್ರನಾದ ಆ ಶ್ರೀ ಹರಿಯು **ಲೋಕಾಧಿಪನು** = ಚಕ್ರವರ್ತಿಯಾದವನು, **ಭಿಕ್ಷುಕನ ಮನೆಯ** = ಕೇವಲ ದರಿದ್ರನಾದ ಭಿಕ್ಷುಕನ ಮನೆಯಲ್ಲಿ ಔತಣದ **ಕೊಂಬಂತೆ** = ಭೋಜನವನ್ನು

ಸ್ವೀಕರಿಸುವಂತೆ. **ಸ್ವೀಕರಿಸಿದನು** = ಶ್ರೀ ಲಕ್ಷ್ಮೀದೇವಿಯರನ್ನು ಪತ್ನಿತ್ವೇನ ಸ್ವೀಕರಿಸಿದನು (ಸ್ವರಮಣನಾದಾಗ್ಯೂ, ಕೃಪಾಸಮುದ್ರನಾದ್ದರಿಂದ ಲಕ್ಷ್ಮಿಯ ಪ್ರಾರ್ಥನೆಯನ್ನು ಮನ್ನಿಸಿ ಸ್ವೀಕರಿಸಿದನು) ॥೨೪॥

# ವ್ಯಾಖ್ಯಾನಗಳು

## (೧) ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮ ರಮಾದೇವೇರನ್ನ ಪತ್ನಿತ್ವೇನ ಸ್ವೀಕಾರ ಮಾಡಿದ ಕ್ರಮವನ್ನು ಹೇಳತಾರೆ.

ಈತನಿಗೆ-ಗುಣಪೂರ್ಣನಾದ ಶ್ರೀನಾರಾಯಣ ದೇವರಿಗೆ, ಪತ್ನಿ-ಪತ್ನಿಯಾದ, ಲಕ್ಷ್ಮೀ-ಲಕ್ಷ್ಮೀದೇವರು, ಧರಾಧರನ-ವರಾಹರೂಪನಾದ ಶ್ರೀ ಪರಮಾತ್ಮನ, ಗುಣರೂಪಕ್ರಿಯೆಗಳ-ಗುಣ. ಆಕಾರ, ಕ್ರಿಯೆಗಳ, ಯೋಚಿಸುತ ಮನಸ್ಸಿನಲ್ಲಿ ಆಲೋಚಿಸುತ್ತ, ಅದಪೆನೆ-ಅಗೋನೆ, ಈ ಪರಮಾತ್ಮಗೆ ಪತ್ನಿ ಆಗೋನೆ ಎಂತ ಯೋಚಿಸೋವಳಾದಳು. ಯಾತರಿಂದ ಎಂದರೆ. ಶ್ರೀಪರಮಾತ್ಮ ತನ್ನ ಸ್ವಾಖ್ಯ ಸ್ತ್ರೀರೂಪದಿಂದ, ತನ್ನ ಸ್ವಾಖ್ಯ ಪುರುಷರೂಪದಿಂದ ಸ್ವರಮಣನಾಗಿ ಆನಂದ ಪೂರ್ಣದಿಂದ ಇರತಕ್ಕ ಶ್ರೀ ಪರಮಾತ್ಮಗೆ ಪತ್ನಿ ಆಗೋದಕ್ಕೆ ತನಗೆ ಯೋಗ್ಯತಾ ಸಾಲದೇ ಇದ್ದಾಗ್ಯೂನೂ, ದೇವರು ಲಕ್ಷ್ಮೀದೇವರನ್ನ ಪತ್ನಿತ್ವೇನ ಸ್ವೀಕಾರಮಾಡಿದ್ದು ಹ್ಯಾಂಗೆ ಎಂದರೆ, ಕೃಪೋದಧಿಯು ಕೃಪಾಸಮುದ್ರನಾದ ಶ್ರೀಪರಮಾತ್ಮ, ಲೋಕಾಧಿಪನು-ಮಹಾರಾಜನಾದವನು ಭಿಕ್ಷುಕನ ಮನೆಯು-ಕೇವಲ ಬಡವನಾಗಿ ಭಿಕ್ಷೆ ಬೇಡತಕ್ಕವನ ಮನಿಯಲ್ಲಿ. ಔತಣವ ಕೊಂಬಂತೆ-ಭೋಜನ ಸ್ವೀಕಾರ ಮಾಡಿದಂತೆ, ಸ್ವೀಕರಿಸಿದನು-ಲಕ್ಷ್ಮೀದೇವೇರಲ್ಲಿ ಮಹಾ ಅನುಗ್ರಹ ಮಾಡಿ ಅವಳನ್ನ ಪತ್ನಿತ್ವೇನ (ಸ್ವೀಕಾರ ಮಾಡಿದನು.) ರಮಾದೇವೇರಿಂದ ಶ್ರೀಪರಮಾತ್ಮಗೆ ಆಗಬೇಕಾದ್ದು ಒಂದೂ ಇಲ್ಲ, ದೇವರು ಸ್ವರಮಣರೂಪನೂ ನೋಡಿದಾಗಲೆಲ್ಲಾ ಇದೇ ಪ್ರಕಾರ ಆಲೋಚಿಸುತ್ತಾಳೆ ಎಂತ ತಾತ್ಪರ್ಯ. ॥೨೪॥

(೨) ಭಾವ ಪ್ರಕಾಶಿಕ-ವ್ಯಾಖ್ಯಾನ :

ಶ್ರೀ ಲಕ್ಷ್ಮೀದೇವಿಯರು ಭಗವನ್ಮಹಿಮೆಗಳನ್ನು ಸಾಕಲ್ಯೇನ ಕಾಣರಂಬ ವಿಷಯವನ್ನು ಈ ಪದ್ಯದಿಂದಲೂ ಹೇಳುತ್ತಾರೆ.

ವೇದಸಮೂಹಗಳಿಗಭಿಮಾನಿಯಾದ ರಮಾದೇವಿಯರು ಶ್ರೀಪರಮಾತ್ಮ ಗುಣಗೂಪಕ್ರಿಯಗಳ ಆದಿ, ಮಧ್ಯ, ಅಂತ್ಯಗಳನ್ನು ಕಾಣದೆ, ಮನಸ್ಸಿನಲ್ಲಿ ಆಶ್ಚರ್ಯಪಡುತ್ತಾ, ಇಂತಹ ಪರಮಾತ್ಮನಿಗೆ ಪ್ರತಿ ಅವತಾರದಲ್ಲಿಯೂ ನಾನೇ ಪತ್ನಿಯಾದೇನೆ ಎಂದು ಯೋಚಿಸುತ್ತಿರುವರು. ಶ್ರೀ ಲಕ್ಷ್ಮೀದೇವಿಯರಿಗೆ ಅವತಾರಗಳಲ್ಲಿ ತಾನೇ ಹೆಂಡತಿಯಾಗುವೆನೋ ಇಲ್ಲವೋ ಎಂಬ ಸಂಶಯವೇನೂ ಇಲ್ಲ. ಯಾವಾಗ ಅವತಾರವಾದೀತು? ಯಾವಾಗ ಆತನ ಪತ್ನಿಯಾದೇನು ? ಎಂಬ ಲವಲವಿಕೆಯಿಂದ ಯೋಚಿಸುತ್ತಿರುವರೆಂಬ ಭಾವ. ಶ್ರೀಪರಮಾತ್ಮನು ಸ್ವರಮಣನಾದುದರಿಂದ, ರಮಾದೇವಿಯವರಿಂದಲೂ ಸಹ ತನಗೇನೂ ಆಗಬೇಕಿಲ್ಲವಾದರೂ, ಕರುಣಾಸಮುದ್ರನಾದುದರಿಂದ, ಆಕೆಯ ಸೇವೆಗೆ ಪ್ರೀತನಾಗಿ, ಭಿಕ್ಷುಕನ ಮನೆಯ ಔತಣವನ್ನು ಮಹಾರಾಜನು ಅಂಗೀಕರಿಸುವಂತೆ, ತಾನು ಆಕೆಯನ್ನು ಸ್ವೀಕರಿಸಿದನು. ॥೨೪॥

(೩) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ

ಈ ಪದ್ಯದ ಅರ್ಥವು ಸರಳವಾಗಿರುವುದರಿಂದ ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀಕಾರರು ವ್ಯಾಖ್ಯಾನವನ್ನು ಕೊಟ್ಟಿಲ್ಲ. ॥೨೪॥

(೪) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ವೇದಸಮೂಹಗಳಿಗೆ ಅಭಿಮಾನಿಯಾದ ಲಕ್ಷ್ಮಿಯು, ಭೂಧಾರಕನಾದ ಪರಮಾತ್ಮನ ಜ್ಞಾನಾನಂದ ಬಲ ಸೌಂದರ್ಯಾದ್ಯನಂತ ಗುಣಗಳನ್ನು, ಜಗಜ್ಜನ್ಮಾದಿ ಕ್ರಿಯೆ, ರಾವಣಾದಿ ಸಂಹಾರಕ್ರಿಯೆ ಮುಂತಾದ ಅನಂತ ಕ್ರಿಯೆಗಳಲ್ಲಿ, ಒಂದೊಂದರಲ್ಲಿ ಅನಂತವ್ಯಾಪಾರ ಬಗೆಬಗೆಗಳನ್ನು, ಆದಿ

ಮಧ್ಯಾಂತವೆಂಬ ಪರ್ಯವಸಾನವನ್ನು ಕಾಣದೆ, 'ಈ ಸ್ವಾಮಿಗೆ ಅನಾದ್ಯನಂತ ಕಾಲದಲ್ಲೂ ಪತ್ನಿಯಾದ್ದೇನೆ. ದೇವರು ಪೂರ್ಣಕಾಮನಾದರೂ ದಯದಿಂದ ಲೋಕಪತಿಯು ಭಿಕ್ಷುಕನ ಮನೆ ಔತಣವನ್ನು ಅವನ ಉದ್ಧಾರಾರ್ಥವಾಗಿ ಅಂಗೀಕರಿಸಿದಂತೆ, ನನ್ನನ್ನು ಅಂಗೀಕರಿಸಿದನು' ಎಂದು ಮನಸ್ಸಿನಲ್ಲಿ ಆನಂದ ದಿಂದ ಯೋಚಿಸುತ್ತಾಳೆ. ರಮಾದೇವಿಯ ಭಕ್ತಿಯು ಅತಿಶಯವಾದ್ದರಿಂದ ಆಕೆಗೆ ಆನಂದೋದ್ರೇಕ ಕೊಡುವುದಕ್ಕೆ ಸ್ವಾಮಿ ಆಕೆಯನ್ನು ಪತ್ನಿಯನ್ನಾಗಿ ಅಂಗೀಕರಿಸಿದನೆಂತಲು, ದೇವರಿಂದ ಲಕ್ಷ್ಮಿಗೆ ಆನಂದವೇ ಹೊರತು, ದೇವ ರಿಗೆ ಲಕ್ಷ್ಮಿಯಿಂದ ಆನಂದಲಾಭವೇನೂ ಇಲ್ಲವೆಂದರ್ಥ. ॥೨೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಶ್ರೀಪರಮಾತ್ಮನ ಅಗಣಿತ ಗುಣರೂಪಕ್ರಿಯಾದಿ ಗಳು, ಹರಿಯುತ್ತಿರುವ ನದಿಯ ನೀರಿನಂತೆ ಪ್ರವಾಹತೋನಿತ್ಯವಾಗಿ ಅನಾದ್ಯನಂತಕಾಲದಿಂದ ಅನಾದಿನಿತ್ಯವಾಗಿವೆ ಎಂದುತ್ತಿಳಿಸಿ, ಪ್ರಸಕ್ತ ೨೪ ನೆಯ ಪದ್ಯದಿಂದ ವೇದಾಭಿಮಾನಿಗಳಾದ ಶ್ರೀರಮಾದೇವಿಯರು ಅನಂತ ಕಲ್ಯಾಣಗುಣಗಣಧಾಮನಾದ ಆ ಶ್ರೀಪರಮಾತ್ಮನ ಅನಂತಾನಂತ ಗುಣರೂಪ ಕ್ರಿಯಾದಿಗಳ ಆದ್ಯಂತವನ್ನು ಸಾಕಲ್ಯೇನ ಕಾಣದೆ. ಪ್ರತಿಕ್ಷಣವೂ ಅವರಿಗೆ ನಿತ್ಯನೂತನವಾಗಿ ಗೋಚರಿಸುತ್ತಿರುವ ಆ ಅಪಾರಮಹಿಮಾಸಂಪನ್ನನನ್ನು ಅನವರತ ಸೇವಿಸುತ್ತಾ ನಾನಾವತಾರಗಳಲ್ಲಿ ಆ ಗುಣನಿಧಿಯ ಪತ್ನಿಯು ತಾನು ಯಾವಾಗ ಅಗುವೆನು ಎಂದು ಯೋಚಸುತ್ತಾ ಧ್ಯಾನಪರಳಾಗಿದ್ದಾ ಳೆಂದು ಸುಂದರವಾದ ದೃಷ್ಟಾಂತ ಸಹಿತ ನಿರೂಪಿಸುತ್ತಾರೆ.

೧. ಭಗವಂತನ ಗುಣಗಣಾವಳಿಗಳನ್ನು, ಅಪಾರಮಹಿಮಾತಿಶಯ ಗಳನ್ನು ಅನವರತ ಸ್ತೋತ್ರರೂಪದಲ್ಲಿ ಪರಿಚಯ ಮಾಡಿಕೊಡುತ್ತಿರುವ ಶಬ್ದಸಮೂಹವೇ ವೇದರಾಶಿಗಳು. ಅಂತಹ ವೇದಗಳು ನಿತ್ಯ ಅಪೌರು ಷೇಯ ಹಾಗೂ ಅನಂತ, ಅಂತಹ ಅನಂತಸಂಖ್ಯಾಕವಾದ ವೇದಸಮೂಗಳಿಗೆ

ಅಭಿಮಾನಿಗಳು ಶ್ರೀಲಕ್ಷ್ಮಿದೇವಿ ವೇದತತಿಗಳಭಿಮಾನಿಯಾದ ಆ ಲಕ್ಷ್ಮೀ ಜಗನ್ಮಾತೆ.

೨. ಹಿರಣ್ಯಾಕ್ಷನೆಂಬ ದೈತ್ಯನು ಭೂಮಿನ್ನು ಪಾತಾಳಲೋಕಕ್ಕೆ ಒಯ್ದಾಗ ಭೂದೇವಿಯಿಂದ ಪ್ರಾರ್ಥ್ಯಮಾನನಾದ ಶ್ರೀಮನ್ನಾರಾಯಣನು ವರಾಹರೂಪತಾಳಿ ಪಾತಾಳಕ್ಕಿಳಿದು ಹಿರಣ್ಯಾಕ್ಷನನ್ನು ಸಂಹರಿಸಿ, ತನ್ನ ಕೋರೆದಾಡೆಗಳಿಂದ ಭೂದೇವಿಯನ್ನು ಎತ್ತಿ ತಂದು ಉದ್ಧರಿಸಿದ ಪರಮ ಕರುಣಾಳು. ಆವರಾಹರೂಪೀ ಶ್ರೀ ಪರಮಾತ್ಮನೇ ಧರಾಧರನು.

೩. ವೇದತತಿಗಳಿಗಭಿಮಾನಿಯಾದ ಮಹಲಕುಮಿ, ಆ ಧರಾಧರನಾದ ಶ್ರೀಹರಿಯ ಅನಂತಾನಂತ ಗುಣಸಮೂಹಗಳು, ರೂಪ ವಿಶೇಷಗಳು, ಕ್ರಿಯಾ ರೂಪವಾದ ಅನಾದ್ಯನಂತ ಭಗವದ್ವ್ಯಾಪಾರಗಳು ಇತ್ಯಾದಿ ಮಹಾರ್ಣವರಲ್ಲಿ ಮುಳುಗಿ ಧ್ಯಾನಸಕ್ತಳಾಗಿದ್ದಾಳೆ. ಆ ಅಪಾರಮಹಿಮನ ಗುಣ, ರೂಪ, ಕ್ರಿಯಾದಿಗಳನ್ನು ಅನವರತ ಚಿಂತಿಸತ್ತಾ, ಮನಸಾ ಚಿಂತಿಸುತ್ತಿದ್ದಾಗ್ಯೂ, ಅವುಗಳ ಆದಿ ಮಧ್ಯ ಅಂತ್ಯಗಳನ್ನು ಕಾಣದೆ, ಆಶ್ಚರ್ಯದಿಂದ, ಪ್ರತಿ ಕ್ಷಣಕ್ಕೂ ನಿತ್ಯನೂತನ ನೂತನವಾಗಿ ಗೋಚರಿಸುತ್ತಿರುವ ಆ ಮಹಾ ಮಹಿಮನ ಅಪಾರ ಗುಣಸ್ತೋಮಗಳಿಗೆ ಮಾರುಹೋಗಿದ್ದಾಳೆ.

೪. ಶ್ರೀ ಲಕ್ಷ್ಮೀದೇವಿಯು ಶ್ರೀಹರಿಯ ನಿತ್ಯಾವಿನಿಯೋಗಿನಿ, ಆತನ ವೃಕ್ಷಸ್ಥಳನಿವಾಸಿನಿ, ದೇಶತಃ ಕಾಲತಃ ಸಮಳು. ಗುಣತಃ ಅತ್ಯಂತ ಅಸ ಮಳು' ಇಂತು ಶ್ರೀ ಹರಿಯನಿತ್ಯಾವಿಯೋಗಿನಿಯೂ, ಈಶಕೋಟಿ ಪ್ರವಿಷ್ಟಳೂ ಆದ ಶ್ರೀ ಲಕ್ಷ್ಮೀದೇವಿಯರು ಮನಸಾ ಯೋಚಿಸುತ್ತಿರುವರು ಎಂದು ದಾಸರಾಯರು ತಿಳಿಸುತ್ತಾರೆ. "ಶ್ರೀ ಹರಿಯು ಅಪಾರ ಮಹಿಮಾ ಸಂಪನ್ನನು, ಧರ್ಮರಕ್ಷಣೆಗಾಗಿ, ದುಷ್ಟರ ದಮನಕ್ಕಾಗಿ ಯುಗಯುಗದಲ್ಲಿ ಅವತರಿಸುವ ಧರ್ಮಸ್ವರೂಪಿಯು. ಅವನ ಅವತಾರಗಳು ಅನಂತಾನಂತ, ಹಾಗೆ ಅವನು ಅವತರಿಸುವಾಗ ತನ್ನನ್ನು ಪತ್ನಿಯಾಗಿ ಅವತಾರತ್ವೇನ ಯಾವಾಗ ಸ್ವೀಕರಿಸುತ್ತಾನೆ ? ಎಂಬ ಭಕ್ತ್ಯುದ್ರೇಕ ಪ್ರತೀಕ್ಷಣೆಯಿಂದ ನಿತ್ಯ ಕಾತುರಳಾಗಿದ್ದಾಳೆ.

೫. ಇಂತಹ ಪರಮ ಭಕ್ತಳಾದ ಶ್ರೀಹರಿಯನ್ನು ಆಭರಣವಾಗಿ ಆಯುಧವಿಶೇಷಗಳಾಗಿ ಛತ್ರ, ಚಾಮರ ವ್ಯಜನ ಪರ್ಯಂಕರೂಪಳಾಗಿ ನಿತ್ಯ ಅಸತ್ಯಸಂಕಲ್ಪನನ್ನು ಅವಿಚಿನ್ನವಾಗಿ ಸೇವಿಸುತ್ತಿರುವ ಆ ಲಕ್ಷ್ಮಿಯನ್ನು ಅವ ತಾರವಿಶೇಷಗಳಲ್ಲಿ ಪತ್ನಿಯನ್ನಾಗಿ ಸ್ವೀಕರಿಸಿದನು ಆ ಕರುಣಾಸಮುದ್ರ ಹರಿ.

ಇದನ್ನು ಒಂದು ಸುಂದರ ದೃಷ್ಟಾಂತದಿಂದ ನಿರೂಪಿಸುತ್ತಾರೆ. ಚಕ್ರ ವರ್ತಿ ಲೋಕಾಧಿಪತಿ. ಆತುಳ ಅಶ್ವೈರ್ಯಕ್ಕೆ ಒಡೆಯ, ಅತಿದರಿದ್ರನಾದ ಭಿಕ್ಷುಕನೋರ್ವನು ಆತನ ಪ್ರಜೆ. ಅವನ ಕೋರಿಕೆಯನ್ನು ಮನ್ನಿಸಿ ಕರುಣಾ ರ್ದಹೃದಯನಾದ ಆ ಲೋಕಾಧಿಪನು ಆ ಭಿಕ್ಷುಕನ ಮನೆಗೆ ಬಂದು ಔತಣ ವನ್ನು ಸ್ವೀಕರಿಸಿದರೆ ಆ ಭಿಕ್ಷುಕನಿಗೆ ಆಗುವ ಸಂತೋಷ ವರ್ಣನಾತೀತ. ಅಂತೆಯೇ ಜಗತ್ಪತಿಯಾದ ಶ್ರೀಹರಿಯು ಸೇವಕಳಾದ ಲಕ್ಷ್ಮಿಯನ್ನು ಪತ್ನಿ ತ್ವೇನ ಸ್ವೀಕರಿಸಿದ್ದು ಅವಳ ಪರಮ ಭಾಗ್ಯ ವಿಶೇಷ ॥೨೪॥

## ಪದ್ಯ (೨೫)

**ಮೂಲ**

**ಕೋವಿದರು ಚಿತ್ತೈಸುವುದು ಶ್ರೀ ।**
**ದೇವಿಯೊಳಗಿಹ ನಿಖಿಲಗುಣ ತೃಣ**
**ಜೀವರಲಿ ಕಲ್ಪಿಸಿ ಯುಕುತಿಯುಲಿ ಮತ್ತು ಕ್ರಮದಿಂದ ॥**
**ದೇವದೇವಕಿಯಿಪ್ಪಳೆಂದರಿ ।**
**ದಾ ವಿರಿಂಚನ ಜನನಿಯೀತನ ।**
**ಆವ ಕಾಲದಲರಿಯಳಂತೆನೆ ನರರ ಪಾಡೇನು ॥ ॥೨೫॥**

**ಅವತರಣಿಕೆ:—**

ಪೂರ್ವಪದ್ಯದಲ್ಲಿ ಅಪಾರಗುಣಗಣ ಸಂಪನ್ನನಾದ ಶ್ರೀಹರಿಯ ಗುಣ

ರೂಪ ಕ್ರಿಯಾದಿ ವಿಶೇಷಗಳನ್ನು ಆದ್ಯಂತ ಸಾಕಲ್ಯೇನ ಅರಿಯದೆ, ಆತನ ಗುಣಗಣಾರ್ಣವದಲ್ಲಿ ಸದಾ ಧ್ಯಾನಾಸಕ್ತಳಾಗಿದ್ದಾಳೆಂದು ತಿಳಿಸಿ. ಈಶ ಕೋಟಿಪ್ರವಿಷ್ಟಳಾದ ಶ್ರೀಲಕ್ಷ್ಮೀದೇವಿಯರಿಗೂ ಮತ್ತು ಶ್ರೀ ಪರಮಾತ್ಮನಿಗೂ ಇರುವ ತಾರತಮ್ಯವನ್ನು **ಕೋವಿದರು** ಎಂಬ ಪ್ರಸಕ್ತ ಸಂಧಿಗತ ಚಿಹ್ನೆಯ ಈ ಪದ್ಯದಿಂದ ತಿಳಿಸುತ್ತಾರೆ.

**ಪ್ರತಿಪದಾರ್ಥ:**

**ಶ್ರೀದೇವಿಯೊಳಗೆ** = ಶ್ರೀಲಕ್ಷ್ಮೀದೇವಿಯರಲ್ಲಿ **ಇಹ** = ವಿದ್ಯಮಾನವಾಗಿರುವ **ನಿಖಿಲಗುಣ** = ಸಮಸ್ತ ಶುಭಗುಣಸಮೂಹಗಳು **ತೃಣಜೀವರಲಿ** = ಜೀವರಾಶಿಯಲ್ಲಿ ಅತ್ಯಂತ ಕಡಿಮೆಯಾದ ತೃಣಜೀವರಲ್ಲಿ **ಕಲ್ಪಿಸಿ** = ಇರುವುವೆಂದು ಕಲ್ಪಿಸಿ (ದೃಷ್ಟಾಂತದಿಂದ) **ಯುಕುತಿಯಲಿ** ಯುಕ್ತಿಯಿಂದ ಹೇಳತಕ್ಕ ದೃಷ್ಟಾಂತವನ್ನು **ಕ್ರಮದಿಂದ** = ತೃಣ ಜೀವರಿಗೂ ಮತ್ತು ಬ್ರಹ್ಮದೇವರಿಗೂ ಇರುವ ತಾರತಮ್ಯ ಕ್ರಮದಿಂದ ಗುಣಗಳನ್ನು ಹೆಚ್ಚಿಸಿದರೆ ಎಷ್ಟು ಆಗುವುದೋ ಅಷ್ಟು ಗುಣಗಳಿಂದ **ದೇವದೇವಕಿಯು** = ದೇವಿಯರಿಗೆ ದೇವಿಯರಾದ (ದೇವತಾ ಸ್ತ್ರೀ ವರ್ಗದಲ್ಲಿ ಅತ್ಯಂತ ಶ್ರೇಷ್ಠಳಾದ ಶ್ರೀ ರಮಾದೇವಿಯು) **ಇಪ್ಪಳೆಂದು** = ಇದ್ದಾಳೆಂದು **ಅರಿದು** = ಈ ಪ್ರಕಾರ ತಿಳಿದು **ಕೋವಿದರು** = ಜ್ಞಾನಿಗಳು **ಚಿತ್ತೈಸುವುದು** = ಮನಸ್ಸಿಗೆ ತಂದುಕೊಂಡು ಚಿತ್ತದಲ್ಲಿಡಬೇಕು, **ಆ ವಿರಂಚಿಯ ಜನನಿ** = ಬ್ರಹ್ಮದೇವರ ತಾಯಿಯಾದ ಶ್ರೀ ಲಕ್ಷ್ಮೀದೇವಿಯು **ಈತನ** = ಶ್ರೀ ಪರಮಾತ್ಮನ ಗುಣರೂಪ ಕ್ರಿಯಾದಿಗಳನ್ನು **ಯಾವ ಕಾಲದಲಿ** = ಅನಾದ್ಯನಂತಕಾಲಕ್ಕೂ **ಅರಿಯಳೆಂತನೆ** = ಸಾಕಲ್ಯೇನ ತಿಳಿಯಲಾರಳು ಎಂದ ಮೇಲೆ **ನರರ ಪಾಡೇನು** = ಅತ್ಯಲ್ಪರಾದ ಮನುಷ್ಯರ ಪಾಡೇನು? ಅವರು ಎಂದೆಂದಿಗೂ ಅರಿಯಲಾರರೆಂದರ್ಥ

ದೇವರಗುಣಗಳಿಗೂ ರಮಾದೇವೇರ ಗುಣಗಳಿಗೂ ತಾರತಮ್ಯ ಹೇಳತಾರೆ. ॥೨೫॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಯುಕುತಿಯಲಿ- ಯುಕ್ತಿಯಿಂದ ಹೇಳತಕ್ಕ ದೃಷ್ಟಾಂತವನ್ನು, ಕೋವಿದರು- ಜ್ಞಾನಿಗಳಾದವರು. ಚಿತ್ತೈಸುವುದು- ಮನಸ್ಸಿಗೆ ತಂದುಕೊಳ್ಳತಕ್ಕದ್ದು, ಶ್ರೀದೇವಿಯೊಳಗಿಹ- ಲಕ್ಷ್ಮೀದೇವಿಯಲ್ಲಿರತಕ್ಕ, ನಿಖಿಲಗುಣ- ಅವಶಿಷ್ಟರಹಿತವಾದ ಯಾವತ್ತು ಗುಣಗಳು ಶ್ರೀಪರಮಾತ್ಮನ ಗುಣಗಳು ಎರಡಕ್ಕೂ ತಾರತಮ್ಯ ಎಂಬುದು, ಕಲ್ಪಿಸಿ- ದೃಷ್ಟಾಂತವನ್ನು ಕಲ್ಪಿಸಿ ನೋಡಿದರೆ, ತೃಣಜೀವರಲಿ-ಅಂತ್ಯಜೀವರಾದ ತೃಣಜೀವರಲ್ಲಿ ಇರತಕ್ಕ ಗುಣಗಳಿಗೂ ಲಕ್ಷ್ಮೀದೇವೇರಲ್ಲಿ ಇರತಕ್ಕ ಗುಣಗಳಿಗೂ, ಎಷ್ಟು ತಾರತಮ್ಯವೋ ಅಷ್ಟು ತಾರತಮ್ಯ ಲಕ್ಷ್ಮೀ-ನಾರಾಯಣರಿಗೆ ಇರೋದಾಗಿ ಅದೆ. ಇದೂನೂ ಔಪಚಾರಿಕ ದೃಷ್ಟಾಂತ. ತದ್ವ್ಯತಿರಿಕ್ತ ದೃಷ್ಟಾಂತವಿಲ್ಲ. ರಮಾದೇವೇರಿಗೆ ತೃಣಜೀವ ಯದ್ವತೋ ತದ್ವತ್ ಶ್ರೀ ಪರಮಾತ್ಮಗೆ ರಮಾದೇವೇರು ಎಂತ ತಾತ್ಪರ್ಯ. ಪುನಶ್ಚ ಈ ಲಕ್ಷ್ಮೀದೇವೇರ ಉತ್ತಮತ್ವ ಎಂಥಾದ್ದೆಂದರೆ, ಕ್ರಮದಿಂದ-ತೃಣಜೀವ ಆರಂಭ ಮಾಡಿ ಸ್ವೋತ್ತಮಸ್ವೋತ್ತಮ ಕ್ರಮದಿಂದ ಬ್ರಹ್ಮದೇವರವರಿಗೂ, ಈ ಬ್ರಹ್ಮದೇವರಿಗಿಂತಲೂ ದೇವಕೀ-ಈ ಲಕ್ಷ್ಮೀದೇವೇರು ಉತ್ತಮರು. ಈಕಿಗಿಂತಲೂ, ದೇವ-ಕ್ರೀಡಾದಿ ಗುಣವಿಶಿಷ್ಟನಾದ ಶ್ರೀ ನಾರಾಯಣದೇವರು ಉತ್ತಮರು. ಇಪ್ಪಳೆಂದರಿತು-ಈ ಪ್ರಕಾರ ನೀಚೋಚ್ಚಗಳಿಂದ ಇರೋವಳಾಗಿ ಇದ್ದಾಳೆ ಎಂತ ತಿಳಿದು, ಗುಣತಾರತಮ್ಯ ತಿಳೀಬೇಕು. ಆ ವಿರಿಂಚನ ಜನನಿ—ಅಂಡದ ಹೊರಗೆ ಸೃಷ್ಟ್ಯ ವಿರಂಚನಾಮಕ ಬ್ರಹ್ಮದೇವರಿಗೆ ತಾಯಿಯಾದ ರಮಾದೇವೇರು, ಈತನ-ತನ್ನ ಪತಿಯಾದ ಪರಮಾತ್ಮನ ಗುಣರೂಪಕ್ರಿಯೆಗಳು, ಆವಕಾಲದಲರಿಯಳಂತೆನೆ-ಅನಾದ್ಯನಂತಕಾಲಕ್ಕೂ ಸಾಕಲ್ಯೇನ ಅರಿಯಳು. ಅಂತ ಅಪೌರುಷೇಯ ವೇದಗಳು ಹೇಳೊದಾಗಿ ಅವೆ. ನರರ ಪಾಡೇನು ಹೀಂಗಿರಲಾಗಿ ಮನುಷ್ಯರು ಅರಿಯರು ಎಂದು ಹೇಳತಕ್ಕದ್ದೇನಿದೆ !

**ತಾತ್ಪರ್ಯ—**

ಶ್ರೀ ಪರಮಾತ್ಮನ ಗುಣಗಳು ತಿಳಿಯೋದಿಲ್ಲ ಅಂತ ಶುದ್ಧವಾಗಿ ಬಿಡ

ಬಾರದು. ಶಾಸ್ತ್ರದಲ್ಲಿ ಮನುಷ್ಯರು ಎಷ್ಟು ಗುಣ ಉಪಾಸನ ಮಾಡಬೇಕಂತ ಹೇಳಿದಾರೋ, ಅದರಂತ ಉಪಾಸನ ಮಾಡತಾ ಬಂದರೆ, ಯೋಗ್ಯತಾನುಸಾರ ಶ್ರೀ ಪರಮಾತ್ಮನ ಅಪರೋಕ್ಷವಾಗಿ ಸುಖ ಹೊಂದತಾನೆ. ಆದ್ದರಿಂದ ಯೋಗ್ಯತಾನುಸಾರ ಉಪಾಸನಾ ಅವಶ್ಯ ಮಾಡಬೇಕು ಎಂತ ತಾತ್ಪರ್ಯ ॥೨೫॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ-

ಮೇಲಿನ ಪದ್ಯಾರ್ಥವನ್ನೇ ವಿಶದ ಮಾಡುತ್ತಾರೆ, ಪಂಡಿತರು ಈ ವಿಷೆಯದಲ್ಲಿ ಸ್ವಲ್ಪ ಚಿತ್ತವನ್ನು ಕೊಡಬೇಕು, ಲಕ್ಷ್ಮೀದೇವಿಯರಲ್ಲಿರುವ ಸಂಪೂರ್ಣ ಗುಣಗಳು ಒಬ್ಬ ಅಧಮನಾದ ತೃಣ ಜೀವನಲ್ಲಿಯೂ ಇದೆಯೆಂದು ಭಾವಿಸೋಣ, ಅದರ ಮೇಲೆ ಅವನಿಗಿಂತಲೂ ಉತ್ತಮರಾದ ಚೇತನ ಪ್ರಾಣಿಗಳಲ್ಲಿ ಗುಣಗಳನ್ನು ಹೆಚ್ಚಿಸುತ್ತಾ ಬನ್ನಿರಿ ! ಹೀಗೆ ಮನುಷ್ಯರು ದೇವತೆಗಳು ಎಂಬ ತಾರತಮ್ಯದಿಂದ ಗುಣಗಳನ್ನು ಹೆಚ್ಚಿಸುತ್ತಾ ಬ್ರಹ್ಮದೇವರ ವರೆಗೂ ಗುಣಗಳನ್ನು ಹೆಚ್ಚಿಸಿದರೆ, ಎಷ್ಟು ಗುಣಗಳು ಹೆಚ್ಚಾಗುವವು. ಈ ಪ್ರಕಾರವಾದ ಗುಣಗಳು ರಮಾದೇವಿಯರಲ್ಲಿ ಎಷ್ಟಿವೆ ಎಂಬುದನ್ನು ಚಿಂತಿಸಿ ! ಇಂತಹ ಗುಣಗಳುಳ್ಳ ರಮಾದೇವಿಯರು ತಮ್ಮ ಇಷ್ಟು ಗುಣಗಳಿಂದ ಪರಮಾತ್ಮನ ಗುಣಗಳನ್ನು ಸರ್ವ ಕಾಲದಲ್ಲಿ ಹುಡುಕುತ್ತಿದ್ದರೂ ಪಾರಗಾಣರು. ಅಂದಮೇರ ಇನ್ನು ಅತ್ಯಲರಾದ ಮನುಷ್ಯರ ಪಾಡೇನು ? ಭಗವದನುಗ್ರಹ ದಿಂದಲೇ ಭಗವನ್ಮಹಿಮೆಯನ್ನು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಯತ್ಕಿಂಚಿತ್ ಬಲ್ಲರೆಂದು ತಾತ್ಪರ್ಯ. ॥೨೫॥

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ

ಈ ರಮಾದೇವಿಯೊಳಗೆ ಇದ್ದ ಸಮಸ್ತ ಗುಣಗಳು ತೃಣಜೀವರಲ್ಲಿ ಇದ್ದ ಹಾಗೆ ತಿಳಿದು, ಅಲ್ಲಿಂದ ತರತಮರೀತ್ಯಾ ಶ್ರೀದೇವಿಯವರೆಗೂ ಎಷ್ಟು ಗುಣಗಳು ಆಗುತ್ತವೋ ಅಷ್ಟು ಗುಣಕ್ಕೆ ಹೆಚ್ಚು ಗುಣಿಸಿ, ಅಂಥ ಗುಣಗಳ ಪರಿಮಿತಿಯುಳ್ಳಂಥ ಗುಣಗಳಿಂದ ಶ್ರೀ ದೇವಿಯು ಭಗವದುಪಾಸನೆ ಮಾಡಿ

ದಾಗ್ಯೂ ಶ್ರೀಹರಿಯ ಗುಣಗಳನ್ನು ಪಾರಗಾಣದೇ ಆಲೋಚನೆಯಲ್ಲಿ ಮಗ್ನಳಾಗಿರತಿರಲಿಕ್ಕೆ ಇತರ ಜೀವರಿಗೆ ಗಣನೆಗೆ ಬಾರದೆಂದು ತಾತ್ಪರ್ಯ ತೋರಿಸುತ್ತಾರೆ– ಕೋವಿದೇತಿ ॥೨೫॥

## (೪) ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

ಕೋವಿದೇತಿ॥ ಏಕಸ್ಮಿಂಶ್ಚ ಕ್ಷಣಸ್ಯಾಂಶೇ ಪ್ಯನಂತಾನಂತ ಚಿಂತನೇ ॥ ಸಮರ್ಥಾಸ್ಚ ಸಮಾಃ ಸರ್ವೇ ಪ್ಯದ್ಭುತ ಪ್ರಭಯಾಯುತಾಃ ॥ ಏತೇಷಾಂ ಸದೃಶಂ ಜ್ಞಾನಂ ತೃಣಸ್ಯೈವ ಭವೇತ್ ಯದಿ॥ ತತ್ಸ್ವೀಕೃತ್ಯ ರಮಾಂ ತಾಶ್ಚ ಭವೇಯುಃ ತಾದೃಶಾಃ ಪುನಃ ॥ "ಚಿತ್ತೈಸುವುದು"॥ ತಿಳಿಯುವುದು ಮನಸ್ಸಿಡೋದು। ರಮಾ ಗುಣಾನ್ ತಾನ್ಗಾನ್ ವಿಂಚಿತ್ಯ ಪುನಃ ಯುಕ್ತ್ಯಾ ಗಣನೇ ಅಪರಿಮಿತಾಃ ಯಥಾ ಮದ್ಗುಣಾಃ ॥ ಹರಿಗುಣ ದರ್ಶನೇ ತೃಣವ ದೇವ ಮಾಲೋಚ್ಯೋತ್ತರಿತ ದರ್ಶನೇನಾಶ್ಚರ್ಯಮಾಪ ದೇವ। ದೇವಕೀ ರಮಾ॥ ದೇವಾನಾಂತಂ ಯಸ್ಮಾತ್ ಸ ದೇವಕಃ ನಾರಾಯಣಃ ॥ ತತ್ಸ್ತ್ರೀ ದೇವಕೀ॥ "ವಿಷ್ಣೋರೇಕ ಗುಣಾಂಶಸ್ಯ, ನೈಕಾಂಶ ಲೇಶಲೇಶಂ ವಾ ಚಿಂತಯೇಯಂ ಪ್ರಯತ್ನತಃ॥" ಇತಿ ಪುನರೇವಂ ಅಪರ್ಯವಸಿತಾ ಉತ್ಪ್ರೇಕ್ಷಾಕಾರ್ಯ ಇತ್ಯವತಾರಿತಂ ಪ್ರಾಕ್ ॥ "ಪದ್ಯಂ ಸತ್ತತ್ತ್ವರತ್ನಮಾಲಾಯಾಂ ಶ್ರೀನಾರಾಯಣ ಪ್ರಕರಣೇ"॥ ॥೨೫॥

### ಕನ್ನಡಾರ್ಥ

"ಕೋವಿದರು"–ಎಂಬ ಪದ್ಯದಿಂದ ಶ್ರೀಪರಮಾತ್ಮನ ಗುಣರಾಶಿಗಳಲ್ಲಿರುವ ಲೇಶದಲ್ಲಿ ಲೇಶಾಂಶವನ್ನೂ ಸಹ ಚಿಂತಿಸುವುದಾಗುವುದಿಲ್ಲ ಎಂದು ತಿಳಿಸುತ್ತಾರೆ. ಅಂದರೆ ಶ್ರೀಹರಿಯ ಅನಂತಾನಂತ ಗುಣಗಣಗತ ಲವಾಂಶದಲ್ಲಿ ಲವಲೇಶಾಂಶವನ್ನು ಅರಿಯಲಸಾಧ್ಯ–ಎಂಬ ವಿಷಯುವನ್ನು ಧೃಢೀಕರಿಸಲು ಉತ್ಪ್ರೇಕ್ಷಾರೂಪವಾದ ದೃಷ್ಟಾಂತದಿಂದ ತಿಳಿಸುತ್ತಾರೆ.

ಅನಂತಾನಂತ ವಸ್ತುಗಳಿಂದ ಕೂಡಿದ ಈ ಬ್ರಹ್ಮಾಂಡ ಅತಿ ಬೃಹತ್ತಾದುದು. ಚತುರ್ಮುಖ ಬ್ರಹ್ಮದೇವರ ಸ್ವರೂಪಕ್ಕಿಂತಲೂ ರಮಾಸ್ವರೂಪವು

ಅನಂತಾಧಿಕವಾಗಿದೆ, ಮುಗಿಯದಂತಿರುವ ಅಪೂರ್ವವಾದ, ಲೋಕ ವಿಚಿತ್ರವಾದ ಉತ್ಪ್ರೇಕ್ಷೆಯಿಂದ ಭಗವಂತನ ಸ್ವರೂಪದಲ್ಲಿರುವ ಅನಂತ್ಯವನ್ನು ತಿಳಿದುಕೊಳ್ಳಬೇಕು.

ಶ್ರೀರಮಾದೇವಿಯಲ್ಲಿರುವ ಸಮಸ್ತ ಜ್ಞಾನವನ್ನು ತೃಣಸಮಾನವೆಂದು ಕಲ್ಪಿಸಿ, ಆ ತೃಣಜೀವರನ್ನು ಆರಂಭಮಾಡಿಕೊಂಡು ಶ್ರೀರಮಾದೇವಿಯಲ್ಲಿರುವ ಜ್ಞಾನದ ಅನಂತ್ಯವನ್ನು ಕಲ್ಪಿಸಿಕೊಳ್ಳಬೇಕು. ಇಂಥಾ ಉತ್ಪ್ರೇಕ್ಷೆಯಿಂದ ಕಲ್ಪಿತವಾದ ತೃಣಾದಿ ರಮಾದೇವಿಯರಿಗೆ ಸಮಸ್ತ ಚೇತನರಾಶಿಗಳ ಮಿಳಿತ ಜ್ಞಾನವನ್ನು ತೃಣಪ್ರಾಯವಾಗಿ ಕಲ್ಪಿಸಿ, ಅದಕ್ಕೂ ಅನಂತಪಟ್ಟು ಆಧಿಕ್ಯದ ತಾರತಮ್ಯವನ್ನನುಸರಿಸಿ ರಮಾ ಮುಂತಾದವರ ಜ್ಞಾನವನ್ನು ಕಲ್ಪಿಸಬೇಕು. ಹೀಗೆ ಎಷ್ಟು ಕಲ್ಪಿಸಿದರೂ ಮುಗಿಯದ ಉತ್ಪ್ರೇಕ್ಷೆಯಿಂದ ರಮಾದೇವಿಯರ ಜ್ಞಾನಮುಂತಾದುವು ಪರಮಾತ್ಮನ ಆನಂತ ಉತ್ಪ್ರೇಕ್ಷೆಯಿಂದ ರಮಾದೇವಿಯರ ಜ್ಞಾನಮುಂತಾದುವು ಪರಮಾತ್ಮನ ಅನಂತ ವಿಭಾಗಗಳಲ್ಲಿ ಒಂದಂಶದ ಲೇಶವನ್ನೂ ಪ್ರಯತ್ನಿಸಿದರೂ ಸಂಪೂರ್ಣವಾಗಿ ವಿಷಯೀಕರಿಸಲಾರವು, ಈ ಉತ್ಪ್ರೇಕ್ಷೆಯನ್ನು ಜ್ಞಾನಿಗಳೇ (ಕೋವಿದರೇ) ತಿಳಿಯಲು ಅರ್ಹರು. ಇದರಿಂದ **ಕೋವಿದರು ಚಿತ್ತೈಸುವುದು.** ಎಂದು ಹೇಳಿರುವರು.

ರಮಾದೇವಿಯರು ತೃಣಾದಿ ಜೀವರಾಶಿಗಳನ್ನಾರಂಭಿಸಿ ತನ್ನವರೆಗಿರುವ ಜೀವರಾಶಿಗಳ ಸಕಲಜ್ಞಾನವನ್ನು ಸಮ್ಮೇಳನಮಾಡಿ, ಅವೆಲ್ಲವೂ ತೃಣಪ್ರಾಯವೆಂದು ತಿಳಿದು, ಅದರ ಅನಂತಮಡಿ ಅಧಿಕವಾಗಿರುವ ತನ್ನ ಜ್ಞಾನವೂ ಕೂಡ ಹರಿಯ ಗುಣವನ್ನು ತೋರಿಸುವುದರಲ್ಲಿ ತೃಣ ಪ್ರಾಯವೆಂದು ಆಲೋಚಿಸಿ, ಆಶ್ಚರ್ಯಚಕಿತಳಾಗಿದ್ದಾಳೆ.

ದೇವ ದೇವಕೀ–ರಮಾದೇವಿಯು ಇತರ ದೇವತೆಗಳಿಗೆ ಆನಂದಪ್ರದಳು. ಇದರಿಂದ ನಾರಾಯಣನಿಗೆ **ದೇವಕ** ಎಂದು ನಾಮ. ದೇವಕನಾದ ನಾರಾಯಣಪತ್ನಿಯು **ದೇವಕೀ** ಎನಿಸುವಳು.

"ವಿಷ್ಣೋರ್ದೇಶ ಗುಣಾಂಶಸ್ಯ" ಎಂಬ ಪದ್ಯವನ್ನು ಅವತರಿಸಿ ವಿವರಿಸುವಾಗ **ಸತ್ತತ್ವರತ್ನಮಾಲಾದಲ್ಲಿ ನಾರಾಯಣಪ್ರಕರಣದಲ್ಲಿ** ನಿರೂಪಿಸಿರುತ್ತಾರೆ. ॥೨೫॥

(೫) **ಶ್ರೀ ಗುರುಹೃದಯಪ್ರಕಾಶಿಕೆ**

ಆ ವಿರಂಚಿಯ ತಾಯಿಯಾದ ಲಕ್ಷ್ಮಿಯು ತನ್ನ ಬಿಂಬರೂಪ ಶ್ರೀದೇವಿ ಎಂಬ ನಾರಾಯಣಿನಾಮಕ ಸ್ತ್ರೀರೂಪದೊಳಗಿರುವ ಅನಂತಗುಣಗಳನ್ನು ತೃಣ ಜೀವನಲ್ಲಿ ಅಂದರೆ, ತೃಣಜೀವಸ್ಥ ಬಿಂಬರೂಪದಲ್ಲಿ ಕಲ್ಪಿಸಿ, ಅಂದರೆ ದೇವರ ರೂಪಗಳಿಗೆ ಅಭೇದವಾದ್ದರಿಂದ, ಅನಂತಗುಣಗಳು ಇದೆ ಎಂದು ಭಾವಿಸಿ ಯುಕುತಿಯಲಿ ಮತ್ತು ಕ್ರಮದಿಂದ ಅಂದರೆ, ತಾರತಮ್ಯ ಶತೋತ್ತರಗುಣಕ್ರಮದಿಂದ, ಜ್ಞಾನಾನಂದಾದಿ ಶತೋತ್ತರ ಗುಣದಾನರೂಪ ಮಹಿಮಾವಿಶಿಷ್ಟ ಸನ್ನಿಧಿವಿಶೇಷವೆಂಬ ವಿಭೂತಿರೂಪವನ್ನು ಯುಕ್ತಿಯಿಂದ ಎಣಿಸಿ ದೇವದೇವತೆ ಇಪ್ಪಳು ಎಂದರೆ, ತಾರತಮ್ಯಕ್ರಮದಿಂದ, ದೇವತೆಗಳಿಗೆ ಅಧಿಕಾಧಿಕ ಸುಖಪ್ರದದೇವರೂಪ ಇದೆ ಎಂದು ತಿಳಿದು, ಗುಣಾದಿಗಳ ಅಂತವನ್ನು ಅನಂತಕಾಲಕ್ಕೂ ಕೊನೆಗಾಣದೆ ಭಜಿಸುತ್ತಿರುವಲ್ಲಿ, ಇತರ ನರರ ಸಂದರ್ಭ ಏನು ಹೇಳತಕ್ಕದ್ದು? ಸಾಧಾರಣಜನಗಳು ತಿಳಿಯುವುದ ಸಾಧ್ಯವೆಂದರ್ಥ. ಈ ಲಕ್ಷ್ಮೀಉಪಾಸನೆ ಕೋವಿದರೆಂಬ ಶಾಸ್ತ್ರಜ್ಞರು ಚಿತ್ತಕ್ಕೆ ತರಬೇಕೆಂದರೆ, ತಿಳಿಯಬೇಕೆಂದರ್ಥ.

ಶ್ಲೋಕ॥

**ಉಷಾದಿಮಾರುತಾಂತೇಷು ಸಮಸ್ಸಮಗುಣೋಪಿಸನ್ ।**
**ಧ್ಯಾತಃ ಪ್ರೀತಿಂ ಹರಿರ್ಯಾಯಾದಧಿಕಾಮುತ್ತರೋತ್ತರಂ ॥**
**ಉತ್ತಮೇಷೂತ್ತಮ ಪ್ರೀತಿಸ್ತಸ್ಯತತ್ರ ಸ್ಮೃತಸ್ತತಃ ।**
**ಧ್ಯಾತುರತ್ಯುತ್ತಮಾಂ ಪ್ರೀತಿಂ ಯಾಯಾನ್ನಾಸ್ತ್ಯತ್ರ ಸಂಶಯಃ॥**

ಎಂಬ **ಛಾಂದೋಗ್ಯ** ಭಾಷ್ಯಾರ್ಥ ಸೂಚಿಸಿತು. ॥೨೫॥

# ಸರ್ವವ್ಯಾಖ್ಯಾನಸಾರಸಂಗ್ರಹ

ಅನಾದ್ಯನಂತಕಾಲದಿಂದ ಅಪಾರ ಗುಣಗಣ ಸಂಪನ್ನನಾದ ಶ್ರೀಹರಿಯ ಅನಂತಾನಂತ ಗುಣರೂಪ ಕ್ರಿಯಾದಿಗಳ ಅಗಾಧಸಾಗರದಲ್ಲಿ ಮುಳುಗಿ, ಆತನ ಅಪಾರ ಗುಣಸ್ತೋಮಗಳ ಆದ್ಯಂತಗಳನ್ನು ಸಾಕಲ್ಯೇನ ಅರಿಯಲು ಸಾಧ್ಯವಾಗದೇ. ಮೂಕ ವಿಸ್ಮಯಳಾಗಿರುವ ಶ್ರೀ ರಮಾದೇವಿಗೂ ಮತ್ತು ಶ್ರೀ ಹರಿಗೂ ಇರುವ ಅನಂತ ಕೋಟಿ ಗುಣ ವಿಶಿಷ್ಠವಾದ ತಾರತಮ್ಯವನ್ನೂ, ತದ್ವಾರಾ ಶ್ರೀ ಪರಮಾತ್ಮನ ಉತ್ತಮೋತ್ತಮತೆಯನ್ನೂ ತಿಳಿಸುತ್ತಾರೆ, **ಕೋವಿದರು**-ಎಂಬ ಪ್ರಸಕ್ತ ೨೫ನೆಯ ಪದ್ಯದಿಂದ,

೧, ಲೋಕಮಾತೆಯಾದ ಶ್ರೀ ಲಕ್ಷ್ಮೀದೇವಿಯರಲ್ಲಿರುವ ಸಮಸ್ತ ಶುಭ ಗುಣಗಳನ್ನು ಒಂದು ಉತ್ಪ್ರೇಕ್ಷಾರೂಪವಾದ ದೃಷ್ಟಾಂತದಿಂದ ವಿವರಿಸುತ್ತಾರೆ, ಅನಂತ ಸಂಖ್ಯಾಕವಾದ ಜೀವರಾಶಿಗಳಲ್ಲಿ, ಅತ್ಯಂತ ಕನಿಷ್ಠನಾದ ತೃಣಜೀವಿಯನ್ನು ಪರಿಶೀಲಿಸೋಣ. ಅಂತಹ ತೃಣಜೀವಿಯಲ್ಲಿ ಈಶಕೋಟಿ ಪ್ರವಿಷ್ಠಳೂ ಶ್ರೀ ಹರಿಗೆ ಸಮಾಸಮಳೂ ಎಂದೆನಿಸಿದ ಶ್ರೀ ಲಕ್ಷ್ಮೀದೇವಿಯಲ್ಲಿರತಕ್ಕ ಸಮಸ್ತ ಗುಣರಾಶಿಗಳು ಇವೆ ಎಂದು ಕಲ್ಪಿಸಿಕೊಳ್ಳೋಣ, ಇದು ಕೇವಲ ಊಹೆ ಮಾತ್ರ.

ಯುಕ್ತಿಯುಕ್ತವಾಗಿ ಮತ್ತು ತಾರತಮ್ಯ ಕ್ರಮದಲ್ಲಿ (**ಯುಕುತಿಯಲಿ ಮತ್ತು ಕ್ರಮದಿಂದ**) ಅತೃಣಾಂತ ಜೀವಿಯಿಂದ ಆರಂಭಿಸಿ ಆರೋಹಣ ಕ್ರಮದಲ್ಲಿ ಚತುರ್ಮುಖ ಬ್ರಹ್ಮದೇವರ ಪರ್ಯಂತ ಇರುವ ಗುಣರಾಶಿಗಳನ್ನೆಲ್ಲಾ ಮೇಳವಿಸಿ. ಒಟ್ಟು ಗೂಡಿಸೋಣ.

ಈ ಗುಣ ರಾಶಿಗಳ ಮೊತ್ತವನ್ನು ಅಷ್ಟೇಪಟ್ಟು ಹೆಚ್ಚಿಸಿ ಗುಣಿಸಿದರೆ ಎಷ್ಟು ಗುಣರಾಶಿಗಳ ಗುಣಲಬ್ಧ ಬರುವುದೋ, ಅಷ್ಟನ್ನೂ ಒಟ್ಟಾಗಿ ಶ್ರೀ ಲಕ್ಷ್ಮೀದೇವಿಯೇರಲ್ಲಿ ಪರಿಗಣಿಸಿದರೆ, ಆ ಕಲ್ಪನಾತೀತನಾದ ಗುಣರಾಶಿಯು ಶ್ರೀ ಪರಮಾತ್ಮನ ಅಪಾರ ಗುಣಸ್ತೋಮಗಳ ಲವಲೇಶದ ಅಂಶದಲ್ಲಿ

ಲೇಶಕ್ಕೂ ಸಮವೆನಿಸದು, ಇದೊಂದು ಉತ್ಪ್ರೇಕ್ಷಾ ರೂಪವಾದ ದೃಷ್ಟಾಂತವು. ಜ್ಞಾನಿಗಳಾದವರಿಗೆ ಮಾತ್ರ ಈ ಕಲ್ಪಿತ ದೃಷ್ಟಾಂತದ ವಿವರಣೆಯು ಗೊತ್ತಾಗಲು ಸಾಧ್ಯ, ಅದರಿಂದಲೇ **ಕೋವಿದರು ಚಿತ್ತೈಸುವುದು**–ಎಂದಿದ್ದಾರೆ ಜ್ಞಾನಿಶ್ರೇಷ್ಠ ದಾಸವರ್ಯರು.

೨. ಸಮಸ್ತ ದೇವತೆಗಳಿಗೂ ಆನಂದದಾಯಕಳು ಶ್ರೀ ಲಕ್ಷ್ಮಿಯು, ಇದರಿಂದ ಶ್ರೀ ರಮಾದೇವಿಗೆ **ದೇವಕಿ** ಎಂದು ಹೆಸರು. ಇಂತಹ ದೇವಕೀ ನಾಮಕಳಾದ ಶ್ರೀ ರಮಾದೇವಿಯರಿಗಿಂತ ಅನಂತಾನಂತ ಕೋಟಿಗುಣದಿಂದ ಅಧಿಕನಾದ ಶ್ರೀ ಹರಿಗೆ **ದೇವ** ಎಂದು ಹೆಸರು. ಅಂತಹ ದೇವನ ಪತ್ನಿಯೇ **ದೇವಕಿ** ನಾಮಕಳಾದ ಶ್ರೀ ಲಕ್ಷ್ಮೀ.

೩. ಸೂಕ್ಷ್ಮ ಸೃಷ್ಟಿಯಲ್ಲಿ ಮಾಯಾಪತಿ ವಾಸುದೇವನು ತನ್ನ ಇಚ್ಛಾ ಮಾತ್ರದಿಂದ ಮಾಯಾನಾಮಕಳಾದ ಶ್ರೀ ಲಕ್ಷ್ಮೀದೇವಿಯರಲ್ಲಿ **ಪುರುಷ ನಾಮಕ ವಿರಿಂಚಿ** ಯನ್ನು ಸೃಷ್ಟಿಸಿದ. ಆ ವಿರಿಂಚಿಯೇ ಶ್ರೀ ಲಕ್ಷ್ಮೀ ನಾರಾಯರಣರ ಜ್ಯೇಷ್ಠಪುತ್ರರಾದ ಚತುರ್ಮುಖ ಬ್ರಹ್ಮದೇವರು. ಈ ಕಾರಣದಿಂದ ದೇವನಾದ ಶ್ರೀ ಪರಮಾತ್ಮನಿಗಿಂತ ಅನಂತಾನಂತ ಕೋಟಿ ಗುಣಗಳಿಂದ ಅವರಳಾದ ಶ್ರೀ ಲಕ್ಷ್ಮೀದೇವಿಯನ್ನು **ಆ ವಿರಂಚನ ಜನನೀ** ಎಂದು ಕರೆದಿರುತ್ತಾರೆ.

೪. ಇಂತಹ ವಿರಿಂಚಿ ಮಾತೆಯಾದ ಶ್ರೀ ಲಕ್ಷ್ಮೀದೇವಿಯೇ ಅನಂತಾನಂತ ಗುಣರೂಪ ಕ್ರಿಯಾಸಾಗರನಾದ ಆ ಪರಮಾತ್ಮನ ಗುಣ ರೂಪಕ್ರಿಯೆಗಳ ಆದ್ಯಂತವನ್ನು ಸಾಕಲ್ಯೇನ ಅರಿಯಳು ಇನ್ನೂ ಆತನ ನಖಾಗ್ರದ ಗುಣ ವೃಂದಗಳನ್ನು ಎಣಿಸುತ್ತಲೇ ಇದ್ದಾಳೆ. ಆಗ ಪ್ರತಿ ಕ್ಷಣ ಕ್ಷಣಕ್ಕೂ ನಿತ್ಯ ನೂತನನಾಗಿ ಗೋಚರಿಸುತ್ತಿದ್ದಾನೆ, ಈಷ ಕೋಟಿಪ್ರವಿಷ್ಟಳಾದ, ಶ್ರೀ ಪರಮಾತ್ಮನಿಗೆ ನಿತ್ಯಾವಿಯೋಗಿನಿಯಾದ ಇಂದಿರೆಯ ಪಾಡೇ ಹೀಗಿರುವಾಗ, ಅತ್ಯಲ್ಪರಾದ ಇತರ ನರರ ಗತಿಯೇನು? ಅವರಿಗೆ ಎಂದೆಂದಿಗೂ ಶ್ರೀ

ಪರಮಾತ್ಮನ ಗುಣಗಳು ಅಳೆವಡುವುದೇ ಇಲ್ಲ ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥೨೫॥

## ಪದ್ಯ (೨೬)

**ಮೂಲ:**

**ಕ್ಷೀರ ದಧಿ ನವನೀತ ಘೃತದೊಳು ।**
**ಸೌರಭ ರಸಾಹ್ವಯು ನೆನಿಸಿ ಶಾಂ ।**
**ತೀರಮಣ ಜ್ಞಾನಕ್ರಿಯೇಚ್ಛಾ ಶಕ್ತಿ ಯೆಂದೆಂಬ ॥**
**ಈರೆರಡು ನಾಮದಲಿ ಕರೆಸುವ ।**
**ಭಾರತೀ ವಾಗ್ದೇವಿ ವಾಯು ಸ ।**
**ರೋರುಹಾಸನರಲ್ಲಿ ನೆಲಸಿಹರೆಲ್ಲ ಕಾಲದಲಿ ॥** ॥೨೬॥

**ಅವತರಣಿಕೆ :—**

ಪೂರ್ವೋಕ್ತ ಪದ್ಯದಲ್ಲಿ ಪರನಾಮಕಳಾದ ಶ್ರೀ ಲಕ್ಷ್ಮೀದೇವಿಯರಿಗಿಂತ ಅನಂತಾನಂತ ಕೋಟಿ ಗುಣಗಳಿಂದ ಪರಮೋತ್ತಮನಾದ ದೇವ ದೇವೇಶನ ವಿಚಾರವನ್ನು ತಿಳಿಸಿ, ಹಾಲು, ಮೊಸರು, ಬೆಣ್ಣೆ, ತುಪ್ಪ ಈ ವಸ್ತುಗಳಲ್ಲಿ ರಸಪದ ನಾಚ್ಯನಾಗಿ ಜ್ಞಾನ, ಕ್ರಿಯಾ, ಇಚ್ಛಾ, ಶಕ್ತಿ ಎಂಬ ನಾಲ್ಕು ನಾಮಗಳಿಂದ ಭಾರತೀ, ವಾಣಿ, ವಾಯು, ಬ್ರಹ್ಮರಲ್ಲಿ ಶಾಂತೀಪತಿ ಅನಿರುದ್ಧನಾಮಕ ಶ್ರೀ ಪರಮಾತ್ಮನು ನಿತ್ಯದಲ್ಲಿ ಸನ್ನಿಧಾನ ಯುಕ್ತನಾಗಿರುವನೆಂದು ತಿಳಿಸುತ್ತಾರೆ–**ಕ್ಷೀರದಧಿ**–ಎಂಬ ಪ್ರಸಕ್ತ ಸಂಧಿಗತ ೨೬ನೆಯ ಈ ಪದ್ಯದಿಂದ, ॥೨೬॥

**ಪ್ರತಿಪದಾರ್ಥ:—**

**ಕ್ಷೀರ**=ಹಾಲು (ಜ್ಞಾನರೂಪ), **ದಧಿ**=ಮೊಸರು (ಕ್ರಿಯಾರೂಪ),

**ನವನೀತ**=ಬೆಣ್ಣೆ (ಇಚ್ಛಾರೂಪ), **ಘೃತದೊಳು**=ತುಪ್ಪ (ಶಕ್ತಿರೂಪ) ಈ ನಾಲ್ಕು ಪದಾರ್ಥಗಳಲ್ಲಿ, **ಸೌರಭ**=ಸುಗಂಧರೂಪನಾಗಿ, **ರಸಾಹ್ವಯ ನೆನಿಸಿ**=ರಸರೂಪನೆಂಬ ಹೆಸರಿನಿಂದ ಕರೆಸುತ್ತಾ. **ಶಾಂತೀರಮಣ**=ಶಾಂತೀ ಪತಿಯಾದ ಅನಿರುದ್ಧನಾಮಕ ಶ್ರೀಪರಮಾತ್ಮನು. **ಜ್ಞಾನಕ್ರಿಯೇಚ್ಛಾ ಶಕ್ತಿಯೆಂದೆಂಬ**=ಜ್ಞಾನನಾಮಕನಾಗಿ. ಕ್ರಿಯಾನಾಮಕನಾಗಿ, ಇಚ್ಛಾ ನಾಮಕನಾಗಿ ಮತ್ತು ಶಕ್ತಿನಾಮಕನಾಗಿ, **ಈರೆರಡು ನಾಮದಲಿ**= ಪೂರ್ವೋಕ್ತ ನಾಲ್ಕು ಹೆಸರುಗಳಿಂದ (ಈ ರೆರಡು=೨+೨=೪) **ಕರೆಸುವ** =ವಾಚ್ಯನಾಗಿದ್ದು. **ಭಾರತೀ**=ಭಾರತೀ ದೇವಿಯರಲ್ಲಿ ಜ್ಞಾನ ನಾಮಕ ನಾಗಿ. **ವಾಗ್ದೇವಿ**=ವಾಗಾಭಿಮಾನಿಯಾದ ಸರಸ್ವತಿಯಲ್ಲಿ ಇಚ್ಛಾನಾಮಕ ನಾಗಿದ್ದು, **ವಾಯು**=ವಾಯುದೇವರಲ್ಲಿ ಕ್ರಿಯಾ ನಾಮಕನಾಗಿದ್ದು. **ಸರೋರುಹಾಸನನಲ್ಲಿ** = ಕಮಲಪೀಠರೆನಿಪ ಬ್ರಹ್ಮದೇವರಲ್ಲಿ ಶಕ್ತಿ ನಾಮಕನಾಗಿದ್ದು, **ಎಲ್ಲಕಾಲದಲಿ**=ಸರ್ವಕಾಲಗಳಲ್ಲಿ, **ನೆಲೆಸಿಹ**=ಆವಾಸ ವಾಗಿದ್ದಾನೆ, ॥೨೬॥

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವರ ಜ್ಞಾನೇಚ್ಛಾ ಕ್ರಿಯಾಶಕ್ತಿಗಳು. ಬಿಂಬನಾದ ಪರಮಾತ್ಮನಲ್ಲಿ ಇರಬೇಕಾದ ಕ್ರಮವನ್ನು ಹೇಳತಾರೆ.

ಕ್ಷೀರ-ಕ್ಷೀರಕ್ಕೆ ಸದೃಶ, ಜ್ಞಾನ-ಜ್ಞಾನವು; ಕ್ಷೀರದಿಂದ ಆಗತಕ್ಕುದ್ದು ಮೊಸರು, ದಧಿ-ಮೊಸರಿಗೆ ಸದೃಶ, ಕ್ರಿಯಾ-ವ್ಯಾಪಾರ; ಮೊಸರಿನಿಂದ ಆಗತಕ್ಕದ್ದು ಬೆಣ್ಣೆ-ಬೆಣ್ಣೆಗೆ ಸದೃಶ, ಇಚ್ಛಾ-ಕಾಮನ; ಬೆಣ್ಣೆಯಿಂದ ಆಗ ತಕ್ಕದ್ದು. ಘೃತ-ತುಪ್ಪ. ತುಪ್ಪಕ್ಕೆ ಸದೃಶ, ಶಕ್ತಿ-ಪರಮಾತ್ಮ ಜೀವನಪರ ತುಪ್ಪದಿಂದ ಆಗತಕ್ಕುದ್ದು ಭೋಜನಸುಖ. ಕ್ಷೀರ ಎಂಬುದು ಗೋಸ್ತನದಿಂದ ಕರೆಯಬೇಕು.

ಅಂತು ಐದಕ್ಕೆ ವಿವರ-ಕ್ಷೀರದಲ್ಲಿ ಇರತಕ್ಕದ್ದು ತುಪ್ಪ. ಅದಕ್ಕೆ

ಮ್ಯಾಲೆ ಒಂದೂ ಇಲ್ಲ. ಆ ತುಪ್ಪವನ್ನು ಉಂಡು ಭೋಜನಮಾಡಿ ಸುಖ ಪಡಬೇಕಾದರೆ—

೧. ಗೋಸ್ತನದಿಂದ ಕ್ಷೀರ ಕರೆಯಬೇಕು-ಜ್ಞಾನ (ಈ ಪ್ರಕಾರ ಕರಿಯೋಣ ಎಂಬುದು, ಗುರುಗಳ ಸೇವಾಮಾಡಿ ಅವರ ಮುಖದಿಂದ ಜ್ಞಾನೋಪದೇಶವೆಂಬ ಹಾಲು ಕರೆದು ತೊಗೊಂಬೋದು,).

೨. ಆ ಕ್ಷೀರವನ್ನು ಕಾಯಿಸಿ ಹೆಪ್ಪುಕೊಟ್ಟರೆ ಅದು ದಧಿ ಆಗುತ್ತದೆ, ಇದೇ ಕ್ರಿಯಾ. (ಜ್ಞಾನವೆಂಬೋ ಹಾಲನ್ನು ಮನನರೂಪದಿಂದ ಕಾಯಿಸಿ ಪರಮಾತ್ಮನ ಗುಣವಿಚಾರವೆಂಬ ಮೊಸರಿನಿಂದ ಹೆಪ್ಪುಕೊಟ್ಟು, ಜ್ಞಾನವೆಂಬ ಹಾಲನ್ನು ದಾರಢ್ಯ ಮಾಡೋಣ ಎಂಬುದೇ ದೃಢಜ್ಞಾನ, ಇದು ಮಾನಸಿಕ ಕ್ರಿಯಾ.)

೩, ದಧಿಯನ್ನು ಮಥನಮಾಡಿದರೆ ಬೆಣ್ಣೆ ಆಗತದೆ – ಇದೇ ಇಚ್ಛಾ. (ದಧಿ ಸದೃಶವಾದ ದೃಢಜ್ಞಾನವನ್ನು ಮಥನ, ಎಂದರೆ ವಾಸನಾಪ್ರತೀಕ ವನ್ನ ಹೃದಯದಲ್ಲಿ ನಿಲ್ಲಿಸಿ. ಇಚ್ಛಾ ಬಂದಂತೆ ಉಪಾಸನಾರೂಪವಾದ ಮಥನ ಮಾಡಿದರೆ, ದಧಿಯಲ್ಲಿ ಬೆಣ್ಣೆಕಂಡಂತೆ ದೃಢಜ್ಞಾನವೆಂಬ ದಧಿಯಿಂದ ಬೆಣ್ಣೆ ಸದೃಶ ವಾಸನಾರೂಪ ಪ್ರತ್ಯಕ್ಷವಾಗತದೆ, ಇದು ಮಾನಸರೂಪ ಇಚ್ಛಾ.)

೪. ಬೆಣ್ಣೆ ಕಾಯಿಸಿದರೆ ಘೃತ ಕಾಣುತ್ತದೆ—ಇದೇಶಕ್ತಿ, (ಬೆಣ್ಣೆ ಕಾಯಿಸುವುದಕ್ಕೆ ಸದೃಶವಾದ ವಾಸನಾಪ್ರತೀಕವನ್ನು ಉಪಾಸನಾ ಮಾಡತಾ ಬಂದರೆ, ಆ ಪ್ರತೀಕ ಅದೃಶ್ಯವಾಗಿ ಘೃತಸದೃಶ ಶ್ರೀ ಪರಮಾತ್ಮ ಪ್ರತ್ಯಕ್ಷ ನಾಗತಾನೆ).

ಸರ್ವಶಕ್ತಿಯುಳ್ಳ ಪರಮಾತ್ಮ ಜೀವನ ಸ್ವರೂಪಯೋಗ್ಯತಾ ಎಂಬ ಶಕ್ತಿಯಿಂದ ಪ್ರತ್ಯಕ್ಷನಾಗತಾನೆ. ಶಕ್ತಿಶಬ್ದ ಜೀವರ ಪರ ದೇವರ ಪರ ಮಾಡಬೇಕು, ಶಾಂತೀರಮಣ – ಶಾಂತೀನಾಮಕ ಲಕ್ಷ್ಮೀಪತಿಯಾದ ಅನಿರುದ್ಧನು, ಸೌರಭ-ವಾಸನೀರೂಪವಾದ, ರಸಾಯಹ್ವನೆನಿಸಿ - ಜ್ಞಾನಿಗಳು

ಸ್ವೀಕಾರಮಾಡೋದಕ್ಕೆ ಸರ್ವಶ್ರೇಷ್ಠವಾದ ರಸನಾದ್ದರಿಂದ, ರಸನಾಮದಿಂದ ರಸ ಎಂತ ಎನಿಸಿ, ಜ್ಞಾನಕ್ರಿಯೇಚ್ಛಾಶಕ್ತಿಯೆಂಬ - ಜೀವರುಗಳೂ ಜ್ಞಾನ, ಕ್ರಿಯಾ, ಇಚ್ಛಾ, ಶಕ್ತಿ ಎಂತ (ನಾಲ್ಕು), ಈರೆರಡು ನಾಮದಲಿ - ಈ ನಾಲ್ಕು ನಾಮದಲ್ಲಿ, ಕರಿಸುವ-ತದಂತರ್ಗತನಾಗಿ ಕರಿಸೋವನಾಗಿ ಇದ್ದಾನೆ, ಭಾರತೀ - ಭಾರತೀ ದೇವೇರು ಜ್ಞಾನದಲ್ಲಿ, ವಾಗ್ದೇವಿ - ಸರಸ್ವತೀ ದೇವೇರು ಇಚ್ಛಾದಲ್ಲಿ, ವಾಯು - ವಾಯುದೇವರು ಕ್ರಿಯಾದಲ್ಲಿ, ಸರೋರುಹಾಸನರು - ಬ್ರಹ್ಮದೇವರು ಶಕ್ತಿಯಲ್ಲಿ. ಅಲ್ಲಿ - ಈ ನಾಲ್ಕರಲ್ಲಿ, ಎಲ್ಲ ಕಾಲದಲಿ - ಲಿಂಗಭಂಗವಾಗೋಪರಿಯಂತರವರಿಗೂ, ನೆಲಸಿಹರು—ಸರ್ವಕಾಲದಲ್ಲೂ ಆವಾಸರಾಗಿ ಇಹರು. ಕ್ಷೀರ ದಧಿ ನವನೀತ ಘೃತದೊಳು - ಪ್ರತ್ಯಕ್ಷವಾದ ಕ್ಷೀರಾದಿಗಳಲ್ಲಿ ಪೂರ್ವೋಕ್ತಪ್ರಕಾರ ಕ್ರಮಾಲಂಕಾರದಿಂದ ದೇವತೆಗಳು ನಾಲ್ಕು ಮಂದಿ, ಇವರಂತರ್ಗತ ಅನಿರುದ್ಧಾದಿ ೪ ರೂಪದಿಂದ ರಸರೂಪಗಳಲ್ಲಿ ದೇವರು ಇದ್ದಾನೆ. ಘೃತ ಭೋಜನಮಾಡಿ ಸುಖ ಹೊಂದಿದಂತೆ. ಪ್ರತ್ಯಕ್ಷನಾದ ಪರಮಾತ್ಮನ ಸದಾ ಉಪಾಸನಾ ಮಾಡತಾ, ಸುಖಪಡತಾ ಇರುತಾನೆ ಎಂತ ತಾತ್ಪರ್ಯ. ॥೨೬॥

(೨) **ಭಾವಪ್ರಕಾಶಿಕೆ – ವ್ಯಾಖ್ಯಾನ :–**

ದಧಿ ಕ್ಷೀರಾದಿಗಳಲ್ಲಿ ಭಗವದ್ರೂಪ ಚಿಂತನಾಕ್ರಮವನ್ನು ಹೇಳುತ್ತಾರೆ. ಹಾಲು, ಮೊಸರು, ಬೆಣ್ಣೆ, ತುಪ್ಪ ಈ ನಾಲ್ಕರಲ್ಲಿರುವ ಸುವಾಸನೆ, ರುಚಿ ಇವುಗಳ ಸ್ವರೂಪನಾಗಿ, ಶಾಂತೀಪತಿಯಾದ ಅನಿರುದ್ಧನು ನಾಲ್ಕು ರೂಪಗಳಿಂದ, ಜ್ಞಾನರೂಪದಿಂದ ಬ್ರಹ್ಮದೇವರಲ್ಲಿಯೂ. ಕ್ರಿಯಾರೂಪದಿಂದ ವಾಯುದೇವರಲ್ಲಿಯೂ, ಇಚ್ಛಾರೂಪದಿಂದ ಸರಸ್ವತಿಯಲ್ಲಿಯೂ, ಶಕ್ತಿರೂಪದಿಂದ ಭಾರತೀ ದೇವಿಯರಲ್ಲಿಯೂ ಸರ್ವದಾ ಇರುತ್ತಿರುವನೆಂದು ಚಿಂತಿಸಬೇಕು. ॥೨೬॥

(೩) **ಭಾವದರ್ಪಣ ಟೀಕಾ–ವ್ಯಾಖ್ಯಾನ:**

ಕ್ಷೀರಾದಿ ಪದಾರ್ಥದಲ್ಲಿ ಸೌರಭ ಎಂತ ಎನಿಸಿಕೊಂಡ ಅನಿರುದ್ಧನು ಜ್ಞಾನರೂಪದಿಂದ ಬ್ರಹ್ಮದೇವರಲ್ಲಿ, ಕ್ರಿಯಾರೂಪದಿಂದ ವಾಯುದೇವರಲ್ಲಿ, ಇಚ್ಛಾರೂಪದಿಂದ ಸರಸ್ವತೀ ದೇವಿಯರಲ್ಲಿ, ಶಕ್ತಿರೂಪದಿಂದ ಭಾರತೀದೇವಿಯರಲ್ಲಿ ಇದ್ದಾನೆಂದು ಹೇಳುತ್ತಾರೆ–ಕ್ಷೀರೇತಿ ॥೨೬॥

(೪) **ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)**

"ಕ್ಷೀರ ದಧಿ" – ಇತಿ ॥ "ಸೌರಭೋ ಹರಿರೇತೇಷು ಕ್ಷೀರಾದಿಷು ಜನಾರ್ದನಃ ॥ ಅನಿರುದ್ಧೇನ ಸಹ ಚತುಷ್ಟಯಮ್ ॥ ಗೃಹೀತ ಶಕ್ತಿ ತ್ರಿತಯಾಯ ದೇಹಿನಾಮ್"–ಇತಿ **ಭಾಗವತೇ** ॥ "ಇಚ್ಛಾ ಶಕ್ತಿಃ ಕ್ರಿಯಾಶಕ್ತಿಃ ಜ್ಞಾನಶಕ್ತಿಃ ಇತಿ ತ್ರಿಧಾ"–ಇತಿ **ತಾತ್ಪರ್ಯೇ** ॥೨೬॥

**ಕನ್ನಡಾರ್ಥ :–**

ಹಾಲು, ಮೊಸರು ಇತ್ಯಾದಿ ವಸ್ತುಗತ ಭಗವದ್ರೂಪಗಳನ್ನು ಈ ಪದ್ಯದಿಂದ ತಿಳಿಸುತ್ತಾರೆ, ಶ್ರೀ ಹರಿಯು ಸೌರಭ ಮತ್ತು ರಸ ಎಂಬ ಸುನಾಮಗಳಿಂದ ಕ್ಷೀರಾದಿ ವಸ್ತುಗಳಲ್ಲಿ ಇದ್ದು, ನಿಯಾಮಕನಾಗಿರುತ್ತಾನೆ, ಅನಿರುದ್ಧನನ್ನ ಸೇರಿದರೆ ನಾಲ್ಕು ರೂಪಗಳಾಗುವುವು, ಪರಮಾತ್ಮನು ಜ್ಞಾನ ಇಚ್ಛಾ ಕ್ರಿಯಾಶಕ್ತಿಗಳಿಗೆ ಮುಖ್ಯ ಪ್ರೇರಕನು ಹಾಗೂ ನಿಯಾಮಕನು. "ಅಂತಹ ಶಕ್ತಿತ್ರಯಗಳನ್ನು ಸ್ವೇಚ್ಛೆಯಿಂದ ಅಭಿವ್ಯಕ್ತಮಾಡುವ ಶ್ರೀ ಪರಮಾತ್ಮನಿಗೆ ನಮಸ್ಕಾರವು"–ಎಂದು **ಶ್ರೀ ಮದ್ಭಾಗವತವು** ತಿಳಿಸುವುದು. ಅದಕ್ಕೆ ಆ ಶಕ್ತಿತ್ರಯಗಳು ಯಾವುವೆಂದರೆ – "ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾ ಶಕ್ತಿಗಳು–"–ಎಂದು **ಶ್ರೀ ಮದಾಚಾರ್ಯರು ತಾತ್ಪರ್ಯದಲ್ಲಿ** ಸ್ಪಷ್ಟಪಡಿಸಿರುವರು. ಈ ಮೂರೂ ಹಾಗೂ ಅನಿರುದ್ಧ ಹೀಗೆ ರೂಪ ಚತುಷ್ಟಯಗಳು ॥೨೬॥

(೫) **ಶ್ರೀ ಗುರುಹೃದಯ ಪ್ರಕಾಶಿಕೆ :–** ದಿವಸ, ಯಾಮ, ಮುಹೂ

ರ್ತವೆಂಬ, ಪೂರ್ವೋಕ್ತ ಪದ್ಯದಲ್ಲಿ ಕಾಲಾಂತರ್ಗತರೂಪೋಪಾಸನ ತಿಳಿಸಿದ್ದರು, ಆ ಕಾಲಾಂತರ್ಗತನೆ ಕ್ಷೀರ, ದಧಿ, ನವನೀತ, ಘೃತಸ್ಥ ಅನಿರುದ್ದ ರೂಪ ಸಂಸೇವನೆಯಿಂದ, ಆಯುರ್ವೃದ್ಧಿಕರವೆಂಬ ಅಭಿಪ್ರಾಯ ಸೂಚಿಸುತ್ತಾರೆ, ಕ್ಷೀರ ದಧಿ ನವನೀತವೆಂದು, ಕ್ಷೀರ, ದಧಿ, ನವನೀತ, ಘೃತವೆಂದು ಕರೆಸುವ ಹಾಲು, ಮೊಸರು, ಬೆಣ್ಣೆ, ತುಪ್ಪದಲ್ಲಿ ಸಹ, ನಾಲ್ಕರಲ್ಲೂ ಭಾರತೀ, ಸರಸ್ವತೀ, ವಾಯುದೇವರು, ಬ್ರಹ್ಮದೇವರು ಸಹ ನಾಲ್ವರು ಅಭಿಮಾನಿಗಳು. ಅಲ್ಲಿ ಸೌರಭ ಎಂಬ ಪರಿಮಳ, ರಸವೆಂಬ ಸವಿಯು. ಈ ಎರಡು ಹೆಸರುಳ್ಳವನಾಗಿ ಶಾಂತೀಪತಿ ಅನಿರುದ್ಧನು ಜ್ಞಾನ, ಕ್ರಿಯಾದ್ಧಾಇಚ್ಛಾ, ಶಕ್ತಿ ಎಂಬ ಈ ನಾಲ್ಕು ರೂಪದಿಂದಿರುವನು ॥೨೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವ ಪದ್ಯದಲ್ಲಿ ಅಪಾರಗುಣಗಣ ಸಂಪನ್ನನಾದ ಶ್ರೀ ಪರಮಾತ್ಮನ ಅನಂತಾನಂತ ಗುಣ ರಾಶಿಗಳು, ರೂಪ ಮತ್ತು ಕ್ರಿಯಾ ವಿಶೇಷಗಳನ್ನು ಮನಸಾ ಆಲೋಚಿಸುತ್ತಾ, ಪ್ರತಿಕ್ಷಣಕ್ಕೂ ನಿತ್ಯನೂತನವಾಗಿ ಗೋಚರಿಸುತ್ತಿರುವ ಆ ಪರಮಾತ್ಮನ ಗುಣಗಳ ಆದ್ಯಂತಗಳನ್ನು ಸಾತಲ್ಯೇನ ಅರಿಯದೆ ಆಶ್ಚರ್ಯಭರಿತಳಾಗಿರುವ ಶ್ರೀ ಲಕ್ಷ್ಮೀದೇವಿಯರ ವಿಷಯ ತಿಳಿಸಿ, ಕ್ಷೀರಾದಿ ವಸ್ತುಗಳಲ್ಲಿ ಸೌರಭ ಹಾಗೂ ರಸಪದ ವಾಚ್ಯನಾಗಿರುವ ಶಾಂತೀ ರಮಣ ಅನಿರುದ್ಧನು ಜ್ಞಾನ, ಇಚ್ಛಾ ಕ್ರಿಯಾ, ಶಕ್ತಿ ರೂಪಗಳಿಂದ ಇದ್ದಾನೆಂಬ ವಿಷಯವನ್ನು ತಿಳಿಸುತ್ತಾರೆ – **ಕ್ಷೀರ ದಧಿ**– ಎಂಬ ಪ್ರಸಕ್ತ ೨೬ನೆಯ ಪದ್ಯದಿಂದ.

೧. ಸುಲಕ್ಷಣಯುಕ್ತವಾದ ಆಕಳಿನ ಹಾಲಿನಲ್ಲಿ ಸೌರಭವೆಂಬ ಸುಗಂಧ ಹಾಗೂ ಸುರಸೋಪೇತವಾದ ರುಚಿ ಇದೆ. ಕ್ಷೀರವು ಜ್ಞಾನಸದೃಶವಾಗಿದೆ.

೨. ಅಂತಹ ಪರಿಶುದ್ಧವಾದ ರುಚಿಕರವಾದ ಹಾಲಿಗೆ ಹದವಾಗಿ ಹೆಪ್ಪು ಕೊಟ್ಟಾಗ, ಅದು ಹೆತ್ತುಕೊಂಡು ಗಟ್ಟಿ ಮೊಸರಾಗುವುದು, ಅಂತಹ

ದಧಿಯೇ ಕ್ರಿಯಾಸದೃಶವು. ಜ್ಞಾನವೆಂಬೋ ಹಾಲನ್ನು ಮನನ ರೂಪದಿಂದ ಹದವಾಗಿ ಕಾಯಿಸಿ, ಶ್ರೀಶನ ಗುಣ ವಿಚಾರವೆಂಬ ಮೊಸರಿನಿಂದ ಹೆಪ್ಪು ಹಾಕಿದರೆ, ಹಾಲಿನ ಸಾರವು ಹೆಪ್ಪುಗಟ್ಟಿ ಮೊಸರಾಗುವುದೇ **ಕಾರ್ಯ ರೂಪವಾದ ಕ್ರಿಯೆಯು.**

೩. ಅಂತಹ ಮೊಸರನ್ನು ಕಡೆದು, ಮಂಥನಮಾಡಿದಾಗ, ಹಾಲಿನ ಸಾರರೂಪನಾದ ಮೊಸರು ಕೆನೆಗೂಡಿ, ಬೆಣ್ಣೆಯು ಮಜ್ಜಿಗೆಯಲ್ಲಿ ತೇಲಿ ಬರುವುದು. ಇಲ್ಲಿ ದೃಢಜ್ಞಾನ ರೂಪದಲ್ಲಿರುವ ಮೊಸರಿನಿಂದ ಬೆಣ್ಣೆ ಸದೃಶ ವಾಸನಾ ರೂಪನಾದ ವಸ್ತುವು ಉತ್ಪತ್ತಿಯಾಗುವುದು. ಇದರಿಂದ ನವ ನೀತವು ಮಾನಸರೂಪ **ಇಚ್ಛೆಯು.**

೪. ಅಂತಹ ಸಾರಭೂತವಾದ ಬೆಣ್ಣೆಯನ್ನು ಹದವರಿತು ಕಾಯಿಸಿದಾಗ ಕ್ಷೀರ, ದಧಿ, ನವನೀತಗತರಸವು ಕೇಂದ್ರೀಕೃತವಾಗಿ ಹಸನಾದ ತುಪ್ಪ ಉತ್ಪತ್ತಿಯಾಗುವುದು. ಇದೇ ಶಕ್ತಿರೂಪವು, ಕ್ಷೀರಗತ ಸೌರಭ ಮತ್ತು ರಸಗಳು ಶಕ್ತ್ಯಾತ್ಮಕವಾಗಿದ್ದು. ಘೃತದಲ್ಲಿ ಗೋಚರವಾಗುವುವು.

೫, ಹೀಗೆ ಕ್ಷೀರಾದಿ ನಾಲ್ಕು ವಸ್ತುಗಳಲ್ಲಿ ಅಂತರ್ಗತವಾಗಿರುವ ಸುವಾಸನೆ ಎಂಬ ಸೌರಭ ಮತ್ತು ರುಚಿಕರವಾದ ರಸ ಇವುಗಳಲ್ಲಿ **ಶಾಂತಿ ರಮಣನಾದ ಅನಿರುದ್ಧ**ನು ಅದೇ ಹೆಸರಿನಿಂದ ವಾಚ್ಯನಾಗಿದ್ದಾನೆ,

೬, ಇಂತಹ ಸೌರಭ ರಸಾಹ್ವಯನಾದ ಅನಿರುದ್ಧನು ಜ್ಞಾನ, ಇಚ್ಛಾ ಕ್ರಿಯಾ ಮತ್ತು ಶಕ್ತಿ ಎಂಬ ನಾಲ್ಕು ಅಧಿಷ್ಠಾನಗಳಲ್ಲಿ ಜ್ಞಾನ ವಾಚ್ಯನಾಗಿ, ಇಚ್ಛಾ ವಾಚ್ಯನಾಗಿ, ಕ್ರಿಯಾವಾಚ್ಯನಾಗಿ ತತ್ತನ್ನಾಮಗಳಿಂದಲೇ ವಿದ್ಯಮಾನನಾಗಿದ್ದಾನೆ.

೭, ಇಂತು ನಾಲ್ಕು ಹೆಸರುಗಳಿಂದ ಪ್ರಸಿದ್ಧನಾದ ಅನಿರುದ್ಧ ದೇವರು **(ಈರೆರಡು ನಾಮದಲಿ ಕರಿಸುವ)** ಭಾರತೀ ದೇವಿಯರು, ಸರಸ್ವತಿಯರು, ವಾಯುದೇವರು ಮತ್ತು ಬ್ರಹ್ಮದೇವರಲ್ಲಿ ವಿದ್ಯಮಾನನಾಗಿದ್ದಾನೆ,

ಜ್ಞಾನಶಬ್ದ ವಾಚ್ಯನಾಗಿ ಚತುರ್ಮುಖ ಬ್ರಹ್ಮದೇವರಲ್ಲಿಯೂ. ಕ್ರಿಯಾ ಶಬ್ದ ವಾಚ್ಯನಾಗಿ ಶ್ರೀ ವಾಯುದೇವರಲ್ಲಿಯೂ, ಇಚ್ಛಾ ಶಬ್ದವಾಚ್ಯನಾಗಿ ಶ್ರೀ ಸರಸ್ವತಿಯಲ್ಲಿಯೂ ಮತ್ತು ಶಕ್ತಿಶಬ್ದವಾಚ್ಯನಾಗಿ ಶ್ರೀ ಭಾರತೀದೇವಿಯರಲ್ಲಿಯೂ ಸರ್ವದಾ ಇದ್ದಾನೆ. ಈ ವಿವರಣೆಯು **ಭಾವಪ್ರಕಾಶಿಕೆ ಮತ್ತು ಭಾವದರ್ಪಣ ಟೀಕಾ ವ್ಯಾಖ್ಯಾನ ಕಾರರ** ಪ್ರಕಾರ ಇದೆ.

ಆದರೆ **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ** :-

(೧) ಭಾರತೀದೇವಿಯರು ಜ್ಞಾನದಲ್ಲಿ.

(೨) ಸರಸ್ವತೀದೇವಿಯರು ಇಚ್ಛಾದಲ್ಲಿ.

(೩) ವಾಯುದೇವರು ಕ್ರಿಯಾದಲ್ಲಿ.

(೪) ಬ್ರಹ್ಮದೇವರು ಶಕ್ತಿಯಲ್ಲಿ ಇದ್ದಾರೆಂದು ಹೇಳಿರುತ್ತಾರೆ.

ಋಜುಗಣದರಸರಾದ ಚತುರ್ಮುಖ ಬ್ರಹ್ಮದೇವರು ಶ್ರೀ ಪರಮಾತ್ಮನ ಜ್ಯೇಷ್ಠಪುತ್ರರು. ಅವರಿಗೆ ಶ್ರೀಮನ್ನಾರಾಯಣನಿಂದ ಪ್ರಪ್ರಥಮ ಉಪದೇಶ. ಮುಕ್ತವರ್ಗಕ್ಕೆಲ್ಲಾ ಗುರುಸ್ಥಾನಾಪನ್ನರು. ಜ್ಞಾನದಾಯಕರು. ಇದರಿಂದ ಜ್ಞಾನಶಬ್ದ ವಾಚ್ಯನಾಗಿ ಶ್ರೀಪರಮಾತ್ಮನು ಬ್ರಹ್ಮದೇವರಲ್ಲಿ ವಿದ್ಯಮಾನನಾಗಿದ್ದಾನೆಂಬುದು ಶಾಸ್ತ್ರಸಮ್ಮತ,

ಭಾರತೀದೇವಿಯರು ಬುದ್ಧ್ಯಭಿಮಾನಿಗಳು, ಸಮೀಚೀನನಾದ ಜ್ಞಾನಪ್ರಾಪ್ತಿಗೆ ವಿವೇಚನಾಶಕ್ತಿಯುಕ್ತವಾದ ಬುದ್ಧಿಯು ಕಾರಣ. ಇದರಿಂದ ಜ್ಞಾನವೆಂಬ ಅಧಿಷ್ಠಾನಕ್ಕೆ ಭಾರತೀದೇವಿಯರು ಎಂದು ಸಮನ್ವಯ ಮಾಡಬಹುದು,

ಶ್ರೀವಾಯುದೇವರು ಸ್ಥೂಲದೇಹಗತ ೭೨,೦೦೦ ನಾಡಿವ್ಯೂಹದಲ್ಲಿ ಸಂಚಾರ ಮಾಡುತ್ತಾ, ಶ್ವಾಸಾದಿಕ್ರಿಯಾದಿಗಳನ್ನು ನಡೆಸುವರು. ಈ ಕಾರಣ

ದಿಂದ ಶ್ರೀ ಪರಮಾತ್ಮನು ಕ್ರಿಯಾಶಬ್ದವಾಚ್ಯನಾಗಿ ವಾಯುದೇವರಲ್ಲಿ ಸ್ಥಿತನಾಗಿದ್ದು ಕ್ರಿಯಾಭಿವ್ಯಕ್ತಿ ಮಾಡುವನು.

ಇಂತು ಸೌರಭಾಹ್ವಯನಾಗಿ, ಸುರಸೋಪೇತನಾಗಿ ಕ್ಷೀರ, ದಧಿ, ನವನೀತ ಮತ್ತು ಘೃತ ಎಂಬ ನಾಲ್ಕು ವಸ್ತುಗಳಲ್ಲಿ ಜ್ಞಾನ, ಇಚ್ಛಾ, ಕ್ರಿಯಾ, ಶಕ್ತಿ ಶಬ್ದವಾಚ್ಯನಾಗಿ ಬ್ರಹ್ಮ, ವಾಯು, ವಾಗ್ದೇವಿ, ಭಾರತಿಯರಲ್ಲಿ ಸದಾ ಸರ್ವತ್ರ ನೆಲಸಿರುತ್ತಾನೆ ಎಂದು ಪ್ರಸಕ್ತ ಪದ್ಯದ ತಾತ್ಪರ್ಯ. ॥೨೬॥

## ಪದ್ಯ (೨೭)

**ಮೂಲ**

**ವಸುಗಳೆಂಟು ನವಪ್ರಜೇಶರು ।**
**ಶ್ವಸನಗಣವೈವತ್ತು ಏಕಾ ।**
**ದಶ ದಿವಾಕರರನಿತು ರುದ್ರರು ಅಶ್ವಿನಿಗಳೆರಡು ॥**
**ದಶವಿಹೀನ ಶತಾಖ್ಯ ಈ ಸುಮ ।**
**ನಸದೊಳಗೆ ಚತುರಾತ್ಮ ನೀಯಾ ।**
**ಮಿಸುವ ಬ್ರಹ್ಮ ಸಮೀರ ಖಗ ಫಣೀಂದ್ರರೊಳಗಿದ್ದು ॥ ॥೨೭॥**

**ಅವತರಣಿಕೆ :**

ಹಿಂದಿನ ಪದ್ಯದಲ್ಲಿ ಜ್ಞಾನ, ಇಚ್ಛಾ, ಕ್ರಿಯಾ ಮತ್ತು ಶಕ್ತಿ ಎಂಬ ನಾಲ್ಕು ನಾಮಗಳಿಂದ ಶಬ್ದ ವಾಚ್ಯನಾಗಿ ಸರ್ವಕಾಲದಲ್ಲಿ ಬ್ರಹ್ಮ, ವಾಯು, ವಾಗ್ದೇವಿ ಮತ್ತು ಭಾರತೀ ಈ ನಾಲ್ವರಲ್ಲಿ ನೆಲೆಸಿಹನೆಂದು ತಿಳಿಸಿದರು.

ವಸ್ವಾದಿ ಅಶ್ವಿನೀ ದೇವತೆಗಳ ಪರ್ಯಂತ ವಿದ್ಯಮಾನರಾಗಿರುವ ೯೦ ಮಂದಿ ದೇವತೆಗಳಲ್ಲಿ ಬ್ರಹ್ಮ, ವಾಯು, ಗರುಡ ಮತ್ತು ಶೇಷ ಈ ನಾಲ್ವ

ರಲ್ಲಿ ಅನಿರುದ್ಧಾದಿ ಚತುಮೂರ್ತ್ಯಾತ್ಮಕನಾಗಿ ಇದ್ದು ನಿಯಾಮಕನಾಗಿರುವನು– ಎಂದು ತಿಳಿಸುತ್ತಾರೆ **ವಸುಗಳೆಂಟು**–ಎಂಬ ಪ್ರಸಕ್ತ ಸಂಧಿಗತ ೨೭ ನೆಯ್ಯ ಈ ಪದ್ಯದಿಂದ. ॥೨೩॥

**ಪ್ರತಿಪದಾರ್ಥ:**

**ವಸುಗಳೆಂಟು** = ದ್ರೋಣಾದಿ ವಿಭಾವಸುಪರ್ಯಂತ ಎಂಟು ಮಂದಿ ವಸುಗಳು. **ನವಪ್ರಜೇಶರು** = ದಕ್ಷಾದಿ ಬ್ರಹ್ಮಪುತ್ರರಾದ ೯ ಮಂದಿ ಪ್ರಜಾಪತಿ ಗಳು, **ಶ್ವಸನಗಣವ್ನೈವತ್ತು** = ಮುಖ್ಯ ಪ್ರಾಣರನ್ನು (ಇಂದ್ರ), ಸೇರಿಸಿಕೊಂಡು ೪೯ ಮಂದಿ ಮರುದ್ಗಣ. ಅಂದರೆ ಐವತ್ತು ಮರುತ್ತರು, **ಏಕಾದಶ ದಿವಾಕರರು** = ಉರುಕ್ರಮನಾಮಕ ಶ್ರೀಪರಮಾತ್ಮನನ್ನು ಬಿಟ್ಟು ಉಳಿದ ಹನ್ನೊಂದು ಮಂದಿ ಸೂರ್ಯಗಣ, **ಅನಿತು** = ಅಷ್ಟೇ ಸಂಖ್ಯೆಯಲ್ಲಿ, ಅಂದರೆ ೧೧ ಮಂದಿ, **ರುದ್ರರು** = ರುದ್ರ ಗಣ (ಏಕಾದಶರುದ್ರರು), **ಅಶ್ವಿನಿ ಗಳೆರಡು** = ಅಶ್ವಿನೀ ದೇವತೆಗಳು ಇಬ್ಬರಾದರೂ, ಅವಳಿ ಜವಳಿಗಳಾದ್ದ ರಿಂದ ಒಂದು ಗುಂಪಾಗಿ ಪರಿಗಣಿಸಿದೆ. **ದಶಹೀನ ಶತಾಖ್ಯ** = ಪೂರ್ವೋಕ್ತ ದೇವತಗಳ ಸಂಖ್ಯೆಯನ್ನು ಕೂಡಿಸಲಾಗಿ ತೊಂಭತ್ತು ಆಗುವುದು, ಅಂದರೆ ದಶವಿಹೀನ – ಹತ್ತು ಕಡಿಮೆಯಾದ, ಶತ–ನೂರು. ಅಂದರೆ ೯೦. ಆಖ್ಯ– ಸಂಖ್ಯಾತರಾದ. **ಈ ಸಮುನಸರೊಳಗೆ** = ಮೇಲಿನ ೯೦ ಮಂದಿ ದೇವತೆ ಗಳಲ್ಲಿ, **ಚತುರಾತ್ಮ** = ಅನಿರುದ್ಧ, ಪ್ರದ್ಯುಮ್ನ. ಸಂಕರ್ಷಣ ಮತ್ತು ವಾಸು ದೇವ ಎಂಬ ನಾಲ್ಕು ರೂಪಗಳಿಂದ, **ಬ್ರಹ್ಮ** = ಚತುರ್ಮುಖ ಬ್ರಹ್ಮ ದೇವರು, **ಸಮೀರ** = ಮುಖ್ಯ ಪ್ರಾಣದೇವರು, **ಖಗಪ** = ಪಕ್ಷಿರಾಜ ರಾದ ಗರುಡ ದೇವರು. **ಫಣೀಂದ್ರ** = ಸರ್ಪಶ್ರೇಷ್ಠರಾದ ಶೇಷದೇವರು **ಒಳಗಿದ್ದು** = ಇವರಲ್ಲಿ ಅಂತರ್ಯಾಮಿ ರೂಪದಿಂದಿದ್ದು, **ನಿಯಾಮಿಸುವ** = ಸಕಲ ವ್ಯಾಪಾರಗಳನ್ನೂ ನಿಯಮನ ಮಾಡುತ್ತಾನೆ. ॥೨೭॥

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ**

ಪೂರ್ವೋಕ್ತ ಸಂಗತಿಯೇ ಹೇಳತಾರೆ.

ವಸುಗಳೆಂಟು-ಅಗ್ನಿ ಮೊದಲಾದ ಅಷ್ಟವಸುಗಳು, ನವಪ್ರಜೇಶರು-ದಕ್ಷಾದಿ ಒಂಭತ್ತು ಪ್ರಜೇಶರು, ಏಕಾದಶ ದಿವಾಕರ-ಉರುಕ್ರಮನಾಮಕ ಸೂರ್ಯ ಸಾಕ್ಷಾತ್ ಪರಮಾತ್ಮ ಹೊರತು, ವಿವಸ್ವಾದಿ ಸೂರ್ಯರು ಹನ್ನೊಂದು ಮಂದಿಗಳು, ಅನಿತು ರುದ್ರರು-ಸೂರ್ಯರು ಎಷ್ಟು ಸಂಖ್ಯಾನೋ ಅಷ್ಟು ಮಂದಿ ರುದ್ರರು, ಎಂದರೆ ಏಕಾದಶ ರುದ್ರರು, ಶ್ವಸನಗಣ ಐವತ್ತು-ಮರುದ್ಗಣ ಐವತ್ತು ಮಂದಿ, ಅಶ್ವಿನಿಗಳೆರಡು-ಅಶ್ವಿನಿದೇವತೆಗಳು ಇಬ್ಬರು ಇದ್ದಾಗ್ಯೂ ಒಂದೇ ಎಂತ ಲೆಕ್ಕಮಾಡಬೇಕು. ದಶವಿಹೀನಶತಾಖ್ಯ - ಹತ್ತು ಕಡಿಮೆ ನೂರು ಎಂದರೆ ತೊಂಭತ್ತು ಎಂತ ಅರ್ಥ, ಈ ತೊಂಭತ್ತು ಮಂದಿ ಪ್ರಸಿದ್ಧರಾದ ತತ್ತ್ವಾಭಿಮಾನಿಗಳೆಂದು ತಾತ್ಪರ್ಯ ಬ್ರಹ್ಮದೇವರು ಆದಿಕಕ್ಷಾದವರು ಈ ೯೦ ಮಂದಿ ತತ್ತ್ವಾಭಿಮಾನಿಗಳೊಳಗೆ ಅಂತ್ಯಕಕ್ಷಾದವರು ತದನ್ಯರು ಕರ್ಮಜರು, ಅಜಾನಜರು ಎಂತ ಕರಿಸತಾರೆ, ಖಗಪ-ಪಕ್ಷಿಶ್ರೇಷ್ಠನಾದ ಗರುಡದೇವರು, ಫಣೀಂದ್ರ-ಸರ್ಪಶ್ರೇಷ್ಠನಾದ ಶೇಷದೇವರು. ಬ್ರಹ್ಮ ಸಮೀರರೊಳಗಿದ್ದು - ಈ ಗರುಡ ಶೇಷಾದಿಗಳಲ್ಲಿ ಬ್ರಹ್ಮವಾಯುಗಳು ನಿಯಾಮಕರಾಗಿದ್ದು, ಈ ಸ್ಥೂಲದೇಹದಲ್ಲಿ, ಈ ಸುಮನಸರೊಳಗೆ - ಈ ದೇವತೆಗಳ ಒಳಗೇನು, ತದನ್ಯರಾದ ದೇವಗಂಧರ್ವರ ಪರಿಯಂತ ದೇವತೆಗಳ ಒಳಗೇನು, ವಿದ್ಯಮಾನ ಗಳಾದ ಜ್ಞಾನೇಚ್ಛಾಕ್ರಿಯಾಶಕ್ತಿಗಳಲ್ಲಿ, ಚತುರಾತ್ಮ-ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಈ ನಾಲ್ಕು ರೂಪದಿಂದ ಯುಕ್ತನಾಗಿ, ಶ್ರೀ ಪರಮಾತ್ಮ ಜ್ಞಾನೇಚ್ಛಾದಿ ನಾಲ್ಕರಲಿ ತತ್ತನ್ನಾಮದಿಂದ ಇದ್ದು, ನೀಯಾಮಿಸುವ - ಪ್ರೇರಣೆ ಮಾಡೋವನಾಗಿದ್ದಾನೆ ಎಂತ ತಾತ್ಪರ್ಯ ॥೨೭॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ

ಅನಿರುದ್ಧಾದಿ ನಾಲ್ಕು ರೂಪಗಳುಳ್ಳ ಪರಮಾತ್ಮನು ವಸ್ವಾದಿ ೯೦ ದೇವತೆಗಳೊಳಗೆ ಪ್ರೇರಕನಾಗಿರುವನೆಂದು ಹೇಳುತ್ತಾರೆ.

ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು, ವಿಭಾವಸು ಎಂದು ೮ ಮಂದಿ ವಸುಗಳು. ಪ್ರಜೇಶರು ೯ ಮಂದಿಗಳು. ಮರುದ್ಗಣಗಳು ೪೯ ಮಂದಿ. **ಇಂದ್ರದೇವರು** ಒಬ್ಬರನು ಸೇರಿಸಿದರೆ

ಮಂದಿಗಳು. ಸೂರ್ಯರು ೧೧ಮಂದಿಗಳು ದ್ವಾದಶಾದಿತ್ಯೈರಪ್ಯೈಕಿ ಉರು ಕ್ರಮನೆಂಬ ಸೂರ್ಯನು ಪರಮಾತ್ಮನ ಅವತಾರವೇ ಆದುದರಿಂದ ಆ ಸೂರ್ಯನನ್ನು ಬಿಟ್ಟು ೧೧. ಮಂದಿಯನ್ನು ತೆಗೆದುಕೊಂಡರು. ಅಷ್ಟೇ ರುದ್ರರು ಎಂದರೆ, ರುದ್ರಗಣ ೧೧, ಅಶ್ವಿನೀದೇವತೆಗಳಿಬ್ಬರು. ಅಂತೂ ೯೧ ದೇವತೆಗಳು ಪದ್ಯದಲ್ಲಿ ದಶವಿಹೀನಶತ–೧೦ ಕಡಿಮೆ ನೂರು ಎಂದರೆ. ೯೦ ಎಂದು ಹೇಳಿರುವರು. ಇದರ ವ್ಯತ್ಯಾಸ ಪರಿಹಾರ ಹೇಗಂದರೆ ಅಶ್ವಿನೀ ದೇವತೆಗಳು ಕುದುರೇಮೂಗಿನ ದೆಶೆಯಿಂದ ಒಂದೇ ಕಾಲದಲ್ಲಿ ಇಬ್ಬರೂ ಹುಟ್ಟಿ ಒಂದೇ ಹೆಸರಿನಿಂದ ಇಬ್ಬರೂ ಒಂದಾಗಿ ಇರವುದರಿಂದ ಆ ದೇವತೆಗಳನ್ನು ಒಬ್ಬರನ್ನಾಗಿ ಸಂಖ್ಯೆಗೆ ತೆಗೆದುಕೊಂಡಿರುವರು. ಆದ್ದರಿಂದ ೯೦ ದೇವತೆಗಳೆಂದು ಹೇಳಿದರು. ಶ್ರೀ ಹರಿಯು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವರೂಪಗಳಿಂದ ಬ್ರಹ್ಮ, ವಾಯು, ಗರುಡ, ಶೇಷರೆಂಬ ನಾಲ್ವರಲ್ಲಿದ್ದು ಮೇಲಿನ ೯೦ ದೇವತೆಗಳಲ್ಲಿ ಪ್ರವೇಶಮಾಡಿ ಕಾರ್ಯಪ್ರೇರಕನಾಗಿರುವನು. ॥೨೭॥

(೩) ಭಾವದರ್ಪಣ ಟೀಕಾ ವ್ಯಾಖ್ಯಾನ

**"ಚತುರ್ಭಿಃಸಾಕಂ ನವತಿಂ ಚ ನಾಮಭಿಶ್ಚಕ್ರಂವೃತ್ತಮ್ ವ್ಯತೀ ಚೌರವೀವಿಪತ್"–**

ಎಂಬೋ ಶ್ರುತಿಯನ್ನು ಮನಸ್ಸಿನಲ್ಲಿಟ್ಟು ೯೦ ಜನದೇವತೆಗಳನ್ನು ನಿಯಮನ ಮಾಡುತ್ತಾರೆಂದು ಹೇಳುತ್ತಾರೆ "ವಸ್ವೇತಿ"॥

ಎಂಟು ಮಂದಿ ವಸುಗಳು ಎಂಬರ್ಥ;-

**"ದ್ರೋಣೋ ಪ್ರಾಣೋ ಧ್ರುವೋಽರ್ಕೋ ಅಗ್ನಿರ್ದೋಷಾ ವಸು ವಿಭಾ ವಸುರಿತಿ "॥**

ನವ ಪ್ರಜೇಶರ ನಾಮ ಹೇಳುತ್ತಾರೆ :—

**"ಮರೀಚಿರತ್ಯಂಗೀರಸಃ ಪುಲಸ್ತ್ಯಃ ಪುಲಹಃ ಕ್ರತುಃ। ಭೃಗುರ್ವಸಿಷ್ಠೋ ದಕ್ಷಶ್ಚೇತ್ಯುಕ್ತೇಃ॥"**

ಮರುತ್ತುಗಳ ನಾಮ ಹೇಳುತ್ತಾರೆ

**"ಸಜೂರಿಂದ್ರೇಣ ಪಂಚಾಶದೇವಾಸ್ತೇ ಮರುತೋಽಭವತ್"॥**

-ಎಂಬ ಷಷ್ಠಸ್ಕಂಧೋಕ್ತರೀತ್ಯಾ ಇಂದ್ರನಿಂದ ಕೂಡಿ ಪಂಚಾಶನ್ಮರುತ್ತಗಳೆಂದು ಹೇಳಿದ ಕಾರಣ ೫೦ ಮಂದಿ ಮರುತ್ತಗಳೇ ಸಿದ್ಧ. ಇವರೆಲ್ಲಾ ಒಟ್ಟಿಗೇ ಗಣನೆ ಮಾಡೋದರಲ್ಲಿ ೯೧ ಮಂದಿ ಆಗುತ್ತಾರೆ. ತೊಂಭತ್ತೇ ಜನರು ಹೇಗೆ ಆಸುತ್ತಾರೆಂದರೆ ಸಮಾಧಾನ-

**"ಚತುರ್ಭಿಃ ಸಾಕಂ ನವಂತಿಂ ಚ ನಾಮಭಿಃ ॥"**

**-ಎಂಬ ಶ್ರುತಿವ್ಯಾಖ್ಯಾನಾವಸರದಲಿ ಶರ್ಕರಾ ಶ್ರೀನಿವಾಸತೀರ್ಥರಿಂದ**

**"॥ಅತ್ರಾಶ್ವಿನೋರೇಕತ್ವಂ ಬೋಧ್ಯಮ್ ॥"**

ಎಂತ ಹೇಳಲ್ಪಟ್ಟಿರುವುದರಿಂದ ಇಲ್ಲೀನೂ ಅಶ್ವಿನಿದೇವತೆಗಳು ಒಬ್ಬರಂತೇ ಗ್ರಹಿಸಬೇಕು ॥೨೭॥

### (೩) ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

"ವಸ್ವೇತಿ"॥ "ಚತುರ್ಭಿಃ ಸಾಕಂ ನವಂತಿ ಚ"- ಇತಿ ಶ್ರುತೇಃ॥
"ಬ್ರಹ್ಮಾದಿ ದಶೈವಂ ಶತಾತ್ಮಾ"-ಇತಿ ತಾತ್ಪರ್ಯೇ ॥೨೭॥

**ಕನ್ನಡಾರ್ಥ:**

ವಸು ಮೊದಲಾದ ೯೦ ದೇವತೆಗಳಲ್ಲಿ (ನವಂತಿ)ಇರುವ ಭಗವದ್ರೂಪಗಳಿಗೆ **ಚತುರ್ಭಿಃ** ಎಂಬ ಶ್ರುತಿಯು ಆಧಾರವಾಗಿದೆ. ವಸುಗಳು (೮) ಆದಿತ್ಯರು (೧೧) ರುದ್ರಗಣ (೧೧), ಪ್ರಜಾಪತಿಗಳು (೯) ಮರುತ್ತರು ಹಾಗೂ ವಾಯು (೫೦) ಮತ್ತು ಅಶ್ವಿನೀದೇವತೆಗಳು (೧) ಹೀಗೆ ಒಟ್ಟು ೯೦ ದೇವತೆ

ಗಳಲ್ಲಿ, ಬ್ರಹ್ಮ, ವಾಯು, ಗರುಡ ಮತ್ತು ಶೇಷರಲ್ಲಿ ನಿಂತು ಅವರ ದ್ವಾರಾ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ರೂಪಚತುಷ್ಟಯಗಳಿಂದ ನಿಯಾಮಕನಾಗಿದ್ದಾನೆ. ॥೨೭॥

## (೪) ಶ್ರೀಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಕಾಲಾಭಿಮಾನಿ ವಸ್ವಾದಿ ತ್ತೊಂಭತ್ತು ಮಂದಿ ದೇವತೆಗಳಲ್ಲಿ, ವಾಸುದೇವಾದಿ ಚತುರ್ಮೂರ್ತಿ ನಿಯಮನ ಸ್ಮರಣೋಪಾಸನೆ ತಿಳಿಸುತ್ತಾರೆ– "ವಸುಗಳೆಂದು". ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು ಮತ್ತು ವಿಭಾವಸು, ಎಂಬ ವಸುಗಳು (೮), ಮರೀಚಿ, ಅತ್ರಿ ಆಂಗೀರಸ, ಪುಲಸ್ತ್ಯ, ಪುಲಹ, ವಸಿಷ್ಠ, ಕ್ರತು, ದಕ್ಷ, ಭೃಗು ಸಹ ೯ ಮಂದಿ ಪ್ರಜೇಶ್ವರರು, ಶ್ವಸನಗಣ ಎಂಬ ಹೆಸರುಳ್ಳ ೪೯ ವಾಯುಗಳು, ಮುಖ್ಯ ವಾಯು ಸೇರಿ ೫೦, ದ್ವಾದಶಾದಿತ್ಯರಲ್ಲಿ ವಿಷ್ಣುವನ್ನು ಬಿಟ್ಟು ಉಳಿದ ಮಂದಿ ಸೂರ್ಯರು, ೧೧ ಮಂದಿ ರುದ್ರರು ಅಶ್ವಿನೀಇಬ್ಬರು ಸಹ, ಈ ದಶವಿಹೀನಶತ ಎಂಬ ೯೦ ದೇವತೆಗಳಲ್ಲಿ, ಬ್ರಹ್ಮ, ವಾಯು, ಶೇಷ, ಗರುಡರೆಂಬ ಈ ಮುಖ್ಯ ನಾಲ್ವರಲ್ಲಿದ್ದು, ವಾಸುದೇವಾದಿ ಅನಿರುದ್ಧಾಂತ ಚತುರ್ಮೂರ್ತಿಯಾದ ದೇವರು ನಿಯಾಮಕನಾಗಿರುವನು.

## ಪ್ರಮಾಣ– ಶ್ರುತಿ

"ಚತುರ್ಭಿಸ್ಸಾಕಂ ನಹತಿಂ ಚ ನಾಮಭಿಶ್ಚಕ್ರಂನ್ನವೃತ್ತಂ ವ್ಯತೀಂ ಜ್ಞೋಪವಿತಾ॥"

-ಎಂಬ ಶ್ರುತ್ಯರ್ಥ ಇದರಿಂದ ವಿವರಿಸಿತು ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವಪದ್ಯದಲ್ಲಿ ಕ್ಷೀರಾದಿ ನಾಲ್ಕು ಪದಾರ್ಥಗಳಲ್ಲಿ ಸೌರಭ ರಸಾಹ್ವಯನೆನಿಸಿದ ಶಾಂತೀಪತಿ ಅನಿರುದ್ಧನು ಜ್ಞಾನ ಇಚ್ಛಾ ಕ್ರಿಯಾ ಮತ್ತು ಶಕ್ತಿ

ಎಂಬ ನಾಲ್ಕು ನಾಮಗಳಿಂದ ಶಬ್ದವಾಚ್ಯನಾಗಿದ್ದು, ಬ್ರಹ್ಮ, ವಾಯು, ವಾಗ್ದೇವಿ ಮತ್ತು ಭಾರತೀದೇವಿಯರಲ್ಲಿ ಸತತ ಸನ್ನಿಹಿತನಾಗಿದ್ದು, ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನೆಂದು ತಿಳಿಸಿ, ಪ್ರಸಕ್ತ ೨೭ನೆಯ ಪದ್ಯದಿಂದ ವಸ್ವಾದಿ ಅಶ್ವಿನೀದೇವತೆಗಳ ಪರ್ಯಂತ ೯೦ ಸಂಖ್ಯಾಕವಾದ ದೇವತೆಗಳಲ್ಲಿ ಅನಿರುದ್ಧಾದಿ ವಾಸುದೇವಪರ್ಯಂತ ಚತುರ್ಮೂರ್ತ್ಯಾತ್ಮಕನಾಗಿ ಬ್ರಹ್ಮ ಸಮೀರ ಖಗ ಫಣೀಂದ್ರರಲ್ಲಿದ್ದು ನಿಯಾಮಕನಾಗಿರುವನೆಂದು ವಿವರಿಸುತ್ತಾರೆ.

೧. **ವಸುಗಳೆಂಟು**

ವಸುಗಣದ ಸಂಖ್ಯೆ ಎಂಟು. ಇದರಿಂದ ಈ ಗಣಕ್ಕೆ **ಅಷ್ಟವಸು**ಗಳೆಂದು ಹೆಸರು, ಈ ೮ ಮಂದಿ ವಸುಳ ಗಹೆಸರು ಇಂತಿದೆ:-

೧. ದ್ರೋಣ ೨. ಪ್ರಾಣ ೩. ಧ್ರುವ ೪. ಅರ್ಕ ೫. ಅಗ್ನಿ ೬. ದೋಷ ೭. ವಸು ಮತ್ತು ೮. ವಿಭಾವಸು-ಎಂದು ೮ ಮಂದಿ ವಸುಗಳು ಪ್ರಸಿದ್ಧರಾಗಿದ್ದಾರೆ.

**ಪ್ರಮಾಣ :**

**"ದ್ರೋಣೋ ಪ್ರಾಣೋ ಧ್ರುವೋಽರ್ಕೋ ಅಗ್ನಿರ್ದೋಷಾ ವಸು ವಿಭಾವಸುರಿತಿ ||"**

೨. **ನವಪ್ರಜೇಶರು :-**

ಬ್ರಹ್ಮಪುತ್ರರಾದ ಒಂಭತ್ತು ಮಂದಿ ಪ್ರಜಾಪತಿಗಳು. ಇವರ ಹೆಸರುಗಳು ಇಂತಿವೆ.

೧. ಮರೀಚಿ ೨. ಅತ್ರಿ ೩. ಅಂಗೀರಸ ೪. ಪುಲಸ್ತ್ಯ ೫. ಪುಲಹ ೬. ಕ್ರತು ೭. ಭೃಗು ೮. ವಸಿಷ್ಠ ಮತ್ತು ೯. ದಕ್ಷ ಈ ರೀತಿ ೯ ಮಂದಿ ಪ್ರಜೇಶ್ವರರು.

ಪ್ರಮಾಣ

"ಮರೀಚಿರತ್ಯಂಗೀರಸಃ ಪುಲಸ್ತ್ಯಃ ಪುಲಹಃ ಕ್ರತುಃ। ಭೃಗು ರ್ವಸಿಷ್ಠೋ ದಕ್ಷಶ್ಚೇತ್ಯುಕ್ತೇಃ॥"

೩. ಶ್ವಸನಗಣವೈವತ್ತು

ಮರುರ್ಗಣಗಳ ಸಂಖ್ಯೆ ೪೯. ಇಂದ್ರದೇವರು ದಿತಿಯ ಗರ್ಭವನ್ನು ಮೊದಲು ಏಳು ತದನಂತರ ಏಳು ತುಂಡುಗಳಾಗಿ ವಿಭಾಗಿಸಿದಾಗ, ಉತ್ಪನ್ನ ರಾದವರೇ ೪೯ ಮಂದಿ ಮರುತ್ತುಗಳು, ಇವರಿಗೆ ಶ್ವಸನಗಣವೆಂತಲೂ ಹೆಸರು. ಈ ೪೯ ಮಂದಿ ಮರದ್ಗಣಗಳ ಹೆಸರು ಇಂತಿದೆ,

೧. ಪ್ರಾಣ ೨. ಅಪಾನ ೩. ವ್ಯಾನ ೪. ಉದಾನ ೫. ಸಮಾನ ೬. ನಾಗ ೭. ಕೃಕಲ ೮. ಕೂರ್ಮ ೯. ದೇವದತ್ತ ೧೦. ಧನಂಜಯ ೧೧. ಆವಹ ೧೨. ಪರಾವಹ ೧೩. ಉದ್ವಹ ೧೪. ಸಂವಹ ೧೫. ಸಂಯುವ ೧೬. ವಿವಹ ೧೭. ಶಂಕು ೧೮. ಕಾಲ ೧೯. ಶ್ವಾಸ ೨೦. ನಿಲ ೨೧. ನಲ ೨೨. ಪ್ರತಿಭವ ೨೩. ಕುಮುದ ೨೪. ಕಾಂತ ೨೫. ಶಚಿ ೨೬. ಸ್ವೇದ ೨೭. ಜಿತ ೨೮. ಗುರು ೨೯. ಜಂದು ೩೦. ಸಂವರ್ತ ೩೧. ಕೀಲಹ ೩೨. ಶತ ೩೩. ಸೌಮ್ಯ ೩೪. ಕವಿ ೩೫. ಜಡ ೩೬. ಮಂಡೂಕ ೩೭. ಸಂಹುತ ೩೮. ಸಿಂದು ೩೯. ರಕ್ತನಾಮಾ ೪೦. ಕೃಷ್ಟ ೪೧. ಕಪಿ ೪೨. ಶುಕ ೪೩. ಯತಿ ೪೩. ಭೀವ ೪೫. ಹನೂಹ ೪೬. ಪಿಂಗಳ ೪೭. ಕಪನ ೪೮. ಪ್ರವಹ ವಾಯು ಮತ್ತು ೪೯. ಅಹಂಕಾರಿಕ ಪ್ರಾಣ

ಪೂರ್ವೋಕ್ತ ೪೯ ಮಂದಿ ಮರುತ್ತುಗಳೊಡನೆ ಇಂದ್ರನೂ ಸೇರಿದರೆ ೫೦ ಆಗುವುದು. ಈ ಸಂಖ್ಯೆಯನ್ನೇ ದಾಸರಾಯರ ಶ್ವಸನಗಣವೈವತ್ತು ಎಂದಿದ್ದಾರೆ.

**ಪ್ರಮಾಣ :-**

**"ಸಜೂರಿಂದ್ರೇಣ ಪಂಚಾಶದೇವಾಸ್ತೇ ಮರುತೋऽಭವತ್"॥ ಶ್ರೀಮದ್ಭಾಗವತ ಷಷ್ಠ ಸ್ಕಂಧೋಕ್ತ ಪ್ರಮಾಣರೀತ್ಯಾ.**

**ವಿಚಾರಾಂಶ :—**

೧, ಪ್ರಸಿದ್ಧ ೪೯ ಮರುದ್ಗಣಗಳೊಡನೆ **ಮುಖ್ಯಪ್ರಾಣದೇವರು** ಸೇರಿ, ೫೦ ಮಂದಿ ಎಂದು ಪರಿಗಣಿಸಬೇಕೆಂದು ಕೆಲವು ವ್ಯಾಖ್ಯಾನಗಳಲ್ಲಿ ಬಂದಿದೆ,

೨. ಆದರೆ ಇದೇ ಪದ್ಯದ ಉತ್ತರಾರ್ಧದಲ್ಲಿ **ಸಮೀರನೊಳಗಿದ್ದು** ಎಂಬ ಶಬ್ದ ಪ್ರಯೋಗವಿರುವುದರಿಂದ, 'ಸಮೀರ'-ಎಂದರೆ ಭಾರತೀರಮಣ ರಾದ ಶ್ರೀಮುಖ್ಯ ಪ್ರಾಣದೇವರು ಎಂದರ್ಥ, ಇದರಿಂದ ಮುಖ್ಯಪ್ರಾಣ ರನ್ನು ಸೇರಿಸದೆ, ಇಂದ್ರನನ್ನು ಸೇರಿಸಿ ಪರಿಗಣಿಸುವುದು ಸೂಕ್ತವು.

೩. **ಇಂದ್ರನೆಂದು ಶ್ರೀಮದ್ಭಾಗವತ ಷಷ್ಠಸ್ಕಂಧ ಪ್ರಮಾಣ ವಾಕ್ಯವೂ ಸಹ ಇದೆ.** ಇದರಿಂದ ಶ್ರೀಮುಖ್ಯಪ್ರಾಣರನ್ನು ೫೦ ಸಂಖ್ಯೆ ಯಲ್ಲಿ ಸೇರಿಸಿಲ್ಲ.

**೪. ಏಕಾದಶ ದಿವಾಕರರು :-**

ಸೂರ್ಯಗಣದ ಸಂಖ್ಯೆ ೧೨, ಇದರಿಂದ ಈ ಗಣಕ್ಕೆ **ದ್ವಾದಶಾ ದಿತ್ಯರೆಂದು ಹೆಸರು.** ಆದರೆ ಈ ೧೨ ಮಂದಿ ಸೂರ್ಯರಲ್ಲಿ **ಉರುಕ್ರಮ ನಾಮಕ ಸೂರ್ಯನು ಶ್ರೀಪರಮಾತ್ಮನ ಅವತಾರನು.** ಇದನ್ನು ಬಿಟ್ಟರೆ ೧೧ ಮಂದಿ ಸೂರ್ಯರನ್ನು ಪರಿಗಣಿಸಬೇಕೆಂದು ತಾತ್ಪರ್ಯ.

ಈ ೧೧ ಮಂದಿ ಆದಿತ್ಯರ ಹೆಸರುಗಳು ಇಂತಿವೆ :-

೧. ಪುರಂದರ. ೨. ಮಿತ್ರ. ೩. ವರುಣ. ೪. ಪರ್ಜನ್ಯ. ೫. ವಿವಸ್ವಾನ್. ೬. ಆರ್ಯಮಾ. ೭. ತ್ವಷ್ಟಾ. ೮. ಭಗ. ೯. ಪೂಷಾ. ೧೦. ಸವಿತೃ ಮತ್ತು ೧೧. ಧಾತೃ ಎಂಬ ೧೧ ಮಂದಿ ದಿವಾಕರರು,

ಅಷ್ಟೇಸಂಖ್ಯೆಯಲ್ಲಿ (ಅನಿತು) ರುದ್ರಗಣ. ಅಂದರೆ ೧೧ ಮಂದಿ ರುದ್ರರು, ಇವರು **ಏಕಾದಶರುದ್ರರೆಂದು ಪ್ರಸಿದ್ಧ.**

**೫. ಅನಿತು ರುದ್ರರು :-**

ಈ ೧೧ ಮಂದಿ ರುದ್ರರ ಹೆಸರು ಇಂತಿದೆ ;-

೧. ರೈವತ. ೨. ಓಜ ೩. ಭವ. ೪. ಭೀಮ. ೫. ವಾಮ. ೬. ಉಗ್ರ. ೭. ವೃಷಾಕಪಿ. ೮. ಅಜೈಕಪಾತ್ ೯. ಅಹಿರ್ಬುಧ್ನ್ಯ. ೧೦. ಬಹುರೂಪ. ಮತ್ತು ೧೧. ರುದ್ರ,

**೬. ಅಶ್ವಿನಿಗಳೆರಡು :—**

ಅಶ್ವಿನೀದೇವತೆಗಳು ಇಬ್ಬರು. ಅವರು ಅವಳಿ ಜವಳಿಗಳು. ೧. ನಾಸತ್ಯ ಮತ್ತು ೨. ದಸ್ರ ಎಂದು ಇಬ್ಬರು ದೇವತೆಗಳು ಕದುರೆಯ ಮೂಗಿನಿಂದ ಏಕಕಾಲದಲ್ಲಿ ಉತ್ಪನ್ನರಾದರು. ಇದರಿಂದ ಇವರಿಗೆ **ಅಶ್ವಿನೀದೇವತೆಗಳೆಂದು ಹೆಸರು ಬಂದವು** (ಅಶ್ವ-ಕುದುರೆ. **ಅಶ್ವಿನೀ-ತತ್ಸಂಬಂಧೀ**) ಇವರು ದೇವವೈದ್ಯರು. ವನಸ್ಪತಿ ಔಷಧಿಗಳ ಅಭಿಮಾನಿಗಳು. ನಾಸಿಕೇಂದ್ರಿಯಾಭಿಮಾನಿಗಳು, ಗಂಧಗುಣಗ್ರಾಹಕರು. ಅವಳಿ ಜವಳಿಗಳಾದ್ದರಿಂದ ಇಬ್ಬರಿದ್ದರೂ, ಒಂದೇ ಎಂದು ಪರಿಗಣಿಸಲಾಗಿದೆ,

**೭. ದಶವಿಹೀನ ಶತಾಖ್ಯ ಈ ಸುಮನಸರೊಳಗೆ**

ಶತ-ಎಂದರೆ ೧೦೦. ದಶ ವಿಹೀನ-ಎಂದರೆ ಅದಕ್ಕೆ ೧೦ ಕಡಿಮೆ. ಅಂದರೆ ೧೦೦ ರಲ್ಲಿ ೧೦ ನ್ನು ಕಳೆದರೆ. ಶೇಷಸಂಖ್ಯೆ = ೯೦, ಇದನ್ನೇ ದಾಸ

ರಾಯರು **ದಶನಿಹೀನ ಶತಾಖ್ಯ**-ಎಂದಿದ್ದಾರೆ. ಈ ೯೦ ಸಂಖ್ಯಾಕವಾದ ದೇವತೆಗಳ ವಿವರ ಹೀಗಿದೆ :-

| ಕ್ರಮ ಸಂಖ್ಯೆ | ೯೦ ಮಂದಿ ದೇವತೆಗಳು | ಸಂಖ್ಯೆ |
|---|---|---|
| ೧. | ವಸುಗಣ | ೮ |
| ೨. | ಪ್ರಜೇಶರು | ೯ |
| ೩. | ಶ್ವಸನಗಣ (ಇಂದ್ರ ಸಹಿತ) | ೫೦ |
| ೪. | ಆದಿತ್ಯಗಣ (ಉರುಕ್ರಮ ಬಿಟ್ಟು) | ೧೧ |
| ೫. | ರುದ್ರಗಣ | ೧೧ |
| ೬. | ಅಶ್ವಿನೀದೇವತೆಗಳು | ೧ |
| | ಒಟ್ಟು ಸಂಖ್ಯೆ | ೯೦ |

೮. ಇಂತು, ೯೦ ಮಂದಿ ದೇವತಾಗಣದಲ್ಲಿ (**ಈ ಸುಮನಸರೊಳಗೆ**) ಶ್ರೀಪರಮಾತ್ಮನು ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಮತ್ತು ವಾಸುದೇವ ಎಂಬ ನಾಲ್ಕು ರೂಪಗಳಿಂದ ವಿದ್ಯಮಾನನಾಗಿದ್ದಾನೆ. (**ಚತುರಾತ್ಮ**)

೯. ಅನಿರುದ್ಧಾದಿ ವಾಸುದೇವ ಪರ್ಯಂತ ಚತುರ್ಮೂರ್ತ್ಯಾತ್ಮಕನಾಗಿ ಬ್ರಹ್ಮ, ವಾಯು, ಗರುಡ ಮತ್ತು ಶೇಷದೇವರಲ್ಲಿ ಅಂತಸ್ಥಿತನಾಗಿದ್ದು ಪೂರ್ವೋಕ್ತ ೯೦ ಮಂದಿ ದೇವತೆಗಳಿಗೆ ನಿಯಾಮಕನಾಗಿದ್ದಾನೆ. **(ನೀಯಾಮಿಸುವ ಬ್ರಹ್ಮ ಸಮೀರ ಖಗ ಫಣೀಂದ್ರರೊಳಗಿದ್ದು)**

೧. ಚತುರ್ಮುಖಬ್ರಹ್ಮದೇವರಲ್ಲಿ(**ಬ್ರಹ್ಮ**) **ಅನಿರುದ್ಧ ರೂಪದಿಂದ**

೨. ಮುಖ್ಯಪ್ರಾಣರಲ್ಲಿ **(ಸಮೀರ) ಪ್ರದ್ಯುಮ್ನರೂಪದಿಂದ**

೩. **ಪಕ್ಷಿರಾಜರಾದ ಗರುಡದೇವರಲ್ಲಿ (ಖಗಪ) ಸಂಕರ್ಷಣ ರೂಪದಿಂದ**

೪. **ಸರ್ಪಶ್ರೇಷ್ಠರಾದ ಶೇಷದೇವರಲ್ಲಿ (ಫಣೀಂದ್ರ) ವಾಸುದೇವ ರೂಪದಿಂದ**

ವಿರಾಜಮಾನನಾಗಿದ್ದು ಅವರ ದ್ವಾರಾ, ಅವರಿಗಿಂತ ಅವರರಾದ ಪೂರ್ವೋಕ್ತ ೯೦ ದೇವತಾಗಣದಲ್ಲಿ ಅಂತರ್ಯಾಮಿಯಾಗಿದ್ದು ಸಕಲ ವ್ಯಾಪಾರಗಳಿಗೂ ನಿಯಾಮಕನಾಗಿದ್ದಾನೆ ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾಭಿಪ್ರಾಯವು. ॥೨೭॥

## ಪದ್ಯ ೨೮

**ಮೂಲ**

**ತೋರುತಿಪ್ಪನು ಚಕ್ರದಲಿ ಹಿಂ।**
**ಕಾರನಾಮಕ ಶಂಖದಲಿ ಪ್ರತಿ।**
**ಹಾರ ಗದೆಯಲಿ ನಿಧನ ಪದ್ಮದಲಿಪ್ಪ ಪ್ರಸ್ತಾವ ॥**
**ಕಾರುಣಿಕನುದ್ಗೀಥ ನಾಮದಿ।**
**ವಾರವಾಣನ್ಯೆರೂಪಗಳ ಶಂ।**
**ಖಾರಿ ಮೊದಲಾದಾಯುಧಗಳೊಳು ಸ್ಮರಿಸಿ ಧರಿಸುತಿರು॥ ॥೨೮॥**

**ಅವತರಣಿಕೆ–**

ಶಂಖ, ಚಕ್ರ, ಗದಾ, ಪದ್ಮ ಮತ್ತು ನಾರಾಯಣ ಎಂಬ ಪಂಚ ಮುದ್ರೆಗಳಲ್ಲಿ ಅಂತಯೇ ಆ ಪಂಚಾಯುಧಗಳಲ್ಲಿ ವಿದ್ಯಮಾನನಾಗಿರುವ ಶ್ರೀಪರಮಾತ್ಮನ ಹಿಂಕಾರ, ಪ್ರತಿಹಾರ, ನಿಧನ, ಪ್ರಸ್ತಾವ ಮತ್ತು

ಉದ್ಗೀಥ ಎಂಬ ಪಂಚನಾಮಗಳು, ಆ ಭಗವದ್ರೂಪಗಳ ಸ್ಮರಣಪೂರ್ವಕ ಪಂಚಮುದ್ರೆಗಳ ಧಾರಣಕ್ರಮ ಈ ವಿವರಗಳನ್ನು ತಿಳಿಸುತ್ತಾರೆ – **ತೋರು ತಿಪ್ಪನು**–ಎಂಬ ಪ್ರಸಕ್ತ ಸಂಧಿಗತ ೨೮ನೆಯ ಈ ಪದ್ಯದಿಂದ ॥೨೮॥

**ಪ್ರತಿಪದಾರ್ಥ**

**ಚಕ್ರದಲಿ** = ನಾವು ದೇಹದಲ್ಲಿ ಧರಿಸುವ ಚಕ್ರಮುದ್ರಾದಲ್ಲಿ. **ಹಿಂಕಾರ ನಾಮಕ** = ಹಿಂಕಾರಶಬ್ದವಾಚ್ಯನಾಗಿ, **ಶಂಖದಲಿ** = ಶಂಖ ಮುದ್ರಾದಲ್ಲಿ, **ಪ್ರತಿಹಾರ** = ಪ್ರತಿಹಾರ ನಾಮಕನಾಗಿ, **ಗದೆಯುಲಿ** = ಗದಾಮುದ್ರೆಯಲ್ಲಿ, **ನಿಧನ** = ನಿಧನನೆಂಬಾ ಹೆಸರಿನಿಂದ, **ತೋರು ತಿಪ್ಪನು** = ವಿದ್ಯಮಾನನಾಗಿ ಇದ್ದಾನೆ. **ಪದ್ಮದಲಿ** = ಪದ್ಮಮುದ್ರೆಯಲ್ಲಿ. **ಪ್ರಸ್ತಾವ** = ಪ್ರಸ್ತಾವನಾಮಕ ಶ್ರೀಪರಮಾತ್ಮನು, **ಕಾರುಣಿಕನು** = ಪರಮ ಕರುಣಾಮಯನಾದ ಶ್ರೀಹರಿಯು, **ಉದ್ಗೀಥನಾಮದಿ** = ಉದ್ಗೀಥ ಎಂಬ ನಾಮಧೇಯನಾಗಿ ನಾರಾಯಣ ಮುದ್ರೆಯಲ್ಲಿ, **ಇಪ್ಪ** = ಇದ್ದಾನೆ. **ನಾರಣನ** = ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ, **ಐರೂಪಗಳ** = ಹಿಂಕಾರಾದಿ ಉದ್ಗೀಥ ಪರ್ಯಂತ ಐದು ರೂಪಗಳನ್ನು, **ಶಂಖ** = ಶ್ರೀಪರಮಾತ್ಮನ ಆಯುಧ ವಿಶೇಷಗಳಾದ ಶಂಖ, **ಅರಿ** = ಚಕ್ರ (ಅರ–ಎಂದರೆ ಸರಳುಗಳು, ಅದು ಉಳ್ಳದ್ದು ಚಕ್ರ), **ನೊದಲಾದ** = ಇವೇ ಮುಂತಾದ, **ಆಯುಧಗಳೊಳು** = ಶ್ರೀಹರಿಯು ಧರಿಸಿರುವ ಆಯುಧಗಳಲ್ಲಿ, **ಸ್ಮರಿಸಿ** = ಪೂರ್ವೋಕ್ತ ಪಂಚಮುದ್ರಾಗತ ಹಿಂಕಾರಾದಿ ಪಂಚರೂಪಗಳನ್ನು ಧ್ಯಾನಿಸುತ್ತಾ, **ಧರಿಸುತಿರು** = ಪಂಚಮುದ್ರೆಗಳನ್ನು ದೇಹದ ಯುಕ್ತ ಸ್ಥಾನಗಳಲ್ಲಿ ಧಾರಣಮಾಡು. ॥೨೮॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ–

ಶಂಖ ಚಕ್ರಾದಿ ಮುದ್ರಾದಲ್ಲಿ, ಹಿಂಕಾರನಾಮಕ–ಹಿಂಕಾರಶಬ್ದ ವಾಚನಾದ ಶ್ರೀಪರಮಾತ್ಮ, ಶಂಖದಲಿ–ಶಂಖ ಮುದ್ರಾದಲ್ಲಿ, ಪ್ರತಿಹಾರ–

ಪ್ರತಿಹಾರ ನಾಮಕ ಶ್ರೀಪರಮಾತ್ಮ, ಗದೆಯಲಿ - ಗದಾಮುದ್ರೆಯಲ್ಲಿ, ನಿಧನ-ನಿಧನನಾಮಕ ಶ್ರೀ ಪರಮಾತ್ಮ, ಪದ್ಮದಲಿ-ಪದ್ಮಮುದ್ರಾದಲ್ಲಿ, ಪ್ರಸ್ತಾವ-ಪ್ರಸ್ತಾವನಾಮಕ ಶ್ರೀಪರಮಾತ್ಮ, ಕಾರುಣಿಕನು - ಸೃಷ್ಟ್ಯಾದಿಗಳಿಗೆ ಮೂಲಕಾರಣನಾದ ಶ್ರೀನಾರಾಯಣದೇವರು. ಈ ನಾರಾಯಣ ಸಾಂಕೇತವಾದ ನಾರಾಯಣ ಮುದ್ರಾದಲ್ಲಿ, ಉದ್ಗೀಥನಾಮದಿ-ಉದ್ಗೀಥ ಎಂಬ ನಾಮದಿಂದ, ಇಪ್ಪ-ಇದ್ದಾನೆ, ಮಾರಮಣ - ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣದೇವರ ಅಂಶ ರೂಪಗಳು, ಐರೂಪಗಳ-ಹಿಂಕಾರಾದಿ ಐದು ರೂಪಗಳ ತಿಳಿದು, ಶಂಖಾರಿ ಮೊದಲಾದ - ಈ ಪೂರ್ವೋಕ್ತ ಶಂಖ ಚಕ್ರಾದಿ, ಆಯುಧಗಳೊಳು - ಪಂಚಮುದ್ರಾಗಳು, ಈ ಪಂಚಮುದ್ರೆಗಳು ಶ್ರೀಪರಮಾತ್ಮನ ಆಯುಧಗಳು, ಈ ಆಯುಧಗಳಲ್ಲಿ, ಸ್ಮರಿಸಿ-ಶ್ರೀಪರಮಾತ್ಮನ ರೂಪಗಳನ್ನು ಸ್ಮರಣೆಮಾಡಿ, ಧರಿಸುತಿರು - ದ್ವಾದಶ ನಾಮಗಳಲ್ಲಿ ಈ ಮುದ್ರೆಗಳು ಧಾರಣಮಾಡಬೇಕು, ಈ ಪಂಚಮುದ್ರೆಗಳಿಗೆ ಕೃದ್ಧೋಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ, ಸಹಸ್ರೋಲ್ಕ ಎಂತ ಐದು ರೂಪಗಳು ೧. ತಮ, ೨. ಮೋಹ, ೩. ಮಹಾಮೋಹ, ೪. ತಾಮಿಸ್ರ ಮತ್ತು ೫. ಅಂಧತಾಮಿಸ್ರ ಎಂದು ಐದು ಅವಿದ್ಯೆಗಳು ಬ್ಯಾರೆ ಅವೆ, ಈ ನರಕಾಭಿಮಾನಿಗಳು ಈ ಭಗವದ್ರೂಪಗಳೇನೇ. ಈ ಪಂಚ ಮುದ್ರಾಂತರ್ಗತ ಶ್ರೀಪರಮಾತ್ಮನ ರೂಪಗಳೇ ಪಂಚ ಅವಿದ್ಯಾಗಳ ಪರಿಹರಿಸಿ, ಈ ಪಂಚನರಕಗಳು ಪರಿಹಾರ ಮಾಡತವೆ ಎಂತ ಅನುಸಂಧಾನದಿಂದ ಮುದ್ರಾಧಾರಣ ಮಾಡಬೇಕಂತ ತಾತ್ಪರ್ಯ. ಇದರಿಂದ ಕ್ರಮಾತ ಅವಿದ್ಯಾ ತತ್ಕಾರ್ಯ ಪರಿಹಾರವಾಗಿ, ತನ್ನಾಮ ನರಕಭೋಗಗಳು ಪರಿಹಾರ ವಾಗತವೆ ಎಂತ **ಸತ್ಯತೀರ್ಥೀಯ ಗ್ರಂಥದಲ್ಲಿ** ಉಕ್ತವಾಗಿ ಅದೆ. ಆದಕಡಿಯಿಂದ ದ್ವಾದಶನಾಮಗಳಲ್ಲಿ, ಋಗ್ವೇದ, ಯಜುರ್ವೇದ. ಬ್ರಹ್ಮ ಕರ್ಮಗಳಲ್ಲಿ ಊರ್ಧ್ವಪುಂಡ್ರಸ್ತೋತ್ರ ವಿವರವಾಗಿ ಅದೆ. ಊರ್ಧ್ವಪುಂಡ್ರಸ್ತೋತ್ರ ಪ್ರಕಾರ ಪಂಚಮುದ್ರಾಗಳ ಧಾರಣ ಮಾಡಬೇಕಂತ ತಾತ್ಪರ್ಯ. ॥೨೮॥

## (೨) ಭಾವಪ್ರಕಾಶಿಕೆ ವ್ಯಾಖ್ಯಾನ-

ಪಂಚಮುದ್ರೆಗಳನ್ನು ಧಾರಣೆಮಾಡುವಾಗ, ಆವುಗಳಲ್ಲಿ ಚಿಂತಿಸ ಬೇಕಾದ ಭಗವದ್ರೂಪಗಳನ್ನು ಹೇಳುತ್ತಾರೆ.

ಚಕ್ರಮುದ್ರೆಯಲ್ಲಿ ಹಿಂಕಾರ ನಾಮದಿಂದಲೂ, ಶಂಖದಲ್ಲಿ ಪ್ರತಿಹಾರ ನಾಮದಿಂದಲೂ. ಗದೆಯಲ್ಲಿ ನಿಧನನೆಂಬ ಹೆಸರಿನಿಂದಲೂ, ಪದ್ಮದಲ್ಲಿ ಪ್ರಸ್ತಾವನೆಂಬ ಹೆಸರಿನಿಂದಲೂ, ನಾಮಮುದ್ರೆಯಲ್ಲಿ ಉದ್ಗೀಥನೆಂಬ ಹೆಸರಿನಿಂದಲೂ ಇರುವನು. ಹೀಗೆ ಮಹಾ ಕರುಣಾಳುವಾದ ಶ್ರೀಪರಮಾತ್ಮನು ಈ ೫ ರೂಪಗಳಿಂದ ಪಂಚಮುದ್ರೆಗಳಲ್ಲಿ ಇರುವನೆಂದು ಚಿಂತಿಸಿ, ಮುದ್ರೆಗಳನ್ನು ಧರಿಸಬೇಕೆಂದು ತಾತ್ಪರ್ಯ. ॥೨೮॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :—

ಈ ಪದ್ಯಕ್ಕೆ ಭಾವದರ್ಪಣ ಟೀಕಾ ವ್ಯಾಖ್ಯಾನಕಾರರು ವ್ಯಾಖ್ಯಾನವನ್ನು ಬರೆದಿಲ್ಲ. (ಪದ್ಯಾರ್ಥ ಸುಲಭವಾಗಿರಬಹುದೆಂದು ಆ ವ್ಯಾಖ್ಯಾನಕಾರರ ಅಭಿಪ್ರಾಯವಿರಬಹುದು).

## (೪) ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ):—

"ತೋರುತಿಪ್ಪನು"–ಇತಿ ॥ "ಹಿಂಕಾರಃ ಚಕ್ರಗಃ ಶಂಖೇ ಪ್ರತಿಹಾರಃ ಗದಾಗತಃ ನಿಧನಂ ಪದ್ಮಗಃ ಪ್ರಸ್ತಾವಾಖ್ಯಃ ಲಕ್ಷ್ಮೀನಿಕೇತನಃ ॥ ಉದ್ಗೀಥ ಮುದ್ರಿಕಾ ಸಂಸ್ಥಃ ನಾರಾಯಣ ಇತೀರಿತಃ"॥ **ಇತಿ ಗಾರುಡೇ ಚ** ॥೨೮॥

**ಕನ್ನಡಾರ್ಥ :**

ಪಂಚಮುದ್ರಾಗತ ಭಗವನ್ಮೂರ್ತಿಗಳನ್ನು ತಿಳಿಸುತ್ತಾರೆ – "ತೋರುತಿಪ್ಪನು" ಎಂಬ ಪ್ರಸಕ್ತ ಪದ್ಯದಿಂದ. ಚಕ್ರ - ಶಂಖ - ಗದಾ - ಪದ್ಮಾ- ನಾರಾಯಣ ಮುದ್ರಾ ಎಂಬ ಈ ಪಂಚಮುದ್ರಾಗಳಲ್ಲಿ ಕ್ರಮವಾಗಿ ಪ್ರದ್ಯುಮ್ನ ಇತ್ಯಾದಿ ರೂಪಗಳಿವೆ, ಚಕ್ರದಲ್ಲಿ ಹಿಂಕಾರ - ಸೃಷ್ಟಿಕರ್ತನಾದ ಪ್ರದ್ಯುಮ್ನನು,

ಶಂಖದಲ್ಲಿ ಪ್ರತಿಹಾರ - ಜಗತ್ತನ್ನು ಕಾರ್ಯದಲ್ಲಿ ಪ್ರತಿಹರಿಸುವ-ಅನಿರುದ್ಧನು. ಗದಾದಲ್ಲಿ ನಿಧನ - ಸಂಹಾರಕನಾದ ಸಂಕರ್ಷಣನು. ಪದ್ಮದಲ್ಲಿ ಪ್ರಸ್ತಾವ. ಪ್ರಥಮಾವತಾರನಾದ ವಾಸುದೇವನು. ನಾರಾಯಣಮುದ್ರಾದಲ್ಲಿ ಉದ್ಗೀಥ – ಉಚ್ಚನೆಂದು ಗಾನಮಾಡಿಸಿಕೊಳ್ಳುವ ಉದ್ಗೀಥನಾಮಕ ಶ್ರೀಮನ್ನಾರಾಯಣನು. ಹೀಗೆ ಪಂಚಮುದ್ರಾಗಳಲ್ಲಿ ಇರುವನು. ಎಂದು **ಗರುಡಪುರಾಣೋಕ್ತಿ** ॥೨೮॥

## (ಊ) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಕಾಲ ಕಾಲದಲ್ಲಿ ಧರಿಸತಕ್ಕ ಚಕ್ರ ಶಂಖಾದಿ ಪಂಚಾಯುಧಗಳಲ್ಲಿ ಪಂಚ ಮೂರ್ತಿ ಸ್ಮರಣೋಪಾಸನೆ ತಿಳಿಸುತ್ತಾರೆ. "ತೋರುತಿಪ್ಪನೆಂದು".

ಚಕ್ರವೆಂಬ ಸುದರ್ಶನಾಯುಧದಲ್ಲಿ **ಹಿಂ** - ಎಂಬ ಸ್ವರನಿಯಾಮಕ ಸೃಷ್ಟಿಕರ್ತ ಪ್ರದ್ಯುಮ್ನ ಮೂರ್ತಿ ಸ್ಮರಿಸುವವರಿಗೆ ತೋರುತ್ತಿರುವನು. ಶಂಖಾಯುಧದಲ್ಲಿ **ಪ್ರತಿಹಾರ**ನೆಂದು ಪ್ರತಿ ಪ್ರತಿಹರಣರೂಪ ಸ್ಥಿತಿರೂಪಕ್ರಿಯಾವುಳ್ಳ ಅನಿರುದ್ಧರೂಪನು. **ನಿಧನ** – ಎಂಬ ಹೆಸರುಳ್ಳ ಸಂಹಾರಕರ್ತ ಸಂಕರ್ಷಣ ರೂಪನು ಗದೆಯಲ್ಲಿರುವನು, ಪ್ರಥಮಾವತಾರನಾದ್ದರಿಂದ **ಪ್ರಸ್ತಾವ**ನೆಂಬ ಹೆಸರುಳ್ಳ ವಾಸುದೇವನು ಪದ್ಮಾಯುಧದಲ್ಲಿರುವನು. ಓಂಕಾರದಿಂದ ಉದ್ಗೀಯಮಾನನಾದ್ದರಿಂದ **ಉದ್ಗೀಥ**ನೆಂದು ಶಂಖ ಚಕ್ರಾದಿ ಮುದ್ರಾ ಧಾರಣ ಕಾಲದಲ್ಲಿ ಸ್ಮರಿಸಿ. ಧರಿಸಬೇಕೆಂದು ಅರ್ಥ. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ವಸ್ವಾದಿ ಅಶ್ವಿನೀ ದೇವತೆಗಳ ಪರ್ಯಂತ ಇರುವ ೮೦ ದೇವತಾವರ್ಗವನ್ನು ಶ್ರೀಪರಮಾತ್ಮನು ಅನಿರುದ್ಧಾದಿ ರೂಪ ಚತುಷ್ಟಯಗಳಿಂದ ಬ್ರಹ್ಮ, ವಾಯು, ಗರುಡ ಮತ್ತು ಶೇಷದೇವರಲ್ಲಿದ್ದು ನಿಯಾಮಿಸುವನು ಎಂದು ತಿಳಿಸಿದರು.

ಚಕ್ರಾದಿ ನಾರಾಯಣ ಮುದ್ರೆಪರ್ಯಂತ, ಶ್ರೀಪರಮಾತ್ಮನ ಹಿಂಕಾರನಾಮಾದಿ ಉದ್ಗೀಥ ಪರ್ಯಂತ ವಿದ್ಯಮಾನನಾಗಿರುವ ಶ್ರೀಪರಮಾತ್ಮನ ಪಂಚಮುದ್ರಾಗತ ಭಗವದ್ರೂಪೋಪಾಸನಾ ಕ್ರಮವನ್ನು ತಿಳಿಸುತ್ತಾರೆ-**ತೋರುತಿಪ್ಪನು**-ಎಂಬ ಪ್ರಸಕ್ತ ೨೮ನೆಯ ಪದ್ಯದಿಂದ.

## ೧. ಚಕ್ರಮುದ್ರಾ :—

ಶ್ರೀಪರಮಾತ್ಮನ ಸುದರ್ಶನಾಯುಧವಾದ ಚಕ್ರ ಸಾಂಕೇತವಾದ ಚಕ್ರ ಮುದ್ರೆಯಲ್ಲಿ **ಹಿಂಕಾರನಾಮಕ** ಭಗವದ್ರೂಪವನ್ನು ಸ್ಮರಿಸಬೇಕು, ಸೃಷ್ಟಿ ಕರ್ತನಾದ **ಪ್ರದ್ಯುಮ್ನ**ನಾಮಕ ಶ್ರೀಪರಮಾತ್ಮನು ಹಿಂಕಾರನಾಮಕನಾಗಿ ಚಕ್ರಮುದ್ರಾದಲ್ಲಿ ಇದ್ದಾನೆ, ಈ ಮುದ್ರೆಯಲ್ಲಿ **ಕೃದ್ಧೋಲ್ಕ**ರೂಪೀ ಶ್ರೀಪರಮಾತ್ಮನಿದ್ದು. **ತಮ** ಎಂಬ ಅಜ್ಞಾನವನ್ನೂ ಪರಿಹರಿಸುವನು, ಸಜ್ಜನರಿಗೆ ಆಗಿಂದಾಗ್ಗೆ ಪೀಡಿಸುವ **ಕ್ರೋಧ**ವನ್ನೂ ನಿವಾರಿಸುವುದರಿಂದ ಈ ಭಗವದ್ರೂಪಕ್ಕೆ **ಕೃದ್ಧೋಲ್ಕ** ಎಂದು ಹೆಸರು. ರಾತ್ರಿಯಲ್ಲಿ ಕತ್ತಲೆಯು ದೆಸೆಯಿಂದಾಗಿ ಪದಾರ್ಥಗಳು ಗೋಚರಿಸುವುದಿಲ್ಲ, ಅಂತೆಯೇ ಜೀವೇಶರ ಭೇದವನ್ನು ಜೀವರಿಗೆ ತಿಳಿಯಗೊಡದಂತೆ, ಮುಸುಕಿರುವ ಅಜ್ಞಾನವೇ **ತಮ**ವೆಂಬ ಅವಿದ್ಯೆಯು. ಚಕ್ರಮುದ್ರಾಧಾರಣ ಕಾಲದಲ್ಲಿ ಹೇಳುವ ಮಂತ್ರ :-

**ಸುದರ್ಶನ ಮಹಾಜ್ವಾಲ ಕೋಟಿ ಸೂರ್ಯ ಸಮಪ್ರಭ ।**
**ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥**

ಚಕ್ರಮುದ್ರಾ ಧಾರಣಾಕ್ರಮ :-

(೧) ಬಲಗೆನ್ನೆಗೆ ೧.

(೨) ಹೃದಯಕ್ಕೆ ೩.

(೩) ಉದರಕ್ಕೆ ೫,

(೪) ಬಲ ಪಾರ್ಶ್ವಕ್ಕೆ ೨,

(೫) ಎದೆಯ ಬಲಭಾಗಕ್ಕೆ ೩.

(೬) ಬಲಭುಜದ ನಾಮದ ಮೇಲೆ ೨.

(೭) ಎಡಭುಜದ ನಾಮದ ಕೆಳಗೆ ೧.

(೮) ಬಲಗಿವಿ ಕೆಳಗೆ ೧ (೯) ಕಂಠಕ್ಕೆ ೧.

೨. **ಶಂಖಮುದ್ರಾ:-**

ಶಂಖ ಮುದ್ರೆಯಲ್ಲಿ ಶ್ರೀಪರಮಾತ್ಮನು **ಪ್ರತಿಹಾರ** ನಾಮಕನಾಗಿರುವನು, ಈ ಮುದ್ರೆಯಲ್ಲಿ ಪ್ರತಿಹಾರಶಬ್ದ ವಾಚ್ಯನೇ ಪ್ರತಿ ಪ್ರತಿಹರಣ ರೂಪ ಸ್ಥಿತಿರೂಪ ಕ್ರಿಯಾವುಳ್ಳ **ಅನಿರುದ್ಧರೂಪಿಯು.** ಈ ಅನಿರುದ್ಧನೇ **ಮಹೋಲ್ಕ**ನೆಂಬ ಹೆಸರಿನಿಂದ ಶಂಖಮುದ್ರೆಯಲ್ಲಿ ವಿದ್ಯಮಾನನಾಗಿದ್ದಾನೆ. ಮಹಾತ್ಮರಾದ ರುದ್ರ ಮತ್ತು ಇಂದ್ರಾದಿ ದೇವತೆಗಳಿಗೆ ಸುಖಪ್ರದನಾಗಿರುವುದರಿಂದ, **ಮಹೋಲ್ಕ**ನೆಂದು ಹೆಸರು. ಈ ಮಹೋಲ್ಕರೂಪೀ ಶ್ರೀಪರಮಾತ್ಮನು **ಮೋಹ** ಎಂಬ ಅವಿದ್ಯೆಯನ್ನು ಪರಿಹರಿಸುವನು. ಜೀವೇಶ್ವರರಲ್ಲಿ ಭೇದವಿದೆ ಎಂದು ತಿಳಿಯುವುದೇ ಅನ್ಯಥಾಜ್ಞಾನ ಎಂಬ ವಿಪರೀತ ಜ್ಞಾನವನ್ನು ಉಂಟುಮಾಡುವ ಅವಿದ್ಯೆಯೇ **ಮೋಹ**ವೆನಿಸುವುದು.

**ಶಂಖಮುದ್ರಾ ಧಾರಣ ಮಂತ್ರ :—**

**ಪಾಂಚಜನ್ಯ ನಿಜಧ್ವಾನ ಧ್ವಸ್ತ ಪಾತಕ ಸಂಚಯ ।**
**ತ್ರಾಹಿ ಮಾಂ ಪಾಪಿನಂ ಘೋರ ಸಂಸಾರಾರ್ಣವ ಪಾತಿನಮ್॥**

ಶಂಖ ಮುದ್ರೆಯನ್ನು ಧರಿಸಬೇಕಾದ ಸ್ಥಾನಗಳು :-

(೧) ಎಡಗೆನ್ನೆಗೆ ೧. (೨) ಉದರದ ಎಡಕ್ಕೆ, ೨. (೩) ಎದೆಯ ಎಡಭಾಗಕ್ಕೆ ೩. (೪) ಎಡಭುಜದ ನಾಮದಮೇಲೆ ೨. (೫) ಬಲ ಭುಜದ ನಾಮದ ಕೆಳಗೆ ೧. (೬) ಎಡಗಿವಿಯ ಕೆಳಗೆ ೧.

## ೩. ಗದಾಮುದ್ರಾ

ಗದಾಮುದ್ರೆಯಲ್ಲಿ ಸ್ಮರಿಸಬೇಕಾದ ಭಗವದ್ರೂಪವು **ನಿಧನ.** ಸಂಹಾರ ಕರ್ತನಾದ **ಸಂಕರ್ಷಣನೇ** ನಿಧನನಾಮಕನಾಗಿ ಗದಾಮುದ್ರೆಯಲ್ಲಿರುವನು ಈ ಸಂಕರ್ಷಣರೂಪೀ ಪರಮಾತ್ಮನನ್ನು **ವೀರೋಲ್ಕ**ನೆಂದು ಕರೆಯುವರು. ಅತಿರೋಹಿತವಿಮಲವಿಜ್ಞಾನಿಗಳಾದ ಋಜುಗಳಿಗೆ ಉತ್ಕೃಷ್ಟ ಆನಂದ ಪ್ರದನಾದುದರಿಂದ ವೀರೋಲ್ಕನೆಂಬ ಅಭಿಧಾನ. ವೀರೋಲ್ಕನು **ಮಹಾ ಮೋಹ**ವೆಂಬ ಅವಿದ್ಯೆಯನ್ನು ಪರಿಹರಿಸುವನು. ಜೀವೇಶರಲ್ಲಿ ಅಭೇದವೇ ಇದೆ, ಎಂದೆಂದಿಗೂ ಭೇದವಿಲ್ಲ ಎಂಬ ದುರಾಗ್ರಹವೇ ಮಹಾಮೋಹವು.

**ಧಾರಣಮಂತ್ರ :–**

**ಬ್ರಹ್ಮಾಂಡ ಭುವನಾರಂಭ ಮೂಲಸ್ತಂಭೋ ಗದಾಧರಃ ।**
**ಕೌಮೋದಕೀ ಕರೇ ಯಸ್ಯ ತನ್ನಮಾಮಿ ಗದಾಧರಮ್ ॥**

**ಧಾರಣ ಸ್ಥಾನಗಳು :—**

(೧) ಹಣೆಗೆ ೧. (೨) ಹೊಟ್ಟೆಯ ಎಡಭಾಗಕ್ಕೆ ೧. (೩) ಎದೆಯ ಎಡಭಾಗಕ್ಕೆ ೧. (೪) ಎಡಭುಜದ ನಾಮದ ಕೆಳಗೆ ೨.

## ೪. ಪದ್ಮಮುದ್ರಾ :—

ಪ್ರಸ್ತಾವನಾಮಕ ಪರಮಾತ್ಮನು ಪದ್ಮಮುದ್ರೆಯಲ್ಲಿರುವನು, ಮೂಲರೂಪೀ ಶ್ರೀಮನ್ನಾರಾಯಣನ ಪ್ರಾದುರ್ಭಾವರೂಪಗಳಲ್ಲಿ ಪ್ರಥಮಾ ವತಾರನು **ವಾಸುದೇವನು.** ಪ್ರಥಮಾವತಾರನಾದ್ದರಿಂದ ಪ್ರಸ್ತಾವಶಬ್ದ ವಾಚ್ಯನು. ಪ್ರಸ್ತಾವನಾಮಕನಾದ ವಾಸುದೇವನಿಗೆ **ದ್ಯುಲ್ಕ**ನೆಂದು ಹೆಸರು. ದ್ಯು–ಎಂದರೆ ಸ್ವರ್ಗಾದಿ ಲೋಕಗಳನ್ನು ತನ್ನ ಕಾಂತಿಯಿಂದ ಪ್ರಕಾಶಗೊಳಿ ಸುವುದರಿಂದ " ದ್ಯುಲ್ಕನೆಂದು ಹೆಸರು. ಇಂತಹ ದ್ಯುಲ್ಕರೂಪೀ **ಶ್ರೀ**ಪರಮಾತ್ಮನು **ತಾಮಿಶ್ರ**ಎಂಬ ಅವಿದ್ಯೆಯನ್ನು ಪರಿಹರಿಸುವನು, ಜೀವೇಶ್ವರ

ರಲ್ಲಿ ಭೇದವನ್ನ ಸಾಧಿಸುವ"ಕ್ರೋಧ" ವೆಂಬ ಅವಿದ್ಯೆಗೆ "ತಾಮಿಶ್ರ" ವೆಂದು ಹೆಸರು.

**ಧಾರಣಮಂತ್ರ :-**

**ಸಂಸಾರಭಯಭೀತಾನಾಂ ಯೋಗಿನಾಮಭಯಪ್ರದಃ ।**
**ಪದ್ಮಹಸ್ತೇನ ಯೋ ದೇವೋ ಯೋಗೀಶಂ ತಂ ನಮಾಮ್ಯಹಮ್ ॥**

**ಧಾರಣ ಸ್ಥಾನಗಳು :-**

(೧) ಎದೆಗೆ ೧. (೨) ಉದರದ ಬಲಕ್ಕೆ ೧, (೨) ಎದೆಯ ಬಲಕ್ಕೆ ೧. (೩) ಬಲಭುಜದ ನಾಮದ ಕೆಳಗೆ ೨.

**೫. ನಾರಾಯಣ ಮುದ್ರಾ :-**

ನಾರಾಯಣ ಮುದ್ರೆಯಲ್ಲಿ **ಉದ್ಗೀಥ** ನಾಮಕ ಪರಮಾತ್ಮನಿರುವನು. ಓಂಕಾರದಿಂದ ಗೇಗೀಯಮಾನನಾದ ಉತ್ಕೃಷ್ಟನಾದ **ಶ್ರೀಮನ್ನಾರಾಯಣನೇ** ಉದ್ಗೀಥನಾಮಕನು. ಶ್ರೀಮನ್ನಾರಾಯಣನೇ **ಸಹಸ್ರೋಲ್ಕ**ನೆಂದು ನಾರಾಯಣ ಮುದ್ರೆಯಲ್ಲಿ ವಿರಾಜಮಾನನಾಗಿದ್ದಾನೆ. ಶಿರೋಗತ ಸಹಸ್ರದಳಾತ್ಮಕಕಮಲದಲ್ಲಿ ವಿಶ್ವಾದಿ ಸಹಸ್ರರೂಪಗಳಿಂದ ಕೋಟಿ ಸೂರ್ಯಪ್ರಭಾಯಮಾನನಾಗಿರುವುದರಿಂದ ನಾರಾಯಣನಿಗೆ "ಸಹಸ್ರೋಲ್ಕ"ಎಂದು ಹೆಸರು. ಇಂತಹ ಸಹಸ್ರೋಲ್ಕನು **ಅಂಧತಾಮಿಶ್ರ**ವೆಂಬ ಭೇದವಾದಿಗಳೊಡನೆ ಆಮರಣಪರ್ಯಂತ ಕಲಹಮಾಡುವ ಪ್ರವೃತ್ತಿಯನ್ನುಂಟುಮಾಡುವ ಅವಿದ್ಯೆಯನ್ನು ಪರಿಹರಿಸುವನು.

**ಮಂತ್ರ :-**

**ಓಂ ನಾರಾಯಣ ಸಮಸ್ತೇऽಸ್ತು ನಾಮಮುದ್ರಾಂಕಿತಂ ನರಮ್ ।**
**ದೃಷ್ಟ್ವೈವ ಲಭತೇ ಮುಕ್ತಿಂ ಚಂಡಾಲೋ ಬ್ರಹ್ಮಘಾತಕಃ ॥**

ನಾರಾಯಣಮುದ್ರೆಯನ್ನು ಸರ್ವತ್ರ ಧರಿಸಬೇಕು.

ಇಂತು ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನ (**ಮಾರಮಣನ**) ಹಿಂಕಾರ, ಪ್ರತಿಹಾರ, ನಿಧನ, ಪ್ರಸ್ತಾವ ಮತ್ತು ಉದ್ಗೀಥ-ಎಂಬ ಪಂಚಮುದ್ರಾಗತ ಪಂಚರೂಪಗಳನ್ನು (**ಐರೂಪಗಳ**), ಮುದ್ರೆಗಳನ್ನು ಪೂರ್ವೋಕ್ತ ದೇಹದ ಸ್ಥಾನಗಳಲ್ಲಿ ಧರಿಸಬೇಕು. ಹೀಗೆ ಮುದ್ರಾಧಾರಣ ಮಾಡುವ ಕಾಲದಲ್ಲಿ, ಶ್ರೀಪರಮಾತ್ಮನ ಶಂಖ, ಚಕ್ರ, ಗದಾ ಮತ್ತು ಪದ್ಮ ಎಂಬ ಆಯುಧ ವಿಶೇಷಗಳ ಸಾಂಕೇತಗಳಾದ ಪಂಚಮುದ್ರಾಗಳಲ್ಲಿ ಕ್ರುದ್ಧೋಲ್ಕಾದಿ ಸಹಸ್ರೋಲ್ಕ ಪರ್ಯಂತ ಪಂಚರೂಪಗಳನ್ನು ಮನಸಾ ಧ್ಯಾನಿಸಿ, ಸ್ಮರಿಸಿಕೊಳ್ಳುತ್ತಾ ಧಾರಣ ಮಾಡಬೇಕೆಂದು ಪ್ರಸಕ್ತಪದ್ಯಾಭಿಪ್ರಾಯವು. ಹೀಗೆ ಸ್ಮರಣಪೂರ್ವಕ ಧರಿಸಿದರೆ, ತಮಾದಿ ಅವಿದ್ಯಾ ಪಂಚಕಗಳನ್ನು ಪರಿಹರಿಸಿ, ಕರುಣಾಮಯನಾದ (**ಕಾರುಣಿಕ**) ಶ್ರೀಪರಮಾತ್ಮನು ಸಚ್ಚೇತನರಾದ ನಿಜಭಕ್ತರನ್ನು ಅನುಗ್ರಹಿಸುವನು. ॥೨೮॥

## ಪಂಚಮುದ್ರಾಗತ ಪಂಚರೂಪಗಳ ಧ್ಯಾನೋಪಾಸನೆ

| ಕ್ರಮ ಸಂಖ್ಯೆ | ಪಂಚಮುದ್ರಾಗಳು | ಭಗವದ್ರೂಪ | ರೂಪಪಂಚಕ | ರೂಪಪಂಚಕ | ಪರಿಹರಿಸುವ ಅವಿದ್ಯಾಪಂಚಕಗಳು |
|---|---|---|---|---|---|
| ೧ | ಚಕ್ರ (ಸುದರ್ಶನ) | ಹಿಂಕಾರ | ಪ್ರದ್ಯುಮ್ನ | ಕೃದ್ಧೋಲ್ಕ | ತಮಸ್ಸು |
| ೨ | ಶಂಖ (ಪಾಂಚಜನ್ಯ) | ಪ್ರತಿಹಾರ | ಅನಿರುದ್ಧ | ಮಹೋಲ್ಕ | ಮೋಹ |
| ೩ | ಗದಾ (ಕೌಮೋದಕೀ) | ನಿಧನ | ಸಂಕರ್ಷಣ | ವೀರೋಲ್ಕ | ಮಹಾಮೋಹ |
| ೪ | ಪದ್ಮ (ಪದ್ಮ) | ಪ್ರಸ್ತಾವ | ವಾಸುದೇವ | ದ್ಯುಲ್ಕ | ತಾಮಿಶ್ರ |
| ೫ | ನಾರಾಯಣ (ನಾಮ) | ಉದ್ಗೀಥ | ನಾರಾಯಣ | ಸಹಸ್ರೋಲ್ಕ | ಅಂಧತಾಮಿಶ್ರ |

## ಪದ್ಯ ೨೯

ಮೂಲ

ತನುವೆ ರಥ ವಾಗಾಭಿಮಾನಿಯು ।
ಗುಣವೆನಿಸುವಳು ಶ್ರೋತ್ರದಲಿ ರೋ ।
ಹಿಣಿ ಶಶಾಂಕರು ಪಾಶಪಾಣಿಗಳಶ್ವವೆಂದೆನಿಸಿ ॥
ಇನನು ಸಂಜ್ಞಾದೇವಿಯರು ಇಹ ।
ರನಲಲೋಚನ ಸೂತನೆನಿಸುವ ।
ಪ್ರಣವಪ್ರತಿಪಾದ್ಯ ಪ್ರಾಣನಾಮಕ ರಥಿಕನೆನಿಸುವನು ॥೨೯॥

**ಅವತರಣಿಕೆ:—**

ಸಾಧನ ಶರೀರವೆಂದೆನಿಪ ಈ ಸ್ಥೂಲದೇಹದಲ್ಲಿ ಚಿಂತಿಸಬೇಕಾದ ದೇವತಾಗಣ ಮತ್ತು ತದಂತರ್ಯಾಮಿ ರೂಪೋಪಾಸನಪೂರ್ವಕ ಅನುಸಂಧಾನ ಕ್ರಮವನ್ನು ತಿಳಿಸುತ್ತಾರೆ- **ತನುವೆ ರಥ** ಎಂಬ ಪ್ರಸಕ್ತ ಸಂಧಿಗತ ೨೯ನೆಯ ಈ ಪದ್ಯದಿಂದ,

**ಪ್ರತಿಪದಾರ್ಥ:**

**ತನುವೆ** = ಈ ಸ್ಥೂಲದೇಹವೇ, **ರಥ** = ಬಿಂಬರೂಪಿಯಾದ ಶ್ರೀಪರಮಾತ್ಮನಿಗೆ ರಥವೆಂದೆನಿಸುವುದು, **ವಾಗಭಿಮಾನಿಯು** = ವಾಕ್ಕಿಗೆ ಅಭಿಮಾನಿಯಾದ ಉಮಾದೇವಿಯರು, **ಗುಣವೆನಿಸುವಳು** = ಕುದುರೆಗಳಿಗೆ ಕಟ್ಟಿದ ಹಗ್ಗದ ರೂಪದಲ್ಲಿರುವಳು **ಶ್ರೋತ್ರದೊಳು** = ಎರಡು ಕಿವಿಗಳಲ್ಲಿ, **ರೋಹಿಣಿ ಶಶಾಂಕರು** = ಮೊಲದ ಚಿಹ್ನೆಯುಳ್ಳ ಚಂದ್ರ ಮತ್ತು ಆತನ ಪತ್ನಿ ರೋಹಿಣಿ (ದಿಗ್ದೇವತೆಗಳು), **ಪಾಶಪಾಣಿಗಳು** = ಕೈಯಲ್ಲಿ ಲಗಾಮುಗಳನ್ನು ಹಿಡಿದಿರುವರು, **ಇನನು** = ಸೂರ್ಯದೇವರು **ಸಂಜ್ಞಾದೇವಿಯರು** =

ಸೂರ್ಯಪತ್ನಿ ಸಂಜ್ಞಾದೇವಿಯರು ಇವರಿಬ್ಬರೂ ಚಕ್ಷುರಿಂದ್ರಿಯಗಳಲ್ಲಿದ್ದು, **ಅಶ್ವವೆಂದೆನಿಸಿ**=ರಥಕ್ಕೆ ಹೂಡಿರುವ ಕುದುರೆಗಳ ರೂಪದಲ್ಲಿದ್ದಾರೆ. **ಅನಳ ಲೋಚನ**=ಫಾಲಗತ ಅಗ್ನಿನೇತ್ರರಾದ ಶ್ರೀರುದ್ರದೇವರು. **ಸೂತನ ನೆನಿಸುವ**=ರಥದ ಸಾರಥಿಯಾಗಿದ್ದಾರೆ. **ಪ್ರಣವಪ್ರತಿಪಾದ್ಯ**=ಓಂಕಾರ ಪ್ರತಿಪಾದ್ಯನಾದ, **ಪ್ರಾಣನಾಮಕ**=ಶ್ರೀಮುಖ್ಯಪ್ರಾಣಾಂತರ್ಗತ ಪ್ರಾಣ ನಾಮಕ ಬಿಂಬರೂಪೀ ಶ್ರೀಪರಮಾತ್ಮನು, **ರಥಿಕನೆನಿಸುವನು**=ದೇಹವೆಂಬ ಈ ರಥದಲ್ಲಿ ವಿರಾಜಮಾನನಾಗಿರುವ ರಥಿಕನೆನಿಸಿದ್ದಾನೆ. ॥೨೯॥

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದೇಹವನ್ನು ರಥಾನುಸಂಧಾನದಿಂದ ಶ್ರೀಪರಮಾತ್ಮನಿಗ ಅರ್ಪಿಸೋ ಕ್ರಮವನ್ನ ಹೇಳತಾರೆ.

ತನುವೆ ರಥ– ಈ ಸ್ಥೂಲದೇಹವೇ ರಥ (ಎಂದರೆ ತದಭಿಮಾನಿ ಬ್ರಹ್ಮ ದೇವರು) ವಾಗಭಿಮಾನಿಯೇ ಗುಣ-ವಾಕ್ಯಗಳಿಗೆ ಅಭಿಮಾನಿಯಾದ ಸರ ಸ್ವತೀದೇವೇರು ಕುದರಿಗಳಿಗೆ ಕಟ್ಟತಕ್ಕ ಹಗ್ಗಗಳು ಎಂತ, ಎನಿಸುವಳು— ಎನಿಸೋವರಾಗತಾರೆ. ಶ್ರೋತ್ರದಲಿ-ಕಿವಿಗಳಲ್ಲಿ ಅಭಿಮಾನಿಗಳಾಗಿ ಇರತಕ್ಕ, ಶಶಾಂಕ ರೋಹಿಣಿ-ಚಂದ್ರದೇವರು, ಇವನ ಪತ್ನಿ ರೋಹಿಣೀದೇವೇರು ಮತ್ತು. ಇನನು ಸಂಜ್ಞಾದೇವಿಯರು– ನೇತ್ರಾಭಿಮಾನಿಗಳಾದ ಸೂರ್ಯ ದೇವರು, ಇವನ ಪತ್ನಿ ಸಂಜ್ಞಾದೇವೇರು, ಅಶ್ವವೆಂದೆನಿಸಿ–ಈ ನಾಲ್ಕು ಮಂದಿ ಕುದರಿಗಳು ಎಂತ ಎನಿಸಥಾರೆ, ರಥ ಕುದರಿಗಳಿಂದ ಹ್ಯಾಂಗೆ ಸಂಚಾರ ಮಾಡತದೋ ಶ್ರವಣಾಭಿಮಾನಿಗಳು, ನೇತ್ರಾಭಿಮಾನಿಗಳು ಶ್ರವಣ ದರ್ಶ ನಾದಿಗಳ ದ್ವಾರ ದೇಹವನ್ನು ಹಾಂಗೆ ಸಂಚಾರಮಾಡಿಸುತ್ತಾರೆ. ಪಾಶಪಾಣಿ– -ಪಾಣ್ಯಾಭಿಮಾನಿ ದಕ್ಷ, ಪಾಶನಾಗಿ ಕುದರಿಗಳು ಕಟ್ಟತಕ್ಕ ಹಗ್ಗವಾಗಿದ್ದಾನೆ,

ಪಾಶಪಾಣಿ ಎಂತ ಗಣೇಶನಿಗೂ ನಾಮವಿದೆ. ಚಂದ್ರರೋಹಿಣಿ ಸರಸ್ವತ್ಯಾಖ್ಯ ಹಗ್ಗದಿಂದಲೂ, ಸೂರ್ಯ ಸಂಜ್ಞಾ ಕುದುರೆಗಳು ದಕ್ಷಾಖ್ಯ ಹಗ್ಗದಿಂದಲೂ ಕಟ್ಟಿಸಿಕೊಂಡಿದ್ದಾರೆ. ಇಹ ಅನಲಲೋಚನ-ಮನೋಭಿಮಾನಿಯಾದ ರುದ್ರದೇವರು ಈ ಕುದುರೆಗಳ ಬಾಯಿಗಳಿಗೆ ಲಗಾಮುರೂಪದಿಂದ ಇದ್ದಾರೆ. ಪ್ರಣವಪ್ರತಿಪಾದ್ಯ– ಓಂಕಾರಪ್ರತಿಪಾದ್ಯನಾದ ಬಿಂಬರೂಪೀ ಶ್ರೀಪರಮಾತ್ಮ, ರಥಿಕನೆನಿಸುವನು– ದೇಹರಥಾಂತರ್ಗತನಾಗಿ ಪ್ರಭು ಎಂತ ಎನಿಸುತ್ತಾನೆ. ಪ್ರಾಣನಾಮಕ- ಶ್ರೀ ವಾಯುದೇವರು, ಸೂತನೆನಿಸುವ–ರಥಕ್ಕೆ ಕಟ್ಟಿರತಕ್ಕ ಕುದುರೆಗಳನ್ನು ನಡೆಸತಕ್ಕ ಸೂತ ಎಂತ ಕರಿಸುತ್ತಾನೆ.

ರಥಿಕನ ಆಜ್ಞಾ ವಾಯುದೇವರಿಗೆ, ವಾಯುದೇವರ ಆಜ್ಞಾ ರುದ್ರದೇವರಿಗೆ ರುದ್ರದೇವರ ಆಜ್ಞಾ ಇಂದ್ರಿಯಾಭಿಮಾನಿ ದೇವತೆಗಳಿಗೆ. ಈ ಪ್ರಕಾರ ದೇಹಾಖ್ಯರಥ ಸಂಚಾರ ಮಾಡುತ್ತದೆ ಎಂತ ತಾತ್ಪರ್ಯ. ಈ ಕ್ರಮದಿಂದ ಸಂಚಾರ ಮಾಡತಕ್ಕ ದೇಹವನ್ನು ದೇವರಥತ್ವೇನ ಅನುಸಂಧಾನಮಾಡಿ, ದೇಹಿಯು ಎಲ್ಲೆಲ್ಲಿ ಸಂಚಾರಮಾಡುತಾನೋ ಅದೆಲ್ಲಾ ಶ್ರೀಪರಮಾತ್ಮಗೆ ಮೆರವಣಿಗೆ ಎಂತ ತಿಳಿದು, ಸಂಚಾರ ಯಾವತ್ತೂ ಬಿಂಬಮೂರ್ತಿಗೆ ರಥತ್ವೇನ ಸಮರ್ಪಣೆ ಮಾಡಬೇಕು ಎಂತ ತಾತ್ಪರ್ಯ,

ಪ್ರಮಾಣ:

"ವಿಷ್ಣೋರಾಯತನಂ ದಿವ್ಯಂ ದೇಹಾಖ್ಯಂ ವೈಷ್ಣವಂ ರಥಂ ।
ಸೂರ್ಯಶ್ಚ ಸೂರ್ಯಭಾರ್ಯಾ ಚ ಚಕ್ಷುರ್ದ್ವಯ ಸಮಾಶ್ರಿತ್ ॥
ವಾಜಿರೂಪೌ ತಥಾ ಸೋಮಸ್ತತ್ಪತ್ನೀ ಚ ಶ್ರುತಿಸ್ಥಿತೌ ।
ಹಯಪಾಶೌ ವಹಂತ್ಯೇತೇ ತದ್ಬಂಧಃ ಪ್ರಗ್ರಹಾತ್ಮಕಃ ॥
ಉಮಾ ವಾಜಿಸ್ಥಿತಾ ಜ್ಞೇಯಾ ತತ್ಪತಿರ್ಮನಸಿ ಸ್ಥಿತಃ ।
ಸಂಪ್ರೋಕ್ತಸ್ಸಾರಥಿಸ್ತಸ್ಮಿನ್ ರಥೇ ಪ್ರಾಣಃ ಪ್ರತಿಷ್ಠಿತಃ ॥

**ಪ್ರಕೃಷ್ಟಜ್ಞಾತ್ಪ್ರಾಣೇ ಪ್ರಾಣೋऽಹಂ ಸ್ಮೃತಃ ।**
**ಅಧಿತಿಷ್ಠತಿ ವಿಷ್ಣುಸ್ತು ತಸ್ಮಾದ್ದೇಹಮಲಂ ಚರೇತ್ ॥"**
**—ಇತಿ ಮಾನಸಸ್ಮೃತಿಃ ॥೨೯॥**

**(೨) ಭಾವಪ್ರಕಾಶಿಕೆ ವ್ಯಾಖ್ಯಾನ**

ಈ ದೇಹವನ್ನೇ ರಥವಾಗಿಯೂ, ಪರಮಾತ್ಮನನ್ನೇ ರಥಿಕನಾಗಿಯೂ ಚಿಂತಿಸಬೇಕೆಂದು ಹೇಳುತ್ತಾರೆ.

ನಮ್ಮ ದೇಹವೇ ರಥವು. ವಾಗಭಿಮಾನಿ ಪಾರ್ವತೀ ದೇವಿಯು ಹಗ್ಗವು. ಕಿವಿಗಳಭಿಮಾನಿಯಾದ ರೋಹಿಣಿ ಚಂದ್ರರು ಹಗ್ಗಹಿಡಿಯುವವರು. ಸೂರ್ಯನೂ ಅವನ ಪತ್ನಿ ಸಂಜ್ಞಾದೇವಿಯೂ ಕಣ್ಣಿನೊಳಗಿದ್ದು, ಕುದುರೆಗಳಾಗಿರುವರು. ರುದ್ರದೇವರು ಮನೋಭಿಮಾನಿಯಾಗಿ ಸಾರಥಿಯಾಗಿರುವರು. ಪ್ರಣವಪ್ರತಿಪಾದ್ಯನಾದ ಮುಖ್ಯಪ್ರಾಣಾಂತರ್ಗತ ಪ್ರಾಣನಾಮಕ ಶ್ರೀಪರಮಾತ್ಮನೇ ರಥಿಕನೆಂದು ಚಿಂತಿಸಿ, ದೇಹಕ್ಕೆ ಅಲಂಕಾರಾದಿಗಳನ್ನು ಮಾಡಬೇಕೆಂಬ ತಾತ್ಪರ್ಯ. ಇದಕ್ಕೆ ಆಧಾರಭೂತವಾದ ಪ್ರಮಾಣಗಳು **ಮಾನಸಸ್ಮೃತಿ** ಎಂಬ ಗ್ರಂಥದಲ್ಲಿ ಉಕ್ತವಾಗಿವೆ.

**ಪ್ರಮಾಣ**

**"ವಿಷ್ಣೋರಾಯತನಂ ........................................**
**...................................ತಸ್ಮಾದ್ದೇಹಮಲಂ ಚರೇತ್॥"**

(ಈ ಪ್ರಮಾಣದ ಪೂರ್ಣವಾಕ್ಯರೂಪವನ್ನು **ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ** ಕೊಟ್ಟಿದೆ. ಅಲ್ಲಿ ನೋಡಬೇಕಾಗಿ ವಿನಂತಿ)

**ಈ ಪ್ರಮಾಣದ ಅರ್ಥ**

(೧) ಈ ನಮ್ಮ ದೇಹವು ಪರಮಾತ್ಮನು ವಾಸಮಾಡಲು ಅರ್ಹವಾದ ದಿವ್ಯ ವೈಷ್ಣವರಥವಾಗಿದೆ.

(೨) ಸೂರ್ಯನೂ ಅವನ ಭಾರ್ಯಳೂ ಎರಡು ಕಣ್ಣುಗಳಲ್ಲಿದ್ದು ಕುದುರೆಗಳಂತಿರುವರು.

(೩) ಚಂದ್ರನೂ ಮತ್ತು ಅವನ ಪತ್ನಿಯೂ ಕಿವಿಗಳಲ್ಲಿದ್ದು ಕುದುರೆಗಳ ಲಗಾಮುಗಳನ್ನು ಹಿಡಿದಿರುವರು.

(೪) ಉಮಾದೇವಿಯು ವಾಕ್ಯಗಳಲ್ಲಿದ್ದು ಲಗಾಮಿಗೆ ಇರುವ ಹಗ್ಗವಾಗಿರುವಳು.

(೫) ಆಕೆಯ ಪತಿಯಾದ ರುದ್ರದೇವರು ಮನಸ್ಸಿನಲ್ಲಿದ್ದು ಸಾರಥಿಯಾಗಿರುವರು.

(೬) ರಥದಲ್ಲಿ ಪ್ರಾಣದೇವರು ಸೂತನಾಗಿರುವರು.

(೭) ಅವರಂತರ್ಯಾಮಿಯಾಗಿ ಪ್ರಾಣನೆಂಬ ಹೆಸರಿನಿಂದ ಶ್ರೀಪರಮಾತ್ಮನು ಇರುವನು.

ಪ್ರ=ಪ್ರಕೃಷ್ಟವಾದ, ಅ=ಆನಂದಸ್ವರೂಪವಾಗಿಯೂ, ಣ=ಜ್ಞಾನಸ್ವರೂಪನಾಗಿಯೂ ಇರುವುದರಿಂದ, ಪ್ರ+ಅ+ಣ=ಪ್ರಾಣ- ಎಂದು ಪರಮಾತ್ಮನಿಗೆ ಹೆಸರು. ಇಂತಹ ವಿಷ್ಣುವಿಗೆ ಈ ದೇಹವು ರಥವಾಗಿರುವುದರಿಂದ ಈ ದೇಹವನ್ನು ಅಲಂಕರಿಸಬೇಕು ಎಂದು ಪ್ರಮಾಣಾರ್ಥವು. ಇದೇ ಅಭಿಪ್ರಾಯವನ್ನೇ ದಾಸರಾಯರು ಹೇಳಿರುವರು. ॥೨೯॥

(೩) ಭಾವದರ್ಪಣ ಟೀಕಾ

"ಏಷಏವ ದೇವರಥಃ"॥ ಎಂತ ಇರೋಣದರಿಂದ ಈ ಶರೀರವೇ ರಥ. ವಾಗಭಿಮಾನಿಯೇ ಹಗ್ಗ, ಶೋತ್ರಸ್ಥ ರೋಹಿಣಿ ಚಂದ್ರರು ಆ ಹಗ್ಗ ಹಿಡಿತಕ್ಕವರು. ಸೂರ್ಯ ಸಂಜ್ಞಾ "ಅಶ್ವಗಳು. ರುದ್ರನೇ ರಥನಡಸತಕ್ಕವ, ಪ್ರಣವಪ್ರತಿಪಾದ್ಯನಾದ ಮುಖ್ಯಪ್ರಾಣಾಂತರ್ಯಾಮಿ ಶ್ರೀಹರಿಯೇ ರಥ

ದಲ್ಲಿ ಕೂತಂತವನೆಂತಲೂನೂ ಹೀಗೆ ಇವರೆಲ್ಲ ಅನಿಸುತ್ತಾರೆಂದು ತಾತ್ಪರ್ಯ ॥೨೯॥

## (೪) ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ

"ತನುವೆ"–ಇತಿ ॥ ವಾಙ್ಮನೀ ಉಮಾ ॥ ಪಾಶಪಾಣಿಃ ಯಮಃ ಇನಃ ಸೂರ್ಯಃ । ಅನಳಲೋಚನಃ ರುದ್ರಃ ॥ ಪ್ರಾಣಃ ತರ್ರೋ ಹರಿಶ್ಚೇತಿ ಜ್ಞೇಯಮ್ । "ಅಥ ದೇಹರಥಃ ಸತ್ಯವಾಗುದ್ಧಿಃ । ಶ್ರೋತ್ರೇ ಪಕ್ಷಸೀ । ಚಕ್ಷುಷೀ ಸಂಯುಕ್ತೇ । ಮನಃ ಸಂಗೃಹೀತಾ ॥" ಇತ್ಯುಕ್ತೇಶ್ಚ। ಯುಜೋ ಯುಕ್ತಾ ಅಭಿಯತ್ ಸಂವಹಂತಿ । ಇತಿ॥ ತದ್ಭಾಷ್ಯೇ "ಯತ್ ಸ್ಯಂದನಂ ವಹಂತ್ಯೇತೇ ದೇವಾಭಾರ್ಯಾ ಸಮನ್ವಿತಾಃ ॥ ಅಧಿದೈವೇ ತಥಾಧ್ಯಾತ್ಮೇ ಜೀವದೇಹಾತ್ಮಕಂ ರಥಮ್ । ನ ಸೂರ್ಯಃ ಸೂರ್ಯ ಭಾರ್ಯಾ ಚ ಚಕ್ಷುರ್ದ್ವಯು ಸಮಾಶ್ರಿತೌ ॥ ವಹತೋಽಶ್ವಾತ್ಮಕಂ । ದೇಹಂ ನಾರಾಯಣ ರಥಾತ್ಮಕಮ್ ॥ ಸೋಮಶ್ಚ ರೋಹಿಣೆ ಚೈವ ದಕ್ಷವಾಮಶ್ರುತಿಸ್ಥಿತೌ ಉಭಯೋಃ ಪಕ್ಷಯೋಃ ವಹತೋಽಶ್ವಾತ್ಮಕಂ ತಯೋಃ ॥ ಉದ್ಧಾರಣಾರ್ಥಂ ಏತೇಷಾಂ ಉಮಾ ವಾಚಿಸಮಸ್ಥಿತಾ । ನಾಗಾಕಾರ್ಯೈವ ರಶ್ಮಿತ್ವಂ ಆಗಮತ್ ವೈಷ್ಣವೇ ರಥೇ। ಮನಃಸ್ಥಿತಃ ಶಿವಸ್ವಾಮಿ ಮನೋನಾಮಾ ಮಹಾಬಲಃ ॥ ಅಭವತ್ ಸಾರಥಿಃ ವಿಷ್ಣೋ ವಿಷ್ಣುರ್ವಾಯುಶ್ಚ ತಂ ರಥಮ್ ॥ ಪ್ರಕೃಷ್ಟಾನಂದ ರೂಪತ್ವಾತ್ ಪ್ರಾಣಾಖ್ಯವಧಿ ತಿಷ್ಠತು" ।ಇತಿ॥ ॥೨೯॥

### ಕನ್ನಡಾರ್ಥ

ಶರೀರಾಖ್ಯ ರಥವನ್ನು ತಿಳಿಸುತ್ತಾರೆ- "ತನುವೆ"–ಎಂಬ ಪದ್ಯದಿಂದ, ವಾಕ್ = ವಾಗಭಿಮಾನಿ ಉಮಾದೇವಿಯು (ಪಾರ್ವತೀ), ಇನ = ಸೂರ್ಯ ಅನಳಲೋಚನ = ರುದ್ರ, ಪ್ರಾಣ ಎಂಬ ಶಬ್ದವು ಮುಖ್ಯ ಪ್ರಾಣದೇವರು ಹಾಗೂ ಅವನಂತರ್ಯಾಮಿ ಪರಮಾತ್ಮ ಇಬ್ಬರಿಗೂ ಅನ್ವಯಿಸುವುದು. ಐತರೇಯ ಉಪನಿಷತ್ತಿನಲ್ಲಿ ಈ ದೇಹಾಖ್ಯರಥದ ವಿವರಣೆ ಉಕ್ತವಾಗಿದೆ.

ದೇಹವೇ ರಥ. ವಾಗಭಿಮಾನಿಯಾದ ಉಮಾದೇವಿಯು ಉದ್ಧಾರಣ ರಜ್ಜುರೂಪಳು (ಹಗ್ಗ) ಬಲ ಮತ್ತು ಎಡಗಿವಿಗಳಲ್ಲಿರುವ ಚಂದ್ರ ಮತ್ತು ರೋಹಿಣೀ (ಚಂದ್ರ ಪತ್ನಿ) ಬಲ ಎಡದ ಅಶ್ವಗಳು. ನೇತ್ರದ್ವಯಗಳಲ್ಲಿರುವ ಸೂರ್ಯ ಹಾಗೂ ಸೂರ್ಯಪತ್ನಿ ಸಂಜ್ಞಾ, ಇವರು ಮುಂದೆ ಹೂಡಿರುವ ಎರಡು ಅಶ್ವಗಳು. ಮನೋಭಿಮಾನಿಯಾದ ರುದ್ರದೇವರು ಸಾರಥಿಯು ಇಂತಹ ಅಧ್ಯಾತ್ಮ ಮತ್ತು ಅಧಿದೈವವೆಂಬ ಎರಡು ವಿಧವಾದ ಶರೀರಾಖ್ಯ ರಥವನ್ನು ಮುಖ್ಯಪ್ರಾಣ ಹಾಗೂ ಪ್ರಾಣಪತಿ ಪರಮಾತ್ಮ ಆರೋಹಿಸಿರುತ್ತಾರೆ. ಭಾಷ್ಯದಲ್ಲಿಯೂಸಹ ಇದೇ ಅರ್ಥವನ್ನು ಉಪಪಾದಿಸಿರುತ್ತಾರೆ. ॥೨೯॥

## (ಆ) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಕಾಲಾಧೀನ ದೇಹರಥಾಂತರ್ಗತ, ಪ್ರಾಣಸ್ಥ ಪ್ರಾಣನಾಮಕ, ರಥಿಕೋಪಾಸನೆ ತಿಳಿಸುತ್ತಾರೆ— "ತನುವೆಂದು".

ಈ ಶರೀರವೇ ರಥ. ವಾಗಭಿಮಾನಿ ಪಾರ್ವತಿಯೆ ರಥದ ಹಗ್ಗ. ಕಿವಿಯಲ್ಲಿರುವ ರೋಹಿಣಿದೇವಿ ಮತ್ತು ಚಂದ್ರ ಇಬ್ಬರು ಕಡಿವಾಣವೆಂಬ ಪಾಶವನ್ನು ಹಿಡಿದಿರುವವರು. ಸಂಜ್ಞಾದೇವಿ ಮತ್ತು ಸೂರ್ಯ ಸಹ ಇಬ್ಬರು ಕಣ್ಣಿನಲ್ಲಿ ಕದುರೆಯೆನಿಸಿರುವರು. ಅಗ್ನಿನೇತ್ರರಾದ ರುದ್ರದೇವರು ಅಹಂಕಾರ ತತ್ತ್ವದಲ್ಲಿದ್ದು ಸಾರಥಿಯಾಗಿರುವರು. ಪ್ರಾಣಾಂತರ್ಗತ ಓಂಕಾರ ಪ್ರತಿಪಾದ್ಯಪ್ರಾಣನಾಮಕ ದೇವರು ರಥಾಧಿಪತಿಯೆನಿಸುವನು.

ಪ್ರಮಾಣ

"ವಿಷ್ಣೋಃರಾಯತನಂ..........................................

.................................... ತಸ್ಮಾದ್ದೇಹಮಲಂ ಜಪೇತ್ ॥"

ಎಂಬ ಮಾನಸ್ಮೃತ್ಯರ್ಥ ಇದರಿಂದ ವಿವರಿಸಿತು. ॥೨೯॥

(ಈ ಪ್ರಮಾಣದ ಪೂರ್ಣವಾಕ್ಯರೂಪವನ್ನು ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಕೊಟ್ಟಿದೆ.)

## ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯದಲ್ಲಿ ಪಂಚಮುದ್ರಾಗತ ಹಿಂಕಾರಾದಿ ಶ್ರೀಪರಮಾತ್ಮನ ಪಂಚರೂಪಗಳನ್ನು ತಿಳಿಸಿ. ಅಂತಹ ಪಂಚಮುದ್ರೆಗಳನ್ನು ಧಾರಣ ಮಾಡಿ ಅಲಂಕರಿಸುವ ಈ ಶರೀರವನ್ನು ಬಿಂಬರೂಪೀ ಶ್ರೀಪರಮಾತ್ಮನು ಕೂಡುವ ರಥವೆಂಬ ಜ್ಞಾನಾನುಸಂಧಾನದಿಂದ ತಿಳಿಯಬೇಕೆಂದು ವಿವರಿಸುತ್ತಾರೆ, **ತನುವೆರಥ** ಎಂಬ ಪ್ರಶಕ್ತ ೨೯ ನೆಯ ಪದ್ಯದಿಂದ.

೧. ಪಿಂಡಾಂಡರೂಪವಾದ ಈ ಶರೀರವು ಸಾಧನದೇಹವೆನಿಸಿದೆ, ಶ್ರೀಪರಮಾತ್ಮನ ಅನುಗ್ರಹ ಪ್ರಾಪ್ತಿಗಾಗಿ, ಸಾಧನಪರಿಕರಣರೂಪದಲ್ಲಿ ದಶೇಂದ್ರಿಯಗಳು, ಮನಸ್ಸು, ಬುದ್ಧ್ಯಾದಿ ಮನೋಪಂಚಕಗಳು ಇತ್ಯಾದಿ ಇಂದ್ರಿಯಗಳು ಈ ಸಾಧನದೇಹದಲ್ಲಿ ಇವೆ. ಸಾಧನಶರೀರವನ್ನು ರಥ ಎಂದು ಅನುಸಂಧಾನಪೂರ್ವಕ ತಿಳಿಯಬೇಕು. ಹೃತ್ಕಮಲನಿವಾಸಿಯಾದ ಬಿಂಬರೂಪೀ ಶ್ರೀಹರಿಗೆ ಈ ಶರೀರವು ಸಂಚರಿಸುವ ರಥವೆಂದು ಅನುಸಂಧಾನ.

೨. ಶ್ರೀಉಮಾದೇವಿಯು ಮತಿಪ್ರೇರಕಳು. ಮನೋತತ್ತ್ವದ ಪ್ರೇರಕ ಶಕ್ತಿಯೇ ಮತಿಯು (ವಿವೇಕವು, ಇದರ ಕಾರ್ಯ ಮಾತುಗಳರೂಪದಲ್ಲಿ ಅಭಿವ್ಯಕ್ತವಾಗುವುದು, ಈ ಕಾರಣದಿಂದ ಉಮಾ ವಾಗಭಿಮಾನಿಯು ಮುಖ್ಯವೃತ್ತಿಯಿಂದ ಶ್ರೀಸರಸ್ವತಿಯೇ ವಾಗಾಭಿಮಾನಿಯಾದರೂ, ಆ ವಾಣಿಯೇ ಉಮಾಂತರ್ಗತಳಾಗಿ ವಾಗಭಿಮಾನಿಗಳೆನಿಸುವರು, ರಥಕ್ಕೂ ಮತ್ತು ಕುದುರೆಗಳಿಗೂ ಸಂಬಂಧ ಕಲ್ಪಿಸುವುದೇ ಹಗ್ಗವು. ನಮ್ಮ ಮನೋಗತ ಅಭಿಪ್ರಾಯಗಳ ಅಭಿವ್ಯಕ್ತಿ ವಚನರೂಪದಲ್ಲಿರುವುದರಿಂದ ವಾಗಭಿಮಾನಿಯಾದ ಉಮಾ ಹಗ್ಗವೆಂದೆನಿಸುವಳು (ವಾಗಭಿಮಾನಿಯು ಗುಣವೆನಿಸುವಳು)

೩. ಎರಡು ಕಿವಿಗಳಲ್ಲಿರುವ ಶ್ರೋತ್ರಾಭಿಮಾನಿಗಳಾದ ಚಂದ್ರ ಮತ್ತು ಆವನ ಪತ್ನಿ ರೋಹಿಣಿ ಇಬ್ಬರು ಕಡಿವಾಣವೆಂಬ ಪಾಶವನ್ನು ಹಿಡಿದಿರುವರು ಎಂದು ತಿಳಿಯಬೇಕು. **(ರೋಹಿಣಿ ಶಶಾಂಕರು ಪಾಶಪಾಣಿಗಳು)** ಬಲಗಿವಿಯಲ್ಲಿ ದಿಗ್ದೇವತೆಯಾದ ಚಂದ್ರನಿರುವನು. ಎಡಗಿವಿಯಲ್ಲಿ ಚಂದ್ರಪತ್ನಿ ರೋಹಿಣಿ ಶ್ರೋತ್ರಾಭಿಮಾನಿಯಾಗಿದ್ದಾಳೆ. ಕುದುರೆಗಳ ಬಾಯಿಗೆ ಹಾಕಿರುವ ಕಡಿವಾಣಕ್ಕೆ ಪಾಶವೆಂದು ಹೆಸರು. ಅವು ರಥದ ಬಲ ಮತ್ತು ಎಡಪಾರ್ಶ್ವಗಳಿಂದ ಹಿಡಿಯಲ್ಪಟ್ಟಿರುವುವು.

**ವಿಶೇಷಾಂಶ**

ಕೆಲವು ವ್ಯಾಖ್ಯಾನಗಳಲ್ಲಿ ರಥಕ್ಕೆ ಹೂಡಿರುವ ನಾಲ್ಕು ಕುದುರೆಗಳಲ್ಲಿ ಪಾರ್ಶ್ವದಲ್ಲಿರುವ ಕುದುರೆಗಳು ಚಂದ್ರ ಮತ್ತು ರೋಹಿಣಿ ಎಂದು ತಿಳಿಯಬೇಕೆಂದು ನಿರೂಪಿಸಿರುತ್ತಾರೆ. ಪದ್ಯದಲ್ಲಿ **ಪಾಶಪಾಣಿಗಳು ಎಂದೆನಿಸಿ** ಎಂಬ ಸ್ಪಷ್ಟೋಕ್ತಿ ಇದೆ. ನಾಲ್ಕು ಕುದುರೆಗಳು ಎಂತ ಪರಿಗಣಿಸಿದರೆ ಪಾರ್ಶ್ವಗತ ಎರಡು ಅಶ್ವಗಳು ಮತ್ತು ಕಡಿವಾಣ ಎಂತಲೂ ಸಮನ್ವಯ ಮಾಡಿಕೊಳ್ಳಬಹುದು.

**ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ** ದಕ್ಷನು ಹಸ್ತಾಭಿಮಾನಿ ದಕ್ಷನೇ ಪಾಶಪಾಣಿ ಎಂದೆನಿಸುವನು ಎಂದು ತಿಳಿಸಿರುತ್ತಾರೆ. ಅಂತಹ ದಕ್ಷನಲ್ಲಿದ್ದು ಚಂದ್ರ ಮತ್ತು ರೋಹಿಣಿಯರು ಪಾಶಗಳನ್ನು ಹಿಡಿದಿರುತ್ತಾರೆ ಎಂದು ಸಮನ್ವಯಮಾಡಬಹುದು.

೪. ಸೂರ್ಯ ಮತ್ತು ಆತನ ಪತ್ನಿ ಸಂಜ್ಞಾದೇವಿ ಇಬ್ಬರೂ ನೇತ್ರಾಭಿಮಾನಿಗಳು. ಮುಖಗತ ಎರಡು ಕಣ್ಣುಗಳೂ ಮುಂಭಾಗದಲ್ಲಿದ್ದು, ರಥದ ಮುಂದೆ ಕಟ್ಟಿರುವ ಎರಡು ಅಶ್ವಗಳೆನಿಸುವುವು. ಬಲನೇತ್ರದಲ್ಲಿ ಸೂರ್ಯನೂ ಮತ್ತು ಎಡನೇತ್ರದಲ್ಲಿ ಸೂರ್ಯಪತ್ನಿ ಸಂಜ್ಞಾದೇವಿ ಇಬ್ಬರೂ ಮುಂದಿನ ಎರಡು ಕುದುರೆಗಳೆಂದು ತಿಳಿಯಬೇಕು. **(ಇವನು ಸಂಜ್ಞಾದೇವಿಯರು ಅಶ್ವವೆಂದೆನಿಸಿ)**

೫. ಹಣೆಯಲ್ಲಿರುವ ಅಗ್ನಿಯನ್ನೇ ಮೂರನೆಯ ನೇತ್ರವನ್ನಾಗಿ ಉಳ್ಳ ಫಾಲಲೋಚನರಾದ ಮಹರುದ್ರದೇವರು **(ಅನಲಲೋಚನ)** ತನುವೆಂಬ ಈ ರಥಕ್ಕೆ ಸಾರಥಿ ಎಂದೆನಿಸಿದ್ದಾರೆ, **(ಸೂತನೆನಿಸುವ)** ಶ್ರೀರುದ್ರದೇವರು ಮನೋಭಿಮಾನಿಗಳು ಅಹಂಕಾರತತ್ತ್ವದಲ್ಲಿದ್ದು ಅನಲಲೋಚನನು ಸೂತನು ಸಾರಥಿಯು ರಥವನ್ನು ನಡೆಯಿಸುವವನು, ಅವನ ನಿಯಂತ್ರಣದಲ್ಲಿ ರಥದ ಸಂಚಾರ ಮನಸ್ಸು ದಶೇಂದ್ರಿಯಗಳನ್ನು ನಿಯಂತ್ರಿಸುವ ಏಕಾದಶೇಂದ್ರಿಯವು. ಈ ತತ್ತ್ವದ ದೃಷ್ಟಿಯಿಂದ ರುದ್ರದೇವರು ಈ ದೇಹಾಖ್ಯರಥಕ್ಕೆ ಸಾರಥಿಯಾಗಿರುವರು ಇದು ಪರಮೋಚಿತವಾಗಿದೆ,

**ವಿಶೇಷಾಂಶ:**

ಕೆಲವು ವ್ಯಾಖ್ಯಾನಗಳಲ್ಲಿ ಭಾರತೀರಮಣರಾದ ಮುಖ್ಯಪ್ರಾಣರೇ ಈ ದೇಹಾಖ್ಯ ರಥಕ್ಕೆ ಸೂತರೆಂದು ವಿವರಿಸಿರುತ್ತಾರೆ, ಸಮಸ್ತ ತತ್ತ್ವದೇವತೆಗಳೂ ಶ್ರೀವಾಯುದೇವರ ಅಧೀನರು, ಶ್ರೀರುದ್ರದೇವರಿಗೆ ವಾಯುದೇವರ ಪ್ರೇರಣೆ. ರುದ್ರಾಂತರ್ಗತರಾಗಿ ವಾಯುದೇವರೇ ಅವರ ದ್ವಾರಾ ಕಾರ್ಯವನ್ನು ನಡೆಯಿಸುವರು ಎಂದು ತಿಳಿಯಬಹುದು.

೬. ಓಂಕಾರ ಪ್ರತಿಪಾದ್ಯನಾದ ಶ್ರೀಮನ್ನಾರಾಯಣನು **ಪ್ರಣವ ಪಾದ್ಯನು.** ಅಂತಹ ಪ್ರಣವಪ್ರತಿಪಾದ್ಯನಾದ ಶ್ರೀಹರಿಯೇ ಮುಖ್ಯ ಪ್ರಾಣಾಂತರ್ಗತನಾಗಿ **ಪ್ರಾಣನಾಮಕ**ನೆನಿಸುವನು. ಅಂತಹ ಪ್ರಾಣ ನಾಮಕನಾದ ಪ್ರಣವಸ್ವರೂಪಿ ಶ್ರೀಪರಮಾತ್ಮನೇ ಈ ದೇಹಾಖ್ಯವೆಂಬ ರಥದಲ್ಲಿ ಕುಳಿತಿರುವ **(ರಥಿಕನು ಪ್ರಣವಪ್ರತಿಪಾದ್ಯ ಪ್ರಾಣನಾಮಕ ರಥಿಕನೆನಿಸುವನು)** ರಥಾಧಿಪತಿಯಾಗಿ ಶ್ರೀಹರಿಯು ತನುವೆಂಬ ರಥದಲ್ಲಿರುವ ಹೃತ್ಕಮಲವೆಂಬ ಮಂಟಪದಲ್ಲಿ ರಥಿಕನೆಂದೆನಿಸಿ ವಿರಾಜಮಾನನಾಗಿ, ದೇಹಗತ ಸಮಸ್ತವ್ಯಾಪಾರಗಳನ್ನೂ ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ನಡೆಸಿ ನಡೆಯಿಸುತ್ತಿರುವನೆಂದು ಪ್ರಸಕ್ತ ಪದ್ಯಾಭಿಪ್ರಾಯವು ॥೨೯॥

## ಪದ್ಯಾಭಿಪ್ರಾಯದ ವಿಹಂಗಮನೋಟ

| ಕ್ರಮ ಸಂಖ್ಯೆ | ವಿಷಯ | ವಿವರಣೆ | ಅಭಿಮಾನಿಗಳು |
|---|---|---|---|
| ೧ | ದೇಹ | ಸಾಧನ ಶರೀರ | ರಥ |
| ೨ | ವಚನಗಳು | ವಾಗಭಿಮಾನಿ | ಉಮಾ-ಹಗ್ಗ |
| ೩ | ಕಿವಿಗಳು | ಶ್ರೋತ್ರಾಭಿಮಾನಿಗಳು | ಚಂದ್ರ-ರೋಹಿಣಿ ಪಾಶಪಾಣಿಗಳು |
| ೪ | ಕಣ್ಣುಗಳು | ನೇತ್ರೇಂದ್ರಿಯಾಭಿಮಾನಿಗಳು | ಸೂರ್ಯ-ಸಂಜ್ಞಾದೇವಿ ಅಶ್ವಗಳು |
| ೫ | ಮನಸ್ಸು | ಮನೋಭಿಮಾನಿ (ಅಹಂಕಾರ ತತ್ತ್ವ) | ರುದ್ರದೇವರು ಸಾರಥಿ |
| ೬ | ಹೃತ್ಕಮಲನಿವಾಸಿ | ರಥಾಧಿಪ | ಬಿಂಬರೂಪೀ ಶ್ರೀಪರಮಾತ್ಮ ರಥಿಕ |

## ಪದ್ಯ ೩೦

**ಮೂಲ:**

ಅಮಿತ ಮಹಿಮನಪಾರಗುಣಗಳ ।
ಸಮಿತವರ್ಣಾತ್ಮಕ ಶ್ರುತಿ ಸ್ಮೃತಿ ।
ಗಮಿಸಲಾಪವೆ ತದಭಿಮಾನಿಗಳೆಂದೆನಿಸಿಕೊಂಬ ॥
ಕಮಲಸಂಭವ ಭವ ಸುರೇಂದ್ರಾ ।
ದ್ಯಮರರನುದಿನ ತಿಳಿಯಲರಿಯರು ।
ಸ್ವಮಹಿಮಗಳಾದ್ಯಂತ ಮಧ್ಯಗಳರಿವ ಸರ್ವಜ್ಞ ॥೩೦॥

**ಅವತರಣಿಕೆ:**

ಹಿಂದಿನ ಪದ್ಯದಲ್ಲಿ ದೇಹಾಖ್ಯರಥದ ಜ್ಞಾನಾನುಸಂಧಾನದ ಕ್ರಮವನ್ನು ತಿಳಿಸಿ, ಅಂತಹ ಅಪಾರ ಮಹಿಮಾಸಂಪನ್ನನಾದ ಶ್ರೀಪರಮಾತ್ಮನ ಅನಂತ ಕಲ್ಯಾಣಗುಣ ಸಮೂಹಗಳನ್ನು ವೇದ ಪುರಾಣಾದಿಗಳು ಸಾಕಲ್ಯೇನ ಣಿರ್ವಸಲಾರವು. ಅಂತೆಯೇ ವೇದಾಭಿಮಾನಿಗಳಾದ ಬ್ರಹ್ಮಾದಿ ದೇವತಾವರ್ಗ ಆತನ ಅನಂತ ಶುಭಗುಣಸ್ತೋಮಗಳನ್ನು ಎಂದೆಂದೂ ಪೂರ್ಣವಾಗಿ ಅರಿಯರು. ಸರ್ವಜ್ಞನಾದ ಆ ಪರಮಾತ್ಮನೊಬ್ಬನೇ ಬಲ್ಲ ತನ್ನ ಅನಂತ ಮಹಿಮೆಗಳ ಆದಿ ಮಧ್ಯಾಂತಗಳನ್ನು ಎಂದು ತಿಳಿಸುತ್ತಾರೆ – **ಅಮಿತ ಮಹಿಮನ** – ಎಂಬ ಪ್ರಸಕ್ತ ಸಂಧಿಗತ ೩೦ನೆಯ ಈ ಪದ್ಯದಿಂದ. ॥೩೦॥

**ಪ್ರತಿಪದಾರ್ಥ:—**

**ಅಮಿತ** = ಮಿತಿಯಿಲ್ಲದ, ಅಂದರೆ ಅಪಾರವಾದ. **ಮಹಿಮನ** = ಮಹಾಮಹಿಮಾ ಸಂಪನ್ನನಾದ ಶ್ರೀಪರಮಾತ್ಮನ. **ಅಪಾರಗುಣಗಳ** = ಅಗಣಿತವಾದ ಗುಣ ಸಮೂಹಗಳನ್ನು, **ಸಮಿತ** = ಪರಿಮಿತಿಯುಳ್ಳ, **ವರ್ಣಾ**

**ತ್ಮಕ** = ಅಕಾರಾದಿ ೫೧ ಅಕ್ಷರಗಳಿಂದ ಪ್ರಚುರವಾದ. **ಶ್ರುತಿ** = ಅನಂತ ಅಪೌರುಷೇಯವಾದ ವೇದಗಳು, **ಸ್ಮೃತಿ** = ಪೌರುಷೇಯವಾದ ಭಾರತಾದಿ ಪುರಾಣಗಳು. **ಗಮಿಸಲಾಪವೆ** = ಸಾಕಲ್ಯೇನ ತಿಳಿಯಲು ಸಾಧ್ಯವೇ ? ಎಂದರೆ ಅರಿಯಲಾರವು ಎಂತ ತಾತ್ಪರ್ಯ. **ತದಭಿಮಾನಿಗಳು** = ಅಂತಹ ಶ್ರುತಿ ಸ್ಮೃತಿಗಳಿಗೆ ಅಭಿಮಾನಿಗಳು, **ಎಂದೆನಿಸಿಕೊಂಬ** = ಎಂದು ಪ್ರಸಿದ್ಧರಾದ, **ಕಮಲಸಂಭವ** = ಶ್ರೀಪರಮಾತ್ಮನ ನಾಭೀಕಮಲದಲ್ಲಿ ಉತ್ಪನ್ನರಾದ ಬ್ರಹ್ಮದೇವರು, **ಭವ** = ರುದ್ರದೇವರು. **ಸುರೇಂದ್ರಾದಿ** = ಇಂದ್ರ ದೇವರೇ ಮುಂತಾದ. **ಅಮರರು** = ದೇವತೆಗಳು, **ಅನುದಿನ** = ಯಾವತ್ತೂ. **ತಿಳಿಯಲು** = ಭಗವನ್ಮಹಿಮೆಗಳನ್ನು ತಿಳಿಯುವ ಪ್ರಯತ್ನದಲ್ಲಿದ್ದರೂ, **ಅರಿಯರು** = ಸಾಕಲ್ಯೇನ ತಿಳಿಯಲಾರರು. **ಸ್ವಮಹಿಮೆ**ಗಳ = ತನ್ನ ಮಹಾ ಮಹಿಮೆಗಳ. **ಆದಿ** = ಪ್ರಾರಂಭ, **ಅಂತ** = ಕೊನೆ ಮತ್ತು, **ಮಧ್ಯ** = ಮಧ್ಯ ಗಳನ್ನು, **ಸರ್ವಜ್ಞ** = ಸರ್ವಜ್ಞನಾದ ಶ್ರೀಪರಮಾತ್ಮನೊಬ್ಬನೇ, **ಅರಿವ** = ಬಲ್ಲನು. ॥೩೦॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ದೇಹಾಂತರ್ಗತನಾಗಿದ್ದು ಸರ್ವವ್ಯಾಪಾರಗಳ ನಡಿಸತಕ್ಕ ಶ್ರೀಪರಮಾತ್ಮನ ಮಹಿಮಾ ದಾರೂ ಅರಿಯರೆಂದು ಹೇಳತಾರೆ,

ಅಮಿತಮಹಿಮನ–ಅಪಾರವಾದ ಮಹಿಮೆಗಳು ಉಳ್ಳಂಥಾ ಶ್ರೀಪರಮಾತ್ಮನ, ಅಪಾರಗುಣಗಳ–ಅಂತರಹಿತವಾದ ಗುಣಗಳ, ವರ್ಣಾ ತ್ಮಕ–ಅಕಾರಾದಿ ಐವತ್ತೊಂದು ಅಕ್ಷರಗಳಿಂದ ಪ್ರಚುರವಾದ, ಶ್ರುತಿ–ಅನಂತ ಅಪೌರುಷೇಯವಾದ ವೇದಗಳು. ಸ್ಮೃತಿ–ಪೌರುಷೇಯಗಳಾದ ಭಾರತಾದಿ ಪುರಾಣಗಳು, ಗಮಿಸಲಾಪವೆ – ಸಾಕಲ್ಯೇನ ತಿಳಿದುಕೊಳ್ಳಲಾಪವೇ ಎಂದರೆ. ತಿಳಿದುಕೊಳ್ಳಲಾರವು ಎಂತ ತಾತ್ಪರ್ಯ. ತದಭಿಮಾನಿಗಳೆಂದೆನಿಸಿಕೊಂಬ–

ಈ ಶ್ರುತಿ ಸ್ಮೃತಿಗಳಿಗೆ ಅಭಿಮಾನಿಗಳು ಎಂತ ಕರಿಸತಕ್ಕ. ಕಮಲಸಂಭವ-ಬ್ರಹ್ಮದೇವರು, ಭವಸುರೇಂದ್ರಾದ್ಯಮರರು-ರುದ್ರದೇವರು, ಇಂದ್ರದೇವರು. ಇನ್ನೂ ಯಾವತ್ತು ದೇವತೆಗಳು, ಸ್ವಮಹಿಮೆಗಳ - ಶ್ರೀಪರಮಾತ್ಮನ ಮಹಾ ಮಹಿಮವನ್ನ, ತಿಳಿಯಲರಿಯರು - ಸಾಕಲ್ಯೇನ ತಿಳಿಯೋದಕ್ಕೆ ಅರಿಯರು. ಅಂಥಾ ಜ್ಞಾನ ರಮಾಬ್ರಹ್ಮಾದಿಗಳಿಗೇ ಇಲ್ಲ. ಸಮಿತ-ತಮ್ಮ ತಮ್ಮ ಯೋಗ್ಯತಾನುಸಾರ ಮಿತದಿಂದ ಸಹಿತವಾದ ಗುಣಗಳ ಕಾಣೋಪರಾಗತಾರೆ. ಅನುದಿನದಿ -ಶ್ರೀಪರಮಾತ್ಮನು ಪ್ರತಿದಿವಸದಲ್ಲೂ ರಮಾಬ್ರಹ್ಮಾದಿ ತೃಣಾಂತತ್ರಿವಿಧ ಜೀವರ, ಏಕಕಾಲವಚ್ಛೇದೇನ ಅವರವರ ಯಾವತ್ತು ಸ್ವರೂಪ ಬಾಹ್ಯ ಗುಣಗಳನ್ನು, ಸರ್ವಜ್ಞ-ಸರ್ವಜ್ಞನಾದ ಪ್ರಯುಕ್ತ ತಿಳಿದಿದ್ದಾನೆ. ಆದ್ಯಂತ ಮಧ್ಯಗಳರಿವ – ಈ ರಮಾ ಬ್ರಹ್ಮಾದಿಗಳ ಉತ್ಪತ್ತಿಯೇನು, ಸ್ಥಿತಿಯೇನು, ಲಯವೇನು ಸರ್ವವೂ ತಿಳಿದಿದ್ದಾನೆ. ಇವರು ಶ್ರೀಪರಮಾತ್ಮನ ವಿವಕ್ಷಾದಿಂದ ಅಲ್ಪಜ್ಞರು. ರುದ್ರಾದಿಗಗಳು ಇವರಕಿಂತಲೂ ಅಲ್ಪಜ್ಞರು ಎಂತ ತಾತ್ಪರ್ಯ. ಶ್ರೀಪರಮಾತ್ಮನ ಸರ್ವಜ್ಞತೆ ಇಷ್ಟೇ ಅಲ್ಲ. ಅದು ಆದ್ಯಂತ ಶೂನ್ಯಗಳು. ಇದು ಅನುಪಚಾರಿಕ ದೃಷ್ಟಾಂತವೆಂದು ತಾತ್ಪರ್ಯ. ॥೩೦॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ-

ಪರಮಾತ್ಮನು ಅಪಾರಮಹಿಮನೆಂದು ಹೇಳುತ್ತಾರೆ, ಇಷ್ಟೇ ಎಂದು ಮಿತಿಯೇ ಇಲ್ಲದ ಮಹಿಮೆಯುಳ್ಳವನು ಶ್ರೀಹರಿಯು. ಇವನ ಅಪಾರವಾದ ಗುಣಗಳನ್ನು ಜನರು ತಿಳಿಯಬೇಕಾದರೆ ಶ್ರುತಿಗಳಿಂದಲೂ, ಸ್ಮೃತಿಗಳಿಂದಲೂ ತಿಳಿಯಬೇಕು. ಆದರೂ ಆ ಶ್ರುತಿ ಸ್ಮೃತಿಗಳು ತಮಗೆ ಗೋಚರವಾದಷ್ಟು ಮಹಿಮೆಗಳನ್ನು ಹೇಳುವವೇ ಹೊರತು ಸಾಕಲ್ಯೇನ ಭಗವನ ಹಿಮೆಗಳನ್ನು ಹೇಳಲಾರವು. ಏಕೆಂದರೆ, **ಸಮಿತ ವರ್ಣಾತ್ಮಕ** -ಅಕ್ಷರಗಳು ಪರಿಮಿತಿ ಉಳ್ಳವು. ಆ ಅಕ್ಷರಾತ್ಮಕವಾದ ಶ್ರುತಿ ಸ್ಮೃತಿಗಳಿಗೂ ಪರಿಮಿತಿ ಉಂಟು. ಅಪರಿಮಿತವಾದ ಭಗವಂತನ ಗುಣಗಳನ್ನು ಪರಿಮಿತಿಯುಳ್ಳ ಶ್ರುತಿ ಸ್ಮೃತಿಗಳು ಕೊನೆಗಾಣುವುದೆಂತು ? ಎಂದೆಂದಿಗೂ ಆಗುವುದಿಲ್ಲ. ತದಭಿಮಾನಿಗಳೆಂದೆನಿಸುವ ಬ್ರಹ್ಮ ರುದ್ರಾದಿಗಳೂ ಸಂಪೂರ್ಣವಾಗಿ

ಅರಿಯರು. ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಬಲ್ಲರು. ಆ ಮಹಿಮೆಗಳ ಕೊನೆಗಂಡವರಾರು ? ಅಂದರೆ, ಸರ್ವಜ್ಞನಾದ ಪರಮಾತ್ಮನೊಬ್ಬನೇ ತನ್ನ ಮಹಿಮೆಗಳ ಆದ್ಯಂತ ಮಧ್ಯಗಳನ್ನು ಬಲ್ಲವನೆಂದು ತಾತ್ಪರ್ಯ. ॥೩೦॥

## (೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ

"ಅಮಿತೇತಿ"॥ ಸಮಿತ ಮಿಳಿತ, ಗಮಿಸಲಾಪವೆ–ಸಂಪೂರ್ಣ ಸ್ತೋತ್ರ ಮಾಡಲಾರವು ಎಂತ ತಾತ್ಪರ್ಯ. ॥೩೦॥

## (೪) ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

"ಅಮಿತ"–ಇತಿ ॥ ಅಪರಿಮಿತಃ ॥ ಗಮಿಸಲಾಪವೆ ? – ತಿಳಿದಾವೇ ?। "ಸ್ವಮಹಿಮೆ"–ಇತಿ ॥ ಸ್ವಸ್ವಮಹಾತ್ಮ್ಯಮ್ ॥ ಅರಿವ = ರಮಾದ್ಯುದ್ದೇಶ್ಯ ಕೋಪ ದಿಶ್ಯಮಾನ ಗುಣಾನಾಂ ಇತಿ॥ "ಅನಂತತ್ವಾತ್ ಮಯಾऽಪಿ ಹಿ ॥ ನ ಶಕ್ಯಂತೇ"॥ ಇತಿ ವಿರೋಧಃ ಅನ್ಯಥಾ॥ ಮಯಾ ಅಸಂಖ್ಯತ್ವಾತ್ ತಥಾ ನ ಕ್ರಿಯತೇ॥ ನ ಅವಿಜ್ಞಾನಾತ್॥ ಅನಂತಮಪಿ ವೇತ್ತೀಶಃ ಅನಂತತ್ವಂ ತಥೈವ ಚ॥ ಅನಂತಸ್ಯ ತು ಸಂಖ್ಯಾನೇನ ತು ಸರ್ವಜ್ಞತಾ ಭವೇತ್॥ ಅನಂತಮಪಿ ವೇತ್ತೀಶಃ ಪ್ರತ್ಯೇಕಂ ಚ ವಿಶೇಷತಃ॥ ಸರ್ವಜ್ಞ ತ್ವಾನ್ನ ಸಂಖ್ಯಾನಂ ಅಸಂಖ್ಯಸ್ಯ ಕುತೋಮನಾ॥"–ಇತಿ ಏಕಾದರ ತಾತ್ಪರ್ಯೋಕ್ತೇ ॥ ಫಲಿಮೋಕ್ತ ರೇಷಾ. ॥೩೦॥

## ಕನ್ನಡಾರ್ಥ

ಶ್ರೀ ಪರಮಾತ್ಮನ ಗುಣಾತಿಶಯಗಳ ಅನಂತತ್ವವನ್ನು ತಿಳಿಸುತ್ತಾರೆ, "ಅಮಿತ ಮಹಿಮನ"-ಎಂಬ ಪದ್ಯದಿಂದ.

ಅಸಮ = ಅಪರಿಮಿತ. ಗಮಿಸಲಾಪವೇ ? - ತಿಳಿಯುತ್ತವೆಯೇ ? ಎಂದಿಗೂ ಇಲ್ಲವೆಂದರ್ಥ. ಸ್ವಮಹಿಮನು = ರಮಾ ಮೊದಲಾದವರನ್ನು ಉದ್ದೇಶಿಸಿ ತೋರಿದ ನಿನ್ನ ಮಹಾತ್ಮೆ - ಎಂದರ್ಥಮಾಡಿಕೊಳ್ಳಬೇಕು. ಇಲ್ಲ

ದಿದ್ದರೆ. "ಅನಂತವಾಗಿರುವುದರಿಂದ, ಅಸಂಖ್ಯಾತವಾಗಿರುವುದರಿಂದ, ನಾನು ಅವುಗಳ ಸಂಖ್ಯಾ ಪರಿಗಣೆಯನ್ನು ಮಾಡುವುದಿಲ್ಲ" – ಎಂದು ಮೊದಲಾದ ಪ್ರಮಾಣ ವಚನಗಳಿಂದ ವಿರೋಧ ಬರುತ್ತದೆ.

**ಶ್ರೀಮದ್ಭಾಗವತ ಏಕಾದಶ ಸ್ಕಂಧ ತಾತ್ಪರ್ಯದಲ್ಲಿ** (ಅ. ೧೬-೧೭) **"ಕಾಲೇನ ಪರಮಾಣೂನಾಂ"** ಎಂಬ ಶ್ಲೋಕದ ವ್ಯಾಖ್ಯಾನಕಾಲದಲ್ಲಿ ಈ ವಿಷಯ ನಿರೂಪಿತವಾಗಿದೆ. "ಕಾಲೇನ - ಸರ್ವ ಗುಣಾತ್ಮಕನಾದ ನನ್ನಿಂದ, ಅಸಂಖ್ಯತ್ವಾತ್ - ಸಂಖ್ಯೆ ಇಲ್ಲದಿರುವದರಿಂದ, ತಥಾ ಪರಮಾಣುಗಳಂತೆ ಅನಂತಾನಂತ ಕೋಟಿ ಬ್ರಹ್ಮಾಂಡಗಳ ಸೃಷ್ಟಿ ಕರ್ತನಾದ ನನ್ನ ವಿಭೂತಿಗಳ ಸಂಖ್ಯಾ ಪರಿಗಣೆಮಾಡುವುದಿಲ್ಲ," - ಎಂದು ಶ್ರೀ ಕೃಷ್ಣನು ಉದ್ಧವನಿಗೆ ಉಪದೇಶಿಸಿದ ಶ್ಲೋಕದ ತಾತ್ಪರ್ಯಾರ್ಥವು. ಆದರೆ ಅಲ್ಲಿರುವ ಸಂಖ್ಯೆಗಳನ್ನು ಅರಿತವನಲ್ಲ ಎಂದು ಅರ್ಥವಲ್ಲ, ಅನಂತವನ್ನು ಅನಂತಯುಕ್ತವಾಗಿ ತಿಳಿಯುವುದು ಜಗದೀಶ್ವರನಿಗೆ ಭ್ರಮೆ ತಂದುಕೊಡುವುದು, ಇದರಿಂದ ಶ್ರೀ ಪರಮಾತ್ಮನ ಸರ್ವಜ್ಞತ್ವಕ್ಕೆ ಬಾಧಿತವಾಗುವುದು, ಸರ್ವಜ್ಞನಾದುದರಿಂದ ಅನಂತವನ್ನು ಪ್ರತ್ಯೇಕವಾಗಿಯೂ ವಿಶೇಷವಾಗಿಯೂ ತಿಳಿಯುತ್ತಾನೆ, ವಿಭೂತಿರೂಪಗಳು ಅಸಂಖ್ಯಾತವಾಗಿರುವುದರಿಂದ ಆ ರೂಪಗಳೆಲ್ಲವೂ ಸ್ವಗತಭೇದವಿವರ್ಜಿತನಾದ ಶ್ರೀಪರಮಾತ್ಮನ ರೂಪಗಳೇ ಆಗಿರುವುದರಿಂದ, ಅವನ ಸರ್ವಜ್ಞತ್ವಕ್ಕೆ ಬಾಧಕ ಬರುವುದಿಲ್ಲ. ॥೩೦॥

## (೫) ಶ್ರೀಗುರುಹೃದಯಪ್ರಕಾಶಿಕೆ

ಅನಂತರೂಪ ಗುಣಜ್ಞಾನವು, ಅನಂತಸ್ವಾತ್ಮಕ ಗುಣರೂಪನಾದ್ದರಿಂದ, ದೇವರಿಗೆ ಹೊರ್ತು ಇತರರಿಗೆ ಇಲ್ಲವೆಂದು ಸ್ಮರಣಾರ್ಥ ತಿಳಿಸುತ್ತಾರೆ, ಅಮಿತವೆಂದು. ಅಮಿತವೆಂಬ ಅನಂತಗುಣರೂಪ ಮಹಿಮೆಯುಳ್ಳ ದೇವರ, ಅಪಾರವೆಂಬ ಅನಂತಗುಣಗಳನ್ನು, ಸಮಿತ ಎಂದರೆ, ಐವತ್ತೊಂದು ವರ್ಣವೆಂದು ಗೊತ್ತುಕೊಂಡಿರುವ, ವರ್ಣರೂಪಗಳಾದ ಶ್ರುತಿ-ಸ್ಮೃತಿಗಳು

ಗಮಿಸಲಾಪವೇ ಅಂದರೆ, ಕೊನೆಗಾಣಬಲ್ಲವೆ ? ಅರಿಯುವೆಂದರ್ಥ. ಆ ಶ್ರುತಿ ಸ್ಮೃತ್ಯಭಿಮಾನಿಗಳಾದ ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ದೇವತೆಗಳು ಅರಿಯರು. ತನ್ನ ಮಹಿಮೆ, ಗುಣ ಮುಂತಾದ್ದರ ಆದ್ಯಂತಮಧ್ಯಗಳನ್ನು, ಸರ್ವಜ್ಞನಾದ್ದರಿಂದ ದೇವರೇ ಸ್ವಾತ್ಮಕವೆಂದು ಬಲ್ಲನೆಂತ ಅರ್ಥ ॥೩೦॥

# ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀಪರಮಾತ್ಮನು ಅಪಾರ ಗುಣಸಂಪನ್ನನು. ಆವನ ಅನಂತಾನಂತ ಗುಣಸಮೂಹಗಳು. ರೂಪವಿಶೇಷಗಳು, ಕ್ರಿಯಾವಿಶೇಷಗಳು ಅಮಿತವಾದುವು. ಅವುಗಳನ್ನ ಇಷ್ಟೇ ಎಂದು ಪರಿಗಣಿಸಲು ಅನಾದ್ಯಂತ ಕಾಲಕ್ಕೂ ಸಾಧ್ಯವಿಲ್ಲ. ಈ ಕಾರಣದಿಂದ ಶ್ರೀಪರಮಾತ್ಮನನ್ನು **ಅಮಿತ ಮಹಿಮ** ಎಂದಿದ್ದಾರೆ. ಅಂತಹ ಅಮಿತಮಹಿಮನ ಗುಣಗಳು ಅಪಾರ. ಭೂಮಿಯ ಮೇಲಿರುವ ಮಣ್ಣಿನ ಕಣಗಳನ್ನಾದರೂ ಒಂದು ವೇಳೆ ಎಣಿಸಲು, ಸಾಧ್ಯವಾದೀತು. ಸಮುದ್ರದ ಅಪಾರ ಜಲರಾಶಿಯಲ್ಲಿರುವ ನೀರಿನ ಕಣಗಳನ್ನು ಎಣಿಸಲು ಸಾಧ್ಯವಾಗಬಹುದು. ಆದರೆ ಅನಾದ್ಯನಂತಕಾಲದಿಂದ ಪರಿಪೂರ್ಣನಾಗಿರುವ ಆ ಅಮಿತ ಮಹಿಮಾಸಂಪನ್ನನ ಗುಣಗಳನ್ನೆಣಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ತಿಳಿಸುತ್ತಾರೆ. **ಅಮಿತಮಹಿಮ**-ಎಂಬ ಪ್ರಸಕ್ತ ೩೦ನೆಯ ಪದ್ಯದಿಂದ.

೨. ಶ್ರೀಪರಮಾತ್ಮನ ಸ್ವರೂಪಪರಿಚಯವು ನಮಗೆ ವೇದಾದಿಗಳಿಂದ ಆಗುವುದು. ವೇದಗಳು ಅನಂತ ಹಾಗೂ ಅಪಾರ. ಅನಂತ ಸಂಖ್ಯಾತ್ಮಕವಾದ ವೇದಗಳು ಅಪೌರುಷೇಯಗಳು. ಶ್ರೀಹರಿಯು ವೇದ ಪ್ರತಿಪಾದ್ಯನು. ಸದಾ ಸರ್ವಕಾಲಗಳಲ್ಲಿಯೂ ವೇದಗಳು ಆ ಮಹಾ ಮಹಿಮನ ಗುಣಸ್ತೋಮಗಳನ್ನು ಸ್ತೋತ್ರಮಾಡುತ್ತಲೇ ಇವೆ. ಅಂತೆಯೇ ಶ್ರುತ್ಯನುಸಾರಿಯಾದ ಪುರಾಣ, ಇತಿಹಾಸಾದಿಗಳು ಪೌರುಷೇಯವಾದರೂ. ಅವುಗಳಲ್ಲಿ ಆ ಅಪಾರಗುಣರತ್ನಾಕರನ ಸ್ತೋತ್ರವಿದೆ, ಇಂತಹ

ಶ್ರುತಿ ಸ್ಮೃತಿಗಳು ವರ್ಣಾತ್ಮಕವಾಗಿವೆ. ಅಂದರೆ ೫೧ ವರ್ಣಗಳಿಂದ ಕೂಡಿ, ಪದ ವಾಕ್ಯರೂಪಗಳಲ್ಲಿ ಶ್ರೀಮನ್ನಾರಾಯಣನ ಅಗಣಿತ ಮಹಿಮಾತಿಶಯುಗಳನ್ನ ಹೊಗಳುತ್ತಿವೆ. ವರ್ಣಗಳು ಪರಿಮಿತಿ ಉಳ್ಳವು. ಅಂದರೆ ಸಮಿತವಾಗಿವೆ. ಹೀಗೆ **ಸಮಿತ ವರ್ಣಾತ್ಮಕ ಶ್ರುತಿ ಸ್ಮೃತಿಗಳಿಂದ** ಶ್ರೀ ಹರಿಯು ಪ್ರತಿಪಾದ್ಯನು. ಅಂತಹ ಅನಂತಸಂಖ್ಯಾತ್ಮಕವಾದ ವೇದರಾಶಿಗಳು ಮತ್ತು ಪುರಾಣ ಇತಿಹಾಸಾದಿ ಸ್ಮೃತಿಗಳು ಸಾಕಲ್ಯೇನ ಆ ಅಗಣಿತಗುಣನಿಧಿಯ ಮಹಿಮೆಯನ್ನು ವರ್ಣಿಸಲಾರವು. ಈ ಅಭಿಪ್ರಾಯವನ್ನೇ ದಾಸರಾಯರು **ಗಮನಿಸಲಾಪನೆ** ಎಂದಿದ್ದಾರೆ,

೩. ವೇದಪ್ರತಿಪಾದ್ಯರೂ ಮತ್ತು ವೇದಾಭಿಮಾನಿಗಳೂ ಆದ ಚತುರ್ಮುಖಬ್ರಹ್ಮದೇವರು (**ಕಮಸಂಭವ**), ವಾಯುದೇವರು. ರುದ್ರ ದೇವರು (**ಭವ**) (ಇದರಿಂದ ಗರುಡ ಶೇಷರೂ ಗ್ರಾಹ್ಯ), ಇಂದ್ರಾದಿ ಸಕಲ ದೇವತಾವರ್ಗ (**ಸುರೇಂದ್ರಾದ್ಯಮರರು**), ಅವನ ಗುಣ ರೂಪಕ್ರಿಯಾ, ಮಹಾಮಹಿಮೆಗಳನ್ನ ತಮ್ಮ ತಮ್ಮ ಯೋಗ್ಯತಾನುಸಾರ ತಿಳಿದು. ಉಪಾಸನೆ ಮಾಡುವರು. ಈಶಕೋಟಿಪ್ರವಿಷ್ಟಳಾದ ಶ್ರೀರಮಾದೇವಿಯರಿಗೇ ಶ್ರೀಹರಿಯು ಕ್ಷಣ ಕ್ಷಣಕ್ಕೂ ನೂತನವಾಗಿ ಕಾಣಿಸುತ್ತಾನೆಂದಮೇಲೆ ಇತರರ ಪಾಡೇನು ! ಶ್ರೀಲಕ್ಷ್ಮೀ, ಶ್ರೀಶನ ವಕ್ಷಸ್ಥಳ ನಿವಾಸಿನಿ. ನಾನಾ ರೂಪಗಳಲ್ಲಿ ಅನವರತವೂ ಆತನ ಸೇವೆಮಾಡುತ್ತಿರುವ ಮಹಾಮಹಿಮಳು. ನಿತ್ಯಮುಕ್ತಳೂ, ನಿರ್ವಿಕಾರಳೂ ಆದ ಆ ಜಗನ್ಮಾತೆಯೇ ಶ್ರೀಪರಮಾತ್ಮನ ಪಾದದ ಪರಬೆಳಿನ ತುದಿಯಲ್ಲಿರುವ ನಖಾಗ್ರಯುಕ್ತ ಗುಣಗಳ ಪಾರವನ್ನ ನೆಲೆಕಾಣದೇ ಇನ್ನೂ ಭಯ ಭಕ್ತಿ ಆಶ್ಚರ್ಯಗಳಿಂದ ಆಲೋಚಿಸುತ್ತಿದ್ದಾಳೆಂದಮೇಲೆ, ಅವಳಿಗಿಂತ ಕೋಟಿಗುಣದಿಂದ ಅವರರಾದ ಬ್ರಹ್ಮಾದಿದೇವತೆಗಳು ತಿಳಿಯಲು ಸಾಧ್ಯವೇ ! ಎಂದೆಂದಿಗೂ **ತಿಳಿಯಲರಿಯರು.**

೪. ಶ್ರೀಹರಿಯು **ಸರ್ವಜ್ಞನು.** ಸರ್ವವನ್ನೂ ತಿಳಿದ ಆ ಪರಮಾತ್ಮನೊಬ್ಬನೇ ತನ್ನ ಅಗಾಧ ಅಪರಿಮಿತ ಮಹಿಮೆಗಳ ಆದಿ ಮಧ್ಯ ಅಂತಗಳನ್ನು ಬಲ್ಲ. ಶ್ರೀಪರಮಾತ್ಮನು **ಸ್ವಗತಭೇದವಿವರ್ಜಿತನು.** ಅಂದರೆ ಅವನ

ಅನಂತಾನಂತ ಗುಣಗಳಿಗೂ, ರೂಪಗಳಿಗೂ, ಕ್ರಿಯೆಗಳಿಗೂ ಅವತಾರಗಳಿಗೂ ಕಿಂಚಿತ್ತೂ ಭೇದವಿಲ್ಲ. ಎಲ್ಲವೂ ಪರಿಪೂರ್ಣ ಒಂದೊಂದು ಗುಣದಲ್ಲಿ ಅನಂತಾನಂತ ಗುಣಗಳಿರುವುವು. ಇದನ್ನೇ **ಸ್ವಮಹಿಮೆಗಳ** ಎಂದಿದ್ದಾರೆ. ತನ್ನದೇ ಆದ, ತನ್ನಿಂದ ಅನನ್ಯಗಳಾದ ಮಹಿಮಾಸಾಗರನ ಆದಿ ಮಧ್ಯಾಂತ ಗಳನ್ನ ಸರ್ವಜ್ಞನಾದ್ದರಿಂದ ಅವನೇ ಪೂರ್ಣವಾಗಿ ಬಲ್ಲನೇ ಹೊರತು ತದನ್ಯರು ಸಾಕಲ್ಯೇನ ಅರಿಯಲು ಅಸಾಧ್ಯರು ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥೩೦॥

## ಪದ್ಯ ೩೧

**ಮೂಲ**

> ವಿತ್ತ ದೇಹಾಗಾರ ದಾರಾ ।
> ಪತ್ಯ ಮಿತ್ರಾದಿಗಳೊಳಗೆ ಹರಿ ।
> ಪ್ರತ್ಯಗಾತ್ಮನು ಎಂದೆನಿಸಿ ನೆಲೆಸಿಪ್ಪನೆಂಪರಿದು ॥
> ನಿತ್ಯದಲಿ ಸಂತೃಪ್ತಿಬಡಿಸುತ ।
> ಉತ್ತಮಾಧಮ ಮಧ್ಯಮರ ಕೃತ ।
> ಕೃತ್ಯನಾಗುನ್ಮತ್ತನಾಗದೆ ಭೃತ್ಯ ನಾನೆಂದು ॥

**ಅವತರಣಿಕೆ :**

ಹಿಂದಿನ ಪದ್ಯದಲ್ಲಿ ಅಪಾರಮಹಿಮಾ ಸಂಪನ್ನನಾದ ಆ ಪರಮಾತ್ಮನ ಅಗಣಿತ ಗುಣರಾಶಿಗಳನ್ನು ರಮಾದಿ ಸಮಸ್ತ ದೇವತಾವೃಂದ ಸಾಕಲ್ಯೇನ ಅರಿಯಲಾರರು ಎಂದು ತಿಳಿಸಿದರು.

ನಮ್ಮ ದ್ರವ್ಯ, ದೇಹ, ಮನೆ, ಪತ್ನೀ, ಪುತ್ರರು, ಮಿತ್ರರು,

ಭಾಂದವರು ಇವರಲ್ಲಿ ಸಕಲರಲ್ಲೂ ಬಿಂಬಿರೂಪಿಯಾದ ಶ್ರೀಹರಿಯು ತದಾಕಾರನಾಗಿ ತದ್ಭಿನ್ನನಾಗಿದ್ದು ನೆಲೆಸಿದ್ದು ಸರ್ವದಾ ಅವರನ್ನೆಲ್ಲಾ ಸಂತೃಪ್ತಿ ಪಡಿಸುತ್ತಾನೆಂದು ತಿಳಿದು, ಉತ್ತಮ ಮಧ್ಯಮ ಮತ್ತು ಅಧಮರಲ್ಲಿ ಅವರ ಅವರ ಯೋಗ್ಯತಾನುಸಾರ ನಡೆಯುತ್ತಾ ಎಂದೆಂದಿಗೂ ಅಹಂಕಾರ ಮಮಕಾರ ದಿಂದ ಗ್ರಸ್ತನಾಗದೆ ಭಗತ್ಪ್ರಭುವಾದ ಶ್ರೀಪರಮಾತ್ಮನಿಗೆ ನಾನು ಎಂದೆಂದೂ (ಅನಾದ್ಯನಂತಕಾಲಕ್ಕೂ) ದಾಸನೆಂದು ತಿಳಿದಿರಬೇಕೆಂದು ಹೇಳುತ್ತಾರೆ, ಪ್ರಸಕ್ತ ಸಂಧಿಗತ ೩೧ ನೆಯ ಈ ಪದ್ಯದಿಂದ. ॥೩೧॥

## ಪ್ರತಿಪದಾರ್ಥ

**ವಿತ್ತ** = ನಾವು ಸಂಪಾದಿಸಿದ ದ್ರವ್ಯ, **ದೇಹ** = ಸಾಧನಶರೀರವೆಂದೆನಿಪ ಈ ದೇಹ, **ಆಗಾರ** = ನಾವು ವಾಸಿಸುವ ಮನೆ, **ದಾರಾ** = ಹೆಂಡತಿ, **ಅಪತ್ಯ** = ಮಕ್ಕಳು, **ಮಿತ್ರಾದಿಗಳ** = ಸ್ನೇಹಿತರು ಇವರೇ ಮುಂತಾದವರ, **ಒಳಗೆ** = ಅಂತರ್ಯಾಮಿಯಾಗಿ, **ಹರಿ** = ಅವರವರಿಗೆ ಬಿಂಬರೂಪಿಯಾದ ಶ್ರೀಪರಮಾತ್ಮನು, **ಪ್ರತ್ಯಗಾತ್ಮನು** = ಅವರಲ್ಲಿ ತದಾಕಾರನಾಗಿ ಅವರಿಂದ ಅತ್ಯಂತಭಿನ್ನನಾಗಿ, **ಎಂದೆನಿಸಿ** = ಈ ರೀತಿ ಪ್ರಸಿದ್ಧನಾಗಿ, **ನೆಲೆಸಿಪ್ಪನು** = ಆವಾಸವಾಗಿದ್ದಾನೆ, **ಎಂದರಿತು** = ಈ ಪ್ರಕಾರ ತಿಳಿದು, **ನಿತ್ಯದಲಿ** = ಪ್ರತಿದಿನದಲ್ಲೂ, **ಸಂತೃಪ್ತಿ ಬಡಿಸುತ** = ಅವರವರ ಅಭಿಲಾಷೆಗಳನ್ನು ಪೂರೈಸುತ್ತಾ, ಅವರನ್ನು ತೃಪ್ತಿ ಪಡಿಸುತ್ತಾ, **ಉತ್ತಮ** = ತನಗಿಂತ ಶ್ರೇಷ್ಠರಾದವರು, **ಅಧಮ** = ತನಗಿಂತ ಅವರರಾದವರನ್ನು, **ಮಧ್ಯಮರ** = ತನಗೆ ಸರಿಸಮಾನಸ್ಕಂಧರಾರವರನ್ನು, **ಕೃತ್ಯನಾಗುತ** = ಅವರವರ ಯೋಗ್ಯತಾನುಸಾರ ಸಂತೃಪ್ತಿಪಡಿಸುವ ದ್ವಾರಾ ಕೃತಾರ್ಥನಾಗುತ್ತಾ, **ಉನ್ಮತ್ತನಾಗದೆ** = ಅಹಂಕಾರ ಮಮಕಾರಗಳಿಂದ ಗ್ರಸ್ತನಾಗದೆ (ಅಹಂಕಾರ ದಿಂದ ಬೀಗದೆ), **ಭೃತ್ಯನಾನೆಂದು** = ಜಗತ್ಪ್ರಭುವಾದ ಆ ಸರ್ವಶಕ್ತ ಪರಮಾತ್ಮನಿಗೆ ನಾನು ನಿತ್ಯದಲ್ಲೂ (ಸದಾ ಸರ್ವದಾ) ದಾಸನು ಎಂಬ ಉತ್ತಮಾನುಸಂಧಾನದಿಂದ ನಡೆದುಕೊಳ್ಳಬೇಕೆಂದು ತಾತ್ಪರ್ಯ. ॥೩೧॥

# ವ್ಯಾಖ್ಯಾನಗಳು

## (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸಂಸಾರಕ್ರಮದಲ್ಲಿ ಇರತಕ್ಕ ಕ್ರಮವನ್ನು ಹೇಳತಾರೆ.

ವಿತ್ತದೇಹಾಗಾರ-ದ್ರವ್ಯ, ತನ್ನ ದೇಹ, ತನ್ನ ಮನೆ, ದಾರಾಪತ್ಯ ಮಿತ್ರ-ಹೆಂಡತಿ, ಮಕ್ಕಳು, ಸ್ನೇಹಿತರು, ಆದಿಗಳೊಳಗೆ- ಇನ್ನೂ ಪರ ಕೀಯರು ಇವರಲ್ಲಿ, ಹರಿ-ಅಪರವರಿಗೆ ಬಿಂಬರೂಪಿ ಪರಮಾತ್ಮ, ಪ್ರತ್ಯ ಗಾತ್ಮನು-ತದಾಕಾರದಿಂದ ಪ್ರತ್ಯೇಕವಾದ ತನ್ನ ಸ್ವಸ್ವರೂಪದೇಹದಿಂದ ತದಾತ್ಮಕನು ಆಗಿದ್ದಾನೆ ಎಂತ, ಎಂದೆನಿಸಿ- ಕರೆಸಿದವನಾಗಿ ಅವರಲ್ಲಿ, ನೆಲೆಸಿಪ್ಪ-ಅವಾಸನಾಗಿದ್ದಾನೆ, ಎಂದರಿದು-ಎಂತ ತಿಳಿದವನಾಗಿ, ನಿತ್ಯದಲಿ- ಪ್ರತಿದಿನದಲ್ಲೂ ದ್ರವ್ಯಾದಿಗಳ ರಕ್ಷಣವೇನು, ಮನಿಗಳನ್ನು ಅಲಂಕಾರ ಮಾಡೋಣವೇನು, ದಾರಾ, ಪುತ್ರ, ಸ್ವಜನ, ಪರಜನಾದಿಗಳನ್ನು ಸಂರಕ್ಷಣ ಮಾಡೋಣವೇನು, ಜಡಜೀವರ ರಕ್ಷಣ ಎಂದರೆ ವೃಕ್ಷಾದಿಗಳನು ಸಂರಕ್ಷಣ ಮಾಡೋಣವೇನು, ಶುದ್ಧ ಜಡಗಳಾದ ವಸ್ತುಗಳನ್ನು ಪರಿಶುದ್ಧ ಮಾಡೋಣವೇನು, ಇತ್ಯಾದಿಗಳು ಯಾವತ್ತು ಶ್ರೀಪರಮಾತ್ಮನ ಸೇವಾ ಎಂತ ತಿಳಿದೂನೂ, ಉತ್ತಮಾಧಮಮಧ್ಯಮರ- ತನಕ್ಕಿಂತಲೂ ಜ್ಞಾನದಿಂದ ಶ್ರೇಷ್ಠರಾದವರಲ್ಲೂನೂ, ತನಗೆ ಸಮಾನರಾದವರಲ್ಲೂನೂ, ತನಗೆ ನೀಚ ರಾದವರಲ್ಲೂನೂ, ತಾರತಮ್ಯಾನುಸಾರ ನಡಕೊಂಡು ಅವರುಗಳಲ್ಲಿ ಶ್ರೀಹರಿ ಪ್ರತ್ಯಗಾತ್ಮನಾಗಿದ್ದಾನೆ ಎಂತ ತಿಳಿದು ಅಂಥವರುಗಳನ್ನು ಸಂತೃಪ್ತಿ ಪಡಿಸುತ ಛಂದಾಗಿ ಅನ್ನ-ವಸ್ತ್ರಾದಿಗಳನ್ನು ಕೊಟ್ಟು ಪರಮಾತ್ಮ ತೃಪ್ತನಾಗಲಿ ಎಂತ ಅವರನ್ನ ತೃಪ್ತಿಪಡಿಸುತ್ತಾ, ಕೃತಕೃತ್ಯನಾಗು- ಮಾಡತಕ್ಕ ವ್ಯಾಪಾರ ದಿಂದ ಧನ್ಯನಾಗು, ಉನ್ಮತ್ತನಾಗದೆ-ನನಗೆ ಏನೂ ಕಡಿಮೆ ಇಲ್ಲ ಎಂತ ಅಹಂಕಾರಪಡದೆ, ಮದಾಂಧನಾಗದೆ ಯೋಗ್ಯನಾಗಿ ಶ್ರೀಪರಮಾತ್ಮಗೆ, ಭೃತ್ಯನಾನೆಂದು-ಭೃತ್ಯ ಎಂತ ಎನಿಸಿದವನಾಗು.

**ತಾತ್ಪರ್ಯ**

ಅಹಂ ಮಮತಾದಿಗಳು ತ್ಯಾಗ ಮಾಡಿ, ಸದಾ ಶ್ರೀಪರಮಾತ್ಮ ಸರ್ವೋತ್ತಮನೆಂದು ತಿಳಿದು, ಸಂಸಾರದಲ್ಲಿ ಇದ್ದು ವಿರಕ್ತನಾಗಿ ಮಹಾ ಪುರುಷಾರ್ಥವನ್ನು ಸಂಪಾದಿಸಬೇಕು ಎಂತ ಹೇಳೋವರಾಗಿದ್ದಾರೆ ಎಂತ ತಾತ್ಪರ್ಯ. ಇದರಲ್ಲಿ ಮಿಥ್ಯಾವಾದಿಗಳು ವ್ಯಾವರ್ತನರು. ॥೩೧॥

**೨) ಭಾವ ಪ್ರಕಾಶಿಕೆ-ವ್ಯಾಖ್ಯಾನ**

ತಾನು ತನ್ನ ಹೆಂಡರು ಮಕ್ಕಳು, ಧನವೊದಲಾದವುಗಳಲ್ಲಿ ಪರಮಾತ್ಮನೇ ತದಾಕಾರನಾಗಿ ಅವರಲ್ಲಿರುವನೆಂದು ಭಾವಿಸಿ, ಹೆಂಡರು ಮಕ್ಕಳನ್ನು ತನ್ನ ಪ್ರೀತಿಗೋಸ್ಕರ ಬಹಳ ಮಮತೆಯಿಂದ ನಾನು ಸಾಕದಿದ್ದರೆ ಅವರ ಗತಿಯೇನು ? ಎಂಬ ಮಮತೆಯಿಂದಲೂ, ಸ್ವತಂತ್ರ ಕರ್ತೃತ್ವಾಭಿಮಾನದ್ದಿಂದ ಹುಚ್ಚನಾಗದೆ, ಹೆಂಡತಿ ಮಕ್ಕಳ ರಕ್ಷಣೆಯೂ ಸಹ ಭಗವತ್ಪೂಜೆಯು, ನಾನು ಆ ಪರಮಾತ್ಮನ ಭೃತ್ಯನು, ನನ್ನೊಳಗಿದ್ದು ಅವನೇ ಮಾಡಿಸುವನು ಎಂದು ಭಾವಿಸಿ ಹೆಂಡರು ಮಕ್ಕಳು ಮೊದಲಾದವರು ಉತ್ತಮ ಅಧಮ ಮಧ್ಯಮರಾದರೂ, ಅಂದರೆ, ಅವರು ನಿನ್ನಲ್ಲಿ ಹೆಚ್ಚು ಪ್ರೀತಿಮಾಡಲಿ, ಉದಾಸೀನವಾಗಿರಲಿ, ದ್ವೇಷವನ್ನಾದರೂ ಮಾಡಲಿ, ಅಂತಹವರಲ್ಲಿ ಅವರಂತೆ ನೀನಿರದೆ, ಎಲ್ಲರಲ್ಲಿಯೂ ಪರಮಾತ್ಮನೇ ಇದ್ದು, ಹಾಗೆ ಮಾಡಿಸುವನೆಂದು ಭಾವಿಸಿ, ನೀನು ಅವರನ್ನು ಸಮನಾಗಿ ಭಾವಿಸು ಅಥವಾ ನಿನಗಿಂತಲೂ ಉತ್ತಮರು, ನಿನಗೆ ಸಮರು, ನಿನಗಿಂತಲೂ ನೀಚರು ಇಂತಹವರಲ್ಲಿ, ಮಧ್ಯಮರು ಸಾಧಾರಣ ಜನರು, ಅಧಮರು ಶ್ವಾನಾದಿಗಳು ಇವರಲ್ಲಿಯೂ ಕೂಡ ಭಗವಂತನು ಸಮನಾಗಿ ಇರುವನು ಎಂದು ಭಾವಿಸಿ, ನಿನ್ನ ಶಕ್ತ್ಯಾನುಸಾರವಾಗಿಯೂ, ಅವರವರ ಯೋಗ್ಯತಾನುಸಾರವಾಗಿಯೂ, ಅವರೆಲ್ಲರನ್ನು ಚೆನ್ನಾಗಿ ತೃಪ್ತಿಪಡಿಸಬೇಕೆಂದು ತಾತ್ಪರ್ಯ ॥೩೧॥

**(೩) ಭಾವದರ್ಪಣ ಟೀಕಾ**

ಧನಾದಿ ವಸ್ತುಗಳಲ್ಲಿ ಪ್ರತ್ಯಗಾತ್ಮನು ಅಂತರ್ಯಾಮಿಯಾಗಿ ಇದ್ದಾ

ನೆಂತಲೂ, ಉತ್ತಮಾಧಮ ಮಧ್ಯಮರ ತೃಪ್ತಿಪಡಿಸುತ ಕೃತಕೃತ್ಯನಾಗೆಂದರೆ, ಮಾಡಲ್ಪಟ್ಟ ಭಗವತ್ಪೂಜಾ ಉಳ್ಳವನಾಗೆಂದು ಹೇಳುತ್ತಾರೆ-ವಿತ್ತೇತಿ ॥೩೧॥

(೩) ವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತಮೂಲ)

ಉಪಸಂಹರತಿ- ವಿತ್ತ- ಇತಿ॥ "ಆತ್ಮಾ ನಾರಾಯಣಃ"॥ ತಸ್ಯೈವ ಹಿ ಕಾಮೇನ- "ಪತ್ಯಾದಿಃ ಪ್ರಿಯೋ ಭವೇತ್॥ ನ ಹಿ ಪತ್ಯಾದೀನಾಂ ಜಾಯಾದೀನಾಂ ಅಹಂ ಪ್ರಿಯಃ ಸ್ಯಾಮ್ ಇತಿ ಕಾಮನಾಮಾತ್ರೇಣ ಪ್ರಿಯತ್ವಂ ಭವತಿ ॥ ಭಗವದಿಚ್ಛಯೈವ ತದ್ಭವತಿ" ॥-ಇತಿ ಬೃಹದ್ಭಾಷ್ಯೇ ॥೩೧॥

**ಕನ್ನಡಾರ್ಥ:**

ವಸ್ತುಗಳಲ್ಲಿ ಪರಸ್ಪರ ಪ್ರೀತಿಯು ಹುಟ್ಟುವುದಕ್ಕೆ ಮುಖ್ಯಕಾರಣವು ಶ್ರೀಪರಮಾತ್ಮನು ಸರ್ವತ್ರ ನೆಲೆಸಿ, ವ್ಯಾಪಕನಾಗಿರುವುದರಿಂದಲೇ. ಆದ್ದರಿಂದ ಅವುಗಳಿಗೆ ತಕ್ಕಂತೆ ತೃಪ್ತಿಪಡಿಸಬೇಕೆಂದು ತಿಳಿಸುತ್ತಾರೆ- **ವಿತ್ತದೇಹಾಗಾರ** ಎಂಬ ಈ ಪದ್ಯದಿಂದ.

**ಬೃಹದಾರಣ್ಯಕೋಪನಿಷತ್ತಿನಲ್ಲಿ**- "ಪತಿ ಪುತ್ರ ಮುಂತಾದವರು ಕಾಮ ಮುಂತಾದ ಇಚ್ಛೆಯಿಂದ ಪರಸ್ಪರ ಪ್ರಿಯರಾಗಲಾರರು. ಶ್ರೀಪರಮಾತ್ಮನ ಇಚ್ಛೆಯಂತೆ ಪ್ರೀತಿಯು ಉತ್ಪನ್ನವಾಗಿ ಪರಸ್ಪರ ಪ್ರಿಯರಾಗುತ್ತಾರೆ. ಪರಮಾತ್ಮನ ಇಚ್ಛೆಯಿಲ್ಲದಿದ್ದರೆ ಯಾರು ಯಾರಿಗೂ ಪ್ರಿಯರಾಗಲಾರರು ಎಂದು ಉಕ್ತವಾಗಿದೆ.

**ಶ್ರೀಮದಾಚಾರ್ಯರು ಭಾಷ್ಯದಲ್ಲಿ** "ಆತ್ಮ"- ಎಂದರೆ ನಾರಾಯಣನು. ಅವನ ಇಚ್ಛೆಯಿಂದಲೇ ಪತಿಪತ್ನಿಯರಲ್ಲಿ ಪರಸ್ಪರ ಪ್ರೀತಿಯುಂಟಾಗುವುದು. ಕಾರಣವೇನೆಂದರೆ, ಹೆಂಡತಿಗೆ ನಾನು ಪ್ರಿಯನಾಗಬೇಕು, ಪತಿಗೆ ನಾನು ಪ್ರಿಯಳಾಗಬೇಕು ಎಂದು ಪತಿ-ಪತ್ನಿ ಮುಂತಾದವರ ಕೇವಲ ಇಚ್ಛೆಯಿಂದಲೇ ಪರಸ್ಪರ ಪ್ರೇಮವು ಉತ್ಪನ್ನವಾಗುವುದಿಲ್ಲ. ಅದು ಶ್ರೀಹರಿಯ

ಇಚ್ಛೆಯಿಂದಲೇ ಹೊರತು ಅನ್ಯಥಾ ಆಗಲಾರದು ಎಂದು ನಿರೂಪಿಸಿರುತ್ತಾರೆ. ॥೩೧॥

## (ಈ) ಶ್ರೀಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ದ್ರವ್ಯಾದ್ವೈತ ಸ್ಮರಣೋಪಾಸನೆ ಪ್ರಕಾರಾಂತರವಾಗಿ ತಿಳಿಸುತ್ತಾರೆ. ಪಿತ್ತವೆಂದು. ಪಿತ್ತವೆಂಬ ಧನ, ಆಗಾರವೆಂಬ ಮನೆ, ದಾರರು ಎಂಬ ಹೆಂಡತಿಯರು, ಅಪತ್ಯ ಎಂಬ ಮಕ್ಕಳು, ಮಿತ್ರರೆಂಬ ಸ್ನೇಹಿತರೇ ವೊದಲಾದ ಸರ್ವರಲ್ಲೂ ಶ್ರೀಹರಿಯು ಪ್ರತ್ಯಗಾತ್ಮನೆಂದು ಕರೆಸಿಕೊಂಡು ನಿರಂತರ ಇರುವನೆಂದು ತಿಳಿದು, ಉತ್ತಮಾಧಮಮಧ್ಯಮರನ್ನು ಅವನ ಅಧಿಷ್ಠಾನವೆಂದು ಸಂತೋಷಪಡಿಸುತ್ತಾ, ಎಲ್ಲರಲ್ಲಿರುವ ಸ್ವಾಮಿಗೆ ತಾನು ಭೃತ್ಯನೆಂದು ತಿಳಿದು ಕೃತಾರ್ಥನಾಗಬೇಕಲ್ಲದೆ, ಎಲ್ಲರಿಗೆ ತಾನು ರಕ್ಷಕನೆಂಬ ಅಭಿಮಾನವೆಂಬ ಹುಚ್ಚುತನವನ್ನು ಹೊಂದಬಾರದೆಂರ್ಥ. ॥೩೧॥

# ಸರ್ವವ್ಯಾಖ್ಯಾನಸಾರಸಂಗ್ರಹ

## ೧. ವಿತ್ತ:—

ನಾವು ಶ್ರಮಪಟ್ಟು ಸಂಪಾದಿಸುವ ದ್ರವ್ಯಕ್ಕೆ ವಿತ್ತ ಎನ್ನುವರು. ಪಿತ್ರಾರ್ಜಿತವಾದ ಸಂಪತ್ತೂ ವಿತ್ತವೇ. ಪ್ರಾಪಂಚಿಕ ಭೋಗ ಭಾಗ್ಯಗಳ ಪ್ರಾಪ್ತಿಯು ವಿತ್ತ ದ್ವಾರಾ. ಹಣವಂತನು ಸಮಾಜದ ದೃಷ್ಟಿಯಲ್ಲಿ ಒಬ್ಬ ಗೌರವಾನ್ವಿತ ಹಾಗೂ ಪ್ರತಿಷ್ಠಿತ ವ್ಯಕ್ತಿ. ನಮ್ಮ ಗೌರವ ಹಾಗೂ ಪ್ರತಿಷ್ಠೆಗೆ ಕಾರಣವಾದ ವಿತ್ತವು ಭಗವತ್ಪ್ರಸಾದದಿಂದ ಲಭ್ಯವು. ನಮ್ಮ ದೇಹಸ್ಥಿತನಾಗಿದ್ದು ಶಕ್ತಿಪ್ರದನಾಗಿ ವಿತ್ತ ಸಂಪಾದನೆಗೆ ಮುಖ್ಯ ಕಾರಣನು ಭಗವಂತನಲ್ಲದೆ ನಾವಲ್ಲ. ನಾವು ಅನುಭೋಗಿಸುತ್ತಿರುವ ವಿತ್ತವು ಭಗವದನುಗ್ರಹದಿಂದ ಲಭ್ಯ ಎಂದು ತಿಳಿಯುವುದೇ ವಿವೇಕವು.

೨. **ದೇಹ :-**

ಮಾತಾಪಿತೃಗಳ ರಜಸ್ಸು ಮತ್ತು ವೀರ್ಯಗಳಲ್ಲಿದ್ದು, ವೀರ್ಯಪ್ರದನಾಗಿ ಪಿಂಡಾಂಡ ರೂಪವಾದ ಈ ಶರೀರದ ಉತ್ಪತ್ತಿಗೆ ಮುಖ್ಯ ಕಾರಣನು ಶ್ರೀಪರಮಾತ್ಮನು. ಅವನ ಪರಮಾನುಗ್ರಹದಿಂದ ಲಭ್ಯವಾಗಿರುವುದೇ ಈ ದುರ್ಲಭವಾದ ಮಾನವ ಶರೀರ. ಇಂತಹ ಶರೀರವು **ಸಾಧನೆ ದೇಹ** ಎನಿಸುವುದು, ಭಗವದ್ದರ್ಶನ ರೂಪವಾದ ಸತ್ಸಾಧನೆಗೆ ಮುಖ್ಯ ಪರಿಕರಗಳು, ಈ ಸಾಧನ ಶರೀರಗತ ಇಂದ್ರಿಯಾದಿಗಳು. ಇಂತಹ ಇಂದ್ರಿಯ ಗೋಳಕಗಳಲ್ಲಿ ಸ್ಥಿತನಾಗಿದ್ದು, ಇಂದ್ರಿಯಾಭಿಮಾನಿಗಳಿಗೆ ಪ್ರೇರಕನಾಗಿ. ಈ ಶರೀರದ್ವಾರಾ ನಡೆಯುತ್ತಿರುವ ಸಕಲ ವ್ಯಾಪಾರ ವಿಶೇಷಗಳಿಗೂ ಕರುಣಾಮಯನಾದ ಆ ಪರಮಾತ್ಮನ ಬಿಂಬಕ್ರಿಯೆಯೇ ಮುಖ್ಯ ಕಾರಣವು. ಇದರಿಂದ ನಮ್ಮ ದೇಹವೂ ಭಗವದಧೀನವಾಗಿದೆ.

೩. **ಅಗಾರ :-**

ನಾವು ವಾಸಿಸುತ್ತಿರುವ ಮನೆಗೆ (ವಸತಿ) **ಆಗಾರ**ವೆಂದು ಹೆಸರು. ಇದೂ ಸಹ ಋಣಾನುಸಂಬಂಧರೂಪವಾದದ್ದು. ಆಗಾರವೂ ಸಹ ದೈವದತ್ತವಾದದ್ದು.

೩. **ದಾರಾ:-**

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥ ಚತುಷ್ಟಯಗಳ ಸಾಧನೆಗಾಗಿ ನಮ್ಮ ಜೀವನ ಕ್ಷೇತ್ರದಲ್ಲಿ ಸಹಕಾರಿಯಾಗಿರುವ, ಅಗ್ನಿಸಾಕ್ಷಿಯಾಗಿ ಕೈಹಿಡಿದ ಧರ್ಮಪತ್ನಿಗೆ **ದಾರಾ** ಎಂದು ಹೆಸರು, ಸಾಂಸ್ಕಾರಿಕ ಜೀವನದಲ್ಲಿ ಗೃಹಸ್ಥನಾದವನಿಗೆ ಗಾರ್ಹಸ್ಥ್ಯಧರ್ಮಕರ್ಮಗಳ ಆಚರಣೆಯಲ್ಲಿ ಸಮಭಾಗಿನಿಯಾಗಿರುವ ಸಹಧರ್ಮಿಣಿ. ಅಂತಹ ಗೃಹಲಕ್ಷ್ಮಿಯೂ ದೈವಾಧೀನಳೇ. ಋಣಾನುಬಂಧರೂಪವಾಗಿ ಬಂದವಳು.

**೪. ಅಪತ್ಯ :-**

ದಾಂಪತ್ಯ ಜೀವನದ ಕಾರಣವಾಗಿ ಜನಿಸುವ ಮಕ್ಕಳು. ಇವರಿಗೆ **ಅಪತ್ಯ**ರೆಂದು ಹೆಸರು. ಕುಲದೀಪಕರೂ, ವಂಶೋದ್ಧಾರಕರೂ ಆದ ಪುತ್ರ ಸಂತಾನವು ದೈವಕೃಪೆಯಿಂದ ದತ್ತವಾದದ್ದು.

**೫. ಮಿತ್ರ :-**

ನಮ್ಮ ಜೀವನ ಸುಖ ಹಾಗೂ ದುಃಖಗಳಲ್ಲಿ ಸಮಭಾಗಿಯಾಗಿ ನಡೆದು **ಕೊಳ್ಳುವವನೇ ಮಿತ್ರ**ನೆನಿಸುವನು. ಸಂತೋಷಪರಿಸ್ಥಿತಿಯಲ್ಲಿ ನಮ್ಮೊಡನೆ ತಾನೂ ನಲಿದು, ದಾರುಣವಾದ ದುಃಖ ಒದಗಿದಾಗ ನಮ್ಮ ದುಃಖದಲ್ಲಿ ಪಾಲುಗಾರನಾಗಿ, ಸಂತೈಸಿ, ಸಮಯದಲ್ಲಿ ಸಹಾಯ ಸಹಕಾರ ಹಸ್ತವನ್ನ ನೀಡುವ ಆತ್ಮಬಂಧುವೇ ನಿಜವಾದ ಮಿತ್ರನು. ಇಂತಹ ಮಿತ್ರರಲ್ಲಿಯೂ ಕೂಡ ಶ್ರೀಪರಮಾತ್ಮನು ತಾನೇನಿಂತುಕೊಂಡು ಕ್ರಿಯಾ ವಿಶೇಷಗಳನ್ನ ನಡೆಯಿ ಸುವನು.

ಈ ಕಾರಣದಿಂದಲೇ

**"ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯಾ"** – ಎಂಬ ಅನುಭವೋಕ್ತಿ ಇದೆ.

೬. ಇಂತಹ ವಿತ್ತ, ದೇಹ, ಆಗಾರ, ದಾರಾ, ಅಪತ್ಯ, ಮಿತ್ರ ಇತ್ಯಾದಿ ಅಧಿಷ್ಠಾನಗಳಲ್ಲಿ ಶ್ರೀಹರಿಯೇ ನೆಲೆಸಿ, ಅಂತರ್ಯಾಮಿಯಾಗಿದ್ದು, ಜೀವರ ಕರ್ಮಾನುಸಾರ ಋಣಾನುಬಂಧ ರೂಪವಾದ ಸಂಬಂಧವನ್ನು ಕಲ್ಪಿಸಿ, ಅದರ ದ್ವಾರಾ ಜೀವನ ನಾನಾಪ್ರಕಾರವಾದ ಅನುಭೋಗಗಳಿಗೆ ಮುಖ್ಯ ಕಾರಣನಾಗಿದ್ದಾನೆ. ಪೂರ್ವೋಕ್ತ ವಸ್ತುಗಳ ಪೈಕಿ ವಿತ್ತ, ದೇಹ, ಆಗಾರ ಇತ್ಯಾದಿ ಋಣರೂಪ ವಸ್ತುಗಳು **ಜಡಾಧಿಷ್ಠಾನಗಳು.** ಪತ್ನೀ, ಪುತ್ರರು, ಮಿತ್ರರು, ಬಂಧು ಬಾಂಧವರು ಇತ್ಯಾದಿ ಇತರರು **ಚೇತನಾಧಿಷ್ಠಾನಗಳು.** ಜೀವನ ಸಂಸಾರಸಾಗರದಲ್ಲಿ, ಸಮುದ್ರಕ್ಕೆ ಕಾಲ ಕಾಲಕ್ಕೆ ಬಂದು ಸೇರುವ ನದಿಗಳಂತೆ, ಋಣರೂಪ ಸಂಬಂಧವಾದ ವಿತ್ತಾದಿ ಪದಾರ್ಥಗಳು ಬಂದು

ಸೇರುವವು. ಜೀವನಿಗೆ ಇವುಗಳ ಸಂಬಂಧ ಶ್ರೀಹರಿಯ ಇಚ್ಛಾನುಸಾರ ಉಂಟಾಗುವುದು. ಇಂತಹ ವಿತ್ತ ಪತ್ನ್ಯಾದಿ ಅಧಿಷ್ಠಾನಗಳಲ್ಲಿ ಶ್ರೀ ಹರಿಯು **ಪ್ರತ್ಯಗಾತ್ಮನು** ಎಂದೆನಿಸಿದ್ದಾನೆ. ಅಂದರೆ ಆಯಾಯಾ ಅಧಿಷ್ಠಾನಗಳಲ್ಲಿ ತದಾಕಾರನಾಗಿ. ತದ್ರೂಪಿಯಾಗಿ ಇದ್ದು ಪರಸ್ಪರ ಪ್ರೀತಿಯನ್ನು ಉದ್ಬೋಧಿಸುತ್ತಾನೆ. ಪತ್ನೀ ಪುತ್ರಾದಿಗಳಲ್ಲಿ ತದ್ಭಿನ್ನನಾಗಿರುವುದರಿಂದ ಶ್ರೀಪರಮಾತ್ಮನಿಗೆ **ಪ್ರತ್ಯಗಾತ್ಮನೆಂದು** ನಿರೂಪಿಸಿದ್ದಾರೆ. ಪ್ರತ್ಯಕ್+ಆತ್ಮ=ಪ್ರತ್ಯಗಾತ್ಮ ಎಂದು ಶಬ್ದಗಳನ್ನ ಬಿಡಿಸಿದರೆ, ಪ್ರತ್ಯಕ್ ಎಂದರೆ ಪ್ರತ್ಯೇಕನಾಗಿರುವ ಅಂದರೆ ಭಿನ್ನನಾಗಿರುವ ಆತ್ಮ ಎಂದರೆ ಆತ್ಮನಾಮಕನಾದ ಶ್ರೀಮನ್ನಾರಾಯಣ ಎಂದು ತಾತ್ಪರ್ಯ. ಈ ಅಭಿಪ್ರಾಯವನ್ನು **ಶ್ರೀಮದಾಚಾರ್ಯರು ಬೃಹದಾರಣ್ಯಕೋಪನಿಷತ್ತಿನ ಭಾಷ್ಯದಲ್ಲಿ** ಉಲ್ಲೇಖಿಸಿರುತ್ತಾರೆ.

ಪ್ರತಿಪದಾರ್ಥ:—

**"ಆತ್ಮಾ ನಾರಾಯಣಃ। ತಸ್ಯೈವ ಹಿ ಕಾಮೇನ ಪತ್ಯಾದಿಃ ಪ್ರಿಯೋ ಭವತಿ। ಸ ಹಿ ಪತ್ಯಾದೀನಾಂ ಜಾಯಾದೀನಾಮಹಂ ಪ್ರಿಯಃ ಸ್ಯಾಮಿತಿ ಕಾಮನಾಮಾತ್ರೇಣ ಪ್ರಿಯತ್ವಂ ಭವತಿ । ಭಗವದಿಚ್ಛಯೈವ ಹಿ ತದ್ಭವತಿ ॥**

ಅಂದರೆ. ಆತ್ಮ=**ನಾರಾಯಣನು.** ಆತನ ಆಜ್ಞೆಯಿಂದಲೇ ಪತಿ ಪತ್ನಿಗೂ. ಪತ್ನಿಯು ಪತಿಗೂ ಪ್ರಿಯರಾಗುತ್ತಾರೆ. ಈ ಪರಸ್ಪರ ಪ್ರಿಯತೆ ಪತಿ ಪತ್ನಿಯರಿಂದ ಉಂಟಾದುದಲ್ಲ, ಶ್ರೀಹರಿಯ ಇಚ್ಛೆಯಿಂದಲೇ ಅವರು ಪ್ರಿಯರಾಗುತ್ತಾರೆ ಎಂಬುದೇ ಭಾಷ್ಯದ ತಾತ್ಪರ್ಯಾರ್ಥವು,

ಈ ವಿಷಯವನ್ನೇ ಜ್ಞಾನಿಶ್ರೇಷ್ಠರಾದ **ಶ್ರೀಗುರುಗೋಪಾಲದಾಸವರ್ಯರು** ತಮ್ಮದೊಂದು ಕೃತಿಯಲ್ಲಿ—

**ವಿತತಾಚ್ಯುತಮೂರುತಿ ನೀ ನೊಲಿಯಲು**
**ಪ್ರತಿಕೂಲರೆ ಅತಿಹಿತರಾಗುವರೈ ॥**
**ಶ್ರೀನಿವಾಸ ಸಲಹೋ ಎನ್ನನು ನೀನೆ ॥**

–ಎಂದು ತಿಳಿಸಿರುತ್ತಾರೆ. ಎಲ್ಲಿಯವರಿಗೆ ಬಿಂಬನಾದ ಶ್ರೀಹರಿಯ ಒಲುಮೆ ಇರುತ್ತದೆಯೋ, ಅಲ್ಲಿಯವರೆಗೆ ಪತ್ನಿ, ಪತಿ, ಪುತ್ರರು, ಮಿತ್ರರು, ಬಂಧು ಬಾಂಧವರಾದಿಯಾಗಿ ನಮ್ಮ ವಿಷಯದಲ್ಲಿ ಪ್ರಿಯರಾಗಿ ಅನುಕೂಲ ರಾಗಿರುತ್ತಾರೆ. ಪ್ರತಿಕೂಲರಾಗಿರುವವರೆಲ್ಲಾ ಅತಿಹಿತರಾಗುವರು. ಇದೇ ಬಿಂಬ ರೂಪೀಯಾದ ಪ್ರತ್ಯಗಾತ್ಮನಾಮಕ ಶ್ರೀಮನ್ನಾರಾಯಣನ ಲೀಲಾ ವಿಲಾಸ !

೭. ಇಂತು ವಿತ್ತ, ದೇಹ, ಆಗಾರ, ದಾರಾಪತ್ಯ, ಮಿತ್ರಾದಿಗಳಲ್ಲಿ **ಪ್ರತ್ಯಗಾತ್ಮನು ಎಂದೆನಿಸಿ ನೆಲೆಸಿಪ್ಪನು** ಎಂದರಿತು, ಅವರವರ ಯೋಗ್ಯ ತಾನುಸಾರ ಅವರವರ ಅಭಿಲಾಷೆಗಳನ್ನು ಪೂರೈಸುತ್ತಾ **ಸಂತೃಪ್ತಿಪಡಿಸುವುದೇ** ಭಗವತ್ಪೂಜೆ ಎಂದೆನಿಸುವುದು. ಪತ್ನೀ ಪುತ್ರರು ಪರಿವಾರವರ್ಗದವರು, ಭಗವತ್ಸೇವಾ ಕಾರ್ಯದಲ್ಲಿ ಅವರೆಲ್ಲರೂ ಸಹಾಯಕರು ಎಂಬ ಜ್ಞಾನಾನು ಸಂಧಾನವಿರಬೇಕು. ಇದೇ ಅಭಿಪ್ರಾಯದಿಂದಲೇ **ಶ್ರೀಮದ್ಧರಿಕಥಾಮೃತ ಸಾರದ ವಕ್ತಾರರಾದ ಶ್ರೀಜಗನ್ನಾಥದಾಸವರ್ಯರು** ತಮ್ಮ ಕೀರ್ತನೆ ಯಲ್ಲಿ,

**ಹೆಂಡಿರು ಮಕ್ಕಳು ನಿನ್ನ ತೊಂಡರೆಂಬೋರೋ ||** ಎಂದಿದ್ದಾರೆ,

೮. ನಮಗಿಂತ ಶ್ರೇಷ್ಠರಾದವರು **ಉತ್ತಮರು.** ಸರಿಸಮಾನ ಸ್ಕಂಧರು **ಮಧ್ಯಮರು.** ಅವರರು **ಅಧಮರು.** ಉತ್ತಮರಾದ ಮಾತಾ ಪಿತೃಗಳು, ಗುರು ಹಿರಿಯರಲ್ಲಿ ಗೌರವ ಮತ್ತು ಭಕ್ತಿಯಿಂದಲೂ ನಮ್ಮ ಸರಿಸಮಾನರಾದವರಲ್ಲಿ ಸ್ನೇಹಭಾವದಿಂದಲೂ ಮತ್ತು ಈ ಪರಿಚಾರರವರ್ಗ, ಶ್ವಾನಾದಿ ವರ್ಗಗಳಲ್ಲಿ ಸಹಾನುಭೂತಿ ಪೂರ್ವಕವಾದ ಕಾರುಣ್ಯಭಾವದಿಂದಲೂ ಇರುವುದೇ **ಕೃತಕೃತ್ಯ** ನಾಗುವುದೆಂದು ಭಾವ. ಕೃತಕೃತ್ಯನಾಗುವುದೆಂದರೆ ಮಾಡಲೇಬೇಕಾದ ಕ್ರಿಯಾಗಳನ್ನ ಮಾಡಿ ಸಾರ್ಥಕ್ಯಪಡೆಯುವುದು ಎಂದರ್ಥ. ಪತ್ನೀ ಪುತ್ರರು ಪರಮಾತ್ಮನ ಸೇವಕರು, ಭಗವತ್ಸೇವಾದಿಗಳಲ್ಲಿ ಅವರನ್ನು ತೊಡಗಿಸುವುದೇ ಮಹತ್ತರವಾದ ಭಗವತ್ಪೂಜೆಯು. ಇದೇ ಕೃತಕತ್ಯತೆಯು. "ಇದು ನಾನು ಸಂಪಾಸಿದ ದ್ರವ್ಯ. ಈ ಮನೆ ಭೋಗ ಭಾಗ್ಯಗಳು ನನ್ನವು.

ಎಲ್ಲರ ಯೋಗಕ್ಷೇಮಕ್ಕೂ ನಾನೇ ಕರ್ತನು."–ಎಂಬ ಅಹಂಕಾರ ಮಮಕಾರ ಗಳಿಂದ ಉನ್ಮತ್ತನಾಗದೆ, ಆ ಜಗತ್ಪ್ರಭುವಾದ ಲಕ್ಷ್ಮೀಪತಿಯು ಸೇವಕನು ನಾನೆಂದರಿದು (ಭೃತ್ಯನಾನೆಂದು) ಭಗವತ್ಸೇವಾ ಧುರೀಣನಾಗಿರು ಎಂಬುದೇ ದಾಸರಾಯರ ಅಮೃತವಾಣಿ. ॥೩೧॥

## ಪದ್ಯ ೩೨

**ಮೂಲ:**

**ದೇವ ದೇವೇಶನ ಸುಮೂರ್ತಿ ಕ ।**
**ಳೇವರಗಳೊಳಗನವರತ ಸಂ ।**
**ಭಾವಿಸುತ ಪೂಜಿಸುತ ನೋಡುತ ಸುಖಿಸುತಿರು ಬಿಡದೆ ॥**
**ಶ್ರೀವರ ಜಗನ್ನಾಥವಿಠ್ಠಲನು ।**
**ತಾ ಒಲಿದು ಕಾರುಣ್ಯದಲಿ ಭವ ।**
**ನೋವ ಪರಿಹರಿಸುವನು ಪ್ರವಿತತ ಪತಿತಪಾವನನು ॥೩೨॥**

**ಅವತರಣಿಕೆ**

ಸರ್ವತ್ರವ್ಯಾಪಕನೂ, ಅಪಾರಮಹಿಮಾಗುಣನಿಧಿಯೂ ಆದ ಆ ಅಗಣಿತಾತ್ಮನ ರೂಪೋಪಾಸನೆಗಳ ವಿಧಾನಗಳಲ್ಲಿ ಸದೃಷ್ಟಾಂತ ಪೂರ್ವಕ ಪ್ರಮಾಣಪ್ರಮಿತವಾಗಿ ಹಿಂದಿನ ಪದ್ಯಗಳಲ್ಲಿ ನಿರೂಪಿಸಿ, ಅಂತಹ ದೇವತಾ ಶ್ರೇಷ್ಠನೂ ಸರ್ವೋತ್ತಮನೂ ಆದ ಆ ಪರಮಾತ್ಮನ ಪರಮಮಂಗಳಾಕಾರ ಭಗವದ್ರೂಪಗಳನ್ನು ಈ ಶರೀರದ ವಿವಿಧ ಸ್ಥಾನಗತ ಇಂದ್ರಿಯಗಳಲ್ಲಿ ನಿರಂತ ರವೂ ಧ್ಯಾನಿಸುತ್ತಾ, ಸ್ತೋತ್ರಮಾಡುತ್ತಾ, ಆ ಭಗವನ್ಮೂರ್ತಿಗಳನ್ನು ಅಂತ ರಂಗಸದನದಲ್ಲಿ ನೋಡುತ್ತಾ ಸದಾ ಸುಖಿಸುತ್ತಿರುವ ಆಗ ಲಕ್ಷ್ಮೀವರನಾದ **ಜಗನ್ನಾಥವಿಠ್ಠಲ** ನಾಮಕನು, ತಾನೇ ಒಲಿದು ಪರಮಾನುಗ್ರಹಮಾಡಿ ನಮ್ಮ ಸಂಸಾರಿಕ ದುಃಖಗಳನ್ನು ಪರಿಹಾರಗೈದು ಕರುಣಿಸುವನು ಎಂದು ತಿಳಿಸು

ತ್ತಾರೆ. **ದೇವದೇವೇಶನ** ಎಂಬ ಪ್ರಸಕ್ತ ಸಂಧಿಗತ ಕೊನೆಯದಾದ ೩೨ನೆಯ ಈ ಪದ್ಯದಿಂದ, ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ, ಜ್ಞಾನಿವರ್ಯ ದಾಸವರೇಣ್ಯರು ॥೩೨॥

## ಪ್ರತಿಪದಾರ್ಥ

**ದೇವ**=ರುದ್ರಾದಿ ತೃಣಾಂತ ದೇವತಾವರ್ಗಕ್ಕೆ, **ದೇವ**=ಶ್ರೇಷ್ಠರಾದ ಶ್ರೀಮುಖ್ಯಪ್ರಾಣದೇವರಿಗೆ, **ಈಶನ**=ಸ್ವಾಮಿಯಾದ ಶ್ರೀಪರಮಾತ್ಮನ ಅಂದರೆ ಸರ್ವೋತ್ತಮನಾದ ಶ್ರೀಹರಿಯ, **ಸುಮೂರ್ತಿ**=ದಿವ್ಯ ಭಗವನ್ಮೂರ್ತಿಗಳನ್ನು, **ಕಳೇವರಗಳೊಳಗೆ**=ಜೀವರ ಸ್ಥೂಲ, ಅನಿರುದ್ಧ ಲಿಂಗ ಮತ್ತು ಸ್ವರೂಪಶರೀರಗಳಲ್ಲಿ (ಬಹುವಚನ ಪ್ರಯೋಗವಿರುವುದರಿಂದ ತನುಚತುಷ್ಟಯಗಳು ಗ್ರಾಹ್ಯ), **ಅನವರತ**=ನಿತ್ಯದಲ್ಲಿಯೂ (ಎಡಬಿಡದೆ), **ಸಂಭಾವಿಸುತ**=ಮನಸಾ ಅನುಸಂಧಾನಪೂರ್ವಕ ಚಿಂತಿಸುತ್ತಾ (ಧ್ಯಾನಕ್ಕೆ ವಿಷಯವನ್ನಾಗಿಸಿ), **ಪೂಜಿಸುತ**=ಹೃದಯಾಕಾಶಸ್ಥಿತ ಉಪಾಸ್ಯಮೂರ್ತಿಯನ್ನು, ಪೂಜಾದ್ರವ್ಯಗತ ಮೂರ್ತಿಗಳನ್ನು ಸ್ವಬಿಂಬನಲ್ಲಿ ಐಕ್ಯಚಿಂತನಾಪೂರ್ವಕ ಪೂಜೆಮಾಡುತ್ತಾ, (ಭಗವದ್ರೂಪಗಳ ಐಕ್ಯಚಿಂತನಾಕ್ರಮವೇ ಭಗವತ್ಪೂಜೆಯೆನಿಸುವುದು). **ನೋಡುತ**= ಆ ಭಗವನ್ಮೂರ್ತಿಗಳನ್ನು ಅಂತಃಚಕ್ಷುರಿಂದ್ರಿಯದ್ವಾರಾ ಕಾಣುತ್ತಾ, **ಬಿಡದೆ**=ಅವಿಚ್ಛಿನ್ನವಾಗಿ, **ಸುಖಿಸುತಿರು**=ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ದೈವೀಸಂಪತ್ತಿನಿಂದ ಯುಕ್ತನಾಗಿ ಸಂತೋಷಪಡುತ್ತಿರು. **ಶ್ರೀವರ** ಈ ಪ್ರಕಾರ ಉಪಾಸನಾ ಮಾಡುವವರಿಗೆ ಲಕ್ಷ್ಮೀರಮಣನಾದ, **ಜಗನ್ನಾಥವಿಠ್ಠಲನು**=ದಾಸವರ್ಯರ ಅಂಕಿತ ನಾಮಕನಾದ **ಜಗನ್ನಾಥವಿಠ್ಠಲ**=ಶಬ್ದವಾಚ್ಯನಾದ ಶ್ರೀಮನ್ನಾರಾಯಣನು. **ತಾ ಬಂದು**=ಸ್ವಯಂ ಪ್ರೀತನಾಗಿ (ಪ್ರತ್ಯಕ್ಷನಾಗಿ), **ಕಾರುಣ್ಯದಲಿ**=ಅತ್ಯಂತ ಅಂತಃಕರಣಪೂರ್ವಕನಾಗಿ, **ಭವನೋವ**=ಜನನ ಮರಣಾಖ್ಯವಾದ ದುಸ್ತರವಾದ ಈ ಭವವೆಂಬ ಸಾಂಸಾರಿಕ ನಾನಾವಿಧ ದುಃಖಗಳನ್ನು, **ಪ್ರವಿತತ**=ಸರ್ವತ್ರ ಪರಿಪೂರ್ಣನಾಗಿ ವ್ಯಾಪ್ತನಾಗಿರುವ(ಅಪರಿಚಿನ್ನ ವ್ಯಾಪ್ತನಾದ), **ಪತಿತಪಾವನನು**=ಸಚ್ಚೇತನರ ಪಾಪಗಳನ್ನು ಪ್ರಕ್ಷಾಳನೆಗೈದು,

ತದ್ದ್ವಾರಾ ಆವರನ್ನು ಪವಿತ್ರೀಕರಿಸುವ ಆ ಜಗನ್ನಾಥವಿಠ್ಠಲನು, **ಪರಿಹರಿಸುವನು** = (ಭವವೇದನೆಗಳನ್ನು) ಪರಿಹರಿಸಿ, ನಿತ್ಯಾನಂದರೂಪವಾದ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವನು, ॥೩೨॥

## ವ್ಯಾಖ್ಯಾನಗಳು

### (೧) ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ–

ಶ್ರೀಪರಮಾತ್ಮನ್ನ ತನ್ನ ಹೃದಯಾಕಾಶದಲ್ಲಿ ಪೂಜಾದಿಗಳು ಮಾಡತಕ್ಕವರಿಗೆ ಒಲಿದು, ಪೂರ್ವೋಕ್ತ ಸಂಸಾರದಲ್ಲಿ ಬರತಕ್ಕ ದುಃಖಗಳ ಪರಿಹಾರ ಮಾಡತಾನೆ ಎಂತ ಹೇಳತಾರೆ,

ದೇವ–ರುದ್ರಾದಿ ತೃಣಾಂತದವರೆಗೆ, ದೇವ–ದೇವನಾದ ಶ್ರೀಮುಖ್ಯಪ್ರಾಣದೇವರಿಗೆ, ಈಶನ–ಸ್ವಾಮಿಯೊದ ಶ್ರೀಪರಮಾತ್ಮನ, ಸುಮೂರ್ತಿ ಕಳೇವರಗಳೊಳಗೆ–ಯಾವತ್ತು ಜೀವರ ಸ್ಥೂಲ, ಅನಿರುದ್ಧ, ಲಿಂಗ, ಸ್ವರೂಪ ಏತಾದೃಶವಾದ ದೇಹಗಳ ಒಳಗೆ ಪೂರ್ವೋಕ್ತ ಪ್ರಕಾರ ಆವಾಸನಾಗಿದ್ದಾನೆ ಎಂದು. ಅನವರತ–ನಿರಂತದಲ್ಲೂ, ಸಂಭಾವಿಸುತ–ಅನುಸಂಧಾನದಿಂದ ಮನಸಾ ಛಂದಾಗಿ ಭಾವನ ಮಾಡತಾ, ಪೂಜಿಸುತ–ವಾಸನಾರೂಪವಾದ ಉಪಾಸ್ಯಮೂರ್ತಿಯನ್ನು ಹೃದಯಾಕಾಶದಲ್ಲಿ ನಿಲ್ಲಿಸಿ, ತದಂತರ್ಗತ ಶ್ರೀಪರಮಾತ್ಮ ಇದ್ದಾನೆ ಎಂತ ತಿಳಿದು, ಪೂಜಾದ್ರವ್ಯಗತ ಪರಮಾತ್ಮಗೂ, ಪ್ರತಿಮಾಂತರ್ಗತ ಪರಮಾತ್ಮಗೂ ಐಕ್ಯಚಿಂತನಿಯಿಂದ ಪೂಜಾಮಾಡುತಾ, ನೋಡುತಾ–ವಾಸನಾಪ್ರತೀಕವನ್ನು ನೋಡುತಾ, ಬಿಡದೆ–ವಾಸನಾಪ್ರತೀಕೋಪಾಸನೆ ಬಿಡದೆ, ಸುಖಿಸುತಿರು - ಜ್ಞಾನ, ಭಕ್ತಿ, ವೈರಾಗ್ಯಗಳಿಂದ ಸುಖವಂತನಾಗಿರು. ಈ ಪ್ರಕಾರ ಇದ್ದರೆ, ಶ್ರೀವರ–ಲಕ್ಷ್ಮೀದೇವೇರಿಗೆ ಪತಿಯಾದ, ಜಗನ್ನಾಥವಿಠಲನು – ಶ್ರೀನಾರಾಯಣದೇವರು, ತಾ ಒಲಿದು–ಪ್ರತಿಮಾಂತರ್ಗತನಾದ ತಾನು ಪ್ರತ್ಯಕ್ಷನಾಗಿ, ಕಾರುಣ್ಯದಲಿ - ಅತ್ಯಂತ ಅಂತಃಕರಣದಿಂದ, ಭವನೋವ - ಸಂಸಾರದಲ್ಲಿ ಬರತಕ್ಕ ಅನೇಕ ವಿಧವಾದ ದುಃಖಗಳ, ಇನ್ನೂ

ಜನನಾದಿಗಳಿಗೆ ಕಾರಣವಾದ ಲಿಂಗದೇಹವನ್ನು, ಪರಿಹರಿಸುವನು-ಬಾರದಂತೆ ಮಾಡಿ ಸುಖವನ್ನು ಕೊಡುತ್ತಾ ಇರುತ್ತಾನೆ. ಅಂತ್ಯದಲ್ಲಿ ವಿರಜಾಸ್ನಾನದಿಂದ ಪರಿಹಾರಮಾಡಿ ತನ್ನ ಸ್ಥಾನದಲ್ಲಿಟ್ಟು ಸುಖಪಡಿಸೋವನಾಗುತ್ತಾನೆ. ಪ್ರವಿತತ-ಅಪರಿಚ್ಛಿನ್ನವ್ಯಾಪ್ತನು, ಪತಿತಪಾವನನು- ಸ್ವರೂಪತಃ ಮುಕ್ತಿಯೋಗ್ಯನಾದ ಜೀವನ, ಕರ್ಮವಶಾತ್ ಪಾಪಕಾರ್ಯಗಳಿಂದ ಪತಿತನ್ನಾಗಿದ್ದವನ, ಪರಿಯವಸಾನಕ್ಕೆ ಪವಿತ್ರನ್ನಮಾಡಿ. ಮೋಕ್ಷ ಕೊಡತಕ್ಕವನು ಎಂತ ತಾತ್ಪರ್ಯ. ॥೩೨॥

**॥ ಶ್ರೀಮತ್ಸತ್ಯಪರಾಯಣತೀರ್ಥಕರಕಮಲಸಂಜಾತ ಶ್ರೀಮತ್ಸಂಕರ್ಷಣ ತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ ಕನ್ನಡಭಾಷಾ ಟೀಕಾಯಾಂ ಮಾತೃಕಾಸಂಧಿ ವ್ಯಾಖ್ಯಾನಂ ಸಂಪೂರ್ಣಂ ॥**

**॥ ಶ್ರೀಮಧ್ವೇಶಾರ್ಪಣಮಸ್ತು ॥**

**(೨) ಭಾವಪ್ರಕಾಶಿಕೆ-ವ್ಯಾಖ್ಯಾನ**

ಬ್ರಹ್ಮಾದಿ ಸಕಲ ದೇವತೆಗಳಿಗೂ ಸ್ವಾಮಿಯಾದ ಶ್ರೀಪರಮಾತ್ಮನ ಮೂರ್ತಿಗಳು ಉತ್ತಮ, ಮಧ್ಯಮ, ಅಧಮರಾದ ಸರ್ವಪ್ರಾಣಿಗಳಲ್ಲಿಯೂ ಇರುವವೆಂದು ಭಾವಿಸಿ, ಮಧ್ಯಮಾಧಿಷ್ಠಾನದಲ್ಲಿ ಸಂಭಾವನೆಯನ್ನು. ಉತ್ತಮಾಧಿಷ್ಠಾನದಲ್ಲಿ ಪೂಜೆಯನ್ನೂ, ಅಧಮಾಧಿಷ್ಠಾನದಲ್ಲಿ ನೋಡುವುದು. ಅಂದರೆ, ಶ್ವಾನ ಚಂಡಾಲಾದಿಗಳಲ್ಲೂ ಭಗವದ್ರೂಪಗಳು ಇವೆ ಎಂದು ತಿಳಿಯುವುದೆಂದರ್ಥ. ಹೀಗೆ ಸರ್ವತ್ರ ಭಗವನ್ಮೂರ್ತಿಗಳನ್ನು ತಿಳಿದು ಬಿಡದೆ ಅವಿಚ್ಛಿನ್ನವಾಗಿ ಪರಮಾತ್ಮನ ರೂಪಗಳನ್ನು ಚಿಂತಿಸುತ್ತಾ ಸುಖದಿಂದಿರಬೇಕು. ಹೀಗೆ ಮಾಡುವುದರಿಂದ ಫಲವೇನೆಂದರೆ - ಸರ್ವತ್ರ ವ್ಯಾಪ್ತನಾದ, ಪತಿತ ಪಾವನನಾದ, ಲಕ್ಷ್ಮೀಪತಿಯಾದ ಶ್ರೀಜಗನ್ನಾಥವಿಠ್ಠಲನಾಮಕ ಬಿಂಬರೂಪಿಯಾದ ಶ್ರೀಪರಮಾತ್ಮನು. ನಮಗೆ ಪ್ರಸನ್ನನಾಗಿ ನಮ್ಮಗಳ ಸಂಸಾರವೆಂಬ ತಾಪತ್ರಯ ರೂಪವಾದ ವೇದನೆಯನ್ನು ಪರಿಹರಿಸುವನು. ॥೩೨॥

|| ಇಂತು ಪದ್ಮನಾಭದಾಸ ವಿರಚಿತ - ಭಾವಪ್ರಕಾಶಿಕೆ - ಎಂಬ ವ್ಯಾಖ್ಯಾನದಲ್ಲಿ ಎಂಟನೆಯ ಸಂಧಿಯ ವ್ಯಾಖ್ಯಾನವು ಮುಗಿದುದು ||

|| ಶ್ರೀಮಧ್ವೇಶಾರ್ಪಣಮಸ್ತು ||

(೩) ಭಾವದರ್ಪಣಟೀಕಾ ವ್ಯಾಖ್ಯಾನ

ಜೀವರ ಶರೀರ ಸಮಸ್ತಾವಯವಗಳಲ್ಲಿ ಶ್ರೀಹರಿಯು ನಿಂತು, ರಕ್ಷಿಸುತ್ತಾನೆಂದು ಹೇಳುತ್ತಾರೆ – ದೇವ ದೇವೇತಿ ||೩೨||

|| ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜ ವಿರಚಿತ ಶ್ರೀಮದ್ಧರೀಕಥಾಮೃತಸಾರಸ್ಯ ಭಾವದರ್ಪಣ ಟೀಕಾಯಾಂ ಕಮಲಾಪತಿ ದಾಸಹೃದ್ಗತೇನ ಶ್ರೀಹರಿಣಾ ಕೃತಾಯಾಂ ಮಾತೃಕಾ ಸಂಧಿಃ ಪರ್ಯವಸಿತಃ ||

|| ಶ್ರೀಕೃಷ್ಣಾರ್ಪಣಮಸ್ತು ||

(೪) ಶ್ರೀವ್ಯಾಸದಾಸಸಿದ್ಧಾಂತಕೌಮುದೀ (ಸಂಸ್ಕೃತ ಮೂಲ)

ಉಪಸಂಹರತಿ – ದೇವ–ಇತಿ || ಪ್ರವಿತತ = ವ್ಯಾಪ್ತ, ||೩೨||

|| ಇತಿ ಶ್ರೀಮದ್ಧರಿಕಥಾಮೃತಸಾರ ಟೀಕಾಯಾಂ ಶ್ರೀವ್ಯಾಸದಾಸಸಿದ್ಧಾಂತ ಕೌಮುದ್ಯಾ || ಶ್ರೀ ಸೋದಾಪುರೇಶಾನುಗ್ರಹಿ ಜಂಬುಖಂಡಿ ಶ್ರೀನಿವಾಸಾಚಾರ್ಯಸುತ ವಾದಿರಾಜ ವಿರಚಿತಾಯಾಂ ಮಾತೃಕಾಸಂಧಿ : ಸಂಪೂರ್ಣಂ ||

|| ಶ್ರೀವಿಠ್ಠಲಾರ್ಪಣಮಸ್ತು ||

**ಕನ್ನಡಾರ್ಥ :–**

ಪ್ರಸಕ್ತ ಸಂಧಿಯನ್ನು ಉಪಸಂಹರಿಸುತ್ತಾರೆ. ದೇವ ದೇವೇಶನಎಂಬ ಪದ್ಯದಿಂದ. ದೇಹಗತ ಮಾತೃಕಾಗಳಲ್ಲಿರುವ ಭಗವನ್ಮೂರ್ತಿಗಳನ್ನು ಅನುಸಂಧಾನಪೂರ್ವಕ ಅರಿತು, ಪೂಜಿಸುತ್ತಾ ಉಪಾಸಿಸುವವರಿಗೆ ಶ್ರೀಜಗನ್ನಾಥ

ವಿಠ್ಠಲನು ಪ್ರಸನ್ನನಾಗಿ, ತನ್ನ ಕರುಣಾಕಟಾಕ್ಷವೀಕ್ಷಣದಿಂದ ಸಂಸಾರವೆಂಬ ಬಂಧನದಿಂದ ಮುಕ್ತಗೊಳಿಸುವನು,

॥ ಇಂತು ಶ್ರೀವ್ಯಾಸದಾಸಸಿದ್ಧಾಂತಕೌಮುದಿಯು ವ್ಯಾಖ್ಯಾನ ಗ್ರಂಥದಲ್ಲಿ ಮಾತೃಕಾಸಂಧಿಯ ಕನ್ನಡಾರ್ಥಾನುವಾದವು ಮುಗಿಯಿತು ॥

॥ ಶ್ರೀಹಯವದನಾರ್ಪಣಮಸ್ತು ॥

**ಶ್ರೀ ಗುರುಹೃದಯ ಪ್ರಕಾಶಿಕೆ :-** ಪೂರ್ವೋಕ್ತ ಉಪಾಸನೆಗಳನ್ನೆಲ್ಲಾ ಸಂಗ್ರಹಿಸಿ ಹೇಳಿ ಅಧ್ಯಾಯ ಪೂರ್ತಿಸುತ್ತಾರೆ, ದೇವ ದೇವೇಶನೆಂದೂ ಸರ್ವದೇವತೆಗಳಿಗೆಲ್ಲ ಉತ್ತಮ ದೇವತೆಯಾದ ಶ್ರೀಹರಿಯ ಪೂರ್ವೋಕ್ತ ಸುಮೂರ್ತಿಗಳನ್ನು ದೇಹ ಮುಂತಾದ್ದರಲ್ಲಿ ಸನ್ಮಾನಿಸುತ್ತ. ಪೂಜಿಸುತ್ತ. ಮನಸ್ಸಿನಲ್ಲಿ ನೋಡುತ್ತ. ಬಿಡದೆ ಸದಾ ಸುಖಿಸುತ್ತಿರಬೇಕು. (ಬಾಹ್ಯಚಿಂತಾದಿಗಳು ಮನಸ್ಸಿಗೆ ಹತ್ತದಿರುವುದೇ ಇದಕ್ಕೆ ಸದ್ಯಃ ಫಲವೆಂದು ತಿಳಿಸುತ್ತಾರೆ, ಶ್ರೀವರನೆಂಬ ಅರ್ಧಪದ್ಯದಿಂದ). ಪತಿತರೆಂಬ ಭವಸಮುದ್ರದಲ್ಲಿ ಬಿದ್ದಿರುವ ಸಜ್ಜನರನ್ನು. ಪಾವನರೆಂಬ ಪರಿಶುದ್ಧರನ್ನು ಮಾಡುವ, ಪ್ರವಿತತ ಎಂದರೆ ಸರ್ವವ್ಯಾಪ್ತನಾದ ಶ್ರೀಪತಿ ಜಗನ್ನಾಥವಿಠಲಸ್ವಾಮಿಯು. ಭವನೋವೆಂಬ ದೇಹಾದಿ ಸಂಬಂಧ ಬಾಹ್ಯಚಿಂತೆ ಕಷ್ಟಗಳನ್ನು ಕೊಡದೆ ಸದಾ ಕರುಣದಿಂದ ಒಲಿದು ಕಷ್ಟವನ್ನೆಲ್ಲ ಪರಿಹರಿಸುವನು ಎಂತ ಅಭಿಪ್ರಾಯ. 'ನಾವಿಂದನ್ ಭವವೇದನಾಂ' ಎಂಬ ಭಾಗವತಾರ್ಥ ವಿವರಿಸಲ್ಪಟ್ಟಿತು. ॥೩೨॥

॥ ಇಂತು ಗುರುಹೃದಯ ಪ್ರಕಾಶಿಕಾ ಎಂಬ ವ್ಯಾಖ್ಯಾನಸಹಿತ
ಶ್ರೀಹರಿಕಥಾಮೃತಸಾರದಲ್ಲಿ ಮಾತೃಕಾಸಂಧಿಯೆಂಬ
ಎಂಟನೆಯ ಸಂಧಿಗೆ ಮಂಗಳಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ದ್ರವ್ಯ, ಶರೀರ, ಮನೆ, ಪತ್ನೀ, ಪುತ್ರರು, ಮಿತ್ರರು, ಬಂಧು ಬಾಂಧವರಲ್ಲಿ ಶ್ರೀಹರಿಯೇ ನೆಲೆಸಿದ್ದು, ಪರಸ್ಪರ ಪ್ರೀತಿ ಆದರ ಅಭಿಮಾನಗಳಿಗೆ ಮುಖ್ಯ ಕಾರಣನಾಗಿದ್ದಾನೆಂದು ತಿಳಿಸಿದರು.

ಈ ರೀತಿಯಲ್ಲಿ ಪುರುಷೋತ್ತಮನಾದ ಆ ಪರಾವರೇಶನ ದಿವ್ಯ ಭಗವನ್ಮೂರ್ತಿಗಳನ್ನು, ಸದಾ ಧ್ಯಾನಪೂರ್ವಕವಾಗಿ ಸ್ಮರಿಸುತ್ತಿರು ಎಂದು ನಿರೂಪಿಸುತ್ತಾ ಪ್ರಸಕ್ತ ಸಂಧಿಗತ ವಿಷಯಗಳನ್ನು **ದೇವದೇವೇಶನ**-ಎಂಬ ಈ ಅಂತ್ಯ ಪದ್ಯದಿಂದ ಉಪಸಂಹಾರ ಮಾಡುತ್ತಾರೆ.

೧. ದೇವ-ಎಂದರೆ ಅಹಂಕಾರ ತತ್ವಾಭಿಮಾನಿಗಳಾದ ಗರುಡ ಶೇಷ ರುದ್ರರಿಂದ ಆರಂಭಿಸಿಕೊಂಡು ಕೊನೆಯ ಚೇತನನವರೆವಿಗೂ ದೇವತಾಸಮೂಹ ಗ್ರಾಹ್ಯ. ದೇವ-ಅಂದರೆ, ಅಂತಹ ಗುರುಡ ಶೇಷಾದಿಗಳಿಗಿಂತ ಶ್ರೇಷ್ಠರಾದ ಋಜುಪುಂಗವರಾದ ಶ್ರೀವಾಯುದೇವರು ಮತ್ತು ಬ್ರಹ್ಮದೇವರು. ಅವರಿಗಿಂತ ಶ್ರೇಷ್ಠರಾದ ಈಶಕೋಟಿಪ್ರವಿಷ್ಠರಾದ ಶ್ರೀಲಕ್ಷ್ಮೀದೇವಿಯನ್ನು ತೆಗೆದುಕೊಳ್ಳಬೇಕು. ಈಶ-ಎಂದರೆ ರಮಾಬ್ರಹ್ಮಾದಿಗಳಿಗೂ ಒಡೆಯನಾದ ಸರ್ವರಿಗೂ ನಿಯಾಮಕನಾದ ಶ್ರೀಪರಮಾತ್ಮನು ಜಗತ್ಸ್ವಾಮಿಯಾದ ಆ ಸರ್ವೋತ್ತಮನೇ **ದೇವದೇವೇಶನು.**

೨. ಹಿಂದಿನ ಪದ್ಯಗಳಲ್ಲಿ ವಿವರಿಸಿರುವಂತೆ, ಆ ದೇವ ದೇವೇಶನ ಪರಮ ಮಂಗಳಕರವಾದ ಭಗವನ್ಮೂರ್ತಿಗಳನ್ನು ಧ್ಯಾನಿಸುತ್ತಿರಬೇಕು. ಇಂತಹ **ಸುಮೂರ್ತಿ**ಗಳನ್ನು ಈ ಶರೀರಗಳಲ್ಲಿ ಅನವರತ ಸ್ಮರಿಸುತ್ತಿರಬೇಕು. **ಕಳೇವರಗಳು** ಎಂದರೆ ಶರೀರಗಳೆಂದರ್ಥ. ಇಲ್ಲಿ ಬಹುವಚನಪ್ರಯೋಗವಿರುವುದರಿಂದ ಸ್ಥೂಲ, ಅನಿರುದ್ಧ, ಲಿಂಗ ಮತ್ತು ಸ್ವರೂಪಗಳೆಂಬ ನಾಲ್ಕು ಶರೀರಗಳನ್ನೂ ಗ್ರಹಿಸಬೇಕು. ಈ ತನುಚತುಷ್ಟಯಗಳಲ್ಲಿ (**ಕಳೇವರಗಳೊಳು**)

ಆ ಪುರುಷೋತ್ತಮನಾದ ಶ್ರೀಪರಮಾತ್ಮನ ಸುಮೂರ್ತಿಗಳನ್ನು ಎಡಬಿಡದೆ ಸದಾ ಸರ್ವಕಾಲಗಳಲ್ಲಿಯೂ (ಅನವರತ) ಮನಸಾ ಧ್ಯಾನಿಸಬೇಕು,

೩. ಭಾವನೆ ಎಂದರೆ ಮನಸ್ಸಿನಲ್ಲಿ ಉತ್ಪತ್ತಿಯಾಗುವ ಲಹರಿಗಳು, **ಸಂಭಾವಿಸುತ** ಎಂದರೆ, ಚೆನ್ನಾಗಿ ಮನಸ್ಸಿನಲ್ಲಿ ಸ್ಮರಿಸಿಕೊಳ್ಳುವುದೆಂದರ್ಥ. ಶರೀರಗತನಾದ ಆ ಸರ್ವೇಶನ ದಿವ್ಯ ಭಗವದ್ರೂಪಗಳನ್ನು ಮನಸ್ಸಿಗೆ ತಂದು ಕೊಂಡು, ಆ ದಿವ್ಯ ಮಂಗಳ ವಿಗ್ರಹವನ್ನು ಮನೋಮಂದಿರದಲ್ಲಿ ನಿಲ್ಲಿಸಿ, ಧ್ಯಾನಕ್ಕೆ ವಿಷಯನನ್ನಾಗಿ ಮಾಡಬೇಕೆಂದರ್ಥ.

೪. ಹಾಗೆ ಮನಸಾ **ಸಂಭಾವಿಸಿದ** ದಿವ್ಯ ರೂಪಗಳಿಗೂ, ನಾವು ಅರ್ಚಿಸುವ ಪ್ರತಿಮಾಂತರ್ಗತ ಭಗವದ್ರೂಪಗಳಿಗೂ, ಪೂಜಾ ದ್ರವ್ಯಗಳಲ್ಲಿರುವ ರೂಪ ವಿಶೇಷಗಳಿಗೂ ಸ್ವಬಿಂಬನಲ್ಲಿ ಐಕ್ಯ ಚಿಂತನೆಮಾಡುವುದೇ **ಪೂಜೆ ಎಂದೆನಿಸುವುದು.**

೫. ಮನಸಾ ಧ್ಯಾನಕ್ಕೆ ವಿಷಯನಾದ ಆ ಭಗವಂತನನ್ನು **ಪೂಜಿಸುತ** ಭಕ್ತಿಭಾವದಿಂದ ಸ್ತೋತ್ರ ಮಾಡುತ್ತಿರುವಾಗ, ಆ ದಿವ್ಯ ಸುಂದರಮೂರ್ತಿಯು ಧ್ಯಾನಗೋಚರನಾಗುವನು,

೬. ಧ್ಯಾನಗೋಚರನಾದ ಆ ಪರಮಮಂಗಳರೂಪವನ್ನು **ನೋಡುತ್ತಾ** ಅಂತಃಕರಣ ಉಕ್ಕಿ, ಭಕ್ತಿಪರವಶನಾಗಿ, ಆನಂದ ಬಾಷ್ಪಗಳನ್ನು ಸುರಿಸುತ್ತಾ **ಸುಖಿಸುತಿರು** ಎನ್ನುತ್ತಾರೆ, ವ್ಯಾಪ್ತೋಪಾಸಕರಾದ ದಾಸವರೇಣ್ಯರು.

೭, ಇಂತು ಸರ್ವತ್ರರಲ್ಲಿ, ಜನನೀ ಜನಕರಲ್ಲಿ, ಪತ್ನೀ ಪುತ್ರರಲ್ಲಿ, ಬಂಧು ಮಿತ್ರರಲ್ಲಿ ಆ ಪರಮಾತ್ಮನಿದ್ದಾನೆಂದು ಸಂಚಿಂತಿಸುತ್ತಾ, ಎಡಬಿಡದೆ ವ್ಯಾಪ್ತೋಪಾಸನೆ ಮಾಡತಕ್ಕ ಸ್ವಭಕ್ತರನ್ನು ಶ್ರೀಲಕ್ಷ್ಮೀಪತಿಯಾದ (ಶ್ರೀವರ) ಜಗನ್ನಾಥವಿಠ್ಠಲನು ಸದಾ ಸಂರಕ್ಷಿಸುತ್ತಾನೆ, ಜಗತ್ಪ್ರಭುವಾದ ಆ ಸ್ವಾಮಿಯು ಅವರಿಗೆ ತಾನಾಗಿಯೇ ಒಲಿಯುತ್ತಾನೆ. ಕರುಣಾಮಯನಾದ ಶ್ರೀಪರಮಾತ್ಮನು ಪ್ರಸನ್ನನಾಗಿ, ಜನನ ಮರಣಾಖ್ಯರೂಪವಾದ ಈ ಭವ ಸಾಗರದಿಂದ ಪಾರುಮಾಡುತ್ತಾನೆ.

೮, ತ್ರಿಗುಣಗಳ ಭವಣೆಯೇ ಈ ಭವವೆಂಬ ದುಸ್ತರಸಾಗರ, ಇಂತಹ ಸಂಸಾರದಲ್ಲಿ ನಾನು, ನನ್ನದು, ನನ್ನಿಂದ ಎಂಬ ಅಹಂಕಾರ ಮಮಕಾರ ಗ್ರಸ್ತನಾಗಿ ಜೀವನು ದಾರಿಗಾಣದೆ ಸಾಂಸಾರಿಕ ದುಃಖಗಳಿಂದ ಪೀಡಿತನಾಗಿದ್ದಾನೆ. ಅಂತಹ ಭವನೋವನ್ನು ಸಜ್ಜನರಿಗೆ ಕಳೆದು, ಪರಿಹರಿಸುವನು, ಅಂತಹ ಕರುಣಾಸಾಗರನು ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣನಾಗಿ ಸವತ್ರ ವ್ಯಾಪಕನಾಗಿದ್ದಾನೆ(ಪ್ರವಿತತ). ತನ್ನನ್ನೇ ನಂಬಿದ ಪತಿತರನ್ನ ಉದ್ಧರಿಸುವ, ಕರುಣಾದ್ರ್ರಹೃದಯ ಆ ಶ್ರೀವರನು ! ಸ್ವಭಕ್ತರ ಪಾಪಗಳನ್ನು ಪರಿಹರಿಸಿ, ಅವರನ್ನು ಪವಿತ್ರಗೊಳಿಸುವುದರಿಂದ **ಪತಿತಪಾವನನು.** ॥೩೨॥

**॥ ಇಂತು ಮಾತೃಕಾ ಸಂಧಿಯಲ್ಲಿ ಪ್ರಸಕ್ತ ೩೨ನೆಯ ಅಂತ್ಯ ಪದ್ಯದ ಸರ್ವವ್ಯಾಖ್ಯಾನಸಾರ ಸಂಗ್ರಹವೆಂಬ ಪದ್ಯದ ತಾತ್ಪರ್ಯಾರ್ಥವು ಪರಿಸಮಾಪ್ತಿಯಾಯಿತು ॥**

**॥ ಶ್ರೀಮಧ್ವೇಶಾರ್ಪಣಮಸ್ತು ॥**